ಭಾನುವಾರ, ಫೆಬ್ರುವರಿ 25, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಕ್ಕಳ ಸಾಹಿತ್ಯೋತ್ಸವ
ಮುಂಬೈನಲ್ಲಿ ಶನಿವಾರ ನಡೆದ ಮಕ್ಕಳ ಸಾಹಿತ್ಯೋತ್ಸವದಲ್ಲಿ ಬಾಲಿವುಡ್ ನಟ ಸೋಹಾ ಅಲಿ ಖಾನ್ ಪಾಲ್ಗೊಂಡಿದ್ದರು



ಸಮಾಜ ಕಲ್ಯಾಣ ಇಲಾಖೆ

ನನ್ನ ಸಂವಿಧಾನ, ನನ್ನ ಜೀವನ...

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯಕ್ಕಾಗಿ

ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶ

ನಮ್ಮ ಸಂವಿಧಾನದ ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಕೇವಲ ನಿರ್ದೇಶಕ ತತ್ವಗಳಾಗಿದ್ದು, ಮೂಲಭೂತ ಹಕ್ಕುಗಳ ರೀತಿಯಲ್ಲಿ ಅವು ಸರ್ಕಾರಗಳ ಮೇಲೆ ಕಟ್ಟುಪಾಡುಗಳನ್ನು ಹೇರುವುದಿಲ್ಲ ಅಥವಾ ನ್ಯಾಯಾಂಗದ ಮೂಲಕ ಅವುಗಳನ್ನು ಜಾರಿಗೊಳಿಸಲೂ ಅವಕಾಶವಿಲ್ಲ. ಆದರೆ 'ಪ್ರಾಮಾಣಿಕತೆ ಅಂದರೆ ಯಾರೂ ಗಮನಿಸದಿದ್ದಾಗಲೂ ಸರಿಯಾದದ್ದನ್ನೇ ಮಾಡುವುದು' ಎನ್ನುವ ತತ್ವದಂತೆ **ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ** ನೇತೃತ್ವದ ಸರ್ಕಾರ ಸದಾ ಸರಿಯಾದದ್ದನ್ನೇ ಮಾಡುವ ತತ್ವದಲ್ಲಿ ನಂಬಿಕೆ ಇಟ್ಟಿದೆ.

ಐದು ಗ್ಯಾರಂಟಿ ಯೋಜನೆಗಳು ಸಂವಿಧಾನದ ಸದಾಶಯಗಳನ್ನು ಸಾಕಾರಗೊಳಿಸುವಲ್ಲಿ ಸರ್ಕಾರದ ಪ್ರಾಮಾಣಿಕ ಪ್ರಯತ್ನವಾಗಿದೆ.

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ



ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಭಾರತದ ಸಂವಿಧಾನದಲ್ಲಿ ಪ್ರತಿಪಾದಿತವಾಗಿರುವ ಪ್ರಜಾಪ್ರಭುತ್ವ ತತ್ವಗಳ ಕುರಿತು ಮಾತನಾಡುತ್ತಿರುವುದು.

ಸಮಾರೋಪ ಸಮಾರಂಭ

25 ಫೆಬ್ರವರಿ 2024, ಮಧ್ಯಾಹ್ನ 1.30 ಗಂಟೆಯಿಂದ
ಕೃಷ್ಣ ವಿಹಾರ್, ಅರಮನೆ ಮೈದಾನ, ಬೆಂಗಳೂರು

ಕಾರ್ಯಕ್ರಮ ಸ್ಥಳದ ಮ್ಯಾಪ್ ಹಾಗೂ ಹೆಚ್ಚಿನ ವಿವರಗಳಿಗೆ QR CODE SCAN ಮಾಡಿ.

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿ

ಹೆಚ್ಚಿನ ವಿವರಗಳಿಗೆ ಭೇಟಿ ನೀಡಿ : https://constitutionofindia-karnataka.in

ನುಡಿದಂತೆ ನಡೆದಿದ್ದೇವೆ...

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೊಮಾ ಪದವೀಧರರಿಗೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಪ್ರಕಟಣೆ : ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

‘ಒತ್ತಡದಿಂದ ಅಮಾನತು’

ಬೆಂಗಳೂರು: ‘ನಾಮಫಲಕಗಳಲ್ಲಿ ಇಂಗ್ಲಿಷ್ ಪದ ತೆಗೆದು ಹಾಕಿದ ಹಿರಿಯ ಆರೋಗ್ಯ ಪರಿವೀಕ್ಷಕ ಕೆ.ಎಲ್. ವಿಶ್ವನಾಥ್ ಅವರನ್ನು ರಾಜಕೀಯ ಒತ್ತಡದಿಂದ ಅಮಾನತು ಮಾಡಲಾಗಿದ್ದು, ಕೂಡಲೇ ಅದನ್ನು ತೆರವು ಮಾಡಬೇಕು’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

‘ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಅನುಷ್ಠಾನದಲ್ಲಿ ಇಂಗ್ಲಿಷ್ ಪದಗಳ ತೆರವು ಮಾಡಿರುವ ವಿಶ್ವನಾಥ್ ಅವರನ್ನು ಮಹದೇವಪುರ ವಲಯ ಜಂಟಿ ಆಯುಕ್ತರು ಶುಕ್ರವಾರ ಅಮಾನತು ಮಾಡಿದ್ದರು. ನಾಮಫಲಕಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಅಧಿಕಾರಿಗಳು ಸಾಕಷ್ಟು ಕ್ರಮ ಕೈಗೊಳ್ಳುತ್ತಿದ್ದಾರೆ. ಇಂಗ್ಲಿಷ್ ಪದಗಳ ತೆರವಿಗೆ ಅಮಾನತು ಮಾಡಿದರೆ ಉಳಿದ ಅಧಿಕಾರಿಗಳೂ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಾರೆ’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಹೇಳಿದ್ದಾರೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಿರುವ ಅವರು, ‘ವಿಶ್ವನಾಥ್ ಅಮಾನತು ಆದೇಶ ಹಿಂಪಡೆಯದಿದ್ದರೆ ಹೋರಾಟ ಮಾಡಲಾಗುತ್ತದೆ’ ಎಂದು ತಿಳಿಸಿದ್ದಾರೆ.

ಎಲ್ಲರ ಮೇಲೂ ಕ್ರಮವಾಗಲಿ: ‘ಬಿಬಿಎಂಪಿಯ ಪೂರ್ವ ವಲಯ ವ್ಯಾಪ್ತಿಯ ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಗಳಲ್ಲೂ ಜಂಟಿ ಆಯುಕ್ತರ ನೇತೃತ್ವದಲ್ಲೇ ಆರೋಗ್ಯಾಧಿಕಾರಿಗಳ ಸಮ್ಮುಖದಲ್ಲಿ ನಾಮಫಲಕಗಳನ್ನು ಒಡೆದು ಹಾಕಲಾಗಿತ್ತು. ಆದರೆ ಇವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ನಾಮಫಲಕ ಒಡೆದು ಹಾಕಿರುವುದೇ ಅಪರಾಧವಾದರೆ ಎಲ್ಲ ವಲಯದಲ್ಲೂ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಿ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ, ಬಿಬಿಎಂಪಿ ಸಿಬ್ಬಂದಿ ಆಗ್ರಹಿಸಿದ್ದಾರೆ.

ಜಲಮಂಡಳಿ, ಬಿಬಿಎಂಪಿ ಅಧಿಕಾರಿಗಳೊಂದಿಗೆ ರಾಕೇಶ್ ಸಿಂಗ್ ಸಮನ್ವಯ ಸಭೆ

ನೀರಿನ ಅಭಾವ: ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ನೀರಿನ ಅಭಾವ ಉದ್ಭವವಾಗದಂತೆ ಪಾಲಿಕೆ ಹಾಗೂ ಜಲಮಂಡಳಿ ಅಧಿಕಾರಿಗಳು ಕ್ರಮಗಳನ್ನು ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ನೀರಿನ ಅಭಾವ ಕುರಿತು ಶನಿವಾರ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ ಎಂಬುದನ್ನು ಪಟ್ಟಿ ಮಾಡಿಕೊಂಡು, ಅಲ್ಲಿ ಸಮಸ್ಯೆ ಬಗೆಹರಿಸಬೇಕು. ನೀರಿನ ಅಭಾವ ಹೆಚ್ಚಿರುವ ಕಡೆ ಜಲಮಂಡಳಿ ಅಧಿಕಾರಿಗಳ ಜೊತೆ ಸಮನ್ವಯ ಮಾಡಿಕೊಂಡು ನಾಗರಿಕರಿಗೆ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆ, ಎಷ್ಟು ಅನುದಾನದ ಅಗತ್ಯವಿದೆ ಎಂಬ ಮಾಹಿತಿ ನೀಡಿದರೆ ಕೂಡಲೇ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ವಲಯ ಆಯುಕ್ತರಿಗೆ ಹೇಳಿದ ರಾಕೇಶ್ ಸಿಂಗ್, 110 ಹಳ್ಳಿಗಳಿಗೆ ನೀರಿನ ಸಮಸ್ಯೆ ಬಗೆಹರಿಸಲು ಜಲಮಂಡಳಿಯ ಅಧಿಕಾರಿ/ ಸಿಬ್ಬಂದಿ, ಬಿಬಿಎಂಪಿ ವಲಯ ಆಯುಕ್ತರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕೆಂದು ಆದೇಶಿಸಿದರು.

₹131 ಕೋಟಿ ಅನುದಾನ: ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ಮಹದೇವಪುರ, ಆರ್.ಆರ್.ನಗರ, ಬೊಮ್ಮನಹಳ್ಳಿ, ದಾಸರಹಳ್ಳಿ ಹಾಗೂ ಯಲಹಂಕ ವಲಯಗಳಲ್ಲಿ (110 ಹಳ್ಳಿಗಳು ಸೇರಿದಂತೆ) ಕೊಳವೆಬಾವಿ ಕೊರೆಯಲು ₹131 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಅಗತ್ಯವಿರುವ ಕಡೆ ಕೊಳವೆಬಾವಿಗಳನ್ನು ಕೊರೆಯಬೇಕು ಎಂದು ಸೂಚಿಸಿದರು.

ಶುದ್ಧನೀರಿನ ಘಟಕಗಳಲ್ಲಿ ನೀರಿಲ್ಲದಿದ್ದರೆ, ಹೊಸದಾಗಿ ಕೊಳವೆ ಬಾವಿ ಕೊರೆಯಬೇಕು. ತಾತ್ಕಾಲಿಕವಾಗಿ ನೀರಿನ ಟ್ಯಾಂಕರ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದರು.

ಜಲಮಂಡಳಿಯ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ‘ಬೆಂಗಳೂರು ವ್ಯಾಪ್ತಿಯಲ್ಲಿ ವಾರ್ಷಿಕವಾಗಿ 19 ಟಿಎಂಸಿ ಅಡಿಯಷ್ಟು ನೀರನ್ನು ಹಂಚಿಕೆ ಮಾಡಲಾಗುತ್ತಿದೆ. ಸುಮಾರು 1,472 ಎಂಎಲ್‌ಡಿ ನೀರು ಸರಬರಾಜು ಮಾಡಲಾಗುತ್ತಿದೆ. ಫೆಬ್ರುವರಿಯಿಂದ ಜುಲೈವರೆಗೆ ಅಂದಾಜು 9.48 ಟಿಎಂಸಿ ಅಡಿ ನೀರಿನ ಅವಶ್ಯಕತೆಯಿದೆ’ ಎಂದು ಹೇಳಿದರು.

ನಗರದಲ್ಲಿ 10.84 ಲಕ್ಷ ನೀರಿನ ಸಂಪರ್ಕಗಳಿವೆ. 10,955 ಕೊಳವೆ ಬಾವಿಗಳಲ್ಲಿ 1,214 ಕೊಳವೆ ಬಾವಿಗಳು ಬತ್ತಿದ್ದು, 3,700 ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಸರಿಪಡಿಸಬಹುದಾದ ಕೊಳವೆ ಬಾವಿಗಳನ್ನು ಗುರುತಿಸಿ ಅಂತಹವುಗಳನ್ನು ಫ್ಲಷಿಂಗ್ ಹಾಗೂ ರೀಡ್ರಿಲ್ ಮಾಡಲು ಕ್ರಮವಹಿಸ ಲಾಗುತ್ತಿದೆ ಎಂದರು.

ಸಭೆಯಲ್ಲಿ ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ಎಲ್ಲಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್, ಪಾಲಿಕೆ- ಜಲಮಂಡಳಿ ಅಧಿಕಾರಿಗಳು ಹಾಜರಿದ್ದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ಸಮನ್ವಯ ಸಭೆ ಶನಿವಾರ ನಡೆಯಿತು

257 ಸ್ಥಳಗಳಲ್ಲಿ ನೀರಿನ ಸಮಸ್ಯೆ

ನಗರದಲ್ಲಿ ನೀರಿನ ಸಮಸ್ಯೆ ಹೆಚ್ಚಿರುವ 257 ಸ್ಥಳಗಳನ್ನು ಗುರುತಿಸಲಾಗಿದೆ. ಆ ಪ್ರದೇಶಗಳಿಗೆ ನೀರಿನ ಸರಬರಾಜು ಮಾಡಲು 68 ಟ್ಯಾಂಕರ್‌ಗಳ ಜೊತೆಗೆ 18 ಹೊಸ ಟ್ಯಾಂಕರ್‌ಗಳನ್ನು ಖರೀದಿಸಲು ಮತ್ತು 200 ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಲು ಕ್ರಮವಹಿಸಲಾಗಿದೆ. ಜೊತೆಗೆ, ಕಾವೇರಿ 5ನೇ ಹಂತದ ಕಾಮಗಾರಿ ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಟ್ಯಾಂಕ್ ಮೂಲಕ ನೀರು: ಆರ್.ಆರ್. ನಗರ ವಲಯದಲ್ಲಿ ಪ್ರಮುಖ ಸ್ಥಳದಲ್ಲಿ ಟ್ಯಾಂಕ್‌ಗಳನ್ನು ಅಳವಡಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಅದೇ ರೀತಿ ಎಲ್ಲಾ ವಲಯಗಳಲ್ಲಿಯೂ ಪ್ರಮುಖ ಸ್ಥಳ, ಕೊಳೆಗೇರಿ ಪ್ರದೇಶ ಸೇರಿದಂತೆ ಇನ್ನಿತರೆ ಸ್ಥಳಗಳಲ್ಲಿ ಟ್ಯಾಂಕ್‌ಗಳನ್ನು ಅಳವಡಿಸಿ ಜಲಮಂಡಳಿಯಿಂದ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

58 ಕಡೆ ಕೊರತೆ: ನಗರದಲ್ಲಿ 58 ಕಡೆ ನೀರಿನ ಸಮಸ್ಯೆಯಿದೆ. ಮಹದೇವಪುರ– 16, ಆರ್.ಆರ್ ನಗರ– 25, ಬೊಮ್ಮನಹಳ್ಳಿ– 5 ಕಡೆ, ಯಲಹಂಕ ಹಾಗೂ ದಾಸರಹಳ್ಳಿ ತಲಾ 3 ಕಡೆ ನೀರಿನ ಅಭಾವ ಅತಿ ಹೆಚ್ಚಿದೆ. ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾರ್ಯಾದೇಶ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

110 ಹಳ್ಳಿಗಳಲ್ಲಿ ಸಮಗ್ರ ವ್ಯವಸ್ಥೆ

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಹೆಚ್ಚಿದ್ದು, ಅಲ್ಲಿ ಸಮಗ್ರ ವ್ಯವಸ್ಥೆ ಮಾಡಲಾಗುತ್ತಿದೆ. ಹಳ್ಳಿಗಳಿಗೆ ಹೆಚ್ಚು ಒತ್ತು ನೀಡಿ ನೀರಿನ ಸಮಸ್ಯೆ ಬಗೆಹರಿಸಬೇಕಿದೆ. ಅಗತ್ಯವಿರುವ ಕಡೆ ಆದ್ಯತೆ ಮೇರೆಗೆ ಕೊಳವೆಬಾವಿಗಳನ್ನು ಕೊರೆಯಬೇಕು. ಜೊತೆಗೆ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಿಕೊಂಡು ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕು. 110 ಹಳ್ಳಿಗಳಿಗೆ ಜಲಮಂಡಳಿಯಿಂದ 40,000 ಸಂಪರ್ಕ ನೀಡಲಾಗಿದ್ದು, 110 ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುವ ಜಲ ಮಂಡಳಿಯ ಅಧಿಕಾರಿ/ಸಿಬ್ಬಂದಿ ಪಾಲಿಕೆ ವಲಯ ಆಯುಕ್ತರ ಅಧೀನದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಸುದ್ದಿ 2 ನಿಮಿಷ

ಬ್ರ್ಯಾಂಡ್ ಬೆಂಗಳೂರು ಬಿಡಿ– ನೀರು ಕೊಡಿ: ಆರ್. ಅಶೋಕ

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಕಟ್ಟುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವ ಬದಲು, ಬೆಂಗಳೂರಿನ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಗಮನ-ಹರಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹೇಳಿಕೆ ನೀಡಿರುವ ಅವರು, ‘ಬೇಸಿಗೆ ಆರಂಭಕ್ಕೂ ಮೊದಲೇ ನೀರಿಗೆ ಹಾಹಾಕಾರ ಆರಂಭವಾಗಿದೆ. ತಮ್ಮ ಐಎನ್‌ಡಿಐಎ ಮಿತ್ರ ಪಕ್ಷವಾದ ಡಿಎಂಕೆ ಜತೆ ಸ್ನೇಹ ಉಳಿಸಿಕೊಳ್ಳಲು ಕನ್ನಡಿಗರ ಹಿತಾಸಕ್ತಿ ಬಲಿಕೊಟ್ಟು ತಮಿಳುನಾಡಿಗೆ ನೀರು ಹರಿಸಲಾಗಿದೆ. ಹಾಗಾಗಿ, ಬೆಂಗಳೂರಿಗೆ ನೀರಿನ ಕೊರತೆ ಎದುರಾಗಿದ್ದು, ಟ್ಯಾಂಕರ್ ಮೂಲಕ ಪೂರೈಸುವ ಸ್ಥಿತಿ ಒದಗಿದೆ’ ಎಂದು ದೂರಿದ್ದಾರೆ.

‘ಬರ ಪರಿಸ್ಥಿತಿಯಿಂದ ಬೆಂಗಳೂರು ನಗರದ ನೀರಿನ ಸಮಸ್ಯೆ ಕುರಿತು ಮೊದಲೇ ಅಂದಾಜಿಸಬೇಕಿತ್ತು. ಹೆಚ್ಚುವರಿ ಕೊಳವೆ ಬಾವಿಗಳನ್ನು ಕೊರೆಸಲು, ಹಳೇ ಕೊಳವೆ ಬಾವಿಗಳ ಮರುಪೂರಣಕ್ಕೆ ಕ್ರಮ ಕೈಗೊಳ್ಳಬೇಕಿತ್ತು. ಹಾಗೆ ಮಾಡದ ಕಾರಣ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ’ ಎಂದು ಹೇಳಿದ್ದಾರೆ.

‘ಆಡಳಿತದ ಚುಕ್ಕಾಣಿಯನ್ನು ಸಂಪೂರ್ಣವಾಗಿ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ನೆರೆ ರಾಜ್ಯಗಳ ಚುನಾವಣೆ ಉಸ್ತುವಾರಿ ನೋಡಿಕೊಳ್ಳುತ್ತಾ ಕಾಲಹರಣ ಮಾಡಿದ್ದಾರೆ. ಈಗಲಾದರೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಎಚ್ಚೆತ್ತುಕೊಳ್ಳಬೇಕು’ ಎಂದಿದ್ದಾರೆ.

ದಯಾಮರಣ ಕೋರಿದ ಪೊಲೀಸರು

ಬೆಂಗಳೂರು: ‘ಪೊಲೀಸ್ ಇಲಾಖೆಯಲ್ಲಿ ಪತಿ– ಪತ್ನಿ ವರ್ಗಾವಣೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅಂತರ ಜಿಲ್ಲಾ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ, ದಯಾಮರಣ ನೀಡಬೇಕು’ ಎಂದು ಪೊಲೀಸ್ ಸಿಬ್ಬಂದಿ ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ.

ಪತ್ರದ ಪ್ರತಿಯು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

‘ಪತಿ– ಪತ್ನಿ ಒಂದೇ ಘಟಕ ಅಥವಾ ಜಿಲ್ಲೆಯಲ್ಲಿ ಕೆಲಸ ಮಾಡುವ ರೀತಿಯಲ್ಲಿ ವರ್ಗಾವಣೆಗೆ ಅವಕಾಶ ಕಲ್ಪಿಸುವಂತೆ ಸುಪ್ರೀಂಕೋರ್ಟ್ ಈಗಾಗಲೇ ನಿರ್ದೇಶನ ನೀಡಿದೆ. ಈ ಬಗ್ಗೆ ಅರ್ಹ ಸಿಬ್ಬಂದಿ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಬೇಡಿಕೆ ಈಡೇರಿಸುವುದಾಗಿ ಹೇಳಿದ್ದ ಗೃಹ ಸಚಿವರು ಇದುವರೆಗೂ ಭರವಸೆ ಈಡೇರಿಸಿಲ್ಲ’ ಎಂದು ಪತ್ರದಲ್ಲಿ ಬರೆಯಲಾಗಿದೆ.

‘ಪತ್ನಿ ಒಂದು ಜಿಲ್ಲೆಯಲ್ಲಿ, ಪತಿ ಮತ್ತೊಂದು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಪತಿ– ಪತ್ನಿ ಹಾಗೂ ಕುಟುಂಬದವರು ಮಾನಸಿಕವಾಗಿ ಕುಗ್ಗಿದ್ದಾರೆ. ಮಕ್ಕಳ ಪೋಷಣೆಯೂ ಸವಾಲಾಗಿದೆ. ವರ್ಗಾವಣೆ ಬಯಸಿ ಸರ್ಕಾರಕ್ಕೆ ಮನವಿ ನೀಡಿ ಸಾಕಾಗಿದೆ. ನಮಗೆ ಸಾಮೂಹಿಕ ದಯಾಮರಣ ಕಲ್ಪಿಸಿ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮುಂಬೈ ರೇಸ್

ರೀಡಿಫೈನ್ಡ್ ಗೆಲ್ಲುವ ನಿರೀಕ್ಷೆ

ಪೂನಾವಾಲ ಬ್ರೀಡರ್ಸ್ ಮಲ್ಟಿ-ಮಿಲಿಯನ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೀಡಿಫೈನ್ಡ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ರಿಸ್ಟೊಫಾನಿ 3, ಸ್ಕಾರ್ಸೀಸ್ 4, ಎಲ್ ಗ್ರಿಕೊ 2
2ನೇ ರೇಸ್: ಎಕ್ಸುಮಾ 3, ಜೈಂಟ್ ಕಿಂಗ್ 4
3ನೇ ರೇಸ್: ಜಿಯೊಗ್ರಾಫಿಕ್ 2, ಸ್ಕಾರಮಾಂಗ 4, ಮಲ್ಟಿವರ್ಸ್ 5
4ನೇ ರೇಸ್: ಮುಮ್ತಾಜ್ 10, ರೈಸ್ ದಿ ಸ್ಟೇಕ್ಸ್ 12, ಲಾರ್ಡ್ ಎಪಿಕ್ 2
5ನೇ ರೇಸ್: ರೀಡಿಫೈನ್ಡ್ 3, ಡ್ಯಾಶ್ 1, ಜೇಡ್ 9
6ನೇ ರೇಸ್: ರೆಮಿನಿಸೆನ್ಸ್ 4, ಡ್ರೀಮ್‌ಸೆಲ್ಲರ್ 1, ಫೈಟಾನ್ 2
7ನೇ ರೇಸ್: ಅರಿಯಾನ ಸ್ಟಾರ್ 1, ಸೋನಿಕ್ ಬೂಮ್ 2, ಫಂಟಾಸ್ಟಿಕ್ ಫ್ಲೇರ್ 10
8ನೇ ರೇಸ್: ಟಾಸ್ಕಾನ 2, ಡಫಿ 7, ಲೈಟ್ ಆಫ್ ಲೈಫ್ 7

ಉತ್ತಮ ಬೆಟ್: ಎಕ್ಸುಮಾ

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
4,5,6,7,8;	2.3,4	5,6,7

ಯೂನಿಯನ್ ಬ್ಯಾಂಕ್ ರಿಟೇಲ್ ಎಕ್ಸ್‌ಪೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಮೆಗಾ ರಿಟೇಲ್ ಎಕ್ಸ್‌ಪೊ ‘ರಿಟೇಲ್‌ಥಾನ್–2024’ ಅನ್ನು ಶನಿವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬ್ಯಾಂಕ್‌ನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರೂ ಆದ ವಲಯ ಮುಖ್ಯಸ್ಥ ನವನೀತ್ ಕುಮಾರ್, ಜನರ ಅಗತ್ಯಗಳನ್ನು ಗಮನ-ದಲ್ಲಿಟ್ಟುಕೊಂಡು, ಒಂದೇ ವೇದಿಕೆಯಡಿ ಶಿಕ್ಷಣ, ಗೃಹ, ವಾಹನ ಸಾಲ ನೀಡಲು ಈ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಅರ್ಹ ಗ್ರಾಹಕರಿಗೆ ಸ್ಥಳದಲ್ಲೇ ಸಾಲ ಮಂಜೂರಾತಿ ಪತ್ರವನ್ನು ನೀಡಲಾಗುತ್ತದೆ ಹೇಳಿದರು.

ಬ್ಯಾಂಕ್‌ನ ಬೆಂಗಳೂರು ಪೂರ್ವ ವಲಯದ ಡಿಜಿಎಂ ಮತ್ತು ಪ್ರಾದೇಶಿಕ ಮುಖ್ಯಸ್ಥ ಆರ್.ಜ್ಯೋತಿ ಕೃಷ್ಣನ್ ಮಾತನಾಡಿ, ಎಕ್ಸ್‌ಪೊದಲ್ಲಿ 65 ಮಳಿಗೆಗಳನ್ನು ಹಾಕಲಾಗಿದ್ದು, ಆಟೊಮೊಬೈಲ್ ಡೀಲರ್‌ಗಳು, ವಸತಿ ಯೋಜನೆಗಳ ಡೆವಲಪರ್‌ಗಳು, ಶಿಕ್ಷಣ ಸಲಹೆಗಾರರು, ಸೌರ ಫಲಕ ವಿತರಕರು ಭಾಗವಹಿಸಿದ್ದಾರೆ. ಗ್ರಾಹಕರಿಗಾಗಿ ಲಕ್ಕಿ ಡ್ರಾ ಮತ್ತು ಬಂಪರ್ ಬಹುಮಾನಗಳನ್ನು ಆಯೋಜಿಸಲಾಗಿದೆ ಎಂದರು.

ಬ್ಯಾಂಕ್‌ನ ಅಧಿಕಾರಿಗಳಾದ ಪಂಕಜ್ ಕುಮಾರ್ ಕಾಪ್ಸಿಮೆ, ಅಸೀಮ್ ಕುಮಾರ್ ಪಾಲ್, ಆರ್. ಜ್ಯೋತಿ ಕೃಷ್ಣನ್, ರಾಜೇಂದರ್ ಕುಮಾರ್ ಮತ್ತು ರಾಜೇಶ್‌ಕುಮಾರ್ ಮಿಶ್ರಾ ಹಾಗೂ ಬ್ಯಾಂಕ್‌ನ ಸಿಬ್ಬಂದಿ ಪಾಲ್ಗೊಂಡಿದ್ದರು.

ಬೆಂಗಳೂರಿನ ಅರಮನೆ ಮೈದಾನದ ಗ್ರ್ಯಾಂಡ್ ಕ್ಯಾಸಲ್‌ನಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಹಮ್ಮಿಕೊಂಡಿದ್ದ ‘ರಿಟೇಲ್‌ಥಾನ್–2024’ ಕಾರ್ಯಕ್ರಮವನ್ನು ಬ್ಯಾಂಕ್‌ನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರು ಹಾಗೂ ವಲಯ ಮುಖ್ಯಸ್ಥರಾದ ನವನೀತ್ ಕುಮಾರ್ ಉದ್ಘಾಟಿಸಿದರು

ಸ್ಕಾರ್ಸೆಸಿ ಫೌಂಡೇಷನ್‌ನಿಂದ ‘ಘಟಶ್ರಾದ್ಧ’ ಗುಣಮಟ್ಟದ ಮರು ಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಪ್ರಮುಖವಾದ ‘ಹೊಸ ಅಲೆ’ಯ ಚಿತ್ರಗಳಲ್ಲಿ ಒಂದಾದ ‘ಘಟಶ್ರಾದ್ಧ’ ಸಿನಿಮಾದ ಗುಣಮಟ್ಟ-ವನ್ನು ಮರು ಸೃಷ್ಟಿಸುವ ಕಾರ್ಯವನ್ನು ಹಾಲಿವುಡ್ ನಿರ್ದೇಶಕ ಮಾರ್ಟಿನ್ ಸ್ಕಾರ್ಸೆಸಿಯವರ ಸಿನಿಮಾ ಫೌಂಡೇಷನ್ ಕೈಗೆತ್ತಿಕೊಂಡಿದೆ.

ಯು.ಆರ್.ಅನಂತಮೂರ್ತಿ ಅವರ ಕಥೆ ಆಧರಿಸಿದ, ಗಿರೀಶ್ ಕಾಸರವಳ್ಳಿ ಅವರು ನಿರ್ದೇಶಿಸಿದ್ದ ‘ಘಟಶ್ರಾದ್ಧ’ ಸಿನಿಮಾ 1977ರಲ್ಲಿ ತೆರೆಕಂಡಿತ್ತು. ಕನ್ನಡ ಚಿತ್ರರಂಗಕ್ಕೆ ಮೂರನೇ ಬಾರಿ ಸ್ವರ್ಣ ಕಮಲ ತಂದ ಚಿತ್ರ ಇದಾಗಿತ್ತು. 75 ವರ್ಷಗಳ ಕನ್ನಡ ಚಿತ್ರ ಇತಿಹಾಸದಲ್ಲಿ ಕನ್ನಡದ ಆರು ಚಿತ್ರಗಳಿಗೆ ಮಾತ್ರ ರಾಷ್ಟ್ರ-ಪತಿಗಳ ಸ್ವರ್ಣ ಕಮಲ ಲಭ್ಯವಾಗಿದ್ದು, ಅವುಗಳಲ್ಲಿ ನಾಲ್ಕು ಗಿರೀಶ್ ಕಾಸರವಳ್ಳಿ ನಿರ್ದೇಶನದ ಚಿತ್ರಗಳಾಗಿವೆ. ‘ಘಟಶ್ರಾದ್ಧ’ ಆ ಸರಣಿಯಲ್ಲಿ ಮೊದಲನೆಯದು. ಭಾರತೀಯ ಸಿನಿಮಾದ ಶತಮಾನೋತ್ಸವ ಸಂದರ್ಭದಲ್ಲಿ ಶತಮಾನದ 20 ಶ್ರೇಷ್ಠ ಚಿತ್ರಗಳಲ್ಲಿ ಒಂದೆಂದು ಪರಿಗಣಿತವಾದ ‘ಘಟಶ್ರಾದ್ಧ’ ಅನೇಕ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದೆ. ಇಂತಹ ಚಿತ್ರಕ್ಕೀಗ ಗುಣಮಟ್ಟ ಮರು ಸೃಷ್ಟಿಗೆ (ರೆಸ್ಟೋರೇಷನ್) ಒಳಗಾಗುವ ಅವಕಾಶ ಸಿಕ್ಕಿದೆ.

ಮಾರ್ಟಿನ್ ಸ್ಕಾರ್ಸೆಸಿಯವರ ಸಿನಿಮಾ ಫೌಂಡೇಷನ್ ಮತ್ತು ಶಿವೇಂದ್ರ ಸಿಂಗ್ ಅವರ ಫಿಲ್ಮ್ ಹೆರಿಟೇಜ್ ಫೌಂಡೇಷನ್ ಜಂಟಿಯಾಗಿ ಕೈಗೆತ್ತಿಕೊಂಡಿರುವ ಈ ಯೋಜನೆಗೆ, ಹಾಲಿವುಡ್ ಚಿತ್ರರಂಗದ ಸ್ಟಾರ್‌ವಾರ್ಸ್ ಚಿತ್ರ ಸರಣಿಯ ನಿರ್ದೇಶಕ ಜಾರ್ಜ್ ಲ್ಯೂಕಾಸ್ ತಮ್ಮ ಪತ್ನಿಯ ಜೊತೆ ಸೇರಿ ರೂಪಿಸಿದ ಹಾಬ್ಸನ್- ಲ್ಯೂಕಾಸ್ ಫೌಂಡೇಷನ್ ಕೂಡ ಕೈಜೋಡಿಸಿದೆ.

ಈ ಚಿತ್ರದ ಪುನರುಜ್ಜೀವನದಲ್ಲಿ ಕಾಸರವಳ್ಳಿಯವರ ಚಿತ್ರಗಳ ಬಗ್ಗೆ ವಿಶೇಷ ಒಲವು ಇರುವ ಶಿವೇಂದ್ರ ಸಿಂಗ್ ಅವರ ಫಿಲ್ಮ್ ಹೆರಿಟೇಜ್ ಫೌಂಡೇಷನ್‌ನ ಶ್ರಮ ಉಲ್ಲೇಖಾರ್ಹ. ಕಾಸರವಳ್ಳಿಯವರು ತಮ್ಮೆಲ್ಲ ಚಿತ್ರ ಸಾಮಗ್ರಿಗಳನ್ನು ಈ ಫೌಂಡೇಷನ್‌ಗೆ ನೀಡಿದ್ದಾರೆ.

ಇಟಲಿಯ ‘ಲ ಇಮ್ಯಾಜಿನ್ ರಿಟ್ರೋವಟ’ದಲ್ಲಿ ಗುಣಮಟ್ಟ ಮರು ಸೃಷ್ಟಿಯ ಕಾರ್ಯ ನಡೆಯಲಿದ್ದು, ‘ಘಟಶ್ರಾದ್ಧ’ ಸಿನಿಮಾದ 50ನೇ ವರ್ಷದ ಸಂಭ್ರಮದ ಹೊತ್ತಿಗೆ ಪೂರ್ಣಗೊಳ್ಳಲಿದೆ.

‘ಸಂವಿಧಾನದಿಂದ ದೇಶ ವಿಶ್ವಗುರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾಪ್ರಭುತ್ವ ಮತ್ತು ಸಂವಿಧಾನದಿಂದಲೇ ನಮ್ಮ ದೇಶ ಇಂದು ವಿಶ್ವಗುರು ಆಗಿದೆ. ಅದು ಯಾವುದೇ ಒಬ್ಬ ವ್ಯಕ್ತಿ, ಧರ್ಮ, ಮಸೀದಿ ಅಥವಾ ಮಂದಿರದಿಂದಲ್ಲ’ ಎಂದು ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ನಂದಿನಿ ಸುಂದರ್ ಹೇಳಿದರು.

ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶದಲ್ಲಿ ಶನಿವಾರ ನಡೆದ ‘21ನೇ ಶತಮಾನದಲ್ಲಿ ಸಾಂವಿಧಾನಿಕ ಮತ್ತು ಪ್ರಜಾಪ್ರಭುತ್ವ’ ಎಂಬ ಗೋಷ್ಠಿಯಲ್ಲಿ ಮಾತನಾಡಿದ ಅವರು, ಭಗವದ್ಗೀತೆ ಅಥವಾ ಕುರಾನ್‌ನಿಂದ ನಮ್ಮ ದೇಶ ನಡೆಯುತ್ತಿಲ್ಲ. ಭೀಮನ ಸಂವಿಧಾನದಿಂದ ನಮ್ಮ ದೇಶ ನಡೆಯುತ್ತಿದೆ ಎಂದು ಪ್ರತಿಪಾದಿಸಿದರು.

‘ದೇಶದಲ್ಲಿ ಜಾತಿ–ಧರ್ಮದ ಹೆಸರಿನಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುವ ಮೂಲಕ ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ ತರಲಾಗುತ್ತಿದೆ’ ಎಂದು ದಿ ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ ಪತ್ರಿಕೆಯ ಸಂಪಾದಕ ಗೋಪಾಲ್ ಗುರು ಹೇಳಿದರು.

‘ಸಂವಿಧಾನದಲ್ಲಿ ಜಾತ್ಯತೀತ ರಾಷ್ಟ್ರ ಎಂಬ ಉಲ್ಲೇಖವಿದೆ. ಆದರೆ, ಇಂದು ದೇಶದಲ್ಲಿ ಇದಕ್ಕೆ ವಿರುದ್ಧವಾಗಿ ಧರ್ಮದ ಆಧಾರದಲ್ಲಿ ಆಡಳಿತ ನಡೆಯುತ್ತಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜಾತಿ–ಧರ್ಮಕ್ಕಿಂತ ಸಂವಿಧಾನವೇ ಮುಖ್ಯ. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ಎಂಬ ಸಂವಿಧಾನದ ಮೂಲ ಆಶಯಗಳನ್ನು ರಕ್ಷಣೆ ಮಾಡಬೇಕಿದೆ. ಸಂವಿಧಾನದ ಮೌಲ್ಯಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದರು. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಉಪಕುಲಪತಿ ಸುಧೀರ್ ಕೃಷ್ಣಸ್ವಾಮಿ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು. ಕಮಲಾ ಶಂಕರನ್ ಅವರು ಗೋಷ್ಠಿಯನ್ನು ನಿರ್ವಹಿಸಿದರು.

‘ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶ’ದಲ್ಲಿ (ಎಡದಿಂದ) ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನದಾಸ್, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಪ್ರಿಯಾಂಕ್ ಖರ್ಗೆ, ಬಿಜೆಪಿ ಶಾಸಕ ಎಸ್‌.ಟಿ.ಸೋಮಶೇಖರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಂವಿಧಾನ ಪೀಠಿಕೆ ವಾಚನ ಮಾಡಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ‘ನೀಲಗಿರಿ ನೀಲಿ ಬೆಟ್ಟಗಳು’ ಛಾಯಾಚಿತ್ರ ಪ್ರದರ್ಶನದಲ್ಲಿ ಪರಿಸರ ಕಾರ್ಯಕರ್ತ ತರುಣ್ ಛಾಬ್ರಾ ಅವರು ಪ್ರೇಕ್ಷಕರ ಜತೆಗೆ ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರ

ಸಾಲು ಸಾಲು ಕಾರ್ಯಕ್ರಮ, ವಸ್ತುಪ್ರದರ್ಶನ

ವಿಪರೀತ ವಾಹನ ದಟ್ಟಣೆ: ಜನ ಸುಸ್ತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಿಸಿಲಿನ ಬೇಗೆಯಿಂದ ಹೈರಾಣಾದ ಜನ
- ಮೆಟ್ರೊ ರೈಲಿನಲ್ಲಿಯೂ ದಟ್ಟಣೆ
- ರಜೆ, ವಿವಿಧ ಕಾರ್ಯಕ್ರಮಗಳಿಂದಾಗಿ ತೊಂದರೆ

ಬೆಂಗಳೂರು: ನಗರದಲ್ಲಿ ಶನಿವಾರ ಸಾಲು ಸಾಲು ಕಾರ್ಯಕ್ರಮಗಳು ಹಾಗೂ ವಸ್ತು ಪ್ರದರ್ಶನಗಳು ನಡೆದಿದ್ದರಿಂದ ಬಹುತೇಕ ರಸ್ತೆಗಳಲ್ಲಿ ವಾಹನಗಳ ವಿಪರೀತ ದಟ್ಟಣೆ ಉಂಟಾಗಿತ್ತು.

ತಿಂಗಳ ನಾಲ್ಕನೇ ಶನಿವಾರ ರಜಾ ದಿನವಾಗಿದ್ದರಿಂದ ಜನರು, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಹಾಗೂ ವಸ್ತು ಪ್ರದರ್ಶನ ವೀಕ್ಷಿಸಲು ತಂಡೋಪತಂಡವಾಗಿ ವಾಹನಗಳಲ್ಲಿ ಹೊರಟಿದ್ದರು. ಬೆಳಿಗ್ಗೆ ಹಾಗೂ ಸಂಜೆ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದ್ದರಿಂದ ದಟ್ಟಣೆ ಕಂಡುಬಂತು.

ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ರಸ್ತೆ ಹಾಗೂ ಹೊರ ವರ್ತುಲ ರಸ್ತೆಗಳಲ್ಲಿ ವಿಪರೀತ ದಟ್ಟಣೆ ಇತ್ತು. ಕಾರುಗಳು, ಬಸ್‌ಗಳು ಹಾಗೂ ಸರಕು ಸಾಗಣೆ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು. ದಟ್ಟಣೆಯಲ್ಲಿ ಸಿಲುಕಿದ್ದ ವಾಹನಗಳಲ್ಲಿದ್ದ ಜನ ಹೈರಾಣಾದರು.

ಐಐಎಸ್ಸಿಯಲ್ಲಿ ಮುಕ್ತ ದಿನ: ಭಾರತೀಯ ವಿಜ್ಞಾನ ಕೇಂದ್ರದಲ್ಲಿ (ಐಐಎಸ್ಸಿ) ಶನಿವಾರ ಮುಕ್ತ ದಿನ ಹಮ್ಮಿಕೊಂಡಿದ್ದರಿಂದ, ಸಾವಿರಾರು ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು. ಐಐಎಸ್ಸಿ ಕ್ಯಾಂಪಸ್‌ಗೆ ಹೊಂದಿಕೊಂಡಿರುವ ನ್ಯೂ ಬಿಇಎಲ್ ರಸ್ತೆ, ಸದಾಶಿವನಗರ, ಯಶವಂತಪುರ–ಮಲ್ಲೇಶ್ವರ ರಸ್ತೆ ಹಾಗೂ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಯಿತು.

ತುಮಕೂರು ರಸ್ತೆಯಲ್ಲಿ ಸಾಲುಗಟ್ಟಿ ನಿಂತ ವಾಹನಗಳು: ಯಶವಂತಪುರ, ಗೊರಗುಂಟೆಪಾಳ್ಯ, ಜಾಲಹಳ್ಳಿ, ಪೀಣ್ಯ, ನಾಗಸಂದ್ರ, ಪಾರ್ಲೆ ಟೋಲ್‌ಗೇಟ್ ಹಾಗೂ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ‘ಇಂಡಿಯಾ ವುಡ್’ ಹಾಗೂ ‘ಇಂಡಿಯಾ ಮ್ಯಾಟ್ರೆಸ್ ಟೆಕ್’ ಹಮ್ಮಿಕೊಳ್ಳಲಾಗಿತ್ತು. ಎರಡೂ ವಸ್ತು ಪ್ರದರ್ಶನ ವೀಕ್ಷಿಸಲು ಬೆಳಿಗ್ಗೆ ಯಿಂದಲೇ ಜನರು ಕೇಂದ್ರದತ್ತ ಹೊರಟಿದ್ದರು. ಇದರಿಂದಾಗಿ ವಿಪರೀತ ದಟ್ಟಣೆ ಉಂಟಾಯಿತು.

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಸಮೀಪ, ಟೌನ್‌ಹಾಲ್, ಹಡ್ಸನ್ ಸರ್ಕಲ್, ಕೆ.ಆರ್. ವೃತ್ತ, ಅನಿಲ್‌ಕುಂಬ್ಳೆ ವೃತ್ತ, ಕಸ್ತೂರಬಾ ರಸ್ತೆಯಲ್ಲಿ ಅತಿಹೆಚ್ಚಿನ ದಟ್ಟಣೆ ಉಂಟಾಗಿತ್ತು.

ಮೆಟ್ರೊದಲ್ಲೂ ಜನಸಂದಣಿ: ಶನಿವಾರ ಸಂಜೆಯಿಂದ ರಾತ್ರಿಯ ವರೆಗೂ ಮೆಟ್ರೊ ರೈಲಿನಲ್ಲಿ ಜನಸಂದಣಿ ಹೆಚ್ಚಿತ್ತು. ರೈಲಿನಲ್ಲಿ ಪ್ರಯಾಣಿಕರು ಕಿಕ್ಕಿರಿದು ತುಂಬಿದ್ದರು.

ತುಮಕೂರು ರಸ್ತೆಯಲ್ಲಿ ಶನಿವಾರ ಉಂಟಾಗಿದ್ದ ದಟ್ಟಣೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು

ನಗರದಲ್ಲಿ ಇಂದು

‘ನೀರಥಾನ್–2024’ ಚಾಲನೆ: ಬಿ. ನಾಗೇಂದ್ರ, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 5

ಆರ್ಗ್ಯಾನಿಕ್ ಸಂತೆ: ಗಾಯನ: ಸಿಂಚನಾ ಮೂರ್ತಿ ಮತ್ತು ತಂಡ, ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8

ನಮ್ಮ ಕರಾವಳಿ ಉತ್ಸವ: ಉದ್ಘಾಟನೆ: ಹರೀಶ್ ಕುಮಾರ್, ಎಂ. ಜಯರಾಮ್, ಅಧ್ಯಕ್ಷತೆ: ಕೆ. ಸುಬ್ರಾಯ ಭಟ್, ಸುರೇಶ ಜಿ.ಕೆ., ಕ್ರೀಡಾ ಗ್ರಾಮದ ಉದ್ಘಾಟನೆ: ವೈ. ನವೀನ್ ಭಟ್, ಅಬ್ದುಲ್ ಅಹದ್, ಆಹಾರ ಮೇಳದ ಉದ್ಘಾಟನೆ: ಗಾಯತ್ರಿ ನಾಯಕ್, ಅಜಿತ್ ಕುಮಾರ್ ರೈ, ಅತಿಥಿಗಳು: ಟಿ. ನಾರಾಯಣ್, ಪ್ರವೀಣ್ ಕುಮಾರ್ ಶೆಟ್ಟಿ, ಕೆ. ಸೋಮಶೇಖರ್, ರಾಕೇಶ್ ಶೆಟ್ಟಿ, ಜಯಪ್ರಕಾಶ್ ಶೆಟ್ಟಿ ಉಪ್ಪಳ, ದಿನೇಶ್ ವೈದ್ಯ ಅಂಪಾರು ಬೆಳಿಗ್ಗೆ 9ಕ್ಕೆ, ಉದ್ಘಾಟನೆ: ಎಂ. ಕೃಷ್ಣಪ್ಪ, ಕೋಟ ಶ್ರೀನಿವಾಸ ಪೂಜಾರಿ, ಸ್ಮರಣ ಸಂಚಿಕೆ ಬಿಡುಗಡೆ: ಕೆ. ಪ್ರಕಾಶ ಶೆಟ್ಟಿ, ವಿಷ್ಣುಶರಣ್ ಭಟ್, ಉಪಸ್ಥಿತಿ: ಸತೀಶ್ ಸೈಲ್, ಹರೀಶ್ ಪೂಂಜಾ, ಸಂಜೆ 4.30 ಆಯೋಜನೆ: ಕರಾವಳಿಗರ ಒಕ್ಕೂಟ ಬೆಂಗಳೂರು, ಸ್ಥಳ: ಬಿಬಿಎಂಪಿ ಆಟದ ಮೈದಾನ, ಕ್ಯಾಪಿಟಲ್ ಸ್ಕೂಲ್ ಎದುರು, ಆರ್‌ಬಿಐ ಲೇಔಟ್, ಜೆ.ಪಿ. ನಗರ.

‘ನೀಲಗಿರಿ ಬೆಟ್ಟಗಳ’ ಕುರಿತು ಛಾಯಾಚಿತ್ರ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10ರಿಂದ

ಶಂಕರ ಕೆ. ಪ್ರಸಾದ್, ನೇತ್ರಕೆರೆ ಉದಯಶಂಕರ ಅವರ ‘ಬೆಂಗಳೂರಿನ ಭೂಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ’ ಪುಸ್ತಕ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಡಿ.ವಿ. ಗುರುಪ್ರಸಾದ್, ಅತಿಥಿ: ಸದಾನಂದ ಜಾನೆಕೆರೆ, ಸ್ಥಳ: ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ (ಕಾಲೇಜು ಸಭಾಂಗಣ), ಬಂಗಾರಪ್ಪನಗರ, ರಾಜರಾಜೇಶ್ವರಿನಗರ, ಬೆಳಿಗ್ಗೆ 10.30

ಸಂತೋಷ್ ಹೆಗ್ಡೆ

ಕರ್ನಾಟಕ–50, ಕುವೆಂಪು ಗೀತ ಸಂಭ್ರಮ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಅತಿಥಿಗಳು: ಟಿ.ಎ. ನಾರಾಯಣಗೌಡ, ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಗಾಯನ ಗಂಗಾ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಜೋಗಿ (ಗಿರೀಶ ರಾವ್ ಹತ್ವಾರ್) ಅವರ ‘ನಿರ್ಗಮನ’, ಸಾಲು ಸಾಲು ಸಾಲು’, ಎಂ.ಆರ್. ದತ್ತಾತ್ರಿ ಅವರ ‘ಸರ್ಪಭ್ರಮೆ’ ಪುಸ್ತಕಗಳ ಬಿಡುಗಡೆ: ಕೆ. ಉಲ್ಲಾಸ್ ಕಾರಂತ, ಪುಸ್ತಕಗಳ ಕುರಿತು: ಗಜಾನನ ಶರ್ಮ, ಹರೀಶ್ ಕೇರ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಕೆ.ಉಲ್ಲಾಸ್ ಕಾರಂತ

ಚಿ. ಉದಯಶಂಕರ್ ನೆನಪಿನ ಅಂಗವಾಗಿ ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅತಿಥಿ: ಶೇಖರ್ ಗಂಗಾವತಿ, ಅಧ್ಯಕ್ಷತೆ: ಬಿ. ಶಾಂತಕುಮಾರ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

‘ಕೋಟಿ–ಚೆನ್ನಯ ಕ್ರೀಡಾಕೂಟ–2024’: ಉದ್ಘಾಟನೆ: ಎನ್.ಎ. ಹ್ಯಾರಿಸ್, ಅಧ್ಯಕ್ಷತೆ: ಟಿ. ಶಿವಕುಮಾರ್, ಅತಿಥಿ: ಗುರುರಾಜ್ ಪೂಜಾರಿ, ಸನ್ಮಾನಿತರು: ನಿತಿನ್ ಪೂಜಾರಿ, ದಯಾನಂದ ಬಿ.ಎಂ., ಆಯೋಜನೆ: ಬಿಲ್ಲವ ಅಸೋಸಿಯೇಷನ್ ಬೆಂಗಳೂರು, ಸ್ಥಳ: ವೈ.ಎಂ.ಸಿ.ಎ ಮೈದಾನ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಡಾ.ನಿರುಪಮಾ ಸ್ಮಾರಕ ದತ್ತಿ ‘ಕನ್ನಡ ಸಾಹಿತ್ಯ ಮತ್ತು ಇತಿಹಾಸದ ಬರವಣಿಗೆಗಳು’ ಕುರಿತು ಉಪನ್ಯಾಸ: ಜಿ.ಬಿ. ಹರೀಶ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

‘ರಾಮಚರಿತ್ರೆ ದಶಾವತಾರ’ ನೃತ್ಯ ರೂಪಕ: ನೃತ್ಯ ಸಂಯೋಜನೆ: ನಾಗಶ್ರೀ ರಾಘವೇಂದ್ರ ಮತ್ತು ತಂಡ, ನಿರ್ದೇಶನ: ಬೆಳೆಗೆರೆ ಗೌರಿ ನಾಗರಾಜ್, ಆಯೋಜನೆ: ರೋಟರಿ ಸೀನಿಯರ್ ಸಿಟಿಜನ್ ಸಂಘ, ಸ್ಥಳ: ವಿವಿಎನ್, 3ನೇ ಮಹಡಿ, ವಿವಿ ಪುರ, ಮಧ್ಯಾಹ್ನ 1ರಿಂದ

ನೃತ್ಯ, ಗೀತ ಗಾಯನ, ಕವನ ವಾಚನ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಚ್‌.ಕೆ. ಹಸೀನಾ, ಪ್ರಶಸ್ತಿ ಪ್ರದಾನ: ಎಸ್.ಜಿ. ಸುಶೀಲಮ್ಮ, ಅತಿಥಿ: ರು. ಬಸಪ್ಪ, ಆಯೋಜನೆ: ಜೇನುಗೂಡು ಕಲಾ ಬಳಗ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಸುರಾನ ಕಾಲೇಜು ಹಿಂಭಾಗ, ಕೆಂಗೇರಿ, ಮಧ್ಯಾಹ್ನ 2ರಿಂದ

‘ಭೀಷ್ಮ ವಿಜಯ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಗಣಪತಿ ಹೆಗಡೆ ಬೇರಂಕಿ, ಮದ್ದಳೆ: ನಾರಾಯಣ ಹೆಬ್ಬಾರ್ ಕಳಚೆ, ಚಂಡೆ: ನಾಗಭೂಷಣ ಕೇಡಲಸರ, ಮುಮ್ಮೇಳ: ಪ್ರತಾಪಸೇನ: ಸತ್ಯನಾರಾಯಣ ಭಟ್ಟ ಗಾಳಿ, ಸಾಲ್ವ: ಶ್ರೀಪಾದ ಹೆಗಡೆ ಶುಂಠಿ, ಚಾರ: ರಾಘವೇಂದ್ರ ಭಟ್ಟ ವಾಜಗೋಡು, ಅಂಬೆ: ರಾಧಾಕೃಷ್ಣ ಬೆಳೆಯೂರು, ಹಿಮ್ಮೇಳ: ಭಾಗವತರು: ನಾಗರಾಜ ಮಗವಳ್ಳಿ, ಮದ್ದಳೆ: ರಾಜೇಶ ಸಾಗರ, ಚಂಡೆ: ಲಕ್ಷ್ಮೀನಾರಾಯಣ ಸಂಪ, ಮುಮ್ಮೇಳ: ದೇಶಾಧಿಪಾಲಕ: ಅಕ್ಷಯ ಹೆಗಡೆ ಹಾರೆಕೊಪ್ಪ, ಭೀಷ್ಮ: ಅಜಿತೇಶ ಹೆಗಡೆ ಸಾಗರ, ವೃದ್ಧ ಬ್ರಾಹ್ಮಣ: ರಾಘವೇಂದ್ರ ಭಟ್ ವಾಜಗೋಡು, ಭಾರ್ಗವರಾಮ: ಗಜೇಂದ್ರ ತೀರ್ಥಹಳ್ಳಿ, ಆಯೋಜನೆ: ಯಕ್ಷಗಾನ ತಪಸ್ಸಂಘ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3ರಿಂದ

ವಾರ್ಷಿಕೋತ್ಸವ: ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಎಚ್‌.ಎಸ್. ರಾಘವೇಂದ್ರ ಶೆಟ್ಟಿ, ಆಯೋಜನೆ: ನಾಟ್ಯೇಶ್ವರ ನೃತ್ಯ ಶಾಲಾ, ಸ್ಥಳ: ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಮಧ್ಯಾಹ್ನ 3

‘ಸವಧ್ಯಾಯ’: ಕಥಕ್–ಭರತನಾಟ್ಯ ಜುಗಲ್‌ಬಂದಿ: ಮೇಧವಿನಿ ವರಖೇಡಿ, ರೋಹಿಣಿ ಪ್ರಭಾತ್, ಭರತನಾಟ್ಯ: ಶೃತಿ ಗೋಪಾಲ್, ಒಡಿಸ್ಸಿ–ಕುಚಿಪುಡಿ ಜುಗಲಬಂದಿ: ಶೋಭಾ ನಾಗರಾಜನ್, ಶ್ರೀವಿದ್ಯಾ ಅಂಗಾರ ಸಿನ್ಹಾ, ಅತಿಥಿಗಳು: ಸುಮಾ ಸುಧೀಂದ್ರ, ಆರತಿ ವಿ.ಬಿ., ಶರ್ಮಿಳಾ ಮುಖರ್ಜಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಹರಿದಾಸ ಉತ್ಸವ: ಗಾಯನ: ಸಾಕ್ಷಿ ಜಗದೀಶ್, ಪಿಟೀಲು: ಜೆ.ಕೆ. ಶ್ರೀಧರ್, ಮೃದಂಗ: ರವಿಶಂಕರ್ ಶರ್ಮಾ, ಆಯೋಜನೆ: ಸಂಗೀತ ಸಂಭ್ರಮ ಟ್ರಸ್ಟ್ ಕಾಡುಮಲ್ಲೇಶ್ವರ ಗೆಳೆಯರ ಬಳಗ, ಮಲ್ಲೇಶ್ವರ ಶ್ಯಾಮಲಾ ಕೃಷ್ಣ ಸಂಗೀತ ಸಭಾ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 5

ವಾರ್ಷಿಕ ಸಂಗೀತೋತ್ಸವ: ಪಿಟೀಲಿನ ವೈಭವ: ಟಿ.ಎಸ್. ಕೃಷ್ಣಮೂರ್ತಿ, ಅನೂರು ಅನಂತ ಕೃಷ್ಣಶರ್ಮ ಮತ್ತು ತಂಡ, ಆಯೋಜನೆ: ಶಾರದಾ ಸಂಗೀತ ಸಭಾ ಟ್ರಸ್ಟ್, ಸ್ಥಳ: ತ್ಯಾಗೀಶಾನಂದ ಸಭಾಂಗಣ, ಹನುಮಂತನಗರ, ಸಂಜೆ 6

‘ಮಾತಿನಲ್ಲಿ ಹಾಸ್ಯ’: ಉದ್ಘಾಟನೆ: ರಾಘವೇಂದ್ರ ನಾಡಿಗ್, ಅಧ್ಯಕ್ಷತೆ: ರಾ.ಸು. ವೆಂಕಟೇಶ್, ಅತಿಥಿ: ರಾಜಶೇಖರ ಮೂರ್ತಿ, ಆಯೋಜನೆ: ರಂಗ ಶಿಖರ, ಸ್ಥಳ: ಕುಟೀರ 2ನೇ ಮಹಡಿ, ಚಾಮರಾಜಪೇಟೆ, ಸಂಜೆ 6

‘ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ: ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಸಂಗೀತ: ದೇಸಿ ಮೋಹನ್ ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ: 7.30

ಭಾನುವಾರ, ಫೆಬ್ರುವರಿ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 56 | ಪುಟ 22

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸರ್ಕಾರವು ಕೆಲವೆಡೆ ಚಾರಣದ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಿರುವ ಈ ಸಂದರ್ಭದಲ್ಲಿ ಆಯೋಜಕರು, ಚಾರಣಿಗರು ಜವಾಬ್ದಾರಿಯುತ ಚಾರಣ ಮಾಡುವುದು ಇಂದಿನ ಅಗತ್ಯ.



ಸುಬ್ರಹ್ಮಣ್ಯ: ದೇವರಿಗೆ ₹75 ಲಕ್ಷ ಮೌಲ್ಯದ ಪ್ರಭಾವಳಿ ಸಮರ್ಪಣೆ 4

ಮೈಸೂರು ಕ್ಷೇತ್ರ ಬಿಟ್ಟುಕೊಡುವ ಬದಲು ಕಮಲ ಚಿಹ್ನೆಯಡಿ ಜೆಡಿಎಸ್ ಅಭ್ಯರ್ಥಿ ಇಳಿಸಲು ತಂತ್ರ

36 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ 9

ಸಾ.ರಾ.ಮಹೇಶ್ ಬಿಜೆಪಿ ಅಭ್ಯರ್ಥಿ? 4

ಮೋದಿ ಸರ್ಕಾರದ ಗ್ಯಾರಂಟಿ

ನಮ್ಮ ಸಂಕಲ್ಪ ವಿಕಸಿತ ಭಾರತ

ರೈತರ ಸಮೃದ್ಧಿ

1 ಲಕ್ಷದ 25 ಸಾವಿರ ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ಒಂದು ನಿಲುಗಡೆ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗಿದೆ, ರೈತರಿಗೆ ಆಧುನಿಕ ಸೌಲಭ್ಯಗಳು ಹಾಗೂ ಮಾಹಿತಿ ಮನೆಯ ಹತ್ತಿರವೇ ಸಿಗುತ್ತಿವೆ

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

cbc 22201/13/0295/2324

ಮಾದರಿ ಕಾರ್ಯಕ್ರಮಗಳ ಅನುಷ್ಠಾನ ಮಾಡಿದ ಉಡುಪಿ ಜಿಲ್ಲಾ ಪಂಚಾಯಿತಿ

ಸ್ತ್ರೀ ಸ್ವಾವಲಂಬನೆಗೆ 'ಸಂಜೀವಿನಿ'

• ಬಾಲಚಂದ್ರ ಎಚ್.

ಒಳನೋಟ

ಉಡುಪಿ ಜಿಲ್ಲಾ ಪಂಚಾಯಿತಿಯು ಹಳ್ಳಿಗಾಡಿನ ಮಹಿಳೆಯರನ್ನು ಒಳಗೊಂಡ ಹೆಬ್ರಿ ಜೇನು ಉತ್ಪಾದನೆ, ಸಣ್ಣ ಹಿಡುವಳಿದಾರರಿಗೆ ನೆರವಾಗಲೆಂದು ಪಾಳು ಭೂಮಿಯಲ್ಲಿ ಭತ್ತದ ಕೃಷಿ ಮಾಡಿ ಬೆಳೆದ ಭತ್ತಕ್ಕೆ ಉಡುಪಿ ಸಂಜೀವಿನಿ ಕಜೆ ಎನ್ನುವ ಕುಚಲಕ್ಕಿ ಬ್ರ್ಯಾಂಡ್ ಮಾಡಿದ್ದಾರೆ. ಇದರ ಜೊತೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸುವ ಬಹುತೇಕ ಉತ್ಪನ್ನಗಳ ಮಾರಾಟಕ್ಕೆ ಸಂಜೀವಿನಿ ಸ್ವಸಹಾಯ ಸಂಘದ ಸೂಪರ್ ಮಾರ್ಕೆಟ್ ಒಂದೆರಡು ತಾಲ್ಲೂಕಿನಲ್ಲಿ ತಲೆಯೆತ್ತಿದೆ...

ಉಡುಪಿ: ದೊಡ್ಡ ಕಂಪನಿಗಳ ಬ್ರ್ಯಾಂಡೆಡ್ ಉತ್ಪನ್ನಗಳು ಮಾರುಕಟ್ಟೆಯನ್ನು ಆಕ್ರಮಿಸಿಕೊಂಡಿರುವಾಗ ಹಳ್ಳಿಗಾಡಿನ ಮಹಿಳೆಯರು ತಯಾರಿಸಿದ ಜೇನುತುಪ್ಪ ಗ್ರಾಹಕರಿಗೆ ರುಚಿಸುವುದೇ ಎಂಬ ಆತಂಕ ಆರಂಭದಲ್ಲಿ ಕಾಡಿತ್ತು. ಆದರೆ, ಗುಣಮಟ್ಟದ ಉತ್ಪನ್ನಗಳನ್ನು ಗ್ರಾಹಕ ತಿರಸ್ಕರಿಸುವುದಿಲ್ಲ ಎಂಬ ನಂಬಿಕೆ ಹುಸಿಯಾಗಲಿಲ್ಲ. 'ಹೆಬ್ರಿ ಜೇನಿ'ನ ಸಿಹಿ ಗ್ರಾಹಕರಿಗೆ ಹಿಡಿಸಿತು, ಸ್ವಸಹಾಯ ಸಂಘದ ಮಹಿಳೆಯರ ಕೈಯನ್ನೂ ಹಿಡಿಯಿತು ಎನ್ನುತ್ತ 'ಹೆಬ್ರಿ ಜೇನಿ'ನ ಯಶೋಗಾಥೆಯನ್ನು ಬಿಚ್ಚಿಟ್ಟರು ಫರಿಹಾ ಬಾನು.

ಈ 'ಹೆಬ್ರಿ ಜೇನು' ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಕಲ್ಪವೃಕ್ಷ ಸಂಜೀವಿನಿ ಸ್ವಸಹಾಯ ಸಂಘದ ಮಹಿಳೆಯರು ಹುಟ್ಟುಹಾಕಿರುವ ವಿನೂತನ ಜೇನುತುಪ್ಪದ ಬ್ರ್ಯಾಂಡ್. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಜಿಲ್ಲೆಯಲ್ಲಿ ಸಂಜೀವಿನಿ ಸಂಘದ ಮಹಿಳೆಯರು ಮಾದರಿಯಾದ ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದು ಅವುಗಳಲ್ಲಿ 'ಹೆಬ್ರಿ ಜೇನು' ಕೂಡ ಒಂದು.

ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಸಮುದಾಯದ ಮಹಿಳೆಯರು ಒಟ್ಟಾಗಿ ಹೆಬ್ರಿ ತಾಲ್ಲೂಕಿನ ಬಚ್ಚಪ್ಪು ಗ್ರಾಮದ ಮಧುವನದಲ್ಲಿ 'ಹೆಬ್ರಿ ಜೇನು' ಸಂಸ್ಥೆಯನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಜೇನು ಸಾಕಣೆ, ಸಂಸ್ಕರಣೆ, ಪ್ಯಾಕಿಂಗ್, ಮಾರಾಟ, ಪ್ರಚಾರ ಹೀಗೆ ಪ್ರತಿಯೊಂದು ಜವಾಬ್ದಾರಿಯನ್ನೂ ಮಹಿಳೆಯರೇ ನಿಭಾಯಿಸುತ್ತಿದ್ದಾರೆ.

ಕರಾವಳಿ ಹಾಗೂ ಮಲೆನಾಡಿನ ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಆರಂಭವಾಗಿರುವ ಹೆಬ್ರಿ ಜೇನು ಸಂಸ್ಕರಣಾ ಘಟಕ ಮಹಿಳೆಯರ ಸ್ವಾಭಿಮಾನದ ಬದುಕಿಗೆ ಅವಕಾಶ ಮಾಡಿಕೊಟ್ಟಿದೆ. 2023, ಅ.14ರಂದು ಅಧಿಕೃತವಾಗಿ ಮಾರುಕಟ್ಟೆ ಪ್ರವೇಶಿಸಿದ 'ಹೆಬ್ರಿ ಜೇನು' ಮೂರ್ನಾಲ್ಕು ತಿಂಗಳು ಕಳೆಯುವಷ್ಟರಲ್ಲಿ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ.

ಬೆರಳೆಣಿಕೆ ಮಹಿಳೆಯರು ಶ್ರಮ ಹಾಗೂ ಮುತುವರ್ಜಿಯಿಂದ ತಯಾರಿಸುತ್ತಿರುವ ಹೆಬ್ರಿ ಜೇನಿನ ಸಿಹಿ ಮಾರುಕಟ್ಟೆಯ ತುಂಬೆಲ್ಲ ಹರಡುತ್ತಿದ್ದು ಇದುವರೆಗೂ 2.5 ಕ್ವಿಂಟಲ್‌ನಷ್ಟು ಜೇನು ಮಾರಾಟವಾಗಿದೆ.

7 ನೇ ಪುಟ ನೋಡಿ

ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ಸಂಜೀವಿನಿ ಸ್ವಸಹಾಯ ಸಂಘದ ಮಹಿಳೆಯರು ಜೇನುಕೃಷಿಯಲ್ಲಿ ತೊಡಗಿರುವುದು – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

155 ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಸಂಜೀವಿನಿ ಒಕ್ಕೂಟಗಳು

9,458 ಜಿಲ್ಲೆಯಲ್ಲಿರುವ ಸ್ವಸಹಾಯ ಗುಂಪುಗಳು

1,04,858 ಸ್ವಸಹಾಯ ಸಂಘಗಳಲ್ಲಿರುವ ಸದಸ್ಯೆಯರು

ಆನ್‌ಲೈನ್ ಮಾರಾಟ ವೇದಿಕೆ ಸಿದ್ಧ

ಸಂಜೀವಿನಿ ಸ್ವಸಹಾಯ ಸಂಘಗಳ ಮಹಿಳೆಯರು ತಯಾರಿಸುವ ಉತ್ಪನ್ನಗಳ ಮಾರಾಟಕ್ಕೆ ಆನ್‌ಲೈನ್ ವೇದಿಕೆ ನಿರ್ಮಾಣಕ್ಕೆ ರೂಪುರೇಷೆ ಸಿದ್ಧಗೊಳ್ಳುತ್ತಿದೆ. ಕರಾವಳಿಯಲ್ಲಿ ಮಾತ್ರ ತಯಾರಾಗುವ ಕೆಲವು ಉತ್ಪನ್ನಗಳಿಗೆ ಜಿಐ ಮಾನ್ಯತೆ ಪಡೆಯುವ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತಿದೆ. ಸ್ಪರ್ಧಾತ್ಮಕ ಯುಗದಲ್ಲಿ ಗ್ರಾಹಕರನ್ನು ಸೆಳೆಯಲು ಸಂಜೀವಿನಿ ಸಂಘಗಳ ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಆಕರ್ಷಕ ಪ್ಯಾಕಿಂಗ್, ಆಹಾರ ಸುರಕ್ಷತಾ ಪ್ರಮಾಣ ಪತ್ರ, ಗುಣಮಟ್ಟಕ್ಕೆ ಒತ್ತು ನೀಡಲು ತರಬೇತಿ ನೀಡಲಾಗುವುದು.

ಪ್ರತೀಕ್ ಬಾಯಲ್, ಜಿಲ್ಲಾ ಪಂಚಾಯಿತಿ ಸಿಇಒ

'ಒಂದೇ ಕ್ಷೇತ್ರ ವ್ಯಾಪ್ತಿ: ಅಧಿಕಾರಿಗಳ ನಿಯೋಜನೆ ಸಲ್ಲ'

ನವದೆಹಲಿ (ಪಿಟಿಐ): ಚುನಾವಣೆಗೂ ಮುನ್ನ ಜಿಲ್ಲೆಯಿಂದ ವರ್ಗಾವಣೆಗೊಂಡ ಅಧಿಕಾರಿಗಳನ್ನು ಆ ಸಂಸದೀಯ ಕ್ಷೇತ್ರದ ಯಾವುದೇ ಜಿಲ್ಲೆಯಲ್ಲಿ ನಿಯೋಜಿಸದಂತೆ ನೋಡಿಕೊಳ್ಳಬೇಕು ಎಂದು ಚುನಾವಣಾ ಆಯೋಗ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ತನ್ನ ನೀತಿಯನ್ನು ತಿರುಚಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವ ರಾಜ್ಯ ಸರ್ಕಾರಗಳ ಕ್ರಮಗಳನ್ನು ತಡೆಯಲು ಆಯೋಗ ಈ ಮೂಲಕ ಮುಂದಾಗಿದೆ.

7ನೇ ಪುಟ ನೋಡಿ

ಪುಣ್ಯಸ್ನಾನ ಕೊಪ್ಪಳ ತಾಲ್ಲೂಕಿನ ಹುಲಿಗಿಯಲ್ಲಿ ಭಾರತ ಹುಣ್ಣಿಮೆ ಅಂಗವಾಗಿ ಶನಿವಾರ ತುಂಗಭದ್ರಾ ನದಿಯ ಕೊಳಚೆ ನೀರಿನಲ್ಲಿಯೇ ಪುಣ್ಯಸ್ನಾನ ಮಾಡಿದ ಭಕ್ತರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ 6

ಜುಲೈ 1ರಿಂದ ಹೊಸ ಕ್ರಿಮಿನಲ್ ಕಾನೂನು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ, ಬ್ರಿಟಿಷರ ಕಾಲದ ಕಾನೂನಿನ ಬದಲಿಗೆ ರೂಪಿಸಲಾಗಿರುವ ಹೊಸ ಕಾನೂನುಗಳು ಜುಲೈ 1ರಿಂದ ಜಾರಿಗೆ ಬರಲಿವೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಬದಲಿಗೆ 'ಭಾರತೀಯ ನ್ಯಾಯ ಸಂಹಿತೆ', ಅಪರಾಧ ದಂಡಪ್ರಕ್ರಿಯಾ ಸಂಹಿತೆಯ ಬದಲು 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ' ಮತ್ತು ಸಾಕ್ಷ್ಯ ಕಾಯ್ದೆಯ ಬದಲು 'ಭಾರತೀಯ ಸಾಕ್ಷ್ಯ ಕಾಯ್ದೆ' ಜಾರಿಗೆ ಬರಲಿವೆ.

ಈ ಸಂಬಂಧ ಗೃಹ ಸಚಿವಾಲಯವು ಶನಿವಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಕಾನೂನು ಬದಲಿಗೆ ಸಂಬಂಧಿಸಿದ ಮೂರೂ ಮಸೂದೆಗಳಿಗೆ ಕಳೆದ ವರ್ಷ ಡಿಸೆಂಬರ್ 21ರಂದು ಸಂಸತ್ ಅನುಮೋದನೆ ನೀಡಿತ್ತು. ಡಿಸೆಂಬರ್ 25ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದರು.

'ಕಾನೂನು ಬದಲಾವಣೆಯ ವೇಗಕ್ಕೆ ಹೊಂದಿಕೊಳ್ಳಲು ಪೊಲೀಸರಿಗೆ ಮತ್ತು ನ್ಯಾಯಾಂಗ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲಾಗುವುದು. ವಕೀಲರು ಕಾನೂನು ಬದಲಾವಣೆಗೆ ತಕ್ಕಂತೆ ತಮ್ಮನ್ನು ತಾವು ಸಜ್ಜುಗೊಳಿಸಿಕೊಳ್ಳಬೇಕು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಕ್ರಿಮಿನಲ್ ಕಾನೂನು ದೇಶದ ಅಪರಾಧ ನ್ಯಾಯ ವ್ಯವಸ್ಥೆಯನ್ನು ವಸಾಹತು ಕಾಲದ ಜಡತ್ವದಿಂದ ಹೊರತಂದು ಸಂಪೂರ್ಣವಾಗಿ ನವೀಕರಿಸುತ್ತದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

'ಶಿಕ್ಷೆ ನೀಡುವುದಕ್ಕಿಂತಲೂ ನ್ಯಾಯ ನೀಡುವುದು ನಮ್ಮ ಉದ್ದೇಶವಾಗಿದೆ. ಹೊಸ ಕಾನೂನಿನಲ್ಲಿ ಭಯೋತ್ಪಾದನೆಗೆ ಸ್ಪಷ್ಟ ವ್ಯಾಖ್ಯಾನ ನೀಡಲಾಗಿದೆ. ದೇಶದ್ರೋಹದ ಕಾನೂನನ್ನು ರದ್ದುಪಡಿಸಲಾಗಿದ್ದು, 'ಸರ್ಕಾರದ ವಿರುದ್ಧದ ಅಪರಾಧಗಳು' ಎನ್ನುವ ಹೊಸ ಸೆಕ್ಷನ್ ಅನ್ನು ಜಾರಿಗೆ ತರಲಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

7ನೇ ಪುಟ ನೋಡಿ

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹5670/gm
ಬೆಳ್ಳಿ ದರ: ₹71/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಇಂದಿನ ಸಂಚಿಕೆಯೊಂದಿಗೆ
ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

ಎರಡು ದಿನಗಳ ರಾಷ್ಟ್ರೀಯ ಏಕತಾ ಸಮಾವೇಶಕ್ಕೆ ಚಾಲನೆ

'ಸಂವಿಧಾನ ವಿರೋಧಿಗಳ ಕಿತ್ತೆಸೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನದ ವಿರುದ್ಧ ಇರುವವರನ್ನು ಕಿತ್ತು ಎಸೆಯಿರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಶನಿವಾರ ಇಲ್ಲಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಸಂವಿಧಾನ ಜಾರಿಗೆ ಬಂದ ದಿನದಿಂದಲೂ ಅಪಪ್ರಚಾರ ನಡೆಯುತ್ತಿದೆ. ಸಂವಿಧಾನ ರಕ್ಷಣೆಯಾದರೆ ನಾವೆಲ್ಲರೂ ಉಳಿಯುತ್ತೇವೆ. ಇಲ್ಲದಿದ್ದರೆ ಅಪಾಯಕ್ಕೆ ಸಿಲುಕುತ್ತೇವೆ' ಎಂದು ಎಚ್ಚರಿಸಿದರು.

'ಸಂವಿಧಾನ ದಲಿತರ ಉದ್ಧಾರಕ್ಕೆ ಮಾತ್ರವೇ ಇದೆ; ಸಾಮಾಜಿಕ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿಲ್ಲ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಸ್ಪಷ್ಟವಾಗಿ ಹೇಳುವುದರಿಂದ ಇದರ ವಿರುದ್ಧ ಇರುವವರು ಅಪಪ್ರಚಾರ ನಡೆಸುತ್ತಿದ್ದಾರೆ' ಎಂದು ಹೇಳಿದರು.

'ಸಮಾನತೆ, ಮಾನವ ಸಮಾಜ ನಿರ್ಮಾಣದ ಪರವಾಗಿರುವವರ ಕೈಯಲ್ಲಿ ಸಂವಿಧಾನವಿದ್ದರೆ ಅದು ಯಶಸ್ವಿಯಾಗುತ್ತದೆ. ಅದಕ್ಕೆ ವಿರುದ್ಧವಾಗಿದ್ದವರ ಕೈಯಲ್ಲಿದ್ದರೆ ಸಂವಿಧಾನಕ್ಕೆ ಉಳಿಗಾಲವಿಲ್ಲ' ಎಂದು ಹೇಳಿದರು.

'ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶ'ದಲ್ಲಿ ಪಾಲ್ಗೊಂಡಿದ್ದವರು ಸಂವಿಧಾನ ಪೀಠಿಕೆ ವಾಚನ ಮಾಡಿದರು – ಪ್ರಜಾವಾಣಿ ಚಿತ್ರ

8ನೇ ಪುಟ ನೋಡಿ

ಒಳ ಪುಟ

'ಟಿಎಂಸಿ ವಿರುದ್ಧ ಮತ ಚಲಾಯಿಸಿದ್ದಕ್ಕೆ ಕಿರುಕುಳ' 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಾಂಗ್ರೆಸ್ – ಎಎಪಿ ಮಧ್ಯೆ 4 ರಾಜ್ಯಗಳಲ್ಲಿ ಏರ್ಪಟ್ಟ ಮೈತ್ರಿ

ಸೀಟು ಹಂಚಿಕೆ ಅಂತಿಮ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಇಂಡಿಯಾ' ಮೈತ್ರಿಕೂಟದ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷ (ಎಎಪಿ) ಲೋಕಸಭಾ ಚುನಾವಣೆಯ ಸೀಟು ಹಂಚಿಕೆಯನ್ನು ಶನಿವಾರ ಅಂತಿಮಗೊಳಿಸಿವೆ. ದೆಹಲಿ, ಗುಜರಾತ್, ಹರಿಯಾಣ, ಗೋವಾ ಹಾಗೂ ಚಂಡೀಗಢದಲ್ಲಿ ಉಭಯ ಪಕ್ಷಗಳು ಮೈತ್ರಿ ಮಾಡಿಕೊಂಡಿವೆ.

ದೆಹಲಿಯ ನಾಲ್ಕು ಕ್ಷೇತ್ರಗಳಲ್ಲಿ ಎಎಪಿ ಹಾಗೂ ಮೂರರಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿವೆ. ಅಹ್ಮದ್ ಪಟೇಲ್ ಕುಟುಂಬಕ್ಕೆ ಭಾವನಾತ್ಮಕ ನಂಟು ಇರುವ ಗುಜರಾತ್‌ನ ಭರೂಚ್ ಕ್ಷೇತ್ರವನ್ನು ಎಎಪಿಗೆ ಬಿಟ್ಟುಕೊಡಲು 'ಕೈ' ಪಾಳಯ ಒಪ್ಪಿದೆ. ಇದಕ್ಕೆ ಪ್ರತಿಯಾಗಿ ದಕ್ಷಿಣ ಗೋವಾದಿಂದ ಅಭ್ಯರ್ಥಿಯನ್ನು ಹಿಂಪಡೆಯಲು ಎಎಪಿ ಒಪ್ಪಿಗೆ ಸೂಚಿಸಿದೆ. ಹರಿಯಾಣದಲ್ಲಿ ಒಂದು ಸ್ಥಾನವನ್ನು ಎಎಪಿಗೆ ಬಿಟ್ಟುಕೊಡಲು ಕಾಂಗ್ರೆಸ್ ನಿರ್ಧರಿಸಿದೆ.

ಚಂಡೀಗಢದ ಏಕೈಕ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದೆ.

7ನೇ ಪುಟ ನೋಡಿ

ಪಟೇಲ್ ಕುಟುಂಬದ ಅಸಮಾಧಾನ

ಸೀಟು ಹಂಚಿಕೆ ವ್ಯವಸ್ಥೆ ಪ್ರಕಾರ, ಗುಜರಾತ್‌ನ 26 ಕ್ಷೇತ್ರಗಳ ಪೈಕಿ 24ರಲ್ಲಿ 'ಕೈ' ಅಭ್ಯರ್ಥಿಗಳು ಕಣಕ್ಕಿಳಿಯಲಿದ್ದಾರೆ. ಭರೂಚ್ ಹಾಗೂ ಭಾವನಗರದಲ್ಲಿ ಎಎಪಿ ಸ್ಪರ್ಧಿಸಲಿದೆ. ಎಎಪಿಯ ಚೈತರ್ ವಾಸವ ಭರೂಚ್‌ನಿಂದ ಮತ್ತು ಉಮೇಶ್‌ಭಾಯ್ ಮಕ್ವಾನಾ ಭಾವನಗರದಿಂದ ಸ್ಪರ್ಧಿಸಲಿದ್ದಾರೆ.

ಭರೂಚ್ ಕ್ಷೇತ್ರ ಕೈ ತಪ್ಪಿರುವುದಕ್ಕೆ ಅಹ್ಮದ್ ಪಟೇಲ್ ಪುತ್ರ ಫೈಸಲ್ ಪಟೇಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮ್ಮ ಕುಟುಂಬಕ್ಕೆ 45 ವರ್ಷಗಳ ಭಾವನಾತ್ಮಕ ನಂಟು ಇರುವ ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಫೈಸಲ್ ಸಿದ್ಧತೆ ಮಾಡಿಕೊಂಡಿದ್ದರು. ಆತ್ಮಸಾಕ್ಷಿ ಹೊಂದಿರುವ ಕಾರ್ಯಕರ್ತರು ಎಎಪಿ ಅಭ್ಯರ್ಥಿಯನ್ನು ಬೆಂಬಲಿಸುವುದಿಲ್ಲ ಎಂದ ಅವರು, ಕ್ಷೇತ್ರ ಬಿಟ್ಟುಕೊಡದಂತೆ ಹೈಕಮಾಂಡ್ ಮನವೊಲಿಸುತ್ತೇನೆ ಎಂದು ತಿಳಿಸಿದರು.

'ಭರೂಚ್ ಉಳಿಸಿಕೊಳ್ಳಲು ಸಾಧ್ಯವಾಗದಿದ್ದಕ್ಕಾಗಿ ಜಿಲ್ಲಾ ಕಾರ್ಯಕರ್ತರಲ್ಲಿ ಕ್ಷಮೆಯಾಚಿಸುತ್ತೇನೆ. ಕಾಂಗ್ರೆಸ್ ಅನ್ನು ಬಲಿಷ್ಠಗೊಳಿಸಲು ನಾವು ಮರುಸಂಘಟನೆ ಮಾಡುತ್ತೇವೆ. ಅಹ್ಮದ್ ಪಟೇಲ್ ಅವರ ಪರಂಪರೆಯನ್ನು ನಾವು ವ್ಯರ್ಥವಾಗಲು ಬಿಡುವುದಿಲ್ಲ' ಎಂದು ಪಟೇಲ್ ಪುತ್ರಿ ಮುಮ್ತಾಜ್ ಪಟೇಲ್ ಹೇಳಿದರು.

Payments Bank | NETC NATIONAL ELECTRONIC TOLL COLLECTION | FASTag Easy to Cruise

ಹೊಸ FASTag ಬೇಕೇ?
FAAASST ಆಗಿ ಡೆಲಿವರಿ ಪಡೆಯಿರಿ.
ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್‌ನಿಂದ NETC FASTag ಅನ್ನು ಖರೀದಿಸಿ

QR ಕೋಡ್ ಅನ್ನು ಸ್ಕ್ಯಾನ್ ಮಾಡಿ
ಆರ್ಡರ್ ಪ್ಲೇಸ್ ಮಾಡಿ
ಹೋಮ್ ಡೆಲಿವರಿ ಪಡೆಯಿರಿ

T&C ಅನ್ವಯಿಸುತ್ತದೆ.

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ: ಬಾಲಕರು ವಶಕ್ಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ನಾಲ್ವರು ಬಾಲಕರನ್ನು ಆಡುಗೋಡಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಫೆ. 17ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಮಹಿಳೆ ದೂರು ನೀಡಿದ್ದರು. ತನಿಖೆ ಕೈಗೊಂಡು ಬಾಲಕರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿಯಾಗಿರುವ 25 ವರ್ಷದ ಮಹಿಳೆ, ಮನೆ ಪಕ್ಕದ ರಸ್ತೆ ಬಳಿ ಕಸ ಎಸೆಯಲು ಹೋಗಿದ್ದರು. ಆಗ, ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆಯುವ ವಿಚಾರವಾಗಿ ಬಾಲಕರು ಹಾಗೂ ಮಹಿಳೆ ನಡುವೆ ಮಾತಿನ ಚಕಮಕಿ ನಡೆದಿತ್ತು.'ಮಹಿಳೆಯನ್ನು ನಿಂದಿಸಿದ್ದ ಬಾಲಕರು, ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದರೆಂದು ಗೊತ್ತಾಗಿದೆ. ಕೃತ್ಯದ ಬಳಿಕ ಪರಾರಿಯಾಗಿದ್ದ ಬಾಲಕರನ್ನು ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ವಶಕ್ಕೆ ಪಡೆಯಲಾಗಿದೆ' ಎಂದರು.

ಆತ್ಮರಕ್ಷಣೆಗೆ ಕೊಲೆ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಂಟ್ ಮಿಕ್ಸಿಂಗ್ ಮಷಿನ್ ಕಳವು ಆರೋಪಕ್ಕೆ ಸಂಬಂಧಿಸಿದಂತೆ ಮನೆ ಮಾಲೀಕರು ಆರೋಪಿಗಳನ್ನು ವಿಚಾರಿಸುತ್ತಿದ್ದ ವೇಳೆ ನಡೆದಿದ್ದ ಮಾತಿನ ಸಂಘರ್ಷದಲ್ಲಿ ಘಟಿಸಿದ ಯುವಕನೊಬ್ಬನ ಹತ್ಯೆಗೆ ಸಂಬಂಧಿಸಿದಂತೆ ಕೊಲೆ ಆರೋಪಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಕುರಿತಂತೆ ಆರೋಪಿ ರಾಜೇಂದ್ರ ಪ್ರಸಾದ್ (26) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಜಾಮೀನು ನೀಡಿ ಆದೇಶಿಸಿದೆ.

ವಿಚಾರಣೆ ವೇಳೆ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಕೊಲೆ ಉದ್ದೇಶಪೂರ್ವಕವಾಗಿ ನಡೆದದ್ದಲ್ಲ. ಮೃತನು ಅರ್ಜಿದಾರನ ಮೇಲೆ ಹಲ್ಲೆ ನಡೆಸಿದ್ದರಿಂದ ಮತ್ತು ಚಾಕು ಬಳಸಲು ಮುಂದಾದ ಕಾರಣ ಸ್ವಯಂ ರಕ್ಷಣೆಗಾಗಿ ಪ್ರತಿ ಹಲ್ಲೆ ಮಾಡಿರುತ್ತಾರೆ. ಈ ಕೃತ್ಯವು ಭಾರತೀಯ ದಂಡ ಸಂಹಿತೆ-1860ರ ಕಲಂ 96 ಮತ್ತು 97ರ ಅಡಿಯಲ್ಲಿ, ಆತ್ಮ ರಕ್ಷಣೆಯ ವೇಳೆ ಮಾಡುವ ಹತ್ಯೆ ಎಂದು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ಒಂದು ವೇಳೆ ಮೃತ ವ್ಯಕ್ತಿ ಹಾಗೂ ಆತನ ಸ್ನೇಹಿತ ಆರೋಪಿಗೆ ಸಂಬಂಧಿಸಿದ ಕಟ್ಟಡದ ಬಳಿ ಹೋಗದೇ ಇದ್ದಿದ್ದರೆ, ಪ್ರಕರಣ ನಡೆಯುತ್ತಲೇ ಇರಲಿಲ್ಲ ಎಂಬುದನ್ನು ಪ್ರತ್ಯಕ್ಷ ಸಾಕ್ಷಿಗಳು ನುಡಿದಿದ್ದಾರೆ. ಹೀಗಾಗಿ, ಅರ್ಜಿದಾರ ರಾಜೇಂದ್ರ ಪ್ರಸಾದ್‌ಗೆ ಜಾಮೀನು ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ವಕಾಲತ್ತು ವಹಿಸಿದ್ದರು.

ಆರೋಗ್ಯ ಇಲಾಖೆ ಸಹಯೋಗ, 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಆಯೋಜನೆ

ಕ್ಯಾನ್ಸರ್ ತಪಾಸಣೆ, ಜಾಗೃತಿ

ಪ್ರಜಾವಾಣಿ ವಾರ್ತೆ

ಎಕ್ಸ್‌ಪೊದಲ್ಲಿ ಸಚಿವ ದಿನೇಶ್ ಗುಂಡೂರಾವ್ ಅವರು ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು – ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ಆರೋಗ್ಯ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೊದಲ್ಲಿ ಹಮ್ಮಿಕೊಂಡಿದ್ದ 'ಕ್ಯಾನ್ಸರ್ ಎಕ್ಸ್‌ಪೊ'ದಲ್ಲಿ ಕ್ಯಾನ್ಸರ್ ತಪಾಸಣೆ ನಡೆಸುವ ಜತೆಗೆ ರೋಗದ ಬಗ್ಗೆ ಜಾಗೃತಿ ಮೂಡಿಸಲಾಯಿತು.

'ಕ್ಯಾನ್ಸರ್‌ಗೆ ವಿದಾಯ ಹೇಳಿ, ಹೊಸ ಜೀವನಕ್ಕೆ ನಾಂದಿ ಹಾಡಿ' ಎಂಬ ಶೀರ್ಷಿಕೆಯಡಿ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ಈ ಕಾರ್ಯಕ್ರಮಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

'ಆರಂಭಿಕ ಹಂತದ ಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಕಾಯಿಲೆಯನ್ನು ವಾಸಿ ಮಾಡಬಹುದು. ಹಾಗಾಗಿ, ರೋಗದ ಲಕ್ಷಣಗಳು ಕಾಣಿಸಿಕೊಂಡಾಗ ಕಡೆಗಣಿಸಬಾರದು. 40 ವರ್ಷಗಳು ಮೇಲ್ಪಟ್ಟ ಬಳಿಕ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಚಿಕಿತ್ಸೆಯ ವೆಚ್ಚವೂ ಕಡಿಮೆ ಆಗುತ್ತದೆ' ಎಂದರು.

'ವ್ಯಕ್ತಿಯನ್ನು ದೈಹಿಕ, ಮಾನಸಿಕ ಮತ್ತು ಆರ್ಥಿಕವಾಗಿ ಕುಗ್ಗಿಸುತ್ತಿದ್ದ ಕ್ಯಾನ್ಸರ್ ಕಾಯಿಲೆ, ಇತ್ತೀಚೆಗೆ ಸಾಮಾನ್ಯವಾಗಿದೆ. ಈ ಕಾಯಿಲೆ ಬಗ್ಗೆ ಜಾಗೃತಿಯೂ ಮೂಡುತ್ತಿದ್ದು, ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆಗಳು ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತಿವೆ. ಕೃತಕ ಬುದ್ಧಿಮತ್ತೆ ಯಂತಹ ತಂತ್ರಜ್ಞಾನಗಳು ನಿಖರ ಚಿಕಿತ್ಸೆಗೆ ಸಹಕಾರಿಯಾಗುತ್ತಿವೆ. ಕ್ಯಾನ್ಸರ್ ತಡೆಗೆ ನಿಯಮಿತ ವ್ಯಾಯಾಮ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಸೇರಿ ಆರೋಗ್ಯಪೂರ್ಣ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಕ್ಯಾನ್ಸರ್ ವಿಚಾರದಲ್ಲಿ ಹೆಚ್ಚಿನ ಜಾಗೃತಿ ವಹಿಸಬೇಕು' ಎಂದು ಹೇಳಿದರು.

ಕ್ಯಾನ್ಸರ್ ಪ್ರಕರಣ ಹೆಚ್ಚಳ: ಫೋರ್ಟಿಸ್, ನಾರಾಯಣ ಹೆಲ್ತ್, ಆಸ್ಟರ್ ಸಿಎಂಐ, ಸೈಟ್‌ಕೇರ್ ಆಸ್ಪತ್ರೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಈ ಎಕ್ಸ್‌ಪೊದಲ್ಲಿ ಪಾಲ್ಗೊಂಡಿದ್ದವು. ಮಧ್ಯಾಹ್ನದ ಬಳಿಕ ಕ್ಯಾನ್ಸರ್‌ಗೆ ಸಂಬಂಧಿಸಿದ ಗೋಷ್ಠಿಗಳು ನಡೆದವು. ಈ ವೇಳೆ ಮಾತನಾಡಿದ ಕ್ಯಾನ್ಸರ್ ತಜ್ಞರು, 'ಆಧುನಿಕ ಜೀವನ ವಿಧಾನ, ಪಾಶ್ಚಾತ್ಯ ಆಹಾರ ಪದ್ಧತಿ, ವಾಯು ಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ನಗರ ಪ್ರದೇಶದಲ್ಲಿ ಕ್ಯಾನ್ಸರ್ ಪೀಡಿತರಾಗುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಹಾಗಾಗಿ, ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ತಿಳಿಸಿದರು.

ಬೆಳಿಗ್ಗೆಯಿಂದ ಸಂಜೆವರೆಗೆ ನಡೆದ ಎಕ್ಸ್‌ಪೊದಲ್ಲಿ ಆರೋಗ್ಯ ಇಲಾಖೆಯ ಸಂಚಾರಿ ಸಮುದಾಯ ಆರೋಗ್ಯ ಕೇಂದ್ರದ ಮೂಲಕ ಕ್ಯಾನ್ಸರ್ ತಪಾಸಣೆ ಜತೆಗೆ ಎಕೊ, ಮ್ಯಾಮೋಗ್ರಾಮ್‌ನಂತಹ ಪರೀಕ್ಷೆಗಳೂ ಲಭ್ಯವಿದ್ದವು. ಪ್ರಮುಖ ಆಸ್ಪತ್ರೆಗಳ ಕ್ಯಾನ್ಸರ್ ತಜ್ಞರು ಉಚಿತವಾಗಿ ತಪಾಸಣೆ ನಡೆಸಿ, ಸಮಾಲೋಚನೆ ಮಾಡಿದರು. ಕ್ಯಾನ್ಸರ್‌ಗೆ ಸಂಬಂಧಿಸಿದ ಮಾಹಿತಿ ಫಲಕಗಳನ್ನೂ ಇರಿಸಲಾಗಿತ್ತು. ಇದರಿಂದ ರೋಗದ ಬಗ್ಗೆ ಜನರಿಗೆ ಸುಲಭವಾಗಿ ಮಾಹಿತಿ ದೊರೆತವು. ಕ್ಯಾನ್ಸರ್ ಲಕ್ಷಣ, ಚಿಕಿತ್ಸಾ ವಿಧಾನ, ಹೊಸ ಆವಿಷ್ಕಾರಗಳ ಬಗ್ಗೆ ವೈದ್ಯಕೀಯ ತಜ್ಞರು ಮಾಹಿತಿ ನೀಡಿದರು.

ಲೇಖಕ ರಾಮೇಂದ್ರ ಕುಮಾರ್ ಅವರ 'ಮೈ ಗ್ರ್ಯಾಂಡ್ ಪಾ ಮೈ ಬೆಸ್ಟಿ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಆಹಾರ ಮಳಿಗೆಗಳು, ಕರಕುಶಲ ವಸ್ತುಗಳ ಮಳಿಗೆಗಳೂ ಎಕ್ಸ್‌ಪೊದಲ್ಲಿ ಇದ್ದವು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದು ತೆರೆ

ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೊದಲ್ಲಿ ಭಾನುವಾರವೂ 'ಕ್ಯಾನ್ಸರ್ ಎಕ್ಸ್‌ಪೊ' ನಡೆಯಲಿದ್ದು, ಬೆಳಿಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ಕ್ಯಾನ್ಸರ್ ಹಾಗೂ ಆರೋಗ್ಯ ತಪಾಸಣೆ, ವಿವಿಧ ಗೋಷ್ಠಿಗಳು ನಡೆಯಲಿವೆ.

'ಡೇ-ಕೇರ್ ಕಿಮೋಥೆರಪಿ ಕೇಂದ್ರ'

'ಕ್ಯಾನ್ಸರ್ ತಪಾಸಣೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ. ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆಗೆ ಪ್ರತಿ ಜಿಲ್ಲೆಯಲ್ಲಿಯೂ ಒಂದು ಡೇ-ಕೇರ್ ಕಿಮೋಥೆರಪಿ ಕೇಂದ್ರವನ್ನು ಪ್ರಾರಂಭಿಸಲಾಗುತ್ತಿದೆ. ತಪಾಸಣೆಗೂ ವಿಶೇಷ ಕಾರ್ಯಕ್ರಮಕ್ಕೆ ಯೋಜನೆ ರೂಪಿಸುತ್ತಿದ್ದೇವೆ. ಮಹಿಳೆಯರಲ್ಲಿ ಹೆಚ್ಚುತ್ತಿರುವ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ ಅನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ಚಿಕಿತ್ಸೆ ನೀಡಲು 20 ಜಿಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಮ್ಯಾಮೋಗ್ರಫಿ ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಗೃಹ ಆರೋಗ್ಯ ಯೋಜನೆಯಡಿ ಮಧುಮೇಹ ಹಾಗೂ ಅಧಿಕ ರಕ್ತದೊತ್ತಡ ತಪಾಸಣೆ ಮತ್ತು ಔಷಧ ಒದಗಿಸಲು ಕ್ರಮವಹಿಸಿದ್ದೇವೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಧರ್ಮಸ್ಥಳಕ್ಕೆ ಪಾದಯಾತ್ರೆ

ಬೆಂಗಳೂರು: ಧರ್ಮಸ್ಥಳ ಪಾದಯಾತ್ರೆ ಸಮಿತಿಯಿಂದ ಮಹಾಶಿವರಾತ್ರಿ ಅಂಗವಾಗಿ ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. 37ನೇ ವರ್ಷದ ಪಾದಯಾತ್ರೆ ಇದಾಗಿದೆ. ಮಹಾಲಕ್ಷ್ಮಿ ಬಡಾವಣೆಯ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದಿಂದ ಫೆ.27ರಂದು ಮುಂಜಾನೆ ಪಾದಯಾತ್ರೆ ಹೊರಡಲಿದೆ. ನೆಲಮಂಗಲ, ಕುಣಿಗಲ್, ಉದಯಪುರ, ಶಾಂತಿಗ್ರಾಮ, ಹಗರೆ, ಬೇಲೂರು, ನವಿಲಹಳ್ಳಿ, ಕಸ್ಕೇಬೈಲು, ಗೋಣಿಬೀಡು, ಚಾರ್ಮಾಡಿ ಮಾರ್ಗವಾಗಿ ಧರ್ಮಸ್ಥಳದವರೆಗೆ ಪಾದಯಾತ್ರೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಹಳೆ ವಿದ್ಯಾರ್ಥಿಗಳೇ ಮಾರ್ಗದರ್ಶಕರು'

ಪ್ರಜಾವಾಣಿ ವಾರ್ತೆ

ನಗರದ ಕುವೆಂಪು ಕಲಾಕ್ಷೇತ್ರದಲ್ಲಿ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಆಯೋಜಿಸಿದ್ದ ಕೈಗಾರಿಕಾ ಅಕಾಡೆಮಿ ಮತ್ತು ಹಳೆ ವಿದ್ಯಾರ್ಥಿಗಳ ಶೃಂಗಸಭೆಯನ್ನು ರಾಜ್ಯ ಪರಿವರ್ತನಾ ಸಂಸ್ಥೆಯ ಅಧ್ಯಕ್ಷ ಎಂ.ವಿ. ರಾಜೀವ್ ಗೌಡ ಉದ್ಘಾಟಿಸಿದರು. ಉದ್ಯಮಿ ಮದನ್ ಪದಕಿ, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿ. ಕೆಂಚಪ್ಪಗೌಡ ಇದ್ದರು

ಬೆಂಗಳೂರು: 'ಹಳೆಯ ವಿದ್ಯಾರ್ಥಿಗಳು ವಿಸ್ತೃತ ಕುಟುಂಬವಾಗಿದ್ದು, ಮಾರ್ಗದರ್ಶಕರ ಪಾತ್ರ ನಿರ್ವಹಿಸುತ್ತಾರೆ' ಎಂದು ರಾಜ್ಯ ಪರಿವರ್ತನಾ ಸಂಸ್ಥೆಯ ಅಧ್ಯಕ್ಷ ಎಂ.ವಿ. ರಾಜೀವ್ ಗೌಡ ಹೇಳಿದರು.

ರಾಜ್ಯ ಒಕ್ಕಲಿಗ ಸಂಘದ ಶಿಕ್ಷಣ ಸಂಸ್ಥೆಯಾದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ (ಬಿಐಟಿ) ನಗರದ ಕುವೆಂಪು ಕಲಾಕ್ಷೇತ್ರದಲ್ಲಿ ಆಯೋಜಿಸಿದ ಎರಡು ದಿನಗಳ ಕೈಗಾರಿಕಾ ಅಕಾಡೆಮಿ ಮತ್ತು ಹಳೆ ವಿದ್ಯಾರ್ಥಿಗಳ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಅಗತ್ಯವನ್ನು ವಿವರಿಸಿದ ಅವರು, 'ಬೆಂಗಳೂರಿಗೆ ಬಂದು ಅಧ್ಯಯನ ಮಾಡಲು ಸಿಗುವ ಅವಕಾಶವನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಉದ್ಯಮಿ ಮದನ್ ಪದಕಿ ಮಾತನಾಡಿ, 'ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ಗುಣಲಕ್ಷಣಗಳ ಅಭಿವೃದ್ಧಿಗೆ ವಿಶ್ವಾಸ, ಸಂವಹನ, ಸಹಾನುಭೂತಿ, ಸಾಂವಿಧಾನಿಕ ಮೌಲ್ಯಗಳು, ಸೃಷ್ಟಿಕರ್ತ, ಹವಾಮಾನ, ಚಾಟ್ ಜಿಪಿಟಿ ಅರಿವು ಮತ್ತು ಸಮುದಾಯ ನಿರ್ಮಾಣದಂತಹ ಗುಣಗಳನ್ನು ಅಳವಡಿಸಿಕೊಳ್ಳಬೇಕು' ಎಂದರು.

ಶೃಂಗ ಸಭೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ, ಉತ್ಪನ್ನಗಳ ಪ್ರದರ್ಶನದ 100ಕ್ಕೂ ಹೆಚ್ಚು ಮಳಿಗೆಗಳು ಇದ್ದವು. ವಿದ್ಯಾರ್ಥಿಗಳು ಮತ್ತು ವಾಣಿಜ್ಯೋದ್ಯಮಿಗಳು ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಿಐಟಿ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಕೆ. ಧರ್ಮೇಶ್, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿ. ಕೆಂಚಪ್ಪಗೌಡ, ಒಕ್ಕಲಿಗರ ಸಂಘದ ಉಪಾಧ್ಯಕ್ಷ ಎಲ್. ಶ್ರೀನಿವಾಸ್, ಹಾಪ್‌ಕಾಮ್ಸ್ ಅಧ್ಯಕ್ಷ ಸಿ. ದೇವರಾಜು ಮತ್ತಿತರರು ಇದ್ದರು.

ನಾಳೆಯಿಂದ ಸಿದ್ಧಗಂಗಾ ಜಾತ್ರೆ

ತುಮಕೂರು: ನಗರದ ಸಿದ್ಧಗಂಗಾ ಮಠದಲ್ಲಿ ಸಿದ್ಧಗಂಗಾ ಜಾತ್ರೆಯ ಪ್ರಯುಕ್ತ ಫೆ.26ರಿಂದ ಮಾರ್ಚ್ 11ರವರೆಗೆ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ.

26ರ ಸಂಜೆ 7ಗಂಟೆಗೆ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಲಾಗುತ್ತದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೃಷಿ ಇಲಾಖೆ, ಅರಣ್ಯ, ಪಶುಸಂಗೋಪನಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ 20 ಮಳಿಗೆ, 150 ಖಾಸಗಿ ವಾಣಿಜ್ಯ ಮಳಿಗೆ ಸೇರಿದಂತೆ ಒಟ್ಟು 170 ಮಳಿಗೆ ತೆರೆಯಲಾಗಿದೆ ಎಂದು ಸಿದ್ಧಗಂಗಾ ವಸ್ತು ಪ್ರದರ್ಶನ ಟ್ರಸ್ಟ್‌ನ ಕಾರ್ಯದರ್ಶಿ ಗಂಗಾಧರಯ್ಯ ಇಲ್ಲಿ ಶನಿವಾರ ಹೇಳಿದರು.

ಅಯೋಧ್ಯೆ ರಾಮ ಮಂದಿರದ ಮಾದರಿಯು ಸಹ ಈ ಬಾರಿಯ ವಸ್ತು ಪ್ರದರ್ಶನದಲ್ಲಿ ಗಮನ ಸೆಳೆಯಲಿದೆ. ಸ್ಥಳೀಯ ಕಲಾವಿದರು ಸೇರಿದಂತೆ ರಾಜ್ಯದ ಹೆಸರಾಂತ ನಾಟಕ ಕಂಪನಿಗಳಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮಾರ್ಚ್ 8ರಂದು ಮಹಾಶಿವರಾತ್ರಿಯ ಪ್ರಯುಕ್ತ ಮಠದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ. ಬೆಳ್ಳಿ ರಥೋತ್ಸವ, ಮುತ್ತಿನ ಪಲ್ಲಕ್ಕಿ ಉತ್ಸವ ಜರುಗಲಿದೆ. ಮಾರ್ಚ್ 9ರಂದು ಸಿದ್ಧಲಿಂಗೇಶ್ವರ ಸ್ವಾಮಿ ರಥೋತ್ಸವ ನಡೆಯಲಿದೆ. ಮಾರ್ಚ್ 11ರಂದು ತೆಪ್ಪೋತ್ಸವದೊಂದಿಗೆ ಜಾತ್ರೆ, ವಸ್ತು ಪ್ರದರ್ಶನ ಕೊನೆಗೊಳ್ಳಲಿದೆ ಎಂದರು.

ಚುನಾವಣೆ: ಶಾಯಿ ಪೂರೈಕೆಗೆ ಚಾಲನೆ

ಮೈಸೂರು: ಲೋಕಸಭೆ ಚುನಾವಣೆಗಾಗಿ ತಲಾ 10 ಎಂ.ಎಲ್‌.ನ 26.55 ಲಕ್ಷ ಬಾಟಲಿ ಅಳಿಸಲಾಗದ ಶಾಯಿ ಪೂರೈಸುವಂತೆ ಚುನಾವಣಾ ಆಯೋಗ ಇಲ್ಲಿನ ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಗೆ ತಿಳಿಸಿದೆ.

ಈ ಚುನಾವಣೆಯಿಂದ ಸಂಸ್ಥೆಗೆ ₹ 55 ಕೋಟಿ ವಹಿವಾಟು ನಡೆಯಲಿದೆ ಎಂದು ಅಧಿಕಾರಿಗಳು ಹೇಳಿದರು.

ಇಂತಹ ಶಾಯಿ ತಯಾರಿಸುವ ದೇಶದ ಏಕಮಾತ್ರ ಸಂಸ್ಥೆ ಇದಾಗಿದೆ. ಒಂದು ಬಾಟಲಿಯಿಂದ 700 ಮತದಾರರ ಬೆರಳಿಗೆ ಗುರುತು ಹಾಕಬಹುದು. ವಿವಿಧ ರಾಜ್ಯಗಳ ಬೇಡಿಕೆಗೆ ಅನುಗುಣವಾಗಿ ಮಾರ್ಚ್ 15ರೊಳಗೆ ಪೂರೈಸಲು ಆದೇಶಿಸಲಾಗಿದೆ ಎಂದು ತಿಳಿಸಿದರು.

ಶಾಯಿ ಪೂರೈಸಲು ಈಗಾಗಲೇ ಚಾಲನೆ ನೀಡಲಾಗಿದೆ. ಡಿಸೆಂಬರ್‌ನಲ್ಲಿಯೇ ಬೇಡಿಕೆ ಸಲ್ಲಿಸಿದ್ದನ್ನು ಆಧರಿಸಿ ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ ಸೇರಿ 10 ರಾಜ್ಯಗಳಿಗೆ ಈಗಾಗಲೇ ರವಾನಿಸಲಾಗಿದೆ ಎಂದು ಹೇಳಿದರು.

ವ್ಹೀಲೆ: 8 ಯುವಕರ ವಿರುದ್ಧ ಪ್ರಕರಣ

ಬೆಂಗಳೂರು: ನಗರದಲ್ಲಿ ವ್ಹೀಲೆ ನಿಯಂತ್ರಿಸಲು ಕಾರ್ಯಾಚರಣೆ ನಡೆಸಿರುವ ಸಂಚಾರ ಪೊಲೀಸರು, 8 ಯುವಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.'ಕಾಮಾಕ್ಷಿಪಾಳ್ಯ, ವಿಜಯನಗರ ಹಾಗೂ ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ವ್ಹೀಲೆ ಮಾಡುತ್ತಿದ್ದ ಎಂಟು ಯುವಕರನ್ನು ವಶಕ್ಕೆ ಪಡೆದು, ಅವರ 7 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸ.ಆ. ಚುನಾವಣೆರವರ ಕಛೇರಿ, ಕೇಂದ್ರ ಕಛೇರಿ ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002

ನಂ.: ಬಿಬಿಎಂಪಿ/2023–24/ಎಸ್‌ಇ0232/ಕರೆ–2 ದಿನಾಂಕ: 24.02.2024

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಗಿನವುಗಳಿಗೆ ಅರ್ಹ ಬಿಡ್ಡರ್‌ಗಳಿಂದ ಟೆಂಡರ್ ಅನ್ನು ಆಹ್ವಾನಿಸುತ್ತದೆ:

1. ಲೋಕಸಭಾ ಚುನಾವಣೆಗಳು 2024ಕ್ಕೆ ಎಡಿಇಒ ಕೇಂದ್ರ ಬಿಬಿಎಂಪಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಚಾಲಕರೊಂದಿಗೆ ವಾಹನಗಳನ್ನು ಬಾಡಿಗೆಗೆ ಪಡೆಯಲು ಅಲ್ಪಾವಧಿಯ ಮರು–ಟೆಂಡರ್. (ಟೆಂಡರ್ ಉಲ್ಲೇಖ ಸಂಖ್ಯೆ: ಬಿಬಿಎಂಪಿ/2023–24/ಎಸ್‌ಇ0232/ಕರೆ–2)
2. ಲೋಕಸಭಾ ಚುನಾವಣೆ 2024ಕ್ಕೆ ಎಡಿಇಒ ಕೇಂದ್ರ ಬಿಬಿಎಂಪಿಗೆ 45 ದಿನಗಳವರೆಗೆ ಪ್ರಮುಖ ಮತ್ತು ಸಣ್ಣ ಚೆಕ್ ಪೋಸ್ಟ್‌ಗಳ ಸ್ಥಾಪನೆಗೆ ಅಲ್ಪಾವಧಿಯ ಮರು–ಟೆಂಡರ್. (ಟೆಂಡರ್ ಉಲ್ಲೇಖ ಸಂಖ್ಯೆ: ಬಿಬಿಎಂಪಿ/2023–24/ಎಸ್‌ಇ0252/ಕರೆ–2)
3. ಲೋಕಸಭಾ ಚುನಾವಣೆ 2024ಕ್ಕೆ ಎಡಿಇಒ ಕೇಂದ್ರ ಬಿಬಿಎಂಪಿಗೆ ಕೇಟರಿಂಗ್ ವ್ಯವಸ್ಥೆ ಒದಗಿಸಲು ಅಲ್ಪಾವಧಿ ಮರು–ಟೆಂಡರ್.

ಬಿಡ್ ಪ್ರಕ್ರಿಯೆಯ ವೇಳಾಪಟ್ಟಿ ಈ ಕೆಳಗಿನಂತಿವೆ:
(1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: 24.02.2024 ರಿಂದ.
(2) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.02.2024ರ ಸಂಜೆ 5:00 ಗಂಟೆವರೆಗೆ.
(3) ಪೂರ್ವಭಾವಿ ಸಭೆ: 26.02.2024, ಬೆಳಿಗ್ಗೆ 11:00 ಗಂಟೆಗೆ ಸ್ಥಳ: ಸ.ಆ. ಚುನಾವಣೆರವರ ಕಛೇರಿ, ಕೇಂದ್ರ ಕಛೇರಿ ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002
(4) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 02.03.2024 ಸಂಜೆ 5:00 ಗಂಟೆವರೆಗೆ.
(5) ತಾಂತ್ರಿಕ ಬಿಡ್‌ಗಳ ಆನ್‌ಲೈನ್ ತೆರೆಯುವ ದಿನಾಂಕ: 04.03.2024, ಬೆಳಿಗ್ಗೆ 11:00 ಗಂಟೆ.
(6) ಸಂಪರ್ಕಿಸುವ ವಿಳಾಸ: ಸ.ಆ. ಚುನಾವಣೆರವರ ಕಛೇರಿ, ಕೇಂದ್ರ ಕಛೇರಿ ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–560002, ದೂ.: 080–22975564, ಇಮೇಲ್ ವಿಳಾಸ: deo.bbmp@gmail.com.

ಸೂಚನೆ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ವೀಕ್ಷಿಸಬಹುದು.

ಸಹಿ/– ಸಹಾಯಕ ಆಯುಕ್ತರು (ಚುನಾವಣೆ), ಬಿಬಿಎಂಪಿ

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಅಪಾರ್ಟ್‌ಮೆಂಟ್ ಸ್ವತ್ತಿನ ಮಾಲೀಕರಾದ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯ ಮಿತ್ತಲ್ ಟವರ್, ಬಿ-ವಿಂಗ್‌ನ ನಂ. 501 ರ ವಿಳಾಸದಲ್ಲಿರುವ 'ಮೆಸರ್ಸ್ ಸವ್ಯಸಾಚಿ ಪ್ರೊಜೆಕ್ಟ್ಸ್' ಎಂಬ ಪಾಲುಗಾರಿಕೆ ವ್ಯವಹಾರ ಸಂಸ್ಥೆಯಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು, ಸದರಿ ನಮೂದಿಸಿರುವ ಸಂಸ್ಥೆಯ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು ಸದರಿ "ಮೆಸರ್ಸ್ ಸವ್ಯಸಾಚಿ ಪ್ರೊಜೆಕ್ಟ್ಸ್‌ನ" ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ – ಸ್ವತ್ತಿನ ವಿವರ

ಬೆಂಗಳೂರು ನಗರ, ಜಯಮಹಲ್ ಎಕ್ಸ್ಟೆಂಷನ್, ಮೊದಲನೇ ಮುಖ್ಯ ರಸ್ತೆಯಲ್ಲಿರುವ 17,999 ಚದರಡಿ ವಿಸ್ತೀರ್ಣವುಳ್ಳ ಮುನ್ಸಿಪಲ್ ನಂ. 19/1, ಬಿಬಿಎಂಪಿ ಪಿಐಡಿ ನಂ. 92-16-19/1 ರ ಸ್ವತ್ತಿನಲ್ಲಿ ನಿರ್ಮಿಸಿರುವ "ಸವ್ಯಸಾಚಿ ಸರಯೂ" ಹೆಸರಿನ ಅಪಾರ್ಟ್‌ಮೆಂಟ್ ಸಂಕೀರ್ಣದ ಒಂಬತ್ತನೇ ಮಹಡಿಯಲ್ಲಿರುವ ಸೂಪರ್ ಬಿಲ್ಟ್ ಅಪ್ ಏರಿಯಾ 6,950 ಚದರಡಿಯುಳ್ಳ 8 ನೇ ಸಂಖ್ಯೆಯ ಅಪಾರ್ಟ್‌ಮೆಂಟ್ ಘಟಕದ ಹಾಗೂ ಸದರಿ ಅಪಾರ್ಟ್‌ಮೆಂಟ್‌ಗೆ ಸೇರಿದ ತಳಮಹಡಿಯಲ್ಲಿರುವ 3 ಕಾರ್ ಪಾರ್ಕ್ ಬಳಕೆಯ ಹಕ್ಕು ಹಾಗೂ ಸದರಿ 17,999 ಚದರಡಿ ವಿಸ್ತೀರ್ಣವುಳ್ಳ ಮುನ್ಸಿಪಲ್ ನಂ. 19/1, ಬಿಬಿಎಂಪಿ ಪಿಐಡಿ ನಂ. 92-16-19/1 ರ ಸ್ವತ್ತಿನಲ್ಲಿರುವ 1,335 ಚದರಡಿ ಅವಿಭಜಿತ ಮಾಲೀಕತ್ವದ ಹಕ್ಕು.

ಬೆಂಗಳೂರು ದಿನಾಂಕ : ಫೆಬ್ರವರಿ 25, 2024

ಸಹಿ./- ಎ. ಸುಪ್ರೀತ್, ಪಾರ್ಟ್ನರ್, ಕ್ರೆಸ್ಟ್ ಲಾ ಪಾರ್ಟ್ನರ್ಸ್,
33, ಝುವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ,
ಬೆಂಗಳೂರು – 560 047. ದೂ: 080 41473535 / 41473536



ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 04/SBC/24
ದಿನಾಂಕ: 16.02.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಉಪ ಕಾಮಗಾರಿ I:** ಬೆಂಗಳೂರು – ಧರ್ಮಾವರಂ ವಿಭಾಗ: ಹಿರಿಯ ವಿಭಾಗೀಯ ಇಂಜಿನಿಯರ್ / ಉತ್ತರ / ಬೆಂಗಳೂರು ವಿಭಾಗದಲ್ಲಿ ಎಸ್ ಎಸ್ ಇ/ಪಿವೇ/ಯಲಹಂಕ ವಿಭಾಗದ ಲೂಪ್ ಲೈನ್‌ಗಳಲ್ಲಿ [ಚನ್ನಸಂದ್ರ : RD-1, RD-3 & RD-4, ಯಲಹಂಕ: RD-1 ಮತ್ತು RD-2 ಹಿರಿಯ ವಿಭಾಗೀಯ ಇಂಜಿನಿಯರ್ / ಉತ್ತರ / ಬೆಂಗಳೂರು ವಿಭಾಗದಲ್ಲಿ] 4.2 ಕಿಮೀ ಉದ್ದಕ್ಕೆ 1310/ಕಿಮೀ ನಿಂದ 1540/ಕಿಮೀವರೆಗೆ ಅಸ್ತಿತ್ವದಲ್ಲಿರುವ 52 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಸ್ಲೀಪರ್ ಸಾಂದ್ರತೆಯನ್ನು ಹೆಚ್ಚಿಸುವುದು. **ಉಪ ಕಾಮಗಾರಿ II:** ಬೆಂಗಳೂರು – ಸಂಪಿಗೆ ರಸ್ತೆ ವಿಭಾಗ: ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳ ಥ್ರೂ ಬಲ್ಲಾಸ್ಟ್ ರಿಕೋಪ್ ಮೆಂಟ್ – ದೊಡ್ಡಬೆಲೆ ಅಂಗಳದಲ್ಲಿ 6 ಪಾಯಿಂಟ್‌ಗಳು ಮತ್ತು ಹಿರೇಹಳ್ಳಿ ಅಂಗಳದಲ್ಲಿ 4 ಪಾಯಿಂಟ್ ಗಳು – (ಒಟ್ಟು 10 ಸಂ.) **ಉಪ ಕಾಮಗಾರಿ III:** ಬೆಂಗಳೂರು – ಸಂಪಿಗೆ ರಸ್ತೆ ವಿಭಾಗ: ಚಿಕ್ಕ ಬಾಣಾವರ – ಯಶವಂತಪುರ ಸೆಕ್ಷನ್ ನಡುವೆ ಕಿಮೀ 7/100–9/060 ರಿಂದ ಡೌನ್ ಲೈನ್ ನಲ್ಲಿ 60 ಕೆಜಿ 90 ಯುಟಿಎಸ್ ರೈಲು ಜೊತೆಗೆ ಅಸ್ತಿತ್ವದಲ್ಲಿರುವ 52 ಕೆಜಿ ರೈಲುಗಳ 1.96 ಕಿಮೀ ಉದ್ದಕ್ಕೆ ಟಿಆರ್‌ಆರ್ (ಪಿ).	ರೂ. 66,60,806/-
2	**ಉಪ ಕಾಮಗಾರಿ I:** ಚಿಕ್ಕಬಾಣಾವರ – ಹಾಸನ ವಿಭಾಗ: ಬಿ ಜಿ ನಗರ, ಹಿರೀಸಾವೆ, ಶ್ರವಣಬೆಳಗೊಳ, ಚನ್ನರಾಯಪಟ್ಟಣ ಮತ್ತು ಸಮುದ್ರವಳ್ಳಿ ಯಾರ್ಡ್‌ಗಳ ಲೂಪ್‌ಲೈನ್‌ಗಳಲ್ಲಿ 7.881 ಕಿಮೀ ಉದ್ದಕ್ಕೆ ಥ್ರೂ ಬಲ್ಲಾಸ್ಟ್ ರಿಕೋಪ್‌ಮೆಂಟ್. **ಉಪ ಕಾಮಗಾರಿ II:** ಬೆಂಗಳೂರು – ಸೇಲಂ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ವಿಭಾಗದಲ್ಲಿ ಧರ್ಮಪುರಿ, ರಾಯಕೋಟ್ಟೈ, ಪೆರಿಯ ನಾಗ ತುನ್ಯೆ, ಕೆಲಮಂಗಲ ಮತ್ತು ಬಾಣಸವಾಡಿ ಯಾರ್ಡ್‌ಗಳಲ್ಲಿ ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳ ಥ್ರೂ ಬಲ್ಲಾಸ್ಟ್ ರಿಕೋಪ್‌ಮೆಂಟ್ – ಒಟ್ಟು 11 ಸಂಖ್ಯೆಗಳು. **ಉಪ ಕಾಮಗಾರಿ III:** ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ವಿಭಾಗದಲ್ಲಿ (ಹೊಸೂರು ಯಾರ್ಡ್‌ನಲ್ಲಿ) ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳ ಥ್ರೂ ಬಲ್ಲಾಸ್ಟ್ ರಿಕೋಪ್ ಮೆಂಟ್ – 10 ಸಂಖ್ಯೆಗಳು.	ರೂ. 1,17,70,403/-
3	**ಉಪ ಕಾಮಗಾರಿ I:** ಬೆಂಗಳೂರು – ಸೇಲಂ ಸಿಟಿಆರ್ (ಪಿ) ಕೆಲಸಕ್ಕೆ ಸಂಬಂಧಿಸಿದಂತೆ ಡಿ ಮಾರ್ಕ್ ಹಳಿಗಳನ್ನು ಬದಲಿಸಲು 11/900–23/000 ಮತ್ತು 72/100–77/000 ಖಐ ನಿಂದ 16ಇಟಿ ಉದ್ದಕ್ಕೆ ಪೆರಿಯಾ ನಾಗ ತುನ್ಯೆ ಡಿಪೋದಲ್ಲಿ ಲೀಡಿಂಗ್ ಮತ್ತು ಲೋಡಿಂಗ್ ಸೇರಿದಂತೆ ನಿಲುಭಾರದ ಸಂಗ್ರಹ. **ಉಪ ಕಾಮಗಾರಿ II:** ಬೆಂಗಳೂರು – ಸೇಲಂ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ಉಪ ವಿಭಾಗಗಳ ಲೂಪ್‌ಲೈನ್‌ಗಳಲ್ಲಿ 16.011 ಕಿಮೀ ಉದ್ದದ ಥ್ರೂ ಬ್ಯಾಲೆಸ್ಟ್ ರಿಕೋಪ್ ಮೆಂಟ್ ಕೆಲಸಕ್ಕೆ ಸಂಬಂಧಿಸಿದಂತೆ ಪೆರಿಯಾ ನಾಗ ತುನ್ಯೆ ಬ್ಯಾಲೆಸ್ಟ್ ಡಿಪೋದಲ್ಲಿ ಲೋಡಿಂಗ್ ಸೇರಿದಂತೆ ನಿಲುಭಾರದ ಸಂಗ್ರಹ. **ಉಪ ಕಾಮಗಾರಿ III:** ಬೆಂಗಳೂರು – ಸೇಲಂ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ವಿಭಾಗದಲ್ಲಿ ರಾಯಕೋಟ್ಟೈ ನಿಲ್ದಾಣದಲ್ಲಿ ಟ್ರ್ಯಾಕ್ ಮೆಷಿನ್ ಸೈಡಿಂಗ್ ನಿರ್ಮಾಣದ ಕೆಲಸಕ್ಕೆ ಸಂಬಂಧಿಸಿದಂತೆ ಲುಭಾರದ ಸರಬರಾಜು ಮತ್ತು ಡಂಪಿಂಗ್.	ರೂ. 4,45,40,041/-
4	ಬೆಂಗಳೂರು – ಮೈಸೂರು ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗದಲ್ಲಿ ರೋಲಿಂಗ್ / ಲಾಂಚಿಂಗ್ ವಿಧಾನದ ಮೂಲಕ ಕಿಮೀ 17/500–600 ರಲ್ಲಿ ಎಲ್ ಸಿ ಸಂಖ್ಯೆ 16 ರ ಬದಲಿಗೆ ಆರ್ ಯುಬಿ 2 x 5.00ಮೀ x 5.00ಮೀ ಗಾತ್ರದ ಆರ್‌ಸಿಸಿ ಬಾಕ್ಸ್	ರೂ. 7,87,34,985/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–03–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಬೆಂಗಳೂರು
PUB/706/AAS/PRB/SWR/2023-24
South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 06/2024
ದಿನಾಂಕ: 19-02-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತ ವಿವರಣೆ: ಯಂತ್ರದ ವಿನ್ಯಾಸ, ಸರಬರಾಜು, ಸ್ಥಾಪನೆ, ಕಾರ್ಯಾರಂಭ ಮತ್ತು ಪ್ರೂವ್ ಔಟ್, ಎಲೆಕ್ಟ್ರಿಕ್ ಓವರ್ ಹೆಡ್ ಟ್ರಾವೆಲಿಂಗ್ ಕ್ರೇನ್ ಶೆಡ್ಯೂಲ್–I (1,2?..ಟಿ) ನಲ್ಲಿ ನಿರ್ದಿಷ್ಟಪಡಿಸಿದ ನಿಯತಾಂಕಗಳ ಪ್ರಕಾರ ನಿರ್ದಿಷ್ಟ ವಿವರಣೆಗಳಿಗೆ ಅನುಗುಣವಾಗಿ ಡಬಲ್ ಗರ್ಡರ್ ಆಗಿರಬೇಕು. (ಟೆಂಡರ್ ಸಂಖ್ಯೆ. ಎಲ್‌8236975) (ಪ್ರಮಾಣ : 1 ಸೆಟ್)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–03–2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು
PUB/707/AAS/PRB/SWR/2023-24
South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. E-GSU-ELE-2023-24-OT-13
ದಿನಾಂಕ: 19-02-2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಕೃಷ್ಣರಾಜಪುರಂ, ವೈಟ್‌ಫೀಲ್ಡ್, ಮಾಲೂರು, ಬಂಗಾರಪೇಟೆ ಮತ್ತು ಕುಪ್ಪಂ ನಿಲ್ದಾಣಗಳಲ್ಲಿ 12 ಮೀ ಅಗಲದ ಎಫ್‌ಒಬಿ ನಿರ್ಮಾಣದ ಭಾಗವಾಗಿ ಓಎಚ್‌ಇ ಗೆ ಮಾರ್ಪಾಡು.	ರೂ. 1,86,41,372/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–03–2024, 11:00 ಗಂಟೆಯವರೆಗೆ

ಟೆಂಡರ್ ಸೂಚನೆ ಸಂ. E-GSU-ELE-2023-24-OT-14
ದಿನಾಂಕ: 19-02-2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಕೆಂಗೇರಿ, ಚನ್ನಪಟ್ಟಣ, ಮಂಡ್ಯ, ರಾಮನಗರ ಮತ್ತು ಧರ್ಮಪುರಿ ನಿಲ್ದಾಣಗಳಲ್ಲಿ 12 ಮೀ ಅಗಲದ ಎಫ್‌ಒಬಿ ನಿರ್ಮಾಣದ ಭಾಗವಾಗಿ ಓಎಚ್‌ಇ ಗೆ ಮಾರ್ಪಾಡು.	ರೂ. 3,02,82,990/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–03–2024, 11:00 ಗಂಟೆಯವರೆಗೆ

ಟೆಂಡರ್ ಸೂಚನೆ ಸಂ. E-GSU-ELE-2023-24-OT-15
ದಿನಾಂಕ: 19-02-2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ತುಮಕೂರು, ದೊಡ್ಡಬಳ್ಳಾಪುರ, ಮಲ್ಲೇಶ್ವರಂ, ಹಿಂದೂಪುರ ಮತ್ತು ಹೊಸೂರು ನಿಲ್ದಾಣಗಳಲ್ಲಿ 12 ಮೀ ಅಗಲದ ಎಫ್‌ಒಬಿ ನಿರ್ಮಾಣದ ಭಾಗವಾಗಿ ಓಎಚ್ ಇ ಗೆ ಮಾರ್ಪಾಡು.	ರೂ. 3,14,44,740/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15–03–2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ಗತಿ ಶಕ್ತಿ ಘಟಕ ಬೆಂಗಳೂರು
PUB/708/AAS/PRB/SWR/2023-24
South Western Railway - SWR SWRRLY SWRRLY

ಮೆಟ್ರೊ: 118 ಕಿ.ಮೀ ವಿಸ್ತರಣೆ ಕಾರ್ಯಸಾಧ್ಯತಾ ವರದಿಗೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ತನ್ನ ಕಾರಿಡಾರ್‌ಗಳ ಮಾರ್ಗವನ್ನು 118 ಕಿ.ಮೀ ವಿಸ್ತರಿಸಲು ಕಾರ್ಯಸಾಧ್ಯತಾ ವರದಿ ತಯಾರಿಸಲು ಟೆಂಡರ್ ಆಹ್ವಾನಿಸಿದೆ.

ಮಾರ್ಚ್ 27ರವರೆಗೆ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿದ್ದು, ಅಂದೇ ಅವುಗಳನ್ನು ತೆರೆಯಲಾಗುವುದು. ಆರು ತಿಂಗಳಲ್ಲಿ ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಲು ಗಡುವು ನೀಡಲಾಗುವುದು ಎಂದು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ಕಾರ್ಯಸಾಧ್ಯತಾ ವರದಿಯೊಂದಿಗೆ ನಿರ್ಮಾಣದ ಅಂದಾಜು ವೆಚ್ಚ, ಸಂಚಾರ ಸರ್ವೆ, ಮೆಟ್ರೊ ಮಾರ್ಗಗಳ ಅಲೈನ್‌ಮೆಂಟ್, ಭೂಸ್ವಾಧೀನ, ಭೂಮಿ ಪಡೆಯಲು ಎದುರಾಗುವ ಸಮಸ್ಯೆಗಳೂ ಸೇರಿದಂತೆ ಎಲ್ಲ ರೀತಿಯ ಮಾಹಿತಿಯನ್ನು ಒದಗಿಸುವಂತೆ ಹೇಳಲಾಗಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

'ಇದು ಯೋಜನೆಯ ಮೊದಲ ಹೆಜ್ಜೆಯಾಗಿದ್ದು, ಕಾರ್ಯಸಾಧ್ಯತಾ ವರದಿಯನ್ನು ಸರ್ಕಾರ ಒಪ್ಪಿದ ನಂತರ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲಾಗುತ್ತದೆ' ಎಂದರು.

ನಮ್ಮ ಮೆಟ್ರೊದ 4ನೇ ಹಂತದಲ್ಲಿ 61 ಕಿ.ಮೀ. ನ ನಾಲ್ಕು ವಿಸ್ತರಣಾ ಮಾರ್ಗ, 68 ಕಿ.ಮೀ ಉದ್ದ ಹೊಸ ಒಂದು ಮಾರ್ಗವನ್ನು ಸರ್ಕಾರ ಜನವರಿಯಲ್ಲಿ ಪ್ರಸ್ತಾಪಿಸಿತ್ತು. ಇದರಲ್ಲಿದ್ದ ತುಮಕೂರು ರಸ್ತೆಯಲ್ಲಿನ ಮಾದಾವರದಿಂದ ಕುಣಿಗಲ್ ಕ್ರಾಸ್‌ವರೆಗಿನ 11 ಕಿ.ಮೀ ಮಾರ್ಗವನ್ನು ಕಾರ್ಯಸಾಧ್ಯತಾ ವರದಿ ಟೆಂಡರ್‌ನಲ್ಲಿ ಕೈಬಿಡಲಾಗಿದೆ.

ಪ್ಯಾಕೇಜ್‌-1 (50 ಕಿ.ಮೀ): ಚಲ್ಲಘಟ್ಟದಿಂದ ಬಿಡದಿ, ರೇಷ್ಮೆ ಸಂಸ್ಥೆಯಿಂದ ಹಾರೋಹಳ್ಳಿ ಮತ್ತು ಬೊಮ್ಮಸಂದ್ರದಿಂದ ಅತ್ತಿಬೆಲೆ.

ಪ್ಯಾಕೇಜ್‌-2 (68 ಕಿ.ಮೀ): ಕಾಳೇನ ಅಗ್ರಹಾರದಿಂದ (ಗೊಟ್ಟಿಗೆರೆ) ಜಿಗಣಿ- ಆನೇಕಲ್- ಅತ್ತಿಬೆಲೆ- ಸರ್ಜಾಪುರ- ವರ್ತೂರು- ಕಾಡುಗೋಡಿ ವೃಕ್ಷ ಉದ್ಯಾನ.



ರಾಮಯ್ಯ ಮೆಮೋರಿಯಲ್ ಆಸ್ಪತ್ರೆ

ಖ್ಯಾತ ಹೃದ್ರೋಗ ತಜ್ಞರು ಹಾಗೂ ನವದೆಹಲಿಯ ಏಮ್ಸ್‌ನ ಹೃದ್ರೋಗ ವಿಭಾಗದ ಮಾಜಿ ಮುಖ್ಯಸ್ಥರು ಮತ್ತು ಡೀನ್ ಡಾ. ವಿನಯ್ ಕುಮಾರ್ ಬಹ್ಲ್ ರವರಿಗೆ

ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ರವರಿಂದ ಹೃತ್ಪೂರ್ವಕ ಸ್ವಾಗತ

ಡಾ. ವಿನಯ್ ಕುಮಾರ್ ಬಹ್ಲ್
ಡಿಎಂ (ಹೃದ್ರೋಗ) | ಎಂಡಿ (ಮೆಡಿಸಿನ್)

ಸೆಂಟರ್ ಆಫ್ ಎಕ್ಸಲೆನ್ಸ್
ನಿರ್ದೇಶಕರು: ಹೃದ್ರೋಗ ವಿಜ್ಞಾನಗಳು
ರಾಮಯ್ಯ ಮೆಮೋರಿಯಲ್ ಆಸ್ಪತ್ರೆ

ಪರಿಣತಿ ಹಾಗೂ ಸಾಧನೆ

- 40 ವರ್ಷಗಳ ಸುಧೀರ್ಘ ಅನುಭವವುಳ್ಳ ವಿಶ್ವದ ಹೆಸರಾಂತ ಅಂತಾರಾಷ್ಟ್ರೀಯ ಹೃದ್ರೋಗ ತಜ್ಞರು. ಕಾಂಪ್ಲೆಕ್ಸ್ ಕರೋನರಿ ಇಂಟರ್‌ವೆನ್ಷನ್ಸ್ (CHIP ಪ್ರಕರಣಗಳು, ರೊಟಾಬ್ಲೇಷನ್ ಮತ್ತು ಐವಿಎಲ್), ರಚನಾತ್ಮಕ ಹೃದ್ರೋಗದ ಇಂಟರ್‌ವೆನ್ಷನ್ಸ್ (ಪಿಟಿಎಂಸಿ, ಟಿಎವಿಆರ್, ಡಿವೈಸ್ ಕ್ಲೋಷರ್ಸ್), ಇಮೇಜಿಂಗ್ (ಐವಿಯುಎಸ್, ಒಸಿಟಿ) ಮತ್ತು ಹೃದಯ ವೈಫಲ್ಯ ನಿರ್ವಹಣೆ ಜೊತೆಗೆ ಡಿವೈಸಸ್ ಮತ್ತು ಲೀಡ್‌ಲೆಸ್ ಪೇಸ್‌ಮೇಕರ್‌ಗಳ ಉತ್ತಮ ಪರಿಣತಿ ಹೊಂದಿರುವವರು.
- ಭಾರತದಲ್ಲಿ ಮೊಟ್ಟ ಮೊದಲ ಲೀಡ್‌ಲೆಸ್ ಪೇಸ್‌ಮೇಕರ್ ನೊಂದಿಗೆ ಕಾರ್ಯ ನಿರ್ವಹಿಸಿದವರು.
- ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ರೆಟ್ರೋಗ್ರೇಡ್ ನಾನ್- ಟ್ರಾನ್ಸೆಪ್ಟಲ್ ಬಲೂನ್ ಮಿಟ್ರಲ್ ವಾಲ್ವೋಟಮಿಯೊಂದಿಗೆ ಕಾರ್ಯ ನಿರ್ವಹಿಸಿದವರು.
- ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಇನೊಯು ಬಲೂನ್ ವಾಲ್ವೋಟಮಿ ಫಾರ್ ಐವೊರ್ಟಿಕ್ ಸ್ಟೆನೊಸಿಸ್ ಮತ್ತು ಐವಿಸಿ ಅಬ್‌ಸ್ಟ್ರಕ್ಷನ್ ನಿರ್ವಹಿಸಿದವರು.

OPD : ಪ್ರತಿ ಬುಧವಾರ ಮತ್ತು ಶನಿವಾರ
OPD ಸಮಯ: 10:30 AM - 03:30 PM
ಭೇಟಿಗಾಗಿ : 080 4050 2000 ಕರೆ ಮಾಡಿ

ರಂಜಾನ್: ಫ್ರೇಜರ್ ಟೌನ್‌ನಲ್ಲಿ ಆಹಾರ ಮೇಳಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ಮಾಸದ ಅಂಗವಾಗಿ ಪ್ರತಿವರ್ಷ ನಗರದ ಫ್ರೇಜರ್ ಟೌನ್‌ನಲ್ಲಿ ನಡೆಯುವ 'ಆಹಾರ ಮೇಳ'ಕ್ಕೆ ವಿರೋಧ ವ್ಯಕ್ತವಾಗಿದೆ.

ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಶನಿವಾರ ನಡೆದ ಜನ ಸಂಪರ್ಕ ಸಭೆಯಲ್ಲಿ ಪೂರ್ವ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ ರಮನ್ ಗುಪ್ತಾ ಅವರಿಗೆ ಫ್ರೇಜರ್ ಟೌನ್ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಸೌದ್ ದಸ್ತಗೀರ್ ನೇತೃತ್ವದಲ್ಲಿ ಮನವಿ ಸಲ್ಲಿಸಿದ ಸ್ಥಳೀಯರು, ಫ್ರೇಜರ್ ಟೌನ್‌ನಲ್ಲಿ ಆಹಾರ ಮೇಳ ನಡೆಸುವುದು ಬೇಡ ಎಂದು ಕೋರಿದರು.

'ಸಾಮಾಜಿಕ ಜಾಲತಾಣದಲ್ಲಿ ಫ್ರೇಜರ್ ಟೌನ್‌ನಲ್ಲಿ ನಡೆಯುವ ಆಹಾರ ಮೇಳದ ವಿರುದ್ಧ ಅಭಿಯಾನ ಆರಂಭವಾಗಿದೆ. ಈ ರಸ್ತೆಯಲ್ಲಿ ಆಹಾರ ಮೇಳಕ್ಕೆ ಅವಕಾಶ ನೀಡುವುದಿಲ್ಲ' ಎಂದು ಸ್ಥಳೀಯರು ಹೇಳಿದರು.

'ಪ್ರತಿನಿತ್ಯ ಮಾಂಸದ ಖಾದ್ಯ ತಯಾರಿಕೆಗೆ 3 ಟನ್‌ನಷ್ಟು ಸೌದೆ ಉರಿಸ ಲಾಗುತ್ತಿದೆ. ಹೊಗೆಯಿಂದ ಮಕ್ಕಳು ಹಾಗೂ ವೃದ್ಧರಿಗೆ ಉಸಿರಾಟದ ಸಮಸ್ಯೆ ಎದುರಾಗುತ್ತದೆ. ಕಳೆದ ವರ್ಷ ಮಕ್ಕಳಿಗೆ ಆರೋಗ್ಯದ ಸಮಸ್ಯೆ ಎದುರಾಗಿತ್ತು' ಎಂದು ಸಂಘದ ಪದಾಧಿಕಾರಿಗಳು ಹೇಳಿದರು.

ಕಮಿಷನರ್‌ಗೆ ದೂರು: 'ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಹಾಗೂ ಧೂಮಪಾನ ಮಾಡುವವರು ಹೆಚ್ಚಾಗುತ್ತಿದ್ದಾರೆ. ಇದರಿಂದ ಕಿರಿಕಿರಿ ಉಂಟಾಗುತ್ತಿದೆ' ಎಂದು ವೈಟ್‌ಫೀಲ್ಡ್ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಅಳಲು ತೋಡಿಕೊಂಡರು.

ಬೆಂಗಳೂರು ಪೊಲೀಸ್ ಕಮಿಷನರೇಟ್ ವತಿಯಿಂದ ಬ್ರೂಕ್ ಫೀಲ್ಡ್‌ನಲ್ಲಿ ಶನಿವಾರ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ನಿವಾಸಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಹಾಗೂ ಮದ್ಯಪಾನ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಂಥ ವ್ಯಕ್ತಿಗಳ ಬಗ್ಗೆ ನಿಯಂತ್ರಣ ಕೊಠಡಿಗೆ ಕರೆ ಗಳು ಬಂದರೆ, ತ್ವರಿತ ಸ್ಪಂದನೆಗೆ ಆಗ್ರಹಿಸಿದರು. ದೂರು ಆಲಿಸಿದ ಕಮಿಷನರ್ ಬಿ. ದಯಾನಂದ್, 'ಆಯಾ ಠಾಣೆ ಇನ್‌ಸ್ಪೆಕ್ಟರ್‌ಗಳಿಗೆ ಸೂಚನೆ ನೀಡಲಾಗುವುದು' ಎಂದರು.

'ಮೊಬೈಲ್ ಹಾಗೂ ವಾಹನಗಳ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿವೆ. ಅಮಾಯಕರ ಹಣವನ್ನು ಸೈಬರ್ ವಂಚಕರು ದೋಚುತ್ತಿದ್ದಾರೆ. ಎಲ್ಲ ರೀತಿಯ ಅಪರಾಧಗಳನ್ನು ಹತ್ತಿಕ್ಕಲು ಪೊಲೀಸರು ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಬಿ. ದಯಾನಂದ್, 'ನಗರದ ಬಹುತೇಕ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗುತ್ತಿದೆ. ಈ ಕ್ರಮದಿಂದ ಕಳ್ಳತನ ಪ್ರಕರಣ ತಡೆಯಲು ಹಾಗೂ ಕಳ್ಳತನ ನಡೆದ ಸಂದರ್ಭದಲ್ಲಿ ಆರೋಪಿಗಳನ್ನು ಪತ್ತೆ ಮಾಡಲು ಅನುಕೂಲವಾಗಲಿದೆ' ಎಂದರು.

ಆರೋಗ್ಯವಂತ ಮತ್ತು ಸಮೃದ್ಧ ಕಾರ್ಮಿಕ, ಮೋದಿ ಸರ್ಕಾರದ ಗ್ಯಾರಂಟಿ

ಪ್ರಧಾನಮಂತ್ರಿ
ನರೇಂದ್ರ ಮೋದಿ
ಇವರು

ದೇಶಾದ್ಯಂತ ಒಟ್ಟು ರೂ. 2280 ಕೋಟಿ ವೆಚ್ಚದಲ್ಲಿ 21 ಇಎಸ್‌ಐಸಿ ಮೆಡಿಕಲ್ ಕಾಲೇಜುಗಳು, ಆಸ್ಪತ್ರೆಗಳು ಮತ್ತು ದವಾಖಾನೆಗಳನ್ನು ಉದ್ಘಾಟಿಸಿ ದೇಶಕ್ಕೆ ಸಮರ್ಪಿಸುತ್ತಿದ್ದಾರೆ

ಯೋಜನೆಯ ಲಾಭಗಳು

- 56 ಲಕ್ಷ ಫಲಾನುಭವಿಗಳಿಗೆ ಲಾಭ ನೀಡುತ್ತದೆ
- ಮನೆಯ ಸಮೀಪದಲ್ಲಿಯೇ ಗುಣಮಟ್ಟದ ಆರೋಗ್ಯ ಸೇವೆಗಳು
- ಯಾವುದೇ ಗರಿಷ್ಠ ಮಿತಿರಹಿತ ನಗದುರಹಿತ ವೈದ್ಯಕೀಯ ಸೌಲಭ್ಯಗಳು
- ಆಧುನಿಕ ವೈದ್ಯಕೀಯ ಉಪಕರಣಗಳ ಮೂಲಕ ಆರೋಗ್ಯ ಸೇವೆಗಳು

ಸಮರ್ಪಣೆ

- ಇಎಸ್‌ಐಸಿ ಮೆಡಿಕಲ್ ಕಾಲೇಜುಗಳು ಮತ್ತು ಆಸ್ಪತ್ರೆಗಳು – ಅಲ್ವಾರ್ (ರಾಜಸ್ಥಾನ) ಮತ್ತು ಬಿಹತಾ, ಪಾಟ್ನಾ (ಬಿಹಾರ್)
- ಇಎಸ್‌ಐಸಿ ಆಸ್ಪತ್ರೆಗಳು – ಉದಯಪುರ (ರಾಜಸ್ಥಾನ), ಫುಲ್ವಾರಿ ಶರೀಫ್ (ಬಿಹಾರ್), ಆದಿತ್ಯಪುರ (ಜಾರ್ಖಂಡ್), ತಿರುಪ್ಪೂರ (ತಮಿಳನಾಡು), ಕಾಕಿನಾಡ (ಆಂಧ್ರಪ್ರದೇಶ), ರಾಯಗಢ್, ಭಿಲಾಯಿ & ಕೊರ್ಬಾ (ಛತ್ತೀಸಗಢ್)
- ಇಎಸ್‌ಐಸಿ ದವಾಖಾನೆಗಳು – ನೀಮರಾಣಾ, ಅಬು ರೋಡ್ & ಭಿಲ್ವಾರ್ (ರಾಜಸ್ಥಾನ)

ಉದ್ಘಾಟನೆ

- ಇಎಸ್‌ಐಸಿ ದವಾಖಾನೆಗಳು – ಅಲ್ವರ್, ಬೆಹೊರ್ & ಸೀತಾಪುರ (ರಾಜಸ್ಥಾನ), ಸೆಲಕ್ವಿ (ಉತ್ತರಾಖಂಡ), ಗೋರಖಪುರ (ಉತ್ತರಪ್ರದೇಶ), ಕೊರಟ್ಟಿ & ನವೈಕುಲಂ (ಕೇರಳ), ಪೈಡಿಭಿಮಾವರಂ (ಆಂಧ್ರಪ್ರದೇಶ)

ದಿನಾಂಕ: ಫೆಬ್ರವರಿ 25, 2024
ಸಮಯ: ಮಧ್ಯಾಹ್ನ 03:00 ಗಂಟೆ
ಸ್ಥಳ: ರಾಜಕೋಟ್, ಗುಜರಾತ್
ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ

ಮಧ್ಯಾಹ್ನ 03:00 ಗಂಟೆಯಿಂದ ಡಿಡಿ ನ್ಯೂಸ್ ವಾಹಿನಿಯಲ್ಲಿ ಕಾರ್ಯಕ್ರಮದ ನೇರಪ್ರಸಾರ

ಜಾತಿನಿಂದನೆ: 15 ಮಂದಿ ವಿರುದ್ಧ ಪ್ರಕರಣ

ಕಲಬುರಗಿ: ಜಿಲ್ಲೆಯ ಕಾಳಗಿ ತಾಲ್ಲೂಕಿನ ರಟಕಲ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ನರ್ಸಿಂಗ್ ಅಧಿಕಾರಿಗೆ ಯೇಸು ಕ್ರಿಸ್ತನ ಬದಲು ಅಂಬಾಭವಾನಿ ಫೋಟೊ ಇರಿಸಿ ಪೂಜೆ ಮಾಡುವಂತೆ ಒತ್ತಾಯಿಸಿ ಜಾತಿ ನಿಂದನೆ ಮಾಡಿದ ಆರೋಪದಡಿ 15 ಮಂದಿ ವಿರುದ್ಧ ರಟಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನರ್ಸಿಂಗ್ ಅಧಿಕಾರಿ ಅಶ್ವಿನಿ ತುಕಾರಾಮ ದೂರು ನೀಡಿದ್ದರು. ಹಿಂದೂ ಜಾಗೃತಿ ಸೇನೆಯ ತಾಲ್ಲೂಕು ಅಧ್ಯಕ್ಷ ಶಂಕರ ಚೋಕಾ ಸೇರಿ 15 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶ್ವಿನಿ ಅವರು ಎಎನ್‌ಎಂ ಕ್ವಾರ್ಟರ್ಸ್ ತಮ್ಮ ಮನೆಯಲ್ಲಿ ಕ್ರೈಸ್ತ ದೇವರ ಫೋಟೊ ಇರಿಸಿ ರಬಿಕಾ ಅರ್ಜುನ, ರೇಣುಕಾ ಮಚ್ಚೇಂದ್ರ ಪೂಜೆ ಮಾಡುತ್ತಿದ್ದರು. ಏಕಾಏಕಿ ಮನೆಗೆ ನುಗ್ಗಿದ ಶಂಕರ ಮತ್ತು ಅವರ ತಂಡ, ಜಾತಿ ನಿಂದನೆ ಮಾಡಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ಕ್ಷೇತ್ರ ಬಿಟ್ಟುಕೊಡುವ ಬದಲು ಕಮಲ ಚಿಹ್ನೆಯಡಿ ಜೆಡಿಎಸ್ ಅಭ್ಯರ್ಥಿ ಇಳಿಸಲು ತಂತ್ರ

ಸಾ.ರಾ.ಮಹೇಶ್ ಬಿಜೆಪಿ ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ

ಮೈಸೂರು: ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿರುವ ಬಿಜೆಪಿಯು ಕ್ಷೇತ್ರವನ್ನು ಬಿಟ್ಟುಕೊಡುವ ಬದಲಿಗೆ ಆ ಪಕ್ಷದ ಪ್ರಮುಖರನ್ನು ಪಕ್ಷದ ಚಿಹ್ನೆಯಲ್ಲೇ ಕಣಕ್ಕಿಳಿಸುವ ತಂತ್ರ ರೂಪಿಸಿದೆ.

ಅದರಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಸಚಿವ, ಜೆಡಿಎಸ್‌ನ ಸಾ.ರಾ.ಮಹೇಶ್ ಅವರಿಗೆ ಟಿಕೆಟ್ ನೀಡಲು ಚರ್ಚೆ ನಡೆದಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ನಡೆದಿರುವ ಈ ಬೆಳವಣಿಗೆಯು ಕುತೂಹಲಕ್ಕೆ ಕಾರಣವಾಗಿದೆ.

ವರಿಷ್ಠರ ಲೆಕ್ಕಾಚಾರದಂತೆ ನಡೆದಲ್ಲಿ ಹಾಲಿ ಸಂಸದ ಬಿಜೆಪಿಯ ಪ್ರತಾಪ ಸಿಂಹ ಅವರ ರಾಜಕೀಯ ಭವಿಷ್ಯ ಅತಂತ್ರವಾಗಲಿದೆ ಎನ್ನಲಾಗುತ್ತಿದೆ. ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿರುವ

ಬಿಜೆಪಿಯ ನಾಯಕರು ಕಮಲದ ಚಿಹ್ನೆಯಡಿ ಸ್ಪರ್ಧಿಸುವಂತೆ ನನ್ನೊಂದಿಗೆ ಚರ್ಚಿಸಿದ್ದಾರೆ. ಆದರೆ, ನನ್ನ ನಾಯಕ ಕುಮಾರಸ್ವಾಮಿ ಅವರು ಹೇಳಿದಂತೆ ಕೇಳುತ್ತೇನೆ; ನನ್ನ ತಕರಾರೇನಿಲ್ಲ
ಸಾ.ರಾ.ಮಹೇಶ್, ಜೆಡಿಎಸ್ ಮುಖಂಡ

ಜೆಡಿಎಸ್ ನಾಯಕರು ಮೈಸೂರು – ಕೊಡಗು ಕ್ಷೇತ್ರ ಬಿಟ್ಟು ಕೊಡುವಂತೆ ಪಟ್ಟು ಹಿಡಿದಿದ್ದಾರೆ. ಸಾ.ರಾ.ಮಹೇಶ್ ಅವರನ್ನು ಇಲ್ಲಿ ಕಣಕ್ಕಿಳಿಸುವುದು ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಇಂಗಿತವಾಗಿದೆ.

ಕ್ಷೇತ್ರದ ಜನರು ಹಾಗೂ ಚಾಮುಂಡೇಶ್ವರಿ–ಕಾವೇರಿ ತಾಯಿಯ ಆಶೀರ್ವಾದ ನನ್ನ ಮೇಲಿದೆ. ಗಾಳಿಸುದ್ದಿಗಳಿಗೆ ತಲೆಕೆಡಿಸಿಕೊಳ್ಳದೇ ಚುನಾವಣಾ ಸಿದ್ಧತೆಯಲ್ಲಿ ತೊಡಗಿದ್ದೇನೆ
ಪ್ರತಾಪ ಸಿಂಹ, ಬಿಜೆಪಿ ಸಂಸದ

ಆದರೆ, ಮೈಸೂರು ಕ್ಷೇತ್ರ ಬಿಟ್ಟುಕೊಡಲು ಬಿಜೆಪಿ ಸಿದ್ಧವಿಲ್ಲ. ಈ ಕಗ್ಗಂಟನ್ನು ಬಿಡಿಸಲು ಹೊಸ ಸೂತ್ರವೊಂದನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಸಿದ್ಧಪಡಿಸಿದ್ದು, ಟಿಕೆಟ್ ಆಫರ್ ಮುಂದಿಟ್ಟಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮಹೇಶ್ ಜೊತೆ ಚರ್ಚಿಸಿದ್ದಾರೆ. ಇನ್ನೂ ಅಂತಿಮ ತೀರ್ಮಾನ ಆಗಿಲ್ಲ ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಕ್ಷೇತ್ರದಲ್ಲಿ ಸತತ 3ನೇ ಬಾರಿಗೆ ಸ್ಪರ್ಧೆಗೆ ಪ್ರತಾಪ ಸಿಂಹ ಸಜ್ಜಾಗುತ್ತಿದ್ದಾರೆ. ತಮ್ಮ ಅಧಿಕಾರದ ಅವಧಿಯಲ್ಲಿ ಮಾಡಿದ ಕೆಲಸಗಳ ಮಾಹಿತಿಯನ್ನು ಒಳಗೊಂಡ 'ರಿಪೋರ್ಟ್ ಕಾರ್ಡ್' ಮುದ್ರಿಸಿ ಪಕ್ಷದ ವರಿಷ್ಠರು, ಮಠಾಧೀಶರು ಸೇರಿದಂತೆ ಪ್ರಮುಖರಿಗೆ ನೀಡುತ್ತಿದ್ದಾರೆ. ಚುನಾವಣೆ ಘೋಷಣೆಗೂ ಮುನ್ನವೇ ವೈಯಕ್ತಿಕ ನೆಲೆಯಲ್ಲಿ ಪ್ರಚಾರವನ್ನೂ ಆರಂಭಿಸಿದ್ದಾರೆ. ಈ ನಡುವೆ, ಪ್ರತಾಪ ಅವರಿಗೆ ಸ್ವಪಕ್ಷೀಯರಲ್ಲೇ ಇರುವ ಅಪಸ್ವರವನ್ನು ಮುಂದಿಟ್ಟುಕೊಂಡು ಅವರಿಗೆ ಟಿಕೆಟ್ ತಪ್ಪಿಸುವ 'ತಂತ್ರ'ವೂ ಪಕ್ಷದ ಮಟ್ಟದಲ್ಲಿ ನಡೆದಿದೆ ಎನ್ನಲಾಗಿದೆ.

ಮಹೇಶ್ ಹಿಂದೆ ಬಿಜೆಪಿಯಲ್ಲೇ ಇದ್ದವರು. ಅವರಿಗೆ ಟಿಕೆಟ್ ಕೊಟ್ಟರೆ ಪಕ್ಷದವರಿಂದ ವಿರೋಧ ವ್ಯಕ್ತವಾಗಲಾರದು ಎನ್ನುವುದು ವರಿಷ್ಠರ ಲೆಕ್ಕಾಚಾರ ಎನ್ನಲಾಗಿದೆ. ಅಲ್ಲದೇ, 'ಪಕ್ಷದಲ್ಲಿರುವ ಪ್ರತಾಪ ಸಿಂಹ ವಿರೋಧಿ ಬಣ'ವು ಮಹೇಶ್ ಪರ ಸಕ್ರಿಯವಾಗಿ ಕೆಲಸ ಮಾಡಬಹುದು ಎಂಬ ನಿರೀಕ್ಷೆ ವರಿಷ್ಠರಾಗಿದೆ. ಈ ಬಗ್ಗೆ ವರಿಷ್ಠರಿಂದ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ.

ಸುದ್ದಿ 2 ನಿಮಿಷ

ಸುಬ್ರಹ್ಮಣ್ಯ: ದೇವರಿಗೆ ₹75 ಲಕ್ಷ ಮೌಲ್ಯದ ಪ್ರಭಾವಳಿ ಸಮರ್ಪಣೆ

ಸುಬ್ರಹ್ಮಣ್ಯ: ಮಹಾತೋಭಾರ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ತೆಲಂಗಾಣದ ಉದ್ಯಮಿ ಎ.ಮಹೇಶ್ ರೆಡ್ಡಿ ಅವರು ಶನಿವಾರ ಚಿನ್ನದ ಪ್ರಭಾವಳಿ ಸಮರ್ಪಿಸಿದರು.

ದೇವಳದ ಬ್ರಹ್ಮಕಲಶೋತ್ಸವ ದಿನದ ಪ್ರಯುಕ್ತ ದೇವಾಲಯಕ್ಕೆ ₹ 4 ಲಕ್ಷ ವೆಚ್ಚದಲ್ಲಿ ಹೂವಿನ ಅಲಂಕಾರ ಮಾಡಿಸಿದರು. ಪ್ರಾರ್ಥನೆ ಸಲ್ಲಿಸಿ, ಪ್ರಭಾವಳಿ ಸಮರ್ಪಿಸಿದ ಮಹೇಶ್ ಹಾಗೂ ರಾಧಿಕಾ ದಂಪತಿಯನ್ನು ಗೌರವಿಸಲಾಯಿತು.

ಪ್ರಭಾವಳಿಯು 1.20 ಕೆ.ಜಿ. ಚಿನ್ನ ಹಾಗೂ 3.20 ಕೆ.ಜಿ. ಬೆಳ್ಳಿಯನ್ನು ಹೊಂದಿದ್ದು, ₹ 75 ಲಕ್ಷ ವೆಚ್ಚವಾಗಿದೆ. ಬೆಂಗಳೂರಿನ ರಾಜೇಶ್ವರಿ ನಗರದ ಶಿಲ್ಪಿಗಳಾದ ಅಲಗ್ ರಾಜ್ ಸ್ಥಪತಿ ಪದ್ಮಲಯ ಆರ್ಟ್ ಹಾಗೂ ಕ್ರಾಫ್ಟ್ ಸಂಸ್ಥೆಯಲ್ಲಿ ತಯಾರಿಸಲಾಗಿದೆ. ಮಹೇಶ್ ರೆಡ್ಡಿ ಅವರು ದೇವಳದ ಒಳಾಂಗಣಕ್ಕೆ ಬೆಳ್ಳಿ ರಥ ನೀಡುವುದಾಗಿ ತಿಳಿಸಿದ್ದಾರೆ.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ್‌ರಾಂಸುಳ್ಳಿ, ಕಾರ್ಯನಿರ್ವಹಣಾಧಿಕಾರಿ ನಿಂಗಯ್ಯ, ಸದಸ್ಯರಾದ ಪಿ.ಜಿ.ಎಸ್.ಎನ್. ಪ್ರಸಾದ್, ಮನಮೋಹನ್ ರೈ, ಶ್ರೀವತ್ಸ, ವನಜಾ ವಿ.ಭಟ್, ಪ್ರಸನ್ನ ದರ್ಬೆ, ಶೋಭಾ ಗಿರಿಧರರ್, ಲೋಕೇಶ್ ಮುಂಡೋಕಜೆ, ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯ ಸತೀಶ್ ಕೂಜುಗೋಡು ಭಾಗವಹಿಸಿದ್ದರು.

ರಾಜ್ಯ ಶಿಕ್ಷಣ ನೀತಿ ಆಯೋಗದ ಅವಧಿ ಆಗಸ್ಟ್‌ವರೆಗೆ ವಿಸ್ತರಣೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಆಯೋಗದ ಅವಧಿಯನ್ನು ಸರ್ಕಾರ ಇದೇ ವರ್ಷದ ಆಗಸ್ಟ್‌ವರೆಗೆ ವಿಸ್ತರಿಸಿದೆ.

ರಾಜ್ಯ ಶಿಕ್ಷಣ ನೀತಿಯ ಕರಡು ರೂಪಿಸಲು ಶಿಕ್ಷಣ ತಜ್ಞ ಹಾಗೂ ಯುಜಿಸಿ ಮಾಜಿ ಅಧ್ಯಕ್ಷ ಪ್ರೊ.ಸುಖ್‌ದೇವ್ ಥೋರಟ್ ಅಧ್ಯಕ್ಷತೆಯಲ್ಲಿ 11 ಸದಸ್ಯರನ್ನು ಒಳಗೊಂಡ 'ರಾಜ್ಯ ಶಿಕ್ಷಣ ನೀತಿ ಆಯೋಗ'ವನ್ನು ರಚಿಸಿ ರಾಜ್ಯ ಸರ್ಕಾರ ಕಳೆದ ಅ.11ರಂದು ಆದೇಶ ಹೊರಡಿಸಿತ್ತು. 2024ರ ಫೆ. 28ರೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕಾಲಮಿತಿ ನಿಗದಿ ಮಾಡಲಾಗಿತ್ತು.'ಆಯೋಗ ಈಗಾಗಲೇ ಪ್ರಥಮ ವರದಿ ಸಲ್ಲಿಸಿದೆ. ಇನ್ನಷ್ಟು ವಿಷಯಗಳ ಕುರಿತು ಅಧ್ಯಯನ ನಡೆಸಲು, ಮಾಹಿತಿ ಸಂಗ್ರಹಿಸಲು ಸಮಯಾವಕಾಶ ನೀಡುವಂತೆ ಆಯೋಗ ಮನವಿ ಮಾಡಿತ್ತು. ಹಾಗಾಗಿ, ಅವಧಿ ವಿಸ್ತರಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಹೆಚ್. ರಾಮಚಂದ್ರಪ್ಪ
ಉದಯ: 13.08.1936 ಅಸ್ತಂಗತ: 31.08.2023
ಕರ್ತವ್ಯಗಳನ್ನು ನಿರ್ವಹಿಸುವುದನ್ನು, ಸ್ವಾಭಿಮಾನದಿಂದ ದುಡಿದು ತಿನ್ನುವುದನ್ನು, ಇಚ್ಛೆಯಂತೆ ನಡೆಯುವುದನ್ನು ಕಲಿಸಿದ ತಂದೆಗೆ ಸಾವಿರ ಪ್ರಣಾಮಗಳಿಂದ ಸ್ಮರಣೆಗಳು.
ನಿಮ್ಮನ್ನು ಸದಾ ಸ್ಮರಿಸುವ,
ಆರ್. ಶ್ರೀನಿವಾಸ್ ರಾಜು ಹಾಗೂ ಕುಟುಂಬದವರು

'ಆರೋಗ್ಯವಾಗಿದ್ದೇನೆ; ಟಿಕೆಟ್ ಕೊಟ್ಟರೆ ಸ್ಪರ್ಧಿಸುವೆ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ನನ್ನ ಆರೋಗ್ಯ ಸರಿ ಇಲ್ಲ ಎಂಬ ಸುಳ್ಳು ಸುದ್ದಿ ಹಬ್ಬಿಸಿ ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ' ಎಂದು ಮಾಜಿ ಸಂಸದೆ ಡಿ.ಕೆ.ತಾರಾದೇವಿ ಅಸಮಾಧಾನ ವ್ಯಕ್ತಪಡಿಸಿದರು.

'ಉಡುಪಿ-ಚಿಕ್ಕಮಗಳೂರು ಕ್ಷೇತ್ರ ವ್ಯಾಪ್ತಿಯ ಹಲವು ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರು ನಾನೇ ಅಭ್ಯರ್ಥಿಯಾಗಬೇಕು ಎಂದು ಬಯಸಿದ್ದಾರೆ. ಪಕ್ಷದ ಹೈಕಮಾಂಡ್‌ಗೂ ಮನವರಿಕೆ ಮಾಡಿಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ನನಗೆ ಅನಾರೋಗ್ಯ ಇದೆ ಎಂದು ಕೆಲವರು ಸುಳ್ಳು ಹರಡುತ್ತಿದ್ದಾರೆ. ನಾನು ಆರೋಗ್ಯವಾಗಿದ್ದೇನೆ' ಎಂದು ಸುದ್ದಿಗೋಷ್ಠಿಯಲ್ಲಿ ಶನಿವಾರ ಸ್ಪಷ್ಟಪಡಿಸಿದರು.

'ನಾನು ಅಭ್ಯರ್ಥಿಯಾದರೆ ಬಿಜೆಪಿಗೆ ಪ್ರಬಲ ಪೈಪೋಟಿ ಒಡ್ಡಲು ಸಾಧ್ಯವಿದೆ ಎಂಬುದು ಕಾರ್ಯಕರ್ತರ ಅಭಿಪ್ರಾಯ. ಪಕ್ಷ ಟಿಕೆಟ್ ನೀಡಿದರೆ ಸ್ಪರ್ಧಿಸಲು ಸಿದ್ಧ' ಎಂದು ಹೇಳಿದರು.

'ಪತಿಯ ಮರಣಾನಂತರ ಕೆಲಕಾಲ ಸಾರ್ವಜನಿಕ ಜೀವನದಿಂದ ದೂರ ಇದ್ದೆ. ಈಗ ಚೇತರಿಸಿಕೊಂಡು ಪಕ್ಷದ ಕಾರ್ಯಕ್ರಮ, ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದೇನೆ' ಎಂದು ತಿಳಿಸಿದರು.

ಸಂಸ್ಥೆಯೊಂದನ್ನು ಹುಟ್ಟುಹಾಕಿ ಯುವಕರು ಮತ್ತು ಮಹಿಳಾ ಸಬಲೀಕರಣಕ್ಕೆ ದುಡಿಯುವ ಇಚ್ಛೆ ಇದೆ. ಈ ಸಂಬಂಧ ರೂಪರೇಷೆ ಸಿದ್ಧವಾಗುತ್ತಿದೆ ಎಂದು ಡಿ.ಕೆ. ತಾರಾದೇವಿ ಹೇಳಿದರು.

ಕ್ಯಾಬಿನೆಟ್ ದರ್ಜೆ ಮಸ್ತಿ; ಪರಿಹಾರಕ್ಕೆ ನಾಸ್ತಿ: ರವಿಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಗೆ ಬೇಕಾದವರಿಗೆಲ್ಲ ಕ್ಯಾಬಿನೆಟ್ ದರ್ಜೆಯ ಸ್ಥಾನ ನೀಡುತ್ತಾ ರಾಜ್ಯ ಸರ್ಕಾರ ಮೋಜು–ಮಸ್ತಿ ಮಾಡುತ್ತಿದೆ. ರೈತರಿಗೆ ಬರಪರಿಹಾರ ನೀಡಲು ಮೀನಮೇಷ ಎಣಿಸುತ್ತಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ದೂರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಸ್ಥಿತಿ ಭೀಕರವಾಗಿದೆ. ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ ಇದೆ. ಇಂತಹ ಸಮಯದಲ್ಲಿ ರೈತರಿಗೆ ₹2 ಸಾವಿರ ನೀಡಿ ಸುಮ್ಮನಾಗಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗ ಕೃಷಿ ಸಮ್ಮಾನ ಯೋಜನೆ ಅಡಿ ಕೇಂದ್ರದ ₹6 ಸಾವಿರ ಜತೆಗೆ, ರಾಜ್ಯ ಸರ್ಕಾರವೂ ₹4 ಸಾವಿರ ನೀಡುತ್ತಿತ್ತು. ಅದನ್ನೂ ಸ್ಥಗಿತ ಮಾಡಲಾಗಿದೆ ಎಂದರು.

74 ಮಂದಿಗೆ ಕ್ಯಾಬಿನೆಟ್ ದರ್ಜೆ ನೀಡಲಾಗಿದೆ. ಇಷ್ಟು ದೊಡ್ಡಮಟ್ಟದಲ್ಲಿ ಕ್ಯಾಬಿನೆಟ್ ದರ್ಜೆ ನೀಡುವ ಅಗತ್ಯ ಇಲ್ಲ. ಒಬ್ಬರಿಗೆ ತಿಂಗಳಿಗೆ ಕನಿಷ್ಠ ₹5 ಲಕ್ಷ ಖರ್ಚಾಗುತ್ತದೆ. 34 ಹೊಸ ಕಾರುಗಳನ್ನು ಖರೀದಿಸಲಾಗಿದೆ. ಸಿದ್ದರಾಮಯ್ಯ ಮನೆ ನವೀಕರಣಕ್ಕೆ ₹6.40 ಕೋಟಿ ಖರ್ಚು ಮಾಡಿದ್ದಾರೆ ಎಂದು ಆರೋಪಿಸಿದರು.

ಮೋಜು ಮಾಡುತ್ತಿರುವ ಸರ್ಕಾರ ರಾಜ್ಯದ ದೇವಸ್ಥಾನಗಳ ಆದಾಯದಲ್ಲೂ ಶೇ 10ರಷ್ಟು ಪಾಲು ಕೇಳುತ್ತಿದೆ. ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿದೆ. ಪರಿಹಾರ ನೀಡಲು ಕೇಂದ್ರ ಸರ್ಕಾರದತ್ತ ಬೆರಳು ತೋರಿಸುತ್ತಿದೆ. ಕುಡಿಯುವ ನೀರು ಪೂರೈಸಲು ಆಗದ ಸ್ಥಿತಿ ತಲುಪಿದೆ ಎಂದರು.

ಕೆಇಎ ಅಕ್ರಮ: ವಾರ್ಡನ್ ಬಂಧನ

ಕಲಬುರಗಿ: ಬ್ಲೂಟೂತ್ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆಯಲು ನೆರವಾಗಿದ್ದ ಪ್ರಕರಣ ಸಂಬಂಧ ಚಿಕ್ಕಬಳ್ಳಾಪುರದ ಸಮಾಜ ಕಲ್ಯಾಣ ಇಲಾಖೆಯ ವೃತ್ತಿಪರ ವಸತಿ ನಿಲಯದ ವಾರ್ಡನ್ ಬಸವರಾಜ ಯಾಳವಾರ ಎಂಬಾತನನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಈತ ಪ್ರಮುಖ ಆರೋಪಿ ಆರ್.ಡಿ.ಪಾಟೀಲ ಆರ್.ಡಿ.ಪಾಟೀಲ ಪರವಾಗಿ ಪ್ರಶ್ನೆ ಪತ್ರಿಕೆ ಸೋರಿಕೆಗೆ ಅಫಜಲಪುರದ ರಾಯಲ್ ಪಬ್ಲಿಕ್ ಶಾಲಾ ಕೇಂದ್ರದ ಮುಖ್ಯಸ್ಥ ಚಂದ್ರಕಾಂತ ಹಾಗೂ ಕಸ್ಟೋಡಿಯನ್ ಬಸಣ್ಣ (ಬಸವರಾಜ) ಪೂಜಾರಿಗೆ ₹ 40 ಲಕ್ಷ ನೀಡಿದ್ದು ವಿಚಾರಣೆಯಲ್ಲಿ ತಿಳಿದುಬಂದಿದೆ ಎಂದು ಸಿಐಡಿ ಪೊಲೀಸರು ತಿಳಿಸಿದ್ದಾರೆ.

'ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುತ್ತೇನೆ. ಈ ವಿಷಯದಲ್ಲಿ ಮೂಡಿರುವ ಗೊಂದಲ ವೈಭವೀಕರಿಸುವ ಅಗತ್ಯವಿಲ್ಲ' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ದರ್ಶನ್ ಪುಟ್ಟಣ್ಣಯ್ಯ

'ತಂದೆ ಕೆ.ಎಸ್.ಪುಟ್ಟಣ್ಣಯ್ಯ ಅವರ ಕಾಲದಿಂದಲೂ ಕಾಂಗ್ರೆಸ್ ಪಕ್ಷ ನಮಗೆ ಬೆಂಬಲವಾಗಿ ನಿಂತಿದೆ. ಸಹಜವಾಗಿಯೇ ನಾನು ಕಾಂಗ್ರೆಸ್‌ಗೆ ಬೆಂಬಲ ನೀಡುತ್ತೇನೆ. ಇದರಲ್ಲಿ ಅನುಮಾನ ಬೇಡ' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮತಕ್ಕಾಗಿ ಯಾರೂ ಹಣ ಸೇರಿದಂತೆ ಯಾವುದೇ ಆಮಿಷ ನೀಡಿಲ್ಲ; ಒತ್ತಡ ಹೇರಿಲ್ಲ. ಕೆಲವರು ಮನವಿ ಮಾಡಿರುವುದು ನಿಜ. ಆದರೆ, ಅದು ಬೆದರಿಕೆಯಲ್ಲ. ನಮ್ಮ ರಕ್ಷಣೆ ದೃಷ್ಟಿಯಿಂದ ಮಂಡ್ಯ ಶಾಸಕರು ಪೊಲೀಸರಿಗೆ ದೂರು ನೀಡಿರಬಹುದು' ಎಂದು ಪ್ರತಿಕ್ರಿಯಿಸಿದರು.

'ನವದೆಹಲಿಯಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ರೈತರು ಕಾರು, ಟ್ರ್ಯಾಕ್ಟರ್ ಇಟ್ಟು ಕೊಂಡಿರುವುದನ್ನೂ ಟೀಕೆ ಮಾಡಲಾಗುತ್ತಿದೆ. ರೈತರು ಕಾರು ಖರೀದಿಸಲು ಶಕ್ತರಾಗಬಾರದೇ?' ಎಂದು ಪ್ರಶ್ನಿಸಿದರು.

ರೈತ ಸಂಘದ ನಿರ್ಧಾರಕ್ಕೆ ಬದ್ಧ: 'ಬೇಬಿಬೆಟ್ಟದಲ್ಲಿ ಪರೀಕ್ಷಾರ್ಥ ಸ್ಫೋಟ ನಡೆಸುವ ಸಂಬಂಧ ರೈತಸಂಘ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಕೈಕುಳಿ ಕಾರ್ಮಿಕರು ಸಣ್ಣ ಪ್ರಮಾಣದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಬೇಕು ಎಂಬ ಉದ್ದೇಶದಿಂದ ಪರೀಕ್ಷಾರ್ಥ ಸ್ಫೋಟದ ಅಗತ್ಯವಿದೆ ಎಂದು ಹಿಂದೆ ಹೇಳಿದ್ದೆ' ಎಂದರು.

ಕಾಂಗ್ರೆಸ್‌ಗೆ ಕುಮಾರ್ ಬಂಗಾರಪ್ಪ ಕರೆತರಲು ಯತ್ನ: ಗೋಪಾಲಕೃಷ್ಣ

ಶಿವಮೊಗ್ಗ: 'ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರನ್ನು ಕಾಂಗ್ರೆಸ್‌ಗೆ ಕರೆತರುವ ಕುರಿತು ಮಾತುಕತೆ ನಡೆದಿದೆ' ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ಹೇಳಿದರು.

'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪನವರು ಪಕ್ಷ ಬಿಡದಂತೆ ಕುಮಾರ್ ಬಂಗಾರಪ್ಪ ಅವರನ್ನು ಕಟ್ಟಿ ಹಾಕಿಕೊಂಡಿದ್ದಾರೆ. ನಾವು ಹಗ್ಗ ಬಿಚ್ಚಲು ಹೋಗಿದ್ದೆವು. ಅದು ಕಟ್ ಆಗುತ್ತಿದೆ' ಎಂದು ಶನಿವಾರ ಮಾರ್ಮಿಕವಾಗಿ ನುಡಿದರು.

'ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಅಚ್ಚರಿಯ ಅಭ್ಯರ್ಥಿಯೊಬ್ಬರು ಕಣಕ್ಕಿಳಿಯುವ ಸಾಧ್ಯತೆ ಇದೆ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಪತ್ರ ಚಳವಳಿ: ಪಕ್ಷದ ಕಾರ್ಯಕರ್ತರ ಕೆಲಸವಲ್ಲ'

ಚಿಕ್ಕಮಗಳೂರು: 'ಬಿಜೆಪಿಯ ನಿಜವಾದ ಕಾರ್ಯಕರ್ತರು ನನ್ನ ವಿರುದ್ಧ ಪತ್ರ ಚಳವಳಿ ಮಾಡಿಲ್ಲ. ಬೇರೆ ಪಕ್ಷದಲ್ಲಿ ಇದ್ದು, ಪಕ್ಷ ವಿರೋಧಿ ಚಟುವಟಿಕೆ ನಡೆಸಿ ರೂಢಿ ಇರುವವರೇ ಈಗ ಹೀಗೆ ಮಾಡಿಸಿರುವ ಅನುಮಾನ ಇದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶೋಭಾ ಕರಂದ್ಲಾಜೆ

'ಅಧಿಕಾರಕ್ಕಾಗಿ ಬೇರೆ ಪಕ್ಷದಿಂದ ಬರುತ್ತಾರೆ, ಅಧಿಕಾರ ಅನುಭವಿಸಿ ವಾಪಸ್ ಹೋಗುತ್ತಾರೆ. ಪತ್ರ ಬರೆದಿರುವುದನ್ನು ನೋಡಿದರೆ ಯಾರೋ ಒಬ್ಬರ ಪ್ರಾಯೋಜಕತ್ವ ಇರುವುದು ಸ್ಪಷ್ಟವಾಗುತ್ತದೆ' ಎಂದು ಸುದ್ದಿಗಾರರಿಗೆ ಅವರು ತಿಳಿಸಿದರು.

'ಅಭ್ಯರ್ಥಿಯಾಗುವ ಆಕಾಂಕ್ಷೆ ಎಲ್ಲರಿಗೂ ಇರುತ್ತದೆ. ಟಿಕೆಟ್ ಕೇಳುವ ಹಕ್ಕು ಸಾಮಾನ್ಯ ಕಾರ್ಯಕರ್ತನಿಗೂ ಇದೆ. ಆದರೆ, ಬೇರೆಯವರ ತೇಜೋವಧೆ, ಅಪಪ್ರಚಾರ ಸರಿಯಲ್ಲ. ಪಕ್ಷದ ಹೈಕಮಾಂಡ್‌ನವರು ಮತ್ತು ಮತದಾರರು ಗಮನಿಸುತ್ತಿದ್ದಾರೆ- ಉಡುಪಿ– ಚಿಕ್ಕಮಗಳೂರು ಕೇತ್ರ ಮತ್ತು ನಾನು ಸಂಸದೆಯಾದ ಬಳಿಕ ಮಾಡಿರುವ ಅಭಿವೃದ್ಧಿ ಕೆಲಸಗಳು ಎಲ್ಲರಿಗೂ ಕಾಣಿಸುತ್ತಿವೆ. ಅಭಿವೃದ್ಧಿ ಆಧಾರದಲ್ಲಿ ಚರ್ಚೆ ನಡೆಯಬೇಕು. ಇದೇ ವಿಷಯ ಮುಂದಿಟ್ಟು ಜನರ ಮುಂದೆ ಹೋಗಬೇಕು ಎಂದರು.

ಪತ್ರ ಚಳವಳಿಯಲ್ಲಿ ನಂಬಿಕೆ ಇಲ್ಲ: 'ಶೋಭಾ ಕರಂದ್ಲಾಜೆ ವಿರುದ್ಧ ನಡೆದ ಪತ್ರ ಚಳವಳಿ ಬಗ್ಗೆ ನನಗೆ ಗೊತ್ತಿಲ್ಲ. ಈ ರೀತಿಯ ಅಭಿಯಾನದ ಬಗ್ಗೆ ವೈಯಕ್ತಿಕವಾಗಿ ನನಗೆ ನಂಬಿಕೆ ಇಲ್ಲ' ಎಂದು ಬಿಜೆಪಿ ಮುಖಂಡ ಪ್ರಮೋದ್ ಮಧ್ವರಾಜ್ ಹೇಳಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

'ದ್ವೇಷ ವೈಭವೀಕರಣದಿಂದ ಉಳಿಗಾಲವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಯೋಧ್ಯೆಯಿಂದ ಮರಳುತ್ತಿದ್ದ ರೈಲಿನಲ್ಲಿ ಪ್ರಯಾಣಿಸುತ್ತಿದ್ದವರಿಗೆ ಬೆದರಿಕೆ ಹಾಕಲಾಗಿದೆ ಎಂಬ ಪ್ರಕರಣವನ್ನು ಅನಗತ್ಯವಾಗಿ ವೈಭವೀಕರಿಸಲಾಗುತ್ತಿದೆ. ಭಾವನಾತ್ಮಕ ವಿಚಾರಗಳನ್ನು ಕೆಣಕಿ ವ್ಯವಸ್ಥೆ ಹಾಳು ಮಾಡುವುದರಿಂದ ದೇಶಕ್ಕೆ ಉಳಿಗಾಲ ಇಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಬಿಜೆಪಿಯವರು ಈವರೆಗೂ ಅಭಿವೃದ್ಧಿ ವಿಚಾರವನ್ನು ಚರ್ಚೆ ಮಾಡುತ್ತಿಲ್ಲ. ಬೇರೆ ಧರ್ಮದವರನ್ನು ದ್ವೇಷಿಸುವುದು, ಅದಕ್ಕಾಗಿ ಪ್ರಚೋದಿಸುವಂಥ ಭಾವನಾತ್ಮಕ ವಿಚಾರಗಳನ್ನೇ ಪ್ರಸ್ತಾಪಿಸುತ್ತಿದ್ದಾರೆ. ಇದು ಒಳ್ಳೆಯದಲ್ಲ. ದ್ವೇಷ ಭಾವನೆಯನ್ನು ವ್ಯಾಪಕವಾಗಿ ಬಿತ್ತಲಾಗುತ್ತಿದೆ. 75 ವರ್ಷಗಳಿಂದಲೂ ಇಲ್ಲದೇ ಇರುವಂತಹ ಅಸಹನೀಯ ವಾತಾವರಣ ಸೃಷ್ಟಿಸಲು ಯತ್ನಿಸಲಾಗುತ್ತಿದೆ.ಬೇರೆ ಸಮುದಾಯದವರ ಮೇಲೆ ದ್ವೇಷ ಸೃಷ್ಟಿಸಿ ಅಶಾಂತಿ ನಿರ್ಮಿಸುವುದೇ ಬಿಜೆಪಿಯವರ ಉದ್ದೇಶ' ಎಂದು ದೂರಿದರು.

'ಅಯೋಧ್ಯೆಯಿಂದ ಮೈಸೂರಿಗೆ ಬರುತ್ತಿದ್ದ ರೈಲನ್ನು ಹೊಸಪೇಟೆಯಲ್ಲಿ ನೀರು ತುಂಬಿಸಿಕೊಳ್ಳಲು ನಿಲ್ಲಿಸಿದ್ದಾರೆ. ಅದೇ ಸಂದರ್ಭದಲ್ಲಿ ಮತ್ತೊಂದು ಫ್ಲಾಟ್‌ಫಾರಂನಲ್ಲಿ ಬೇರೊಂದು ರೈಲು ನಿಂತಿದೆ. ಅದರಲ್ಲಿದ್ದ ಅನ್ಯ ಕೋಮಿನ ವ್ಯಕ್ತಿಯೊಬ್ಬ ನಿಂತಿದ್ದ ರೈಲುಗಳ ನಡುವೆ ಹಾದು ಹೋಗಿದ್ದಾನೆ. ಆತ ಗಡ್ಡ ಬಿಟ್ಟಿದ್ದ. ಕೆಲವರು ಆತನನ್ನು ಛೇಡಿಸಿ, ಗಲಾಟೆ ಮಾಡಿದ್ದಾರೆ. ಆತ ರೈಲನ್ನು ಸುಟ್ಟು ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರು ನೀಡಲಾಗಿದೆ. ಪ್ರಕರಣ ದಾಖಲಾಗಿದೆ. ಆತ ಪಾಕಿಸ್ತಾನದ ಪರವಾಗಿ ಮಾತನಾಡಿದ್ದ ಎಂದೆಲ್ಲಾ ವೈಭವೀಕರಿಸಲಾಗಿದೆ' ಎಂದು ದೂರಿದರು.

'ಆತನನ್ನು ಬಂಧಿಸಿ, ಠಾಣೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆ ನಂತರವೂ ಆತ ಎಲ್ಲಿ ಹೋಗುತ್ತಾನೆ. ಚಲನವಲನಗಳೇನು ಎಂಬ ಬಗ್ಗೆ ನಿಗಾ ವಹಿಸಲಾಗುತ್ತದೆ' ಎಂದರು.

ರೈಲಿನಲ್ಲಿ ನಿಂದನೆ: ಆರೋಪಿ ಸೆರೆ

ಬಳ್ಳಾರಿ/ಹೊಸಪೇಟೆ (ವಿಜಯನಗರ): ಹೊಸಪೇಟೆಯಲ್ಲಿ ಅಯೋಧ್ಯಾಧಾಮ್ ವಿಶೇಷ ರೈಲಿನಲ್ಲಿ ಪ್ರಚೋದನಕಾರಿಯಾಗಿ ಮಾತನಾಡಿದ್ದ ಆರೋಪಿಯನ್ನು ಬಳ್ಳಾರಿ ರೈಲ್ವೆ ಪೊಲೀಸರು ಬಂಧಿಸಿದ್ದಾರೆ. ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದ್ದಾರೆ.

'ಅಯೋಧ್ಯೆಯಿಂದ ಮೈಸೂರಿಗೆ ತೆರಳುತ್ತಿದ್ದ ರೈಲು ಹತ್ತಿದ್ದ ವ್ಯಕ್ತಿ ರಾಮಭಕ್ತರ ಕುರಿತು ಅವಾಚ್ಯವಾಗಿ ನಿಂದಿಸಿ, ಬೆದರಿಕೆಯೊಡ್ಡಿದ' ಎಂದು ಹೊಸಪೇಟೆಯ ಆನಂದ ಕೃಷ್ಣ ಎಂ. ದೂರು ನೀಡಿದ್ದರು. ಬಳ್ಳಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'9 ವರ್ಷ ಗ್ಯಾರಂಟಿ ಮುಂದುವರಿಕೆ'

ಶಿವಮೊಗ್ಗ: 'ಬಾಕಿ ನಾಲ್ಕು ವರ್ಷ ಮಾತ್ರವಲ್ಲ, ಮುಂದಿನ ಐದು ವರ್ಷವೂ ನಾವೇ (ಕಾಂಗ್ರೆಸ್) ಅಧಿಕಾರ ನಡೆಸಲಿದ್ದೇವೆ. ಹೀಗಾಗಿ ಇನ್ನೂ 9 ವರ್ಷ 'ಗ್ಯಾರಂಟಿ' ಯೋಜನೆಗಳು ಮುಂದುವರಿಯಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಹೇಳಿದರು.



ಡಿ.ಕೆ. ಶಿವಕುಮಾರ್

ಜಿಲ್ಲಾಡಳಿತ ಆಯೋಜಿಸಿದ್ದ 'ಗ್ಯಾರಂಟಿ' ಯೋಜನೆಗಳ ಫಲಾನುಭವಿಗಳ ಜಿಲ್ಲಾಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ಜನರ ಭಾವನೆಗಳ ಮೇಲೆ ರಾಜಕಾರಣ ಮಾಡುತ್ತದೆ. ನಾವು ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತಿದ್ದೇವೆ' ಎಂದರು.

'ಐದು ಬೆರಳು ಸೇರಿ ಕೈ ಮುಷ್ಠಿಯಾಯಿತು. ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ಇದನ್ನು ನೋಡಿದ ಕಮಲ ಉದುರಿ ಹೋಯಿತು. ತೆನೆ ಹೊತ್ತ ಮಹಿಳೆ ತೆನೆ ಎಸೆದು ಹೋದಳು. ಕರ್ನಾಟಕ ಪ್ರಬುದ್ಧವಾಯಿತು. ಸಮೃದ್ಧಿಯಾಯಿತು' ಎಂದೂ ಕವಿತೆ ವಾಚಿಸಿದರು.

'ಗ್ಯಾರಂಟಿ ಯೋಜನೆಗಳನ್ನು ಅಲ್ಪಸಂಖ್ಯಾತರಿಗೆ ಕೊಟ್ಟಿರುವುದಕ್ಕೆ ಬಿಜೆಪಿಯವರು ವಿರೋಧ ಮಾಡುತ್ತಾರೆ. ಆ ಸಮುದಾಯದವರು ತೆರಿಗೆ ಕಟ್ಟುವುದಿಲ್ಲವೇ' ಎಂದು ಪ್ರಶ್ನಿಸಿದರು.

ಟೊಯೊಟ ಕಿರ್ಲೋಸ್ಕರ್ ಸಂಸ್ಥೆ ಜತೆ ಉನ್ನತ ಶಿಕ್ಷಣ ಇಲಾಖೆ ಒಪ್ಪಂದ

ವಿದ್ಯಾರ್ಥಿಗಳಿಗೆ 'ಕಿರ್ಲೋಸ್ಕರ್' ಕೌಶಲ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳಿಗೆ ಉದ್ಯೋಗ ಆಧಾರಿತ ಕೌಶಲ ತರಬೇತಿ ನೀಡಲು ಟೊಯೊಟ ಕಿರ್ಲೋಸ್ಕರ್ ಸಂಸ್ಥೆ ಜತೆ ಉನ್ನತ ಶಿಕ್ಷಣ ಇಲಾಖೆ ಒಪ್ಪಂದ ಮಾಡಿಕೊಂಡಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಆಸ್ಟ್ರೇಲಿಯಾದ ಎಂಟು ವಿಶ್ವವಿದ್ಯಾಲಯಗಳೊಂದಿಗೂ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಡಿಪ್ಲೊಮಾ ಹಾಗೂ ಎಂಜಿನಿಯರಿಂಗ್ ಕೋರ್ಸ್ ಓದುತ್ತಿರುವಾಗಲೇ ತಾಂತ್ರಿಕ ವಿಷಯಗಳ ಕುರಿತು ಹೆಚ್ಚಿನ ತರಬೇತಿ ಪಡೆಯಲಿದ್ದಾರೆ. ಪದವಿ ಪೂರೈಸುವ ಮೊದಲೇ ಉದ್ಯೋಗಾಧಾರಿತ ಕೌಶಲ ಹೊಂದಲು ಸಹಕಾರಿಯಾಗಲಿದೆ ಎಂದರು.

ರಾಜ್ಯದ ಖಾಸಗಿ ಕಾಲೇಜುಗಳಿಗೆ ಹೋಲಿಸಿದರೆ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೌಲಭ್ಯಗಳ ಕೊರತೆ ಇದೆ. ಇದರಿಂದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉದ್ಯೋಗಾವಕಾಶ ಪಡೆಯಲು ಹಿನ್ನಡೆಯಾಗಬಹುದು. ಕಿರ್ಲೋಸ್ಕರ್ ಹಾಗೂ ಆಸ್ಟ್ರೇಲಿಯಾ ವಿಶ್ವವಿದ್ಯಾಲಯಗಳ ಜತೆಗಿನ ಒಪ್ಪಂದ ಅಂತಹ ಎಲ್ಲ ಕೊರತೆಗಳನ್ನೂ ನೀಗಿಸಲಿದೆ ಎಂದು ಹೇಳಿದರು.

ರಾಮನಗರ ಹಾಗೂ ಬಿಡದಿಯ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಟೊಯೊಟ ಕಿರ್ಲೋಸ್ಕರ್ ಸಂಸ್ಥೆಗೆ ಭೇಟಿ ನೀಡಿ, ಅತ್ಯಾಧುನಿಕ ತಾಂತ್ರಿಕ ವ್ಯವಸ್ಥೆ ಕುರಿತು ಪ್ರಾಯೋಗಿಕ ತರಬೇತಿ ಪಡೆಯಲಿದ್ದಾರೆ. ಉಳಿದ ಕಾಲೇಜುಗಳ ವಿದ್ಯಾರ್ಥಿಗಳಿಗೂ ಇಂತಹ ಸೌಲಭ್ಯ ದೊರಕಲಿದೆ ಎಂದರು.

ಸಂಶೋಧನೆ, ತರಬೇತಿ ಹಾಗೂ ಅಧ್ಯಯನ– ಮೂರು ವಿಭಾಗಗಳಲ್ಲಿ ಸಮನ್ವಯಕ್ಕಾಗಿ ನ್ಯೂಜಿಲೆಂಡ್‌ನ ಎಂಟು ವಿಶ್ವವಿದ್ಯಾಲಯಗಳ ಜತೆಗೆ, ರಾಜ್ಯದ 10 ವಿಶ್ವವಿದ್ಯಾಲಯಗಳು ಒಪ್ಪಂದ ಮಾಡಿಕೊಂಡಿವೆ. ಅಲ್ಲದೇ, ಬಿಎಸ್ಸಿ, ಬಿಬಿಎ, ಬಿಕಾಂ ಸೇರಿದಂತೆ ಸಾಮಾನ್ಯ ಪದವಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೂ ಕೌಶಲ ತರಬೇತಿ ನೀಡಲು ಕ್ರಿಸ್ಪಾ ಸಂಸ್ಥೆ (ಸೆಂಟರ್ ಫಾರ್ ರೀಸರ್ಚ್ ಇನ್ ಸ್ಕೀಮ್ಸ್ ಆ್ಯಂಡ್ ಪಾಲಿಸಿ) ಜತೆ ಮಾತುಕತೆ ನಡೆಯುತ್ತಿದೆ. ಸಾಮಾಜಿಕ ಕಳಕಳಿಯ ಆಧಾರದಲ್ಲಿ ಎಲ್ಲ ಸಂಸ್ಥೆಗಳೂ ಸರ್ಕಾರದ ಜತೆ ಕೈಜೋಡಿಸಿವೆ ಎಂದು ಹೇಳಿದರು.

ಕರ್ನಾಟಕದ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ನೀಡಲು ನ್ಯೂಜಿಲೆಂಡ್‌ನ ಆಕ್ಲೆಂಡ್ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡ್ಯಾಮನ್ ಸಲೆಸಾ ಜತೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಒಪ್ಪಂದ ಮಾಡಿಕೊಂಡರು. ಅಂತರರಾಷ್ಟ್ರೀಯ ಶಿಕ್ಷಣದ ವ್ಯವಸ್ಥಾಪಕಿ ಲಿಸಾ ಫುಟ್‌ಚೆಕ್ ಉಪಸ್ಥಿತರಿದ್ದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'ನ** ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

WANTED IMMEDIATELY Experienced BSc, MSc B.Ed/ BA,MA B.Ed for all subjects and computer operator with typing and tally, Telecaller, @M.E.S Convent, Anjaneya badavane, Davanagere. Contact 9880436414

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಮತ್ತು ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9343775016/ 9886683188

Multiple Vacancy

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9901641752 : 9886213331
9845114560 : 9731810277
080 - 45557163 / 164

ಸಾರ್ವಜನಿಕ ಪ್ರಕಟಣೆ

SHORT TERM TENDER NOTIFICATION (2nd Call)
No. AFB/ID/03/2023-24
Dated : 21-02-2024
On behalf of the President, Alliance Francaise de Bangalore (AFB) invites tenders from the interested contractors for providing infrastructure development & maintenance works at AFB Campus, Vasanth-Nagar, Bangalore. For more details visit our website https://bangalore.afindia.org/11952-2/
Sd/-
Gen. Secretary / Director AFB.

ರಿಯಲ್ ಎಸ್ಟೇಟ್ ಬೈಯಿಂಗ್

Villas/Bunglows

North

PURCHASE REQUIREMENT of property in malleshwaram, seshadripuram, vyalikaval or devahia park, 1500-2400 sqft call 8867713145

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Kengeri

4000SQFT SITE 60ft road east facing for sale. Call 9900424007/ 9606791121

ವ್ಯಾಪಾರ

Business to Business

Sales Training

ವ್ಯವಸಾಯಕ್ಕೆ

ಹೈಬ್ರೀಡ್ ಮಾದರಿಯ PKM-1 ನುಗ್ಗೆ ಬೀಜಗಳು ಮಾರಾಟಕ್ಕೆ ದೊರೆಯುತ್ತದೆ. ಸಂಪರ್ಕಿಸಿರಿ:
M: 8122038099

ಭವಿಷ್ಯ

Astrology

ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ಪ್ರವಾಸ

Travel

22.03.2024 12 ದಿನಗಳು ಕೋನಾರ್ಕ್ ಭುವನೇಶ್ವರ್ ಪುರಿಜಗನ್ನಾಥ್ ಗಯಾ ಬೈದ್ಯನಾಥ ಜ್ಯೋತಿರ್ಲಿಂಗ ಕಾಶಿ,ಅಯೋಧ್ಯ ಅಲಹಾಬಾದ್. 18.04.2024 15 ದಿನಗಳು ನೇಪಾಳ ಮುಕ್ತಿನಾಥ ಕಾಶಿ,ಗಯಾ,ಅಯೋಧ್ಯ. ಇತ್ಯಾದಿ. 09.05.2024 14 ದಿನಗಳು ದೆಹಲಿ ಹರಿದ್ವಾರ್ ಗಂಗೋತ್ರಿ ಯುಮುನೋತ್ರಿ ಬದರಿನಾಥ್ ಕೇದಾರನಾಥ್ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು-70. 9342287551 8050629305

ಸುಸಜ್ಜಿತವಾದ ಊಟ, ವಸತಿಯೊಂದಿಗೆ 27.3.2024 ರಿಂದ (10/6) ದಿನಗಳ ರೈಲು/ವಿಮಾನದಲ್ಲಿ ಅಯೋಧ್ಯಾ ಕಾಶಿ, ಗಯಾ. 13.4.2024ರಿಂದ 7 ದಿನಗಳ 2/2 ಲಕ್ಸುರಿ ಬಸ್ಸಿನಲ್ಲಿ ಶಿರಡಿ, ಪಂಡರಾಪುರ ಭೀಮಾಶಂಕರ ಕೊಲ್ಲಾಪುರ್ ನಾಸಿಕ್, ಎಲ್ಲೋರಾ. 23.4.2024ರಿಂದ ರೈಲಿನಲ್ಲಿ 13 ದಿನಗಳ ಅಯೋಧ್ಯಾ, ಕಾಶಿ ಪೂರಿಜಗನ್ನಾಥ, ಕೋನಾರ್ಕ್. 2.6.2024 ರಿಂದ ರೈಲು/ವಿಮಾನದಲ್ಲಿ (18/14) ಚಾರ್ಧಾಮ್: ಕೇದಾರನಾಥ್, ಬದರಿನಾಥ್, ಗಂಗೋತ್ರಿ ಯಮುನೋತ್ರಿ. ಸಂಪರ್ಕಿಸಿ: 9740311411, 9741024122. ಕೆ.ಪಿ.ಟೂರ್ಸ್ & ಟ್ರಾವೆಲ್ಸ್ ಬೆಂಗಳೂರು.

19.4.2024 ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್ 21.4.2024ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ,ಪ್ರಯಾಗರಾಜ್, ಅಯೋಧ್ಯಾ, ಕಾಶಿ,ಗಯಾ. 15.5.2024ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

8 ದಿನಗಳ ಸೌತ್‌ಆಫ್ರಿಕಾ 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 7 ದಿನಗಳ ಜಪಾನ್, 7 ದಿನಗಳ ಶ್ರೀಲಂಕಾ, 6 ದಿನಗಳ ಕಾಶ್ಮೀರ, 8 ದಿನಗಳ ಭೂತಾನ್ 5 ದಿನಗಳ ಬಾಕು ಭಟ್ ಟ್ರಾವೆಲ್ಸ್: 9844166555/ 9844037295

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ 103ರ ಸಂಭ್ರಮ

₹200 ಕೋಟಿ ಪರಿಹಾರ ಕೊರೋನಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ನೌಕರರ ಒಂದು ದಿನದ ವೇತನವಾಗಿ ₹200 ಕೋಟಿಗಿಂತಲೂ ಹೆಚ್ಚಿನ ಮೊತ್ತವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಲಾಯಿತು.

ಗಾಬಿತವಾಡದ ಸರ್ಕಾರಿ ಶಾಲೆ ದತ್ತು ಕರ್ನಾಟಕ ಮತ್ತು ಗೋವಾ ರಾಜ್ಯದ ಗಡಿಭಾಗದ ಗಾಬಿತವಾಡದಲ್ಲಿ 1947ರಲ್ಲಿ ಆರಂಭವಾದ ಸರ್ಕಾರಿ ಶಾಲೆಯನ್ನು ದತ್ತು ಪಡೆದ ಸರ್ಕಾರಿ ನೌಕರರ ಸಂಘ

ಹುಲಿ ದತ್ತು: ಶಿವಮೊಗ್ಗದ ಹುಲಿ–ಸಿಂಹಧಾಮದ ಒಂದು ಹುಲಿಯನ್ನು ನೌಕರರ ಸಂಘದಿಂದ ದತ್ತು ಪಡೆಯಲಾಯಿತು

ರಾಜ್ಯಾಧ್ಯಕ್ಷರ ನಡೆ ಸರ್ಕಾರಿ ನೌಕರರ ಹಕ್ಕು ಬಾಧ್ಯತೆಗಳನ್ನು ಪಡೆಯುವುದಲ್ಲದೆ, ಸಂಘಟನೆಯನ್ನು ಸದೃಢಗೊಳಿಸಲು ಪಾದರಸದಂತೆ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿ ಅನೇಕ ಮೊದಲುಗಳಿಗೆ ಮುನ್ನುಡಿಯಾಗಿದೆ.

ಸಿ.ಎಸ್.ಷಡಾಕ್ಷರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಘದ ಅಧ್ಯಕ್ಷರಾದ ಸಿ.ಎಸ್.ಷಡಾಕ್ಷರಿ ಅವರು ಸರ್ಕಾರಿ ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಮನವಿ ಪತ್ರ ಸಲ್ಲಿಸಿದರು

ಸ್ಥಾಪನೆ: ಸರ್ಕಾರಿ ನೌಕರರ ಕಲ್ಯಾಣ ಹಾಗೂ ಸೇವಾ ಸವಲತ್ತುಗಳನ್ನು ಪಡೆಯಲು ಸ್ಥಾಪಿತವಾದ 'ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ' ಇದೀಗ ಒಂದು ಶತಮಾನ ಪೂರೈಸಿ 103ನೇ ವರ್ಷದ ಸಂಭ್ರಮಾಚರಣೆ ಮಾಡುತ್ತಿದೆ.

1920ರಲ್ಲಿ ಉದಯವಾದ ಸಂಘ ನೌಕರರ ಹಕ್ಕುಗಳು, ನೇಮಕಾತಿ, ಕಲ್ಯಾಣ ನಿಧಿ, ವೇತನ ಪರಿಷ್ಕರಣೆ ಸೇರಿದಂತೆ ನೌಕರರ ಅಭ್ಯುದಯ, ಸರ್ವಾಂಗೀಣ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಾ ಬಂದಿದೆ. ಈ ಮೂಲಕ ಸಂಘ ಇಡೀ ದೇಶಕ್ಕೆ ಮಾದರಿಯಾಗಿದೆ.

ಹಿಂದಿನ ಅಧ್ಯಕ್ಷರ ಸಾಧನೆಗಳು

ಈವರೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವನ್ನು 9 ಜನ ಅಧ್ಯಕ್ಷರು ಮುನ್ನಡೆಸಿದ್ದಾರೆ ಇದೀಗ 10ನೇ ಅವಧಿಗೆ ಅಧ್ಯಕ್ಷರಾಗಿರುವ ಸಿ.ಎಸ್. ಷಡಾಕ್ಷರಿ ಸಂಘವನ್ನು ಸ್ಥಿರವಾಗಿ ಮುನ್ನಡೆಸುವ ಜವಾಬ್ದಾರಿ ಹೊತ್ತು, ನೌಕರರ ಕ್ಷೇಮಾಭಿವೃದ್ಧಿಗಾಗಿ ಶ್ರಮಿಸುತ್ತಾ ಕಾರ್ಯಪ್ರವೃತ್ತರಾಗಿದ್ದಾರೆ.

ಮೇರಿ ದೇವಾಸಿಯಾ : 1965ರಲ್ಲಿ ಅಧ್ಯಕ್ಷರಾಗಿದ್ದ ವೇತನ ಪರಿಷ್ಕರಣೆಗೆ ಸಮಿತಿ ರಚನೆಗಾಗಿ ಸುಮಾರು 30 ಸಾವಿರ ನೌಕರರಿಂದ ಹೋರಾಟ ಮಾಡಿದ್ದರು.

ಶ್ರೀಪತಿ:1966ರಲ್ಲಿ 1ನೇ ವೇತನ ಆಯೋಗ, 1968ರಲ್ಲಿ ತುಟ್ಟಿಭತ್ಯೆಯ ಉಗಮ, ತುಟ್ಟಿಭತ್ಯೆ ಮನಿ ಆರ್ಡರ್ ಚಳವಳಿ, ಪೆನ್ ಡೌನ್ ಸ್ಟ್ರೈಕ್, ಸ್ಟೈಫಂಡರಿ ಪದವೀಧರರ ಚಳವಳಿ, ವಿಧಾನಸೌಧ ಚಲೋ, ಅಮರಣಾಂತ ಉಪವಾಸ ಸತ್ಯಾಗ್ರಹ, ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನೌಕರರ ಭವನ ನಿರ್ಮಾಣ, ಅನುಕಂಪದ ಆಧಾರದ ನೇಮಕಾತಿ, ಬಡ್ತಿಯಲ್ಲಿ ಸೆಲೆಕ್ಷನ್ ಗ್ರೇಡ್, ನೌಕರರ ಕಲ್ಯಾಣ ನಿಧಿ, ಕುಟುಂಬ ಕಲ್ಯಾಣ ನಿಧಿಯಂತಹ ಮಹತ್ತರ ಆದೇಶಗಳನ್ನು ಮಾಡಿಸಿದ್ದರು.

ಕೆ. ಎ. ಕೇಶವಮೂರ್ತಿ : 1974ರಲ್ಲಿ 2ನೇ ವೇತನ ಆಯೋಗ, 1981ರಲ್ಲಿ ಸಚಿವ ಸಂಪುಟ ಉಪಸಮಿತಿ, 1986ರಲ್ಲಿ ಮೂರನೇ ವೇತನ ಆಯೋಗಗಳ ಮೂಲಕ ನೌಕರರ ವೇತನ ಭತ್ಯೆಗಳ ಪರಿಷ್ಕರಣೆಗೊಳಿಸಿದ್ದರು.

ಎಂ. ಟಿ. ಕೃಷ್ಣಪ್ಪ:1992ರಲ್ಲಿ 4ನೇ ವೇತನ ಆಯೋಗ, ಸಾಂದರ್ಭಿಕ ರಜೆ ಏರಿಕೆ, 24 ತಿಂಗಳ ಒಳಗೆ ಕೆಜಿಐಡಿ ಸಾಲ ನವೀಕರಣ, ಗಳಿಕೆ ರಜೆ ನಗದೀಕರಣ, ಸ್ವಯಂ ನಿವೃತ್ತಿ ವಯಸ್ಸನ್ನು 15 ವರ್ಷಕ್ಕೆ ಇಳಿಕೆ, ಸ್ಥಗಿತ ವೇತನ ಬಡ್ತಿಯಂತಹ ಹಲವು ಹೊಸ ನೀತಿಗಳು ಜಾರಿ.

ಕೆ. ಸಿಪ್ಪೇಗೌಡರ: 1998ರಲ್ಲಿ ಅಧಿಕಾರಿಗಳ ವೇತನ ಸಮಿತಿ, ಹಬ್ಬದ ಮುಂಗಡ ಹೆಚ್ಚಳ, ಸರ್ಕಾರಿ ನೌಕರರು ಭೂಮಿ ಖರೀದಿಯ ಆದಾಯದ ಮಿತಿ ₹2 ಲಕ್ಷಕ್ಕೆ ಏರಿಕೆ, ಸ್ವಯಂಚಾಲಿತ ಬಡ್ತಿ ಆದೇಶಗಳನ್ನು ಮಾಡಿಸಿದ್ದರು.

ಹೆಚ್. ಎನ್. ಶೇಷೇಗೌಡ: 5ನೇ ವೇತನ ಆಯೋಗದ ರಚನೆ, ನೌಕರರಿಗೆ ತುಟ್ಟಿಭತ್ಯೆಯನ್ನು ನಗದುರೂಪದಲ್ಲಿ ಮಂಜೂರು ಮಾಡಿಸಿದ ಸರಳ ಸಜ್ಜನಿಕೆಯ ಅಧ್ಯಕ್ಷರು.

ಸಂಘದ ಹಕ್ಕೊತ್ತಾಯ

- ಏಳನೇ ವೇತನ ಆಯೋಗದ ವರದಿಯನ್ನು ಪಡೆದು ಜಾರಿಗೊಳಿಸುವುದು
- ಎನ್‌ಪಿಎಸ್ ಯೋಜನೆಯನ್ನು ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯ ಮರು ಜಾರಿಗೊಳಿಸುವುದು
- ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಅನುಷ್ಠಾನ ಮಾಡುವುದು

ಡಾ. ಎಲ್. ಭೈರಪ್ಪ: 2007ರಲ್ಲಿ 5ನೇ ವೇತನ ಆಯೋಗ ಜಾರಿ, 2011ರಲ್ಲಿ ಅಧಿಕಾರಿ ಸಮಿತಿ ರಚನೆ, 20, 25, 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆ, ರಾಜ್ಯ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ, ರಾಜ್ಯ ಮತ್ತು ವಿಭಾಗೀಯ ಸಮ್ಮೇಳನಗಳನ್ನು ಮಾಡಿದ್ದರು.

ಬಿ.ಪಿ. ಮಂಜೇಗೌಡ : 01 ದಿನದ ಮುಷ್ಕರದ ಮೂಲಕ 2017ರಲ್ಲಿ 6ನೇ ವೇತನ ಆಯೋಗವನ್ನು ನೌಕರರಿಗೆ ಕೊಡಿಸುವಲ್ಲಿ ಸಫಲರಾದರು.

ಹೆಚ್.ಕೆ. ರಾಮು : ಹಿಂದಿನ ಅಧ್ಯಕ್ಷರಗಳ ಹಾದಿಯಲ್ಲಿಯೇ ಸಂಘವನ್ನು ಮುನ್ನಡಿಸಿದರು.

ಸಿ.ಎಸ್. ಷಡಾಕ್ಷರಿ "ಹೊಸ ಮನ್ವಂತರದತ್ತ ವಿಕಾಸ ಶೀಲಹೆಜ್ಜೆ..." ಬದಲಾವಣೆಗೆ ಕೈಜೋಡಿಸಿ ಘೋಷವಾಕ್ಯದಡಿಯಲ್ಲಿ 2019ರಲ್ಲಿ ಚುನಾವಣೆ ಮೂಲಕ ರಾಜ್ಯಾಧ್ಯಕ್ಷ ಹುದ್ದೆಗೆ ಆಯ್ಕೆಯಾದವರು ನೌಕರರ ಸಿ. ಎಸ್. ಷಡಾಕ್ಷರಿ.

ಸರ್ಕಾರಿ ನೌಕರರ ಸಂಘದಿಂದ ಕೈಗೊಂಡ ವಿವಿಧ ಸೇವಾ ಕಾರ್ಯಕ್ರಮಗಳು

- ಸರ್ಕಾರಿ ನೌಕರರು ತಮ್ಮ ವೇತನದಿಂದ ಉತ್ತರ ಕರ್ನಾಟಕ, ಕರಾವಳಿಯ ಪ್ರದೇಶಗಳ ಪ್ರಕೃತಿ ವಿಕೋಪ, ಕೋವಿಡ್ -19 ಸಂದರ್ಭದಲ್ಲಿ ₹600 ಕೋಟಿ ದೇಣಿಗೆ, ಸರ್ಕಾರದ ಪುಣ್ಯಕೋಟಿ ದತ್ತು ಯೋಜನೆಗೆ ₹50 ಕೋಟಿ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹5 ಕೋಟಿಗಳ ದೇಣಿಗೆ ನೀಡಲಾಗಿದೆ.
- ಎಸ್.ಎಸ್.ಎಲ್.ಸಿ. - ಪಿ.ಯು.ಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾನ್ವಿತ ಸರ್ಕಾರಿ ನೌಕರರ ಮಕ್ಕಳಿಗೆ ರಾಜ್ಯಮಟ್ಟದಲ್ಲಿ ಪ್ರತಿ ವರ್ಷ 7 ಸಾವಿರ ಮಕ್ಕಳಿಗೆ ಹಾಗೂ ಇಲ್ಲಿಯವರೆಗೆ ಸುಮಾರು 25 ಸಾವಿರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದ ಮೂಲಕ ಅಭಿನಂದಿಸಿ ನಗದು ಪುರಸ್ಕಾರದೊಂದಿಗೆ ಪ್ರೋತ್ಸಾಹಿಸಲಾಗುತ್ತಿದೆ. ಇದು ಸಂಘಟನೆಯ ಇತಿಹಾಸದಲ್ಲೇ ಮೈಲಿಗಲ್ಲು.
- ಕರ್ನಾಟಕ ಲೋಕಾಯುಕ್ತರು ಇತರೆ ಗಣ್ಯರಿಂದ ನೌಕರರ ಕೌಶಲ್ಯ ಅಭಿವೃದ್ಧಿ, ಕಾರ್ಯಾಗಾರ, ಉಪನ್ಯಾಸಗಳು ಪಾರದರ್ಶಕ ಆಡಳಿತ ಶ್ರೀಸಾಮಾನ್ಯರ ಸೇವೆಗೆ ಪ್ರೇರಣೆಯಾಗಿದೆ.
- ನಾಡು ನುಡಿಯ ಸೇವೆಗಾಗಿ ರಾಜ್ಯದ ಗಡಿಭಾಗದ ಜಿಲ್ಲೆಗಳಲ್ಲಿ ಗಡಿನಾಡು ಕನ್ನಡ ಉತ್ಸವ – ಕನ್ನಡ ರಾಜ್ಯೋತ್ಸವ ಆಚರಣೆ. ಗಡಿ ಭಾಗದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲಾಗುತ್ತಿದೆ.

ಹೀಗೆ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ರಾಜ್ಯದ ಪ್ರತಿ ಜಿಲ್ಲೆ, ತಾಲ್ಲೂಕು, ಯೋಜನಾ ಶಾಖೆಗಳಿಗೆ ಭೇಟಿ ನೀಡಿ ಆಡಳಿತದಲ್ಲಿ ಪಾರದರ್ಶಕತೆ ತಂದು ಸಂಘಟನೆಗಾಗಿ ಕಳೆದ ನಾಲ್ಕು ವರ್ಷದಲ್ಲಿ 1.50 ಲಕ್ಷ ಕಿ. ಮೀ. ಪ್ರಯಾಣಿಸಿದ ಗೌರವವೂ ರಾಜ್ಯಾಧ್ಯಕ್ಷರಿಗೆ ಸಲ್ಲುತ್ತದೆ. ಸಿ.ಎಸ್.ಷಡಾಕ್ಷರಿ ಅವರ ಕಾರ್ಯಕ್ಷಮತೆ, ಸೇವೆ ಮತ್ತು ಸಂಘಟನೆಗೆ ಹೊಸ ದಿಕ್ಸೂಚಿಯಾಗಿದೆ ಎಂಬುವುದಕ್ಕೆ ಈ ಸಾಧನೆಗಳೆ ಸಾಕ್ಷಿ.

ನನಸಾದ ಶತಮಾನದ ಕನಸುಗಳು

- ಸಂಘಟನೆಯ ನೂರು ವರ್ಷಗಳ ನೆನಪನ್ನು ಸಾರ್ಥಕಗೊಳಿಸಲು ಅವರು ಪಣತೊಟ್ಟು, ವಿಶೇಷ ವಿನ್ಯಾಸದ ಮೀಟಿಂಗ್ ಹಾಲ್, ಆಡಳಿತ ಕಛೇರಿ, ಅತಿಥಿ ಗೃಹಗಳು, ಆಧುನಿಕ ಸಭಾಂಗಣದ ಶತಮಾನೋತ್ಸವ ಭವನವನ್ನು ಅಂದಿನ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರಿಂದ ನೌಕರರ ಸೇವೆಗೆ ಲೋಕಾರ್ಪಣೆ.

ಸರ್ಕಾರದ ಕಡತಗಳಲ್ಲಿ ಮರೆಯಾಗಿದ್ದ ನೌಕರರ 25ಕ್ಕೂ ಹೆಚ್ಚು ಸೇವಾ ವಿಷಯಗಳಿಗೆ ಆದೇಶ:

- ಸರ್ಕಾರಿ ನೌಕರರ ವಿರುದ್ಧ ಅನಾಮಧೇಯ ದೂರುಗಳ ಮೇಲೆ ತನಿಖೆ ಅಗತ್ಯವಿಲ್ಲವೆಂಬ ಆದೇಶ.
- ಕಿಡ್ನಿ, ಕ್ಯಾನ್ಸರ್ ಬಾಧಿತ ನೌಕರರಿಗೆ 06 ತಿಂಗಳ ವಿಶೇಷ ಸಾಂದರ್ಭಿಕ ರಜೆಯ ಆದೇಶ.
- ಶಿಕ್ಷಕರಿಗೆ ಇದ್ದ 10 ಸಿ.ಎಲ್ ಗಳನ್ನು 15 ಸಿ.ಎಲ್. ಗಳಿಗೆ ಹೆಚ್ಚಳ.
- ಮಹಿಳಾ ನೌಕರರ ಮಕ್ಕಳ ಆರೈಕೆಗಾಗಿ 6 ತಿಂಗಳ ಶಿಶುಪಾಲನಾ ರಜೆ.
- ನೌಕರರಿಗೆ ಹಬ್ಬದ ಮುಂಗಡ 10,000 ಗಳಿಂದ 25,000 ಗಳಿಗೆ ಹೆಚ್ಚಳ.
- ಕೆ.ಜಿ.ಐ.ಡಿ. ಕಚೇರಿಗಳು, ನೌಕರರ 14 ಲಕ್ಷ ಪಾಲಿಸಿಗಳ ಗಣಕೀಕರಣ ಹಾಗೂ ಗರಿಷ್ಠ ಕೆ.ಜಿ.ಐ.ಡಿ. ಬೋನಸ್ ಮಂಜೂರು.
- ಏಪ್ರಿಲ್ 21ರಂದು 'ರಾಜ್ಯ ಸರ್ಕಾರಿ ನೌಕರರ ದಿನಾಚರಣೆಗೆ ಆದೇಶ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಸಂಖ್ಯೆಗಳ ಹೆಚ್ಚಳ
- ಸರ್ಕಾರಿ ನೌಕರರ ಸಮಸ್ಯೆಗಳನ್ನು ಆಲಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಜಿಲ್ಲಾಮಟ್ಟದ ಜಂಟಿ ಸಮಾಲೋಚನಾ ಸಮಿತಿ' ರಚನೆ.
- ಸರ್ಕಾರಿ ನೌಕರರಿಗೆ ಸಕಾಲಕ್ಕೆ ವೇತನ, ಭತ್ಯೆಗಳು ಹಾಗೂ ಕಾಲಕಾಲಕ್ಕೆ ವಿಳಂಬವಿಲ್ಲದೆ ತುಟ್ಟಿಭತ್ಯೆ ಮಂಜೂರು.
- ನೌಕರರಿಗೆ Post Based ಮುಂಬಡ್ತಿ ಪದ್ಧತಿಯ ಮೂಲಕ ಹೆಚ್ಚಿನ ಮುಂಬಡ್ತಿಗೆ ಅವಕಾಶ.
- ಸಿ.ಎಲ್.ಟಿ. ಪರೀಕ್ಷೆ ತೇರ್ಗಡೆ ಅವಧಿ ವಿಸ್ತರಣೆ, ಡಿಜಿಟಲ್ Certificate ನೀಡಿಕೆ, ₹5 ಸಾವಿರ ಪ್ರೋತ್ಸಾಹ ಧನ.
- ಆರೋಗ್ಯ, ಆಯುಷ್, ಕಂದಾಯ ಇಲಾಖೆಯ ಕೆಲವು ಹುದ್ದೆಗಳ ಪದನಾಮ ಬದಲಾವಣೆ.
- ಹಲವು ಇಲಾಖೆಗಳ ಸಿ & ಆರ್. ನಿಯಮಗಳ ತಿದ್ದುಪಡಿ.
- ಸರ್ಕಾರಿ ನೌಕರರು ಮತ್ತು ಅವಲಂಬಿತರಿಗೆ ನಗದುರಹಿತ ಚಿಕಿತ್ಸೆ ಒದಗಿಸುವ "ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ" ಯ ಸರ್ಕಾರಿ ಆದೇಶ.
- ಸರ್ಕಾರಿ ನೌಕರರ ಸ್ಥಿರಾಸ್ತಿ - ಚರಾಸ್ತಿಯನ್ನು ಖರೀದಿಸಿ ನಂತರ ಸರ್ಕಾರಕ್ಕೆ ವರದಿ ಮಾಡುವ ಆದೇಶ.
- ಮರಣ ಹೊಂದಿದ ಎನ್.ಪಿ.ಎಸ್. ನೌಕರರಿಗೆ ಡಿ.ಸಿ. ಆರ್.ಜಿ / ಕುಟುಂಬ ಪಿಂಚಣಿ ಮಂಜೂರು ಮಾಡಿ ಆದೇಶ.
- ಸರ್ಕಾರಿ ನೌಕರರ ಹೆಚ್ಚುವರಿ ಪ್ರಭಾರ ಭತ್ಯೆ ಶೇ 15ಕ್ಕೆ ಹೆಚ್ಚಿಸಿ ಆದೇಶ.
- Passport ನಿರಾಪೇಕ್ಷಣ ಪತ್ರ ನೀಡುವ ಅಧಿಕಾರವನ್ನು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ನೀಡಿ ಆದೇಶ.
- ಸರ್ಕಾರಿ ನೌಕರರ ರಾಜ್ಯ – ಜಿಲ್ಲಾ ಮಟ್ಟದ ಕ್ರೀಡಾಕೂಟಗಳನ್ನು ಪ್ರತಿವರ್ಷ ನಡೆಸಿ ನೌಕರರಲ್ಲಿರುವ ಪ್ರತಿಭೆಗಳನ್ನು ಗುರುತಿಸಿ, ರಾಷ್ಟ್ರಮಟ್ಟದಲ್ಲಿ ಕೀರ್ತಿ ತಂದು ರಾಜ್ಯದ ಗೌರವ ಹೆಚ್ಚಿಸಿದ್ದಾರೆ.
- ಜುಲೈ 2021 ರಿಂದ ಶೇ 3ರಷ್ಟು ತುಟ್ಟಿಭತ್ಯೆ ಆದೇಶ.
- ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸುಧಾಕರ್ ರಾವ್ ರವರ ನೇತೃತ್ವದಲ್ಲಿ 7ನೇ ವೇತನ ಆಯೋಗವನ್ನು ನವೆಂಬರ್ 2022ರಲ್ಲಿ ರಚನೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ರಾಜ್ಯ ಸರ್ಕಾರಿ ನೌಕರರು

- ವರದಿಯನ್ನು ಅನುಷ್ಠಾನಗೊಳಿಸಲು ವಿಳಂಬವಾದರಿಂದ ಸಂಘವು ಅನಿವಾರ್ಯವಾಗಿ ದಿನಾಂಕ 01-03-2023 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದರಿಂದ ರಾಜ್ಯದ ಎಲ್ಲಾ ಇಲಾಖೆಗಳ ಲಕ್ಷಾಂತರ ನೌಕರರು ಕರ್ತವ್ಯಕ್ಕೆ ಗೈರುಹಾಜರಾದ ಪರಿಣಾಮ ಸರ್ಕಾರವು 01-04-2023 ರಿಂದ ಅನ್ವಯವಾಗುವಂತೆ ಶೇ. 17ರಷ್ಟು ಮಧ್ಯಂತರ ಪರಿಹಾರ ಆದೇಶ.
- ಇದರೊಂದಿಗೆ ಹಳೆಪಿಂಚಣಿ ಯೋಜನೆಯ ಜಾರಿಗಾಗಿ ಸರ್ಕಾರದ ಅಪರ ಮುಖ್ಯ-ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ
- ಎರಡು ಸರ್ಕಾರಿ ಆದೇಶಗಳೊಂದಿಗೆ ಮುಷ್ಕರ ಅಂತ್ಯ.
- ರಾಜ್ಯದ ಸುಮಾರು 12 ಸಾವಿರ ಎನ್.ಪಿ.ಎಸ್. ನೌಕರರನ್ನು ಓ.ಪಿ.ಎಸ್. ವ್ಯಾಪ್ತಿಗೆ ಆದೇಶ
- 2024ರ ಬಜೆಟ್‌ನಲ್ಲಿ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ಅನುಷ್ಠಾನದ ಬಗ್ಗೆ ಪ್ರಸ್ತಾಪನೆ.

ಉಪನ್ಯಾಸ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸರ್ಕಾರಿ ನೌಕರರ ಕೌಶಲ್ಯ ವಿಕಸನಕ್ಕಾಗಿ ಕಾರ್ಯಾಗಾರ, ವಿಚಾರ ಸಂಕಿರಣ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಸಮ್ಮೇಳನ ಆರಂಭವಾಗುವ ಪೂರ್ವದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಕೃಷ್ಣ ಎಸ್ ದೀಕ್ಷಿತ್ ಅವರು ನೌಕರರ ಸೇವೆ ಹಾಗೂ ಕಾರ್ಯದಕ್ಷತೆ ಕುರಿತು ಉಪನ್ಯಾಸ ನೀಡಲಿದ್ದಾರೆ.

ಖ್ಯಾತ ಹೃದ್ರೋಗ ತಜ್ಞರಾದ ಡಾ. ಸಿ.ಎಂ. ಮಂಜುನಾಥ್ ಅವರು ನೌಕರರ ಆರೋಗ್ಯ ಮತ್ತು ಒತ್ತಡ ನಿರ್ವಹಣೆ ಕುರಿತು ಮಾತನಾಡಲಿದ್ದಾರೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶಾಲಿನಿ ರಜನೀಶ್ ಅವರು ಜನಸ್ನೇಹಿ ಆಡಳಿತದ ಕುರಿತು ವಿಷಯ ಮಂಡಿಸಲಿದ್ದಾರೆ. ಇಂಥ ಸಂಪನ್ಮೂಲ ವ್ಯಕ್ತಿಗಳ ವಿಚಾರ ವಿನಿಮಯ ಸರ್ಕಾರಿ ನೌಕರರ ಸೇವೆಗೆ ಸಹಕಾರಿಯಾಗಲಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ

ದಿನಾಂಕ: 27-02-2024 ಮಂಗಳವಾರ ಬೆಳಿಗ್ಗೆ 10.30ಕ್ಕೆ

ಸ್ಥಳ: ಕೃಷ್ಣ ವಿಹಾರ, ಗೇಟ್ ನಂ.1 ಮೇಕ್ರಿ ಸರ್ಕಲ್ ಹತ್ತಿರ, ಅರಮನೆ ಮೈದಾನ, ಬೆಂಗಳೂರು.



ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರು ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಅವರನ್ನು ಅಭಿನಂದಿಸಿದ ಕ್ಷಣ

ಕರ್ನಾಟಕ ರಾಜ್ಯದ ಸರ್ಕಾರಿ ನೌಕರರ ಸಂಘದ ನಿಯೋಗ ವಿಧಾನಸೌಧದ ಹತ್ತಿರದ ಗಾಂಧಿ ಪ್ರತಿಮೆಯ ಮುಂಭಾಗ ತೆಗೆಸಿಕೊಂಡ ಚಿತ್ರ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಬೆಂಗಳೂರು ನಗರ ಜಿಲ್ಲಾ ಸರ್ಕಾರಿ ನೌಕರರ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು

ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಶತಮಾನೋತ್ಸವ ಭವನದ ಲೋಕಾರ್ಪಣೆಯನ್ನು ಅಂದಿನ ಮುಖ್ಯಮಂತ್ರಿ ಬಿ.ಎಸ್‌ಯಡಿಯೂರಪ್ಪ ನೆರವೇರಿಸಿದರು

ರಾಜ್ಯದ ಸಮಸ್ತ ಸರ್ಕಾರಿ ನೌಕರರಿಗೆ ಮಹಾಸಮ್ಮೇಳನಕ್ಕೆ ಆತ್ಮೀಯ ಸ್ವಾಗತ

1.ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ತೇರುಮಲ್ಲೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ಶನಿವಾರ ನಡೆದ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ 2. ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಉಳವಿಯಲ್ಲಿ ಚನ್ನಬಸವೇಶ್ವರ ಜಾತ್ರೆಯ ಅಂಗವಾಗಿ ಮಹಾರಥೋತ್ಸವ ಶನಿವಾರ ಅಪಾರ ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನಡೆಯಿತು 3. ಮೈಸೂರು ಜಿಲ್ಲೆಯ ಬೆಟ್ಟದಪುರದ ಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬ್ರಹ್ಮರಥೋತ್ಸವ ಅಪಾರ ಭಕ್ತರ ಸಮ್ಮುಖದಲ್ಲಿ ಶನಿವಾರ ಸಂಭ್ರಮದಿಂದ ಜರುಗಿತು —ಪ್ರಜಾವಾಣಿ ಚಿತ್ರಗಳು

ಹಿರಿಯೂರು, ಉಳವಿ, ಬೆಟ್ಟದಪುರದಲ್ಲಿ ಜಾತ್ರೋತ್ಸವ: ಭಕ್ತ ಗಣದಿಂದ ದಿನವಿಡೀ ಧಾರ್ಮಿಕ ಆಚರಣೆ

ಭಾರತ ಹುಣ್ಣಿಮೆ: ಜಾತ್ರೆ ಸಂಭ್ರಮ

ಸವದತ್ತಿಯಲ್ಲಿ ಜನಸಾಗರ

ಪ್ರಜಾವಾಣಿ ವಾರ್ತೆ

ಯಲ್ಲಮ್ಮನಗುಡ್ಡ (ಬೆಳಗಾವಿ ಜಿಲ್ಲೆ): ಇಲ್ಲಿನ ಯಲ್ಲಮ್ಮನ ಸನ್ನಿಧಾನದಲ್ಲಿ ಶನಿವಾರ ಅಪಾರ ಸಂಖ್ಯೆ ಭಕ್ತಾದಿಗಳ ಸಮ್ಮುಖದಲ್ಲಿ ಭಾರತ ಹುಣ್ಣಿಮೆ ಜಾತ್ರೆ ಸಡಗರದಿಂದ ನೆರವೇರಿತು.

ಕೋವಿಡ್ ಮತ್ತು ಬರಸ್ಥಿತಿಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಜಾತ್ರೆ ಸಂಭ್ರಮ ಕಳೆಗುಂದಿತ್ತು. ಈಗ ಮತ್ತೆ ವೈಭವ ಮರುಕಳಿಸಿದೆ. ಕೆಲವರು ಚಕ್ಕಡಿಗಳಲ್ಲಿ, ಇನ್ನೂ ಕೆಲವರು ಕಾಲ್ನಡಿಗೆಯಲ್ಲಿ ಗುಡ್ಡಕ್ಕೆ ಬಂದರು. ಯಲ್ಲಮ್ಮ ದೇವಸ್ಥಾನ, ಸುತ್ತಲಿನ ದೇಗುಲಗಳಲ್ಲಿ ಕಾರ್ಯಕ್ರಮ ನಡೆದವು.

ಕರ್ನಾಟಕದ ಜಿಲ್ಲೆಗಳಲ್ಲದೇ, ನೆರೆಯ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶಗಳಿಂದಲೂ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು, ಜಗದಾಂಬೆ ರೇಣುಕೆಗೆ ಭಕ್ತಿಯಿಂದ ನಮಿಸಿದರು.

ನಸುಕಿನ 4ರಿಂದಲೇ ದೇಗುಲದ ಸರದಿಯಲ್ಲಿ ನಿಂತು ದರ್ಶನ ಪಡೆದರು. ಯಲ್ಲಮ್ಮನಿಗೆ ಜೈಕಾರ ಕೂಗಿ, ಭಂಡಾರ ಹಾರಿಸಿ ಖುಷಿಪಟ್ಟರು. ಹೂರಣದಿಂದ ಹೋಳಿಗೆ, ಕಡಬು ಸೇರಿ ವಿವಿಧ ಆಹಾರ ಖಾದ್ಯ ಸಿದ್ಧಪಡಿಸಿ, ಹಡ್ಡಲಗಿ ತುಂಬಿದರು. ಬಳೆಗಳ ವ್ಯಾಪಾರವು ಜೋರಿತ್ತು.

ಭಾರತ ಹುಣ್ಣಿಮೆ ಪ್ರಯುಕ್ತ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿ ಶನಿವಾರ ನಡೆದ ಜಾತ್ರೆಯಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು – ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಹುಲಿಗೆಮ್ಮನ ದರ್ಶನಕ್ಕೆ ಲಕ್ಷಾಂತರ ಭಕ್ತರ ದಂಡು

ಮುನಿರಾಬಾದ್ (ಕೊಪ್ಪಳ): ಭಾರತ ಹುಣ್ಣಿಮೆ ಅಂಗವಾಗಿ ಉತ್ತರ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಿಯ ದರ್ಶನಕ್ಕೆ ಶನಿವಾರ ಬಂದಿದ್ದ ಲಕ್ಷಾಂತರ ಭಕ್ತರಿಗೆ ಬರಗಾಲದ ಬಿಸಿ ತಟ್ಟಿತು.

ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ಭಕ್ತರು ಹುಲಿಗಿಯಲ್ಲಿ ತುಂಗಭದ್ರಾ ನದಿಯಲ್ಲಿ ಪುಣ್ಯಸ್ನಾನ ಮಾಡಿ ಬಳಿಕ ದೇವಿಯ ದರ್ಶನ ಪಡೆಯುವುದು ರೂಢಿ. ಈ ಬಾರಿ ಮಳೆ ಕೊರತೆಯಾಗಿದ್ದರಿಂದ ಜಲಾಶಯದಲ್ಲಿ ನೀರು ಕಡಿಮೆ ಪ್ರಮಾಣದಲ್ಲಿದೆ. ನದಿಗೆ ನೀರು ಹರಿಸಿಲ್ಲ. ಭಕ್ತರು ಅಲ್ಲಲ್ಲಿ ನಿಂತಿದ್ದ ಕೊಳಚೆ ನೀರಿನಲ್ಲಿಯೇ ಪುಣ್ಯಸ್ನಾನ ಮಾಡಿದರು! ಕೆಲವರು ಕಾಲು ಮಾತ್ರ ತೊಳೆದುಕೊಂಡು ದೇವಿಯ ದರ್ಶನ ಪಡೆದರು.

ನೀರು ಶುಚಿಯಾಗಿಲ್ಲ: ಯಾರೂ ಸ್ನಾನ ಮಾಡಬೇಡಿ ಎಂದು ಹುಲಿಗೆಮ್ಮ ದೇವಸ್ಥಾನ ಸಮಿತಿ ಭಕ್ತರಿಗೆ ಮೊದಲೇ ತಿಳಿ ಹೇಳಿತ್ತು. ನದಿಯ ಹೋಗುವ ಮಾರ್ಗದಲ್ಲಿ ಫಲಕವನ್ನೂ ಅಳವಡಿಸಿದ್ದರೂ ಭಕ್ತರು ಮಾತ್ರ ಕೇಳಲಿಲ್ಲ. ನದಿಯಲ್ಲಿ ದೇವರ ಒಡೆದ ಫೋಟೊಗಳು, ಬಟ್ಟೆ, ಪ್ಲಾಸ್ಟಿಕ್ ತ್ಯಾಜ್ಯ, ಪೂಜೆ ಸಾಮಗ್ರಿಗಳ ಬುಟ್ಟಿ ಹೀಗೆ ಅನೇಕ ವಸ್ತುಗಳು ಬಿದ್ದಿದ್ದವು. ಅವುಗಳನ್ನೇ ಕೆಲವರು ಪಕ್ಕಕ್ಕೆ ಸರಿಸಿ ಸ್ನಾನ ಮಾಡಿದರು. ದೇವಸ್ಥಾನ ಸಮಿತಿ ಕುಡಿಯುವ ಸಲುವಾಗಿ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಿತು.

ಸಂಭ್ರಮದ ಮುತ್ತಿನ ಪಲ್ಲಕ್ಕಿ ಉತ್ಸವ

ರೇಣುಕಾ ಎಲ್ಲಮ್ಮ ಮುತ್ತಿನ ಪಲ್ಲಕ್ಕಿ ಉತ್ಸವವು ಮಂಡ್ಯ ಜಿಲ್ಲೆ ಮದ್ದೂರಿನ ಹೊಳೆ ಆಂಜನೇಯ ದೇವಾಲಯದ ಆವರಣದಿಂದ ಶನಿವಾರ ರಾತ್ರಿ ಆರಂಭಗೊಂಡಿತು

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಚಿಕ್ಕಸವದತ್ತಿ ಎಂದೇ ಪ್ರಸಿದ್ಧಿ ಪಡೆದಿರುವ ಪಟ್ಟಣದ ರೇಣುಕಾ ಎಲ್ಲಮ್ಮ ದೇವಿಯ 52ನೇ ಜಾತ್ರಾ ಮಹೋತ್ಸವ, 25ನೇ ಮಹಾಚಂಡಿಹೋಮದ ಅಂಗವಾಗಿ 'ಎಲ್ಲಮ್ಮ ತಾಯಿಯ ಮುತ್ತಿನ ಪಲ್ಲಕ್ಕಿ ಉತ್ಸವ' ಸಡಗರ-ಸಂಭ್ರಮದಿಂದ ಶನಿವಾರ ನೆರವೇರಿತು.

ರಾತ್ರಿ 8ಕ್ಕೆ ಹೊಳೆ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ, ದೇವಿಯ ಉತ್ಸವ ಮೂರ್ತಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಪಟ್ಟಣದ ಹೊಳೆಬೀದಿ, ದೊಡ್ಡಿ ಬೀದಿ, ಮೇಲಗದೊಡ್ಡಿ ಬೀದಿ, ಗಂಗಾಮತಸ್ಥ ಬೀದಿ, ಪೇಟೆಬೀದಿ ಮೂಲಕ ಮೆರವಣಿಗೆ ಸಾಗಿತು. ಪುಷ್ಪಾಲಂಕಾರ, ದೀಪಾಲಂಕಾರದಿಂದ ಪಲ್ಲಕ್ಕಿ ಭಕ್ತರ ಮನಸೂರೆಗೊಂಡಿತು. ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್‌ಸೆಟ್, ಮದ್ದೂರಮ್ಮ ಪೂಜಾ ಕುಣಿತ, ಸ್ಥಳೀಯ ಕಲಾವಿದರ ತಮಟೆ, ನಗಾರಿ, ಸೋಮ್ಮ ಕುಣಿತ, ವೀರಗಾಸೆ, ಗಾರುಡಿ ಗೊಂಬೆ, ಜಾನಪದ ನೃತ್ಯಗಳು ಗಮನಸೆಳೆದವು.

ಅಪಾರ ಭಕ್ತರ ಸಮ್ಮುಖದಲ್ಲಿ ಬೆಳಿಗ್ಗೆ 9ರಿಂದ ಮಹಾಚಂಡಿಕಾ ಹೋಮ ನಡೆಯಿತು. ನಂತರ ಪೂರ್ಣಾಹುತಿ, ಮಧ್ಯಾಹ್ನ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ಮಹಿಳೆಯರಿಂದ ತಂಬಿಟ್ಟಿನ ಆರತಿ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಶನಿವಾರ ರಾತ್ರಿಯಿಡೀ ಪಟ್ಟಣದ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸಲಾಯಿತು. ರೇಣುಕಾ ಎಲ್ಲಮ್ಮ ದೇವಿಯ ಉತ್ಸವ ಮೂರ್ತಿಯು ಭಾನುವಾರ ಬೆಳಿಗ್ಗೆ ದೇಗುಲಕ್ಕೆ ಹಿಂದಿರುಗಿದ ನಂತರ ಜಾತ್ರೆಗೆ ತೆರೆ ಬೀಳಲಿದೆ.

ಪರೀಕ್ಷಾ ಪ್ರಾಧಿಕಾರಕ್ಕೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಸ್ನಾತಕೋತ್ತರ ಪದವಿಯ ಒಂದು ಸೀಟನ್ನು ಸಂಪೂರ್ಣ ಕಾನೂನು ಬಾಹಿರವಾಗಿ ಹಂಚಿಕೆ ಮಾಡಿದ ಆರೋಪದಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಹೈಕೋರ್ಟ್ ₹1 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಡಾ.ಡಿ.ರಾಜೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲೆ ಅಕ್ಕಮಹಾದೇವಿ ಹಿರೇಮಠ ಅವರ ವಾದ ಮನ್ನಿಸಿರುವ ನ್ಯಾಯಪೀಠ, ರೆಸ್ಪರೇಟರಿ ಮೆಡಿಸಿನ್ ವಿಭಾಗದಲ್ಲಿ ಜೆ.ಪ್ರದೀಪ್ ನಾಯಕ್ ಎಂಬುವರಿಗೆ ಕಾನೂನು ಬಾಹಿರವಾಗಿ ಹಂಚಿಕೆ ಮಾಡಲಾಗಿದ್ದ ಸೀಟನ್ನು ರದ್ದುಪಡಿಸಿ ಅರ್ಜಿದಾರ ಡಾ.ರಾಜೇಶ್ ಕುಮಾರ್ ಅವರಿಗೆ ಹಂಚಿಕೆ ಮಾಡುವಂತೆ ನಿರ್ದೇಶಿಸಿದೆ. ಈ ಸಂಬಂಧ ಮುಂದಿನ ಎರಡು ವಾರಗಳಲ್ಲಿ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶಿಸಿದೆ.

ದಂಡದ ಮೊತ್ತದಲ್ಲಿ ₹50 ಸಾವಿರವನ್ನು ಅರ್ಜಿದಾರರಿಗೆ ಹಾಗೂ ಉಳಿದ ಮೊತ್ತ ₹50 ಸಾವಿರವನ್ನು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕಚೇರಿಯಲ್ಲಿ ಪಾವತಿಸುವಂತೆ ನ್ಯಾಯಪೀಠ ಆದೇಶಿಸಿದೆ.

ಶಾಲಾ ವಿದ್ಯುತ್ ಶುಲ್ಕಕ್ಕೆ ಎಸ್‌ಎಸ್‌ಕೆ ಅನುದಾನ

ಬೆಂಗಳೂರು: ಮಾರ್ಚ್–2024ರವರೆಗಿನ ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ (ಎಸ್‌ಎಸ್‌ಕೆ) ಅನುದಾನ ಬಳಸಿಕೊಂಡು ಭರಿಸಬೇಕು ಎಂದು ಸರ್ಕಾರಿ ಶಾಲಾ–ಕಾಲೇಜುಗಳಿಗೆ ಎಸ್‌ಎಸ್‌ಕೆ ನಿರ್ದೇಶಕರು ಸೂಚಿಸಿದ್ದಾರೆ.

ಸರ್ಕಾರಿ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಏ.1ರಿಂದ ಉಚಿತ ವಿದ್ಯುತ್ ಹಾಗೂ ನೀರು ಪೂರೈಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಈಗಾಗಲೇ ಆದೇಶ ಹೊರಡಿಸಿದೆ. 2024–25ನೇ ಸಾಲಿನಿಂದ ಸರಬರಾಜು ಮಾಡುವ ವಿದ್ಯುತ್ ಹಾಗೂ ನೀರಿಗೆ ಬೇಕಾಗುವ ವಾರ್ಷಿಕ ವೆಚ್ಚದ ಪ್ರಸ್ತಾವವನ್ನು ಇಂಧನ ಹಾಗೂ ನಗರಾಭಿವೃದ್ಧಿ ಇಲಾಖೆಗಳೇ ನೇರವಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಿ, ಅಗತ್ಯ ಅನುದಾನ ಪಡೆಯಲಿವೆ.

'ಗೃಹ ವಿಜ್ಞಾನ ಪಿ.ಜಿ. ಪದವೀಧರರು ಉಪನ್ಯಾಸಕರ ಹುದ್ದೆಗೆ ಅರ್ಹರು'

ನವದೆಹಲಿ: ಗೃಹ ವಿಜ್ಞಾನದ 18 ಉಪನ್ಯಾಸಕ ಹುದ್ದೆಗಳ ನೇಮಕಾತಿಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂಕೋರ್ಟ್ ಗುರುವಾರ ಅನೂರ್ಜಿತಗೊಳಿಸಿದೆ.

ನೇಮಕಾತಿಯ ಅಧಿಸೂಚನೆಯಲ್ಲಿ ಯಾವುದೇ ವಿಷಯದ ಪರಿಣತಿಯನ್ನು ಉಲ್ಲೇಖಿಸಿಲ್ಲ ಎಂಬ ವಿಷಯವನ್ನು ಗಮನಿಸಿದ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಅರವಿಂದ ಕುಮಾರ್ ಅವರ ದ್ವಿಸದಸ್ಯ ಪೀಠ, 'ಗೃಹ ವಿಜ್ಞಾನ ಎಂಬುದು ಪದವಿ ಶಿಕ್ಷಣಕ್ಕೆ ಯುಜಿಸಿ ಮಾನ್ಯತೆ ನೀಡಿರುವ ವಿಷಯವಾಗಿದೆ. ಆದ್ದರಿಂದ, ಇದಕ್ಕೆ ಸಂಬಂಧಿಸಿದ ಯಾವುದೇ ಸ್ನಾತಕೋತ್ತರ ಪದವಿ ಹೊಂದಿರುವವರು ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ' ಎಂದು ಹೇಳಿತು.

'ಪದವಿ ಶಿಕ್ಷಣಕ್ಕೆ ಗೃಹ ವಿಜ್ಞಾನವು ಒಂದು ವಿಷಯವಾಗಿದೆ. 2023ರ ಡಿಸೆಂಬರ್‌ನಲ್ಲಿ ನಡೆದ ರಾಷ್ಟ್ರೀಯ ಅರ್ಹತಾ ಪರೀಕ್ಷೆಗಾಗಿ (ಎನ್‌ಇಟಿ) ಬಿಡುಗಡೆಗೊಂಡ ಮಾಹಿತಿ ಕೈಪಿಡಿಯಲ್ಲಿ ಯುಜಿಸಿ ವಿಷಯ ಸಂಖ್ಯೆ 12ರಲ್ಲಿ ಗೃಹ ವಿಜ್ಞಾನವನ್ನು ಒಂದು ವಿಷಯವನ್ನಾಗಿ ಪರಿಗಣಿಸಲಾಗಿದೆ. ಪದವಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಯು ಕೇವಲ ಗೃಹ ವಿಜ್ಞಾನದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಾಗಿದೆ. ನಾವು ಪುನರುಚ್ಚರಿಸುತ್ತಿದ್ದೇವೆ, ಗೃಹ ವಿಜ್ಞಾನದ ಯಾವ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪದವಿ ಪಡೆದಿದ್ದೇವೆ ಎಂಬುದು ಮುಖ್ಯವಾಗುವುದಿಲ್ಲ' ಎಂದಿತು.

'ಇಂದಿನವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನಡೆಸುವ ಗೃಹ ವಿಜ್ಞಾನದ ಪದವಿಗಳ ಉಪನ್ಯಾಸಕರನ್ನು ಒಂದೇ ಶ್ರೇಣಿ ಎಂದು ಪರಿಗಣಿಸಲಾಗುತ್ತದೆ ಮತ್ತು ಅದೇ ಆಧಾರದಲ್ಲಿ ಜಾಹೀರಾತನ್ನು ಪ್ರಕಟಿಸಲಾಗಿದೆ' ಎಂದು ಪೀಠ ಹೇಳಿತು.

ರಾಜಕೀಯ ಪಕ್ಷಕ್ಕೂ ಮಾನ ಇದೆ: ಹೈಕೋರ್ಟ್

ದೇಶದಲ್ಲೇ ಮೊದಲ ಬಾರಿಗೆ ಮಾನನಷ್ಟ ಕಾನೂನಿಗೆ ಹೊಸ ಭಾಷ್ಯ; ಬಿಜೆಪಿ ಸಲ್ಲಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ವಿರುದ್ಧ ಕಾಂಗ್ರೆಸ್ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯೊಂದನ್ನು ರದ್ದುಪಡಿಸಲು ಸ್ಪಷ್ಟವಾಗಿ ನಿರಾಕರಿಸಿರುವ ಹೈಕೋರ್ಟ್, 'ವ್ಯಕ್ತಿಗೆ ಮಾನ ಎಷ್ಟು ಮುಖ್ಯವೋ ರಾಜಕೀಯ ಪಕ್ಷಗಳಿಗೂ ಅಷ್ಟೇ ಮುಖ್ಯ' ಎಂಬ ಮಹತ್ವದ ತೀರ್ಪು ಪ್ರಕಟಿಸಿದೆ.

ಈ ಸಂಬಂಧ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ವಜಾಗೊಳಿಸಿದ್ದಾರೆ.

ದೇಶದ ಯಾವುದೇ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಈತನಕ ನೀಡದೇ ಇರುವಂತಹ ಈ ತೀರ್ಪಿನಿಂದಾಗಿ, ಇದೇ ಮೊದಲ ಬಾರಿಗೆ ರಾಜಕೀಯ ಪಕ್ಷಗಳನ್ನೂ 'ವ್ಯಕ್ತಿ' ಎಂದು ವ್ಯಾಖ್ಯಾನಿಸುವ ಮೂಲಕ ಮಾನನಷ್ಟ ಕಾನೂನಿಗೆ ಹೊಸ ಭಾಷ್ಯ ಬರೆಯಲಾಗಿದೆ.

'ರಾಜಕೀಯ ಪಕ್ಷವನ್ನು ಶಾಸನೀಯ ವ್ಯಕ್ತಿ ಎಂದು ಪರಿಗಣಿಸಲು ಆಗುವುದಿಲ್ಲ. ಯಾಕೆಂದರೆ, ಅದು ವ್ಯಕ್ತಿ ಅಲ್ಲ. ಹೀಗಾಗಿ, ರಾಜಕೀಯ ಪಕ್ಷದ ವಿರುದ್ಧ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಲು ಬರುವುದಿಲ್ಲ.

ಮುಖ್ಯಾಂಶಗಳು

- ನಕಲಿ ಮತದಾನದ ಚೀಟಿಗಳನ್ನು ತಯಾರಿಸಿದ ಆರೋಪ
- ಶಾಸಕ ರಿಜ್ವಾನ್ ಅರ್ಷದ್ ವಿರುದ್ಧದ ಪ್ರಕರಣ
- ನಳಿನ್ ಕುಮಾರ್ ಕಟೀಲ್ ಅರ್ಜಿ ವಜಾಗೊಳಿಸಿದ ಏಕಸದಸ್ಯ ನ್ಯಾಯಪೀಠ

ಸ್ವಾಭಾವಿಕವಾದ ಜೀವಂತ ವ್ಯಕ್ತಿಗೆ (ರಕ್ತ, ಮಾಂಸ ತುಂಬಿಕೊಂಡ) ಉದ್ದೇಶ, ದುರುದ್ದೇಶದ ಭಾವನೆಗಳಿರುತ್ತವೆ. ಕೃತ್ರಿಮ ವ್ಯಕ್ತಿಗಳಿಗೆ ಅದು ಇರುವುದಿಲ್ಲ' ಎಂಬ ಬಿಜೆಪಿಯ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಳ್ಳಿ ಹಾಕಿದೆ.

'ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 499 ಮತ್ತು 500ರಲ್ಲಿ 'ಯಾರೇ ಇರಲಿ' ಎಂಬ ಪದವು ಸೂಚ್ಯವಾಗಿ ಸಂಘವನ್ನೂ ವ್ಯಕ್ತಿ ಎಂದೇ ವಿಶಾಲ ಅರ್ಥದಲ್ಲಿ ಒಳಗೆಳೆದುಕೊಂಡು ಗಮನಿಸುತ್ತದೆ. ಅಂತೆಯೇ, ಸಾಮಾನ್ಯ ವ್ಯಾಖ್ಯಾನ ಅಧಿನಿಯಮ-1897ರ ಅಡಿಯಲ್ಲೂ ರಾಜಕೀಯ ಪಕ್ಷಗಳನ್ನು ಕಾನೂನು ವ್ಯಕ್ತಿ ಎಂದೇ ಅರ್ಥೈಸಲಾಗುತ್ತದೆ. ಇಂತಹ ಕಾನೂನು ವ್ಯಕ್ತಿ ಎಂಬ ಪದದ ವ್ಯಾಪ್ತಿಗೆ ಸರ್ಕಾರಗಳು, ಕಂಪನಿಗಳು, ದೈವತಗಳು, ಕಾರ್ಮಿಕ ಸಂಘಗಳು ಸೇರ್ಪಡೆಯಾಗುತ್ತವೆ' ಎಂದು ನ್ಯಾಯಪೀಠ ವಿವರಿಸಿದೆ.



ರಾಜಕೀಯ ಪಕ್ಷಗಳ ಮಾನ ಕಳೆದರೆ ಅದು ರಾಷ್ಟ್ರದ ಹಿತಾಸಕ್ತಿಗೆ ವಿರುದ್ಧವಾಗುತ್ತದೆ. ಅಷ್ಟೇ ಅಲ್ಲ, ಸಂಘ ಸಂಸ್ಥೆಗಳು ಮತ್ತು ಜನತಂತ್ರಕ್ಕೆ ಸಮಸ್ಯೆಗಳನ್ನು ತಂದೊಡ್ಡುತ್ತದೆ

ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ

'ಭಾರತದಂತಹ ರೋಮಾಂಚಕ ಪ್ರಜಾಪ್ರಭುತ್ವವು ರಾಜಕೀಯ ಪಕ್ಷಗಳು ಮತ್ತು ಚುನಾಯಿತ ಪ್ರತಿನಿಧಿಗಳ ಸಂಗಮ. ಅವುಗಳ ಪ್ರತಿನಿಧಿಗಳಂತೆಯೇ ಆಯಾ ಪಕ್ಷಗಳೂ ತಮ್ಮದೇ ಆದ ಖ್ಯಾತಿ ಮತ್ತು ಮಾನವನ್ನು ಹೊಂದಿರುತ್ತವೆ. ಇದನ್ನು ಸಮಂಜಸವಾದ ಕಾನೂನಿನ ಅಡಿಯಲ್ಲಿ ರಕ್ಷಿಸಲಾಗುತ್ತದೆ. ಆದ್ದರಿಂದ, ಮಾನನಷ್ಟದ ಅಪಕೃತ್ಯ ಅಥವಾ ಅಪರಾಧವನ್ನು ಕೇವಲ ಮೃದು ಧೋರಣೆಯಲ್ಲಿ ಪರಿಗಣಿಸಲು ಆಗುವುದಿಲ್ಲ. ಸ್ವಾಭಾವಿಕ ವ್ಯಕ್ತಿಯೊಬ್ಬನ ವಿರುದ್ಧ ಯಾವ ರೀತಿ ಕ್ರಿಮಿನಲ್ ದೂರು ದಾಖಲಿಸಬಹುದೋ ಅದೇ ರೀತಿ ರಾಜಕೀಯ ಪಕ್ಷದಂತಹ ಘಟಕಗಳನ್ನೂ ವ್ಯಕ್ತಿಯಾಗಿ ಪರಿಗಣಿಸಿ ಅವುಗಳನ್ನು ಕ್ರಿಮಿನಲ್ ಪ್ರಕ್ರಿಯೆಯಲ್ಲಿ ಆರೋಪಿ ಎಂಬುದಾಗಿ ದೂರು ದಾಖಲಿಸಬಹುದು' ಎಂದು ತಿಳಿಸಿದೆ. ಪ್ರಕರಣದಲ್ಲಿ ರಿಜ್ವಾನ್ ಅರ್ಷದ್ ಪರ ಹೈಕೋರ್ಟ್ ವಕೀಲ ಎಸ್.ಎ.ಅಹಮದ್ ವಾದ ಮಂಡಿಸಿದ್ದರು.

ಒಥೆಲೊ ನಾಟಕದ ನುಡಿ ಉದ್ಧೃತ

ಅಮೆರಿಕ, ಇಂಗ್ಲೆಂಡ್, ಸುಪ್ರಿಂ ಕೋರ್ಟ್ ತೀರ್ಪುಗಳು ಮತ್ತು ಕಾನೂನು ತಜ್ಞ ಸಾಲ್ಮಂಡ್ ಅವರ ಅಭಿಪ್ರಾಯಗಳನ್ನು ದಾಖಲಿಸಿರುವ ನ್ಯಾಯಪೀಠ, ಶೇಕ್ಸ್‌ಪಿಯರ್‌ನ ಒಥೆಲೊ ನಾಟಕದ ವಾಕ್ಯವೊಂದನ್ನು ಉದ್ಧರಿಸಿದೆ.

'ನಾವು ನಮ್ಮ ಆಸ್ತಿ, ಆಭರಣಗಳನ್ನು ಕಳೆದುಕೊಂಡರೆ ಅದೇನೂ ಅಲ್ಲ. ಆದರೆ, ಮಾನ ಹಾನಿ ಆಯಿತು ಎಂದರೆ ಎಲ್ಲವನ್ನೂ ಕಳೆದುಕೊಂಡಂತೆ. ಅಂತಹ ಮಾನ ಕಳೆದುಕೊಂಡವನು ಇದ್ದರೂ ಸಾಮಾಜಿಕವಾಗಿ ಸತ್ತಂತೆ' ಎಂದು ತೀರ್ಪಿನಲ್ಲಿ ಉಲ್ಲೇಖಿಸಿದೆ.

ಪ್ರಕರಣವೇನು?

'2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕರ್ನಾಟಕ ಬಿಜೆಪಿ ನಿರ್ವಹಣೆಯ ಟ್ವಿಟರ್ ಅಕೌಂಟ್‌ನಲ್ಲಿ ನನ್ನ ವಿರುದ್ಧ ಟ್ವೀಟ್ ಮಾಡಲಾಗಿದೆ' ಎಂಬುದು ಫಿರ್ಯಾದುದಾರರೂ ಆದ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರ ಆರೋಪ.

'ನಕಲಿ ವೋಟರ್ ಐ.ಡಿ ಕಾರ್ಡುಗಳನ್ನು ತಯಾರಿಸುವ ವೇಳೆ ಯುವ ಕಾಂಗ್ರೆಸ್ ಮುಖಂಡ ಖಲೀಲುಲ್ಲಾ ಇಬ್ರಾಹಿಂ ಸೇರಿದಂತೆ 18 ಜನರನ್ನು ಬಂಧಿಸಲಾಗಿದೆ. ಈ ಅಕ್ರಮದ ಹಿಂದೆ ಬೆಂಗಳೂರು ಕೇಂದ್ರದ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್ ಅರ್ಷದ್ ಇದ್ದಾರೆ ಎಂದು ಟ್ವೀಟ್‌ನಲ್ಲಿ ಪ್ರಕಟಿಸಲಾಗಿತ್ತು' ಎಂದು ರಿಜ್ವಾನ್ ಅರ್ಷದ್ ಅವರು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ಮಾನನಷ್ಟ ಮೊಕದ್ದಮೆಯ ಖಾಸಗಿ ದೂರು ಸಲ್ಲಿಸಿದ್ದರು. ಈ ದೂರಿನ ಸಂಜ್ಞೇಯ ಅಪರಾಧವನ್ನು ಪರಿಗಣಿಸಿ ವಿಚಾರಣಾ ನ್ಯಾಯಾಲಯ ನೋಟಿಸ್ ಜಾರಿಗೊಳಿಸಿತ್ತು. ಈ ದೂರನ್ನು ರದ್ದುಗೊಳಿಸುವಂತೆ ಕೋರಿ ನಳಿನ್ ಕುಮಾರ್ ಕಟೀಲ್ ಹೈಕೋರ್ಟ್‌ಗೆ ಈ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು.

ರಾಷ್ಟ್ರೀಯ ಏಕತಾ ಸಮಾವೇಶದಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅಭಿಮತ

'ಸಿಎಎ ಜಾರಿ ಸಂವಿಧಾನ ವಿರೋಧಿ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿಯು ಸಂವಿಧಾನ ವಿರೋಧಿ ಕ್ರಮವಾಗಿದೆ. ಈ ಕಾಯ್ದೆಯು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ವಿರುದ್ಧವಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶದಲ್ಲಿ 'ಮೂಲಭೂತ ಹಕ್ಕುಗಳು, ರಾಜನೀತಿಯ ನಿರ್ದೇಶಕ ತತ್ವಗಳು ಮತ್ತು ಪೌರತ್ವ' ಗೋಷ್ಠಿಯಲ್ಲಿ ಭಾಗವಹಿಸಿ, ಮಾತನಾಡಿದರು.

'ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆ ಚುನಾವಣೆಗೂ ಮುನ್ನವೇ ಸಿಎಎ ಜಾರಿ ಮಾಡುವುದಾಗಿ ಪ್ರಕಟಿಸಿದ್ದಾರೆ. ಸಿಎಎ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಸಂವಿಧಾನದ ಉಳಿವಿಗಾಗಿ ಇದರ ವಿರುದ್ಧ ಪ್ರತಿಭಟನೆ ಮಾಡಬೇಕಾಗಿದೆ' ಎಂದು ಹೇಳಿದರು.

'ದೇಶದಲ್ಲಿ ಆರ್ಥಿಕ ಅಸಮಾನತೆಯನ್ನು ಕಾಣಬಹುದಾಗಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ಕಾರ್ಪೊರೇಟ್ ವ್ಯಕ್ತಿಗಳ ಆಸ್ತಿಯಲ್ಲಿ ಗಣನೀಯ ಏರಿಕೆ ಕಂಡಿದೆ. ಇದೇ ವೇಳೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಮನ ಬಗ್ಗೆ, ರಾಮ ರಾಜ್ಯದ ಬಗ್ಗೆ ಮಾತುಗಳು ಕೇಳಿಬರುತ್ತಿದೆ. ಕೇವಲ ರಾಮನಿಂದ ಹೊಟ್ಟೆ ತುಂಬುವುದಿಲ್ಲ. ಪ್ರಕೃತಿ, ಜೀವನ, ಭೂಮಿ, ಕಾಡಿನಲ್ಲಿಯೇ ರಾಮನನ್ನು ನೋಡಿದವರು ನಮ್ಮ ಜನ. ಆದರೆ, ಈಗ ಕಾಯ್ದೆಗಳಿಗೆ ತಿದ್ದುಪಡಿ ತಂದು, ಅರಣ್ಯ ಭೂಮಿಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಮಾರಲಾಗುತ್ತಿದೆ. ಇದರಿಂದ ಅರಣ್ಯಗಳು ನಾಶವಾಗಿ, ಹವಾಮಾನ ವೈಪರೀತ್ಯದಂತಹ ಸಮಸ್ಯೆ ಎದುರಿಸಬೇಕಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಸಂವಿಧಾನವೇ ನಮ್ಮ ನಿಜವಾದ 'ಆಧಾರ್' ಆಗಿದೆ. ಅದಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕು. ಈ ಸಮಾವೇಶದಲ್ಲಿ ನಡೆದ ಚರ್ಚೆಗಳನ್ನು ಕರ್ನಾಟಕ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಇಲ್ಲಿನ ಚರ್ಚೆಗಳ ಆಧಾರದಲ್ಲಿ ಕ್ರಿಯಾಯೋಜನೆ ರೂಪಿಸಿ, ಅದನ್ನು ಅನುಷ್ಠಾನ ಮಾಡಬೇಕು' ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಮೇಧಾ ಪಾಟ್ಕರ್ ಮಾತನಾಡಿದರು. ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ. ಬಸವರಾಜ್, ಹರ್ಷ ಮಂದರ್, ವಕೀಲ ಸಂಜಯ್ ಆರ್ ಹೆಗ್ಡೆ ಮತ್ತು ಸಿದ್ಧಾರ್ಥ್ ವರದರಾಜನ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಹಿಂದುತ್ವದ ಹೆಸರಿನಲ್ಲಿ ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಮರು ಭಯದಲ್ಲಿ ಜೀವಿಸುತ್ತಿದ್ದಾರೆ

ಹರ್ಷ ಮಂದರ್, ಲೇಖಕ

'ಅಪರಾಧಿಗಳಂತೆ ಕಾಣುತ್ತಿರುವ ಕೇಂದ್ರ'

'ಪ್ರತಿಭಟನೆಗಳನ್ನು ಹತ್ತಿಕ್ಕುತ್ತಿರುವ ಕೇಂದ್ರ ಸರ್ಕಾರ, ರೈತ ಹೋರಾಟಗಾರರನ್ನು ಅಪರಾಧಿಗಳ ರೀತಿ ಕಾಣುತ್ತಿದೆ' ಎಂದು 'ದಿ ವೈರ್'ನ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್ ಹೇಳಿದರು.

ದೆಹಲಿ, ಪಂಜಾಬ್ ಮತ್ತು ಹರಿಯಾಣದ ಗಡಿಗಳಲ್ಲಿ ರೈತರ ಮೇಲೆ ದಾಳಿ ಮಾಡಲಾಗಿದೆ. ಅವರನ್ನು ಹತ್ತಿಕ್ಕಲು ಎಲ್ಲ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಅವರು ಒಂದೆಡೆ ಸೇರದಂತೆ ಮಾಡಲು ಇಂಟರ್ನೆಟ್ ಕಡಿತ ಮಾಡಲಾಗುತ್ತಿದೆ. ಸಾಮಾಜಿಕ ಜಾಲತಾಣ ಕಂಪನಿಗಳಿಗೂ ಮಾಹಿತಿಗಳನ್ನು ಡಿಲೀಟ್ ಮಾಡುವಂತೆ ಒತ್ತಡ ಹಾಕಲಾಗುತ್ತಿದೆ' ಎಂದರು.

'ರೈತರು ತಮ್ಮ ಹೋರಾಟಕ್ಕೆ ಸಂಬಂಧಿಸಿದಂತೆ ಹಾಕಿದ ಮಾಹಿತಿಗಳು, ವಿಡಿಯೊಗಳನ್ನು ಅಳಿಸಿ ಹಾಕಲಾಗಿದೆ. ಮಾಧ್ಯಮಗಳ ಮೇಲೂ ಹಿಡಿತ ಸಾಧಿಸಲಾಗುತ್ತಿದೆ. ಈ ಕ್ರಮಗಳ ಬಗ್ಗೆ ಕೋರ್ಟ್‌ಗಳು ಕೂಡ ಪ್ರಶ್ನಿಸುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪೋಸ್ಟ್ ಮಾಡಿದಲ್ಲಿ, ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದಲ್ಲಿ, ಹಂಚಿಕೊಂಡಲ್ಲಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ತೀರ್ಪುಗಾರರಾದ ಕುಲಕರ್ಣಿ (ಎಡದಿಂದ ಮೂರನೆಯವರು) ಅವರಿಂದ ದಿ ಪ್ರಿಂಟರ್ಸ್(ಮೈಸೂರು) ಪ್ರೈವೇಟ್ ಲಿಮಿಟೆಡ್ (ಟಿಪಿಎಂಎಲ್) ಮುದ್ರಣ ಹಾಗೂ ನಿರ್ವಹಣೆ ವಿಭಾಗದ ಮಂಗೈಯರ್ ತಿಲಗಂ, ಲೋಕನಾಥ್ ಹಾಗೂ ಬಸವರಾಜು ಅವರ ತಂಡವು ಬಹುಮಾನ ಸ್ವೀಕರಿಸಿತು

ಟಿಪಿಎಂಎಲ್ ತಂಡಕ್ಕೆ ಚಿನ್ನ

ಬೆಂಗಳೂರು: ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾ ಹಾಗೂ ದಯಾನಂದ್ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗ, ಶನಿವಾರ ಆಯೋಜಿಸಿದ್ದ ಸ್ಪರ್ಧೆಯಲ್ಲಿ ದಿ ಪ್ರಿಂಟರ್ಸ್(ಮೈಸೂರು) ಪ್ರೈವೇಟ್ ಲಿಮಿಟೆಡ್ (ಟಿಪಿಎಂಎಲ್) ಮುದ್ರಣ ಹಾಗೂ ನಿರ್ವಹಣೆ ವಿಭಾಗದ ತಂಡವು ಪಾಲ್ಗೊಂಡು ಮೂರು ವಿಭಾಗದಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿದೆ.

ಕುಮಾರಸ್ವಾಮಿ ಲೇಔಟ್‌ನ ಕಾಲೇಜಿನ ಸಭಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಪೊಕಾ ಯೊಕೆ, ಜಿಡೊಕಾ ಹಾಗೂ ಎಸ್‌ಎಂಇಡಿ ವಿಭಾಗದ ಸ್ಪರ್ಧೆಗಳಲ್ಲಿ ಬಹುಮಾನ ಬಂದಿದೆ.

ಕುಂಬಳಗೋಡು ಮುದ್ರಣ ವಿಭಾಗದ ಎಜಿಎಂ ಜಿ.ಲೋಕನಾಥ್ ಅವರ ನೇತೃತ್ವದಲ್ಲಿ ಮುದ್ರಣ ವಿಭಾಗದ ಹಿರಿಯ ವ್ಯವಸ್ಥಾಪಕಿ ಮಂಗೈಯರ್ ತಿಲಗಂ ಹಾಗೂ ವ್ಯವಸ್ಥಾಪಕ ಬಿ.ಎಸ್. ನಾಗೇಂದ್ರ, ಎಲೆಕ್ಟ್ರಿಕಲ್ ನಿರ್ವಹಣೆ ವಿಭಾಗದ ವ್ಯವಸ್ಥಾಪಕ ಎಸ್.ಎನ್. ನಾಗಭೂಷಣ್, ಹಿರಿಯ ವ್ಯವಸ್ಥಾಪಕ ಎಲ್.ಸುರೇಶ್, ಎಕ್ಸಿಕ್ಯೂಟಿವ್ ಕೆ.ಎಂ. ಬಸವರಾಜು ಹಾಗೂ ನಿರ್ವಹಣೆ ವಿಭಾಗದ ಸಹಾಯಕ ವ್ಯವಸ್ಥಾಪಕ ಪಾರ್ಥಿಬನ್ ಪದ್ಮನಾಭನ್ ಪಾಲ್ಗೊಂಡಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜುಲೈ 1ರಿಂದ ಹೊಸ ಕ್ರಿಮಿನಲ್ ಕಾನೂನು

ಒಂದನೇ ಪುಟದಿಂದ...

ಪ್ರತ್ಯೇಕತೆಯ ಘೋಷಣೆ, ಸಶಸ್ತ್ರ ಪ್ರತಿರೋಧ, ವಿಧ್ವಂಸಕ ಚಟುವಟಿಕೆ, ಪ್ರತ್ಯೇಕತಾವಾದಿ ಚಟುವಟಿಕೆ ಅಥವಾ ಸಾರ್ವಭೌಮತೆಗೆ ಅಥವಾ ಏಕತೆಗೆ ಭಂಗ ತರುವುದನ್ನು ಅಪರಾಧ ಎಂದು ಭಾರತೀಯ ನ್ಯಾಯ ಸಂಹಿತೆಯು ವರ್ಗೀಕರಿಸಿದ್ದು, ದೇಶದ್ರೋಹ ಕುರಿತ ಕಾನೂನನ್ನು ಹೊಸ ಸ್ವರೂಪದಲ್ಲಿ ಪರಿಚಯಿಸಿದೆ.

ಸದ್ಯ ಸೆಕ್ಷನ್ 106 (2) ಜಾರಿಯಿಲ್ಲ: ಟ್ರಕ್ ಮಾಲೀಕರ ಪ್ರತಿಭಟನೆಯ ಹಿನ್ನೆಲೆಯಲ್ಲಿ 'ಹಿಟ್ ಆ್ಯಂಡ್ ರನ್' ಪ್ರಕರಣಗಳಿಗೆ ಸಂಬಂಧಿಸಿದ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 106 (2) ಅನ್ನು ಜಾರಿಗೊಳಿಸುವ ನಿರ್ಣಯವನ್ನು ಮಾತ್ರ ಸದ್ಯ ತಡೆಹಿಡಿಯಲು ನಿರ್ಧರಿಸಲಾಗಿದೆ.

ವೇಗ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡಿ ಸಾವಿಗೆ ಕಾರಣವಾಗುವುದರ ಜತೆಗೆ ಪರಾರಿಯಾಗುವ ಟ್ರಕ್ ಚಾಲಕರಿಗೆ 10 ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಭಾರತೀಯ ನ್ಯಾಯ ಸಂಹಿತೆಯ 106 (2) ಸೆಕ್ಷನ್ ವಿರುದ್ಧ ಟ್ರಕ್ ಮಾಲೀಕರು ಮತ್ತು ಚಾಲಕರು ಪ್ರತಿಭಟನೆ ನಡೆಸಿದ್ದರು. ಕೇಂದ್ರ ಗೃಹ ಇಲಾಖೆಯ ಕಾರ್ಯದರ್ಶಿ ಅಜಯ್ ಭಲ್ಲಾ, ಸೆಕ್ಷನ್ ಅವರು 106 (2) ಜಾರಿ ಸಂಬಂಧ ಅಖಿಲ ಭಾರತೀಯ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ ಅನ್ನು ಸಂಪರ್ಕಿಸಿದ ನಂತರವೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದರು.

ಸೀಟು ಹಂಚಿಕೆ ಅಂತಿಮ

ಒಂದನೇ ಪುಟದಿಂದ...

ಎಎಪಿ ಈ ಹಿಂದೆ ಬೆನೌಲಿಮ್ ಶಾಸಕ ವೆಂಜಿ ವೆಗಾಸ್ ಅವರನ್ನು ದಕ್ಷಿಣ ಗೋವಾ ಕ್ಷೇತ್ರಕ್ಕೆ ತನ್ನ ಅಭ್ಯರ್ಥಿಯನ್ನಾಗಿ ಘೋಷಿಸಿತ್ತು. ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶದಲ್ಲಿ ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಈಗಾಗಲೇ ಪೂರ್ಣಗೊಂಡಿದೆ. ಎಎಪಿ ಮನವೊಲಿಸಿ ಮೈತ್ರಿ ಮಾಡಿಕೊಳ್ಳುವಲ್ಲಿ 'ಕೈ' ಪಾಳಯ ಯಶಸ್ವಿಯಾಗಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮುನಿಸು ಶಮನ ಮಾಡಿ ಸೀಟು ಹಂಚಿಕೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸುವುದು ಕಾಂಗ್ರೆಸ್ ಮುಂದಿರುವ ಪ್ರಮುಖ ಸವಾಲು. ಮಮತಾ ಜತೆಗಿನ ಸಂಧಾನ ಪ್ರಕ್ರಿಯೆಯನ್ನು ಪಕ್ಷ ಆರಂಭಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಮುಕುಲ್ ವಾಸ್ನಿಕ್, 'ನವದೆಹಲಿ, ಪಶ್ಚಿಮ ದೆಹಲಿ, ದಕ್ಷಿಣ ದೆಹಲಿ ಮತ್ತು ಪೂರ್ವ ದೆಹಲಿ ಕ್ಷೇತ್ರಗಳಲ್ಲಿ ಎಎಪಿ ಹಾಗೂ ಚಾಂದಿನಿ ಚೌಕ್, ಈಶಾನ್ಯ ದೆಹಲಿ ಮತ್ತು ವಾಯವ್ಯ ದೆಹಲಿ ಸ್ಥಾನಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದೆ' ಎಂದು ಘೋಷಿಸಿದರು. ಪತ್ರಿಕಾಗೋಷ್ಠಿಯಲ್ಲಿ ಎಎಪಿಯ ಸಂದೀಪ್ ಪಾಠಕ್, ಅತಿಶಿ ಮತ್ತು ಸೌರಭ್ ಭಾರದ್ವಾಜ್, ಕಾಂಗ್ರೆಸ್‌ನ ದೀಪಕ್ ಬಬಾರಿಯಾ ಮತ್ತು ಅರವಿಂದರ್ ಸಿಂಗ್ ಲವ್ಲಿ ಇದ್ದರು. 2014 ಮತ್ತು 2019 ರ ಚುನಾವಣೆಯಲ್ಲಿ ದೆಹಲಿಯ ಎಲ್ಲ ಏಳು ಲೋಕಸಭಾ ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. ಕಳೆದ ಚುನಾವಣೆಯಲ್ಲಿ ಪ್ರತಿ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಗಳು ಕಾಂಗ್ರೆಸ್ ಮತ್ತು ಎಎಪಿ ಅಭ್ಯರ್ಥಿಗಳಿಗಿಂತ ಹೆಚ್ಚು ಮತ ಪಡೆದಿದ್ದರು.

> **ಈ 'ನಿಷ್ಕ್ರಿಯ' ಮೈತ್ರಿಯ ಅತ್ಯಂತ ಕುತೂಹಲಕಾರಿ ಭಾಗವೆಂದರೆ ಅವರು ದೆಹಲಿಯಲ್ಲಿ ಒಟ್ಟಿಗೆ ಇರುತ್ತಾರೆ, ಪಂಜಾಬ್‌ನಲ್ಲಿ ಪರಸ್ಪರ ವಿರುದ್ಧವಾಗಿ ಸೆಣಸುತ್ತಾರೆ. ಈ ವಕ್ರ ಮೈತ್ರಿಯಿಂದ ಅವರ ನರಕದ ಹಾದಿ ಸುಗಮವಾಗಿದೆ**
> **ಹರ್ದೀಪ್ ಸಿಂಗ್ ಪುರಿ,** ಕೇಂದ್ರ ಸಚಿವ

ಆರಂಭದಲ್ಲಿ, ಪೂರ್ವ ದೆಹಲಿಯನ್ನು ಬಿಟ್ಟುಕೊಡಲು ಎಎಪಿ ಮುಂದಾಗಿತ್ತು. ಆದರೆ, ಕಾಂಗ್ರೆಸ್ ಪಕ್ಷವು ಪೂರ್ವ ಮತ್ತು ಈಶಾನ್ಯ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಉತ್ಸಾಹ ತೋರಲಿಲ್ಲ. ಮಹಿಳೆ, ದಲಿತ ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಕಾಂಗ್ರೆಸ್ ಯೋಜಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಹರಿಯಾಣದಲ್ಲಿ ಒಂಬತ್ತರಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದ್ದು, ಕುರುಕ್ಷೇತ್ರದಲ್ಲಿ ಎಎಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲಿದೆ ಎಂದು ವಾಸ್ನಿಕ್ ಹೇಳಿದರು.

ಅದೇ ಸಮಯದಲ್ಲಿ, 'ವಿಶೇಷ ಸನ್ನಿವೇಶ' ಹಾಗೂ ರಾಜಕೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಪಂಜಾಬ್‌ನಲ್ಲಿ ಪರಸ್ಪರ ಹೋರಾಡಲು ಉಭಯ ಪಕ್ಷಗಳು ತೀರ್ಮಾನಿಸಿವೆ. ಈ ರಾಜ್ಯದಲ್ಲಿ ಯಾವುದೇ ಮೈತ್ರಿ ಇರುವುದಿಲ್ಲ. ಅಸ್ಸಾಂನಲ್ಲಿ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಎಎಪಿ ಪ್ರಕಟಿಸಿದೆ.

ಪಂಜಾಬ್ ಕುರಿತ ನಿರ್ಧಾರದ ಬಗ್ಗೆ ಎಎಪಿ ನಾಯಕ ಪಾಠಕ್, 'ಜನರು ತುಂಬಾ ಬುದ್ಧಿವಂತರು ಮತ್ತು ಅವರು ಎಲ್ಲವನ್ನೂ ಅರ್ಥಮಾಡಿಕೊಳ್ಳುತ್ತಾರೆ. ಇಂಡಿಯಾ ಮೈತ್ರಿಕೂಟದ ಪ್ರಚಾರ ಕಾರ್ಯತಂತ್ರದ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚಿಸಲಾಗುವುದು' ಎಂದು ಹೇಳಿದರು.

'ಅಧಿಕಾರಿಗಳ ನಿಯೋಜನೆ ಸಲ್ಲ'

ಒಂದನೇ ಪುಟದಿಂದ...

ಸಂಸದೀಯ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಬರುವ ಅಕ್ಕಪಕ್ಕದ ಜಿಲ್ಲೆಗಳಿಗೆ ಅಧಿಕಾರಿಗಳನ್ನು ನಿಯೋಜಿಸುವ ಪ್ರಕರಣಗಳನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಿ, ಈ ಕ್ರಮ ತೆಗೆದುಕೊಂಡಿದೆ.

ಚುನಾವಣಾ ಆಯೋಗದ ನೀತಿಯ ಪ್ರಕಾರ, ತವರು ಜಿಲ್ಲೆಯಲ್ಲಿ ನಿಯೋಜನೆಗೊಂಡಿರುವ ಅಥವಾ ಮೂರು ವರ್ಷಗಳನ್ನು ಒಂದೇ ಕಡೆ ಪೂರೈಸಿರುವ ಅಧಿಕಾರಿಗಳನ್ನು ಲೋಕಸಭಾ ಅಥವಾ ವಿಧಾನಸಭಾ ಚುನಾವಣೆಗೂ ಮುನ್ನ ವರ್ಗಾವಣೆ ಮಾಡಬೇಕು. ಕೆಲ ರಾಜ್ಯಗಳು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಕಾರಣ ಈ ನೀತಿಯನ್ನು ಬಲಪಡಿಸಲಾಗಿದೆ ಎಂದು ಆಯೋಗ ಹೇಳಿದೆ.

ಎರಡು ಸಂಸದೀಯ ಕ್ಷೇತ್ರಗಳನ್ನು ಒಳಗೊಂಡಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಎಲ್ಲ ರಾಜ್ಯಗಳು, ಜಿಲ್ಲೆಯಿಂದ ಹೊರಗೆ ವರ್ಗಾವಣೆಗೊಂಡ ಅಧಿಕಾರಿಗಳನ್ನು ಅದೇ ಸಂಸದೀಯ ಕ್ಷೇತ್ರದ ವ್ಯಾಪ್ತಿಯೊಳಗೆ ನಿಯೋಜಿಸದಂತೆ ನೋಡಿಕೊಳ್ಳಬೇಕು ಎಂದು ಆಯೋಗ ನಿರ್ದೇಶಿಸಿದೆ ಎಂದು ಪ್ರಕಟಣೆ ಹೇಳಿದೆ.

ಸ್ತ್ರೀ ಸ್ವಾವಲಂಬನೆಗೆ 'ಸಂಜೀವಿನಿ'

ಸಂಜೀವಿನಿ ಸಂಘದ ಮಹಿಳೆಯರಿಗೆ ಜೇನು ಕೃಷಿ ತರಬೇತಿ ನೀಡುತ್ತಿರುವ ಅಧಿಕಾರಿಗಳು

ಒಂದನೇ ಪುಟದಿಂದ

ಆರಂಭದಲ್ಲಿ ಜಿಲ್ಲೆಯ ಪರಿಧಿಗೆ ಸೀಮಿತವಾಗಿದ್ದ ಜೇನಿನ ಸವಿ ಇದೀಗ ರಾಜ್ಯ, ದೇಶಗಳ ಗಡಿ ದಾಟಿ ವಿದೇಶಗಳಿಗೂ ತಲುಪಿದೆ.

ಹೆಬ್ರಿಯಲ್ಲಿ ಜೇನು ಸಂಸ್ಕರಣಾ ಘಟಕ ಆರಂಭಿಸಲು ಹಲವು ಕಾರಣಗಳಿವೆ. ಪಶ್ಚಿಮ ಘಟ್ಟ ಹಾಗೂ ಕರಾವಳಿಯ ಜತೆ ಬೆಸೆದಿರುವ ಪ್ರಾಕೃತಿಕ ಸೌಂದರ್ಯವನ್ನು ಹೊದ್ದು ನಿಂತಿರುವ ಹೆಬ್ರಿ ತಾಲ್ಲೂಕು ಜೇನು ಕೃಷಿಗೆ ಪೂರಕವಾದ ವಾತಾವರಣ ಇದೆ. ಈ ಭಾಗದಲ್ಲಿ ಯಥೇಚ್ಛವಾಗಿರುವ ಔಷಧೀಯ ಗುಣಗಳಿರುವ ಸಸ್ಯಗಳು ಹಾಗೂ ಮರಗಳಿದ್ದು ಗುಣಮಟ್ಟ ಹಾಗೂ ಔಷಧಯುಕ್ತ ಜೇನು ತಯಾರಿಕೆಗೆ ಪ್ರಶಸ್ತವಾದ ಸ್ಥಳವಾಗಿರುವುದರಿಂದ ಇಲ್ಲಿಯೇ ಜೇನು ಸಂಸ್ಕರಣಾ ಘಟಕ ಆರಂಭಿಸಲಾಗಿದೆ.

ಈ ಹೆಬ್ರಿ ಜೇನು ಸಂಸ್ಕರಣ ಘಟಕ ಆರಂಭವಾಗಿದ್ದು ಕುತೂಹಲಕರ. ದಶಕಗಳ ಹಿಂದೆ ಹೆಬ್ರಿ ತಾಲ್ಲೂಕಿನ ಬೆಚ್ಚಪ್ಪು ಗ್ರಾಮದಲ್ಲಿ 4 ಎಕರೆ ಸರ್ಕಾರಿ ಭೂಮಿಯನ್ನು ಜೇನುಸಾಕಾಣೆ ಮಾಡುವ ಉದ್ದೇಶದಿಂದ ಮಧುವನ ನಿರ್ಮಾಣಕ್ಕೆ ಮೀಸಲಿರಿಸಲಾಗಿತ್ತು. ಆದರೆ, ಜಾಗ ಉದ್ದೇಶಿತ ಕಾರ್ಯಕ್ಕೆ ಬಳಕೆಯಾಗಿರಲಿಲ್ಲ.

ವರ್ಷಗಳ ಹಿಂದೆ ಅಂದಿನ ಜಿಲ್ಲಾ ಪಂಚಾಯಿತಿ ಸಿಇಒ ಎಚ್. ಪ್ರಸನ್ನ ಅವರು ಗ್ರಾಮ ಪಂಚಾಯಿತಿಗಳಿಗೆ ಭೇಟಿನೀಡಿದಾಗ ಮಧುವನ ಕಣ್ಣಿಗೆ ಬಿದ್ದಿತ್ತು. ಇದೇ ಸಂದರ್ಭದಲ್ಲಿ ಸಂಜೀವಿನಿ ಸಂಘದ ಮಹಿಳೆಯರಿಗೆ ರುಡ್‌ಸೆಟ್‌ನಿಂದ ಜೇನು ಕೃಷಿ ತರಬೇತಿ ನೀಡಲಾಗುತ್ತಿತ್ತು. ತರಬೇತಿ ಪಡೆದ ಮಹಿಳೆಯರಿಗೆ ಜೇನು ಸಂಸ್ಕರಣಾ ಘಟಕ ಆರಂಭಿಸಲು ಮಧುವನವೇ ಸೂಕ್ತ ಎಂದು ನಿರ್ಧರಿಸಿದ ಸಿಇಒ ನಾಲ್ಕು ಎಕರೆ ಜಾಗವನ್ನು ಹೆಬ್ರಿ ಜೇನು ಸಂಸ್ಕರಣಾ ಘಟಕ ಆರಂಭಕ್ಕೆ ನೀಡಿದರು.

> ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
> ಪ್ರಜಾವಾಣಿ ನೋಡಿಯೊ

ಮಧುವನದಲ್ಲಿ ಪಾಳುಬಿದ್ದಿದ್ದ ಹಳೆಯ ಕಟ್ಟಡವನ್ನು ತಾಲ್ಲೂಕು ಪಂಚಾಯಿತಿ ಅನುದಾನದಲ್ಲಿ ನವೀಕರಿಸಿ ಜೇನು ಸಂಸ್ಕರಣಾ ಘಟಕವನ್ನಾಗಿ ಬದಲಾಯಿಸಲಾಯಿತು. ನರೇಗಾ ಯೋಜನೆ ಅಡಿಯಲ್ಲಿ ಜೇನು ಕೃಷಿಗೆ ಪೂರಕವಾದ ಹೂ, ಹಣ್ಣಿನ ಗಿಡಗಳನ್ನು ನೆಡಲಾಯಿತು. ಸಂಘದ ಮಹಿಳೆಯರಿಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ(ಎನ್‌ಎಲ್‌ಆರ್‌ಎಂ) ಹಾಗೂ ತೋಟಗಾರಿಕಾ ಇಲಾಖೆಯ ಅನುದಾನ ಬಳಸಿಕೊಂಡು ಹೆಚ್ಚುವರಿ ಜೇನು ಪೆಟ್ಟಿಗೆಗಳನ್ನು ವಿತರಿಸಲಾಯಿತು. ಜೇನು ಸಂಸ್ಕರಣೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಿ ಕೊಡಲಾಯಿತು.

ಮಾರುಕಟ್ಟೆಯಲ್ಲಿ ಪ್ರಸಿದ್ಧ ಜೇನಿನ ಬ್ರಾಂಡ್‌ಗಳಿಗೆ ಪೈಪೋಟಿ ನೀಡುವಂತೆ ಆಕರ್ಷಕವಾದ ಬಾಟಲ್ ಹಾಗೂ ಲೇಬಲ್‌ಗಳ ತಯಾರಿಕೆ ಜತೆಗೆ ಜೇನಿನ ಮಾರುಕಟ್ಟೆಗೆ ಅಗತ್ಯ ವ್ಯವಸ್ಥೆ ಹಾಗೂ ಆಹಾರ ಸುರಕ್ಷತಾ ಪ್ರಮಾಣ ಪತ್ರವನ್ನೂ ಕೊಡಿಸಿತು. ಜಿಲ್ಲಾ ಪಂಚಾಯಿತಿಯ ಕಾಳಜಿ, ಪ್ರೋತ್ಸಾಹ, ಬೆಂಬಲದ ಪರಿಣಾಮ 'ಹೆಬ್ರಿ ಜೇನು' ಸಂಸ್ಥೆ ಜನ್ಮತಾಳಿದ್ದು, ಕಡಿಮೆ ಅವಧಿಯಲ್ಲಿ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ.

ಹೆಬ್ರಿ ಜೇನು ತಯಾರಿಕೆಯಲ್ಲಿ ತೊಡಗಿರುವ ಮಹಿಳೆಯರ ಜೀವನ ಮಟ್ಟವೂ ಸುಧಾರಿಸಿದೆ. ಹಿಂದೆ ಮನೆ ಖರ್ಚಿಗೆ ಪತಿಯ ಎದುರು ಕೈಚಾಚುವುದು ಅನಿವಾರ್ಯವಾಗಿತ್ತು. 'ಹೆಬ್ರಿ ಜೇನು' ಘಟಕ ಆರಂಭವಾದ ಬಳಿಕ ಸ್ವಂತ ಖರ್ಚು ನಿಭಾಯಿಸುವುದರ ಜತೆಗೆ ಕುಟುಂಬದ ನಿರ್ವಹಣೆಗೂ ಹೆಗಲುಕೊಟ್ಟ ಸಮಾಧಾನ ಇದೆ ಎಂದರು ಫರಿಹಾಬಾನು.

ಮಹಿಳಾ ಸ್ವಸಹಾಯ ಸಂಘಗಳು ಎಂದರೆ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಸಾಂಬಾರ್ ಪುಡಿ ತಯಾರಿಸುವ ಕೇಂದ್ರಗಳು ಎಂಬ ಮಾತು ಚಾಲ್ತಿಯಲ್ಲಿರುವಾಗ ಜೇನು ಸಂಸ್ಕರಣಾ ಘಟಕ ಆರಂಭಿಸಿದ್ದು ಹೆಚ್ಚು ಖುಷಿ ಕೊಟ್ಟಿದೆ. ಮಾರುಕಟ್ಟೆಯ ತಂತ್ರ, ಕೌಶಲಗಳನ್ನು ಕಲಿತಿದ್ದೇವೆ. ಮುಖ್ಯವಾಗಿ ಮಹಿಳೆ ಸ್ವತಂತ್ರವಾಗಿ ಬದುಕಬಲ್ಲಳು ಎಂಬ ಆತ್ಮವಿಶ್ವಾಸ ಹೆಚ್ಚಾಗಿದೆ ಎಂದರು ಅವರು.

ಹಡಿಲು ಭೂಮಿ ಕೃಷಿ ಅಭಿಯಾನ: 'ಹೆಬ್ರಿ ಹನಿ' ಸಂಸ್ಥೆ ಹುಟ್ಟುಹಾಕಿದ ಸಂಜೀವಿನಿ ಸಂಘದ ಮಹಿಳೆಯರು ಹಡಿಲು (ಪಾಳು) ಭೂಮಿ ಕೃಷಿ ಅಭಿಯಾನದ ಮೂಲಕವೂ ಗಮನ ಸೆಳೆದಿದ್ದಾರೆ. ಈ ಹಡಿಲುಭೂಮಿ ಅಭಿಯಾನ ಹುಟ್ಟಿಕೊಂಡಿದ್ದು ಕುತೂಹಲಕರ ಸನ್ನಿವೇಶದಲ್ಲಿ. ಜಿಲ್ಲೆಯಲ್ಲಿ ಕೂಲಿ ಕಾರ್ಮಿಕರ ಅಲಭ್ಯತೆ, ಸಣ್ಣ ಹಿಡುವಳಿಗಳ ಪ್ರಮಾಣ ಹೆಚ್ಚಳ, ಆರ್ಥಿಕ ನಷ್ಟದ ಪರಿಣಾಮ ರೈತರು ಭತ್ತದ ಕೃಷಿಯಿಂದ ವಿಮುಖರಾಗುತ್ತಿದ್ದರು.

ಉಡುಪಿ ಜಿಲ್ಲೆಯಲ್ಲಿ ಹಡಿಲುಭೂಮಿ ಕೃಷಿಯ ವಿವರ

ತಾಲ್ಲೂಕು	ನಾಟಿ ಭೂಮಿ	ಬೆಳೆದ ಭತ್ತ	ಸ್ವಂತಕ್ಕೆ ಬಳಕೆ	ಮಾರಾಟ
ಉಡುಪಿ	121	831	416	20
ಕಾರ್ಕಳ	210	1,284	549	13
ಹೆಬ್ರಿ	96	416	224	6
ಕುಂದಾಪುರ	121	472	362	118
ಬ್ರಹ್ಮಾವರ	185	1,303	444	80
ಕಾಪು	141	80	58	10
ಬೈಂದೂರು	26	80	58	10

4,466 ಕ್ವಿಂಟಲ್ ಬೆಳೆದ ಭತ್ತದ ಪ್ರಮಾಣ

2,111 ಕ್ವಿಂಟಲ್ ಸ್ವಂತ ಬಳಕೆಗೆ ಬಳಕೆಯಾದ ಅಕ್ಕಿಯ ಪ್ರಮಾಣ

257 ಕ್ವಿಂಟಲ್ ಮಾರಾಟವಾದ ಅಕ್ಕಿಯ ಪ್ರಮಾಣ

900 ಎಕರೆ ಜಿಲ್ಲೆಯಲ್ಲಿ ಹಡಿಲುಭೂಮಿ ಕೃಷಿಯ ಪ್ರಮಾಣ

ಮಾರುಕಟ್ಟೆಗೆ ಬಿಡುಗಡೆಯಾಗಿರುವ ಉಡುಪಿ ಸಂಜೀವಿನಿ ಕಜೆ ಅಕ್ಕಿ

ಯುವಕರು ಕೂಡ ಕೃಷಿಯತ್ತ ಆಸಕ್ತಿ ತೋರದೆ ದೂರದ ನಗರಗಳಲ್ಲಿ ಬದುಕು ಕಟ್ಟಿಕೊಳ್ಳಲು ಉತ್ಸುಕತೆ ತೋರುತ್ತಿದ್ದ ಪರಿಣಾಮ ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಭತ್ತದ ಕೃಷಿ ಇಳಿಮುಖವಾಗಿತ್ತು. ಒಂದೆರಡು ದಶಕಗಳಲ್ಲಿ ಭತ್ತದ ಕೃಷಿ ಭೂಮಿಯ ಪ್ರಮಾಣ ಅರ್ಧದಷ್ಟು ಕುಸಿಯಿತು. ಪರಿಸ್ಥಿತಿ ಹೀಗೆ ಮುಂದುವರಿದರೆ ಮುಂದೊಂದು ದಿನ ಜಿಲ್ಲೆಯಲ್ಲಿ ಭತ್ತದ ಕೃಷಿಯೇ ಕಣ್ಮರೆಯಾಗಬಹುದು ಎಂಬ ಆತಂಕ ಹಡಿಲು ಭೂಮಿ ಕೃಷಿ ಅಭಿಯಾನ ಆರಂಭಕ್ಕೆ ಪ್ರೇರಣೆಯಾಯಿತು.

ಈ ಹಡಿಲುಭೂಮಿ ಅಭಿಯಾನ ಆರಂಭವಾಗಿದ್ದು ಅಂದಿನ ಜಿಲ್ಲಾ ಪಂಚಾಯಿಸಿ ಸಿಇಒ ನವೀನ್ ಭಟ್ ಅವರ ಅವಧಿಯಲ್ಲಿ. ಅಭಿಯಾನ ವೇಗ ಪಡೆದುಕೊಂಡಿದ್ದು ಹಿಂದಿನ ಸಿಇಒ ಎಚ್.ಪ್ರಸನ್ನ ಅವರ ಅವಧಿಯಲ್ಲಿ. ಕೃಷಿ ಭೂಮಿ ಹಡಿಲುಬೀಳುವುದನ್ನು ತಪ್ಪಿಸಲು ಹಡಿಲು ಭೂಮಿ ಕೃಷಿ ಅಭಿಯಾನದಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರನ್ನು ಬಳಸಿಕೊಳ್ಳಲು ನಿರ್ಧರಿಸಿದ ಜಿಲ್ಲಾ ಪಂಚಾಯಿತಿ, ಮಹಿಳೆಯರಿಗೆ ಭತ್ತದ ಕೃಷಿಯ ತರಬೇತಿ ಕೊಡಿಸಿತು.

ಬಳಿಕ ಜಿಲ್ಲೆಯಾದ್ಯಂತ ಹಡಿಲುಭೂಮಿ ಗುರುತಿಸುವ ಹೊಣೆಗಾರಿಕೆಯನ್ನು ಮಹಿಳೆಯರಿಗೆ ವಹಿಸಿತು. ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳ ಜತೆಗೂಡಿಕೊಂಡ ಮಹಿಳೆಯರು ಗ್ರಾಮೀಣ ಭಾಗಗಳಲ್ಲಿ ಹಡಿಲುಬಿದ್ದಿದ್ದ 1,050 ಎಕರೆ ಕೃಷಿ ಭೂಮಿ ಗುರುತಿಸಿದರು. ಭೂಮಾಲೀಕರ ಮನವೊಲಿಸಿ 900 ಎಕರೆಯಷ್ಟು ಭೂಮಿಯಲ್ಲಿ ಭತ್ತದ ಕೃಷಿ ಮಾಡಲಾಯಿತು.

ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿ ಸಂಜೀವಿನಿ ಸ್ವಸಹಾಯ ಸಂಘದ ಮಹಿಳೆಯರು ಜೇನು ಕೃಷಿಯಲ್ಲಿ ತೊಡಗಿರುವುದು

ಭತ್ತದ ಕೃಷಿಗೆ ಹಣದ ಸಮಸ್ಯೆ ಎದುರಾದಾಗ ಪ್ರತಿ ಎಕರೆಗೆ ಸುತ್ತುನಿಧಿಯಿಂದ ₹25,000 ಬಡ್ಡಿರಹಿತ ಸಾಲ ನೀಡಲಾಯಿತು. ಬೆಳೆದ ಭತ್ತವನ್ನು ದಲ್ಲಾಳಿಗಳಿಗೆ ಮಾರಾಟ ಮಾಡದೆ ಹಲ್ಲಿಂಗ್ ಮಾಡಿಸಿ 'ಉಡುಪಿ ಸಂಜೀವಿನಿ ಕಜೆ' ಹೆಸರಿನಲ್ಲಿ ಮಾರುಕಟ್ಟೆಗೆ ಕುಚಲಕ್ಕಿ ಬಿಡುಗಡೆ ಮಾಡಲಾಯಿತು.

ಉತ್ತಮ ಗುಣಮಟ್ಟ ಹಾಗೂ ಸ್ಪರ್ಧಾತ್ಮಕ ಬೆಲೆಯಿಂದಾಗಿ ಸಂಜೀವಿನಿ ಕಜೆ ಅಕ್ಕಿಗೆ ಬೇಡಿಕೆ ಇದ್ದು ಇದುವರೆಗೂ 257 ಕ್ವಿಂಟಲ್ ಮಾರಾಟವಾಗಿದೆ. ನಗರ ಹಾಗೂ ಗ್ರಾಮಾಂತರ ಭಾಗಗಳಲ್ಲಿರುವ ಪ್ರಮುಖ ಮಳಿಗೆಗಳು, ಗ್ರಾಮ ಪಂಚಾಯಿತಿಗಳಲ್ಲಿ ಅಕ್ಕಿ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ಹೆಚ್ಚು ಶ್ರಮ ಬೇಡುವ ಭತ್ತದ ಕೃಷಿಯನ್ನು ಮಹಿಳೆಯರು ಮಾಡಲು ಸಾಧ್ಯವೇ ಎಂಬ ಅಳುಕು ಇತ್ತು. ಗದ್ದೆ ಉಳುಮೆಯಿಂದ ಹಿಡಿದು ನಾಟಿ, ಕೊಯಿಲು, ಅಕ್ಕಿ ತಯಾರಿಕೆಯ ಹಂತದವರೆಗೂ ಮಹಿಳೆಯರು ಸಾಂಘಿಕವಾಗಿ ತೊಡಗಿಸಿಕೊಂಡಿದ್ದರಿಂದ ಆತಂಕ ದೂರವಾಯಿತು. ಭತ್ತದ ಕೃಷಿ ಹೇಳಿಕೊಳ್ಳುವಷ್ಟು ಲಾಭ ತಂದುಕೊಡಲಿಲ್ಲವಾದರೂ ಹಡಿಲುಭೂಮಿ ಕೃಷಿಯಾದ ಬಗ್ಗೆ ಸಂತೃಪ್ತಿ ಇದೆ ಎನ್ನುತ್ತಾರೆ ಅಭಿಯಾನದಲ್ಲಿ ಭಾಗವಹಿಸಿದ್ದ ಭಾರತಿ.

ಸೂಪರ್ ಮಾರ್ಕೆಟ್ ತೆರೆದ ಮಹಿಳೆಯರು: ಹಿಂದೆಲ್ಲ ಸಂಜೀವಿನಿ ಸಂಘಗಳ ಮಹಿಳೆಯರು ತಯಾರಿಸುವ ಉತ್ಪನ್ನಗಳ ಮಾರಾಟಕ್ಕೆ ಸಮರ್ಪಕ ವೇದಿಕೆ ಇರಲಿಲ್ಲ. ಅಲ್ಲಲ್ಲಿ ನಡೆಯುವ ಮಾರಾಟ ಮೇಳ, ವಸ್ತು ಪ್ರದರ್ಶನಗಳಿಗೆ ಉತ್ಪನ್ನಗಳನ್ನು ಹೊತ್ತುಕೊಂಡು ತಿರುಗಬೇಕಾದ ಅನಿವಾರ್ಯತೆ ಇತ್ತು. ಮಳಿಗೆ ಬಾಡಿಗೆ, ಕೂಲಿ, ಖರ್ಚು ಕಳೆದರೆ ಮಹಿಳೆಯರ ಕೈಯಲ್ಲಿ ಕೊನೆಗೆ ಉಳಿಯುತ್ತಿದ್ದು ಬಿಡಿಗಾಸಷ್ಟೆ.

ಈಗ ಜಿಲ್ಲೆಯಲ್ಲಿ ಸಂಜೀವಿನಿ ಸಂಘದ ಮಹಿಳೆಯರು ಉತ್ಪಾದಿಸುವ ವಸ್ತುಗಳ ಮಾರಾಟಕ್ಕೆ ಸೂಪರ್ ಮಾರ್ಕೆಟ್ ತೆರೆಯಲಾಗಿದ್ದು ಉಡುಪಿ ಹಾಗೂ ಕಾರ್ಕಳ ತಾಲ್ಲೂಕುಗಳಲ್ಲಿ ಆರಂಭಿಕ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸಂಜೀವಿನಿ ಸ್ವಸಹಾಯ ಸಂಘಗಳ ಮಹಿಳೆಯರು ತಯಾರಿಸುವ ಬಹುತೇಕ ಉತ್ಪನ್ನಗಳು ಈ ಸೂಪರ್ ಮಾರ್ಕೆಟ್‌ಗಳಲ್ಲಿ ಲಭ್ಯ.

ಉಡುಪಿಯ ತಾಲ್ಲೂಕು ಪಂಚಾಯಿತಿ ಕಟ್ಟಡದಲ್ಲಿ ಆರಂಭವಾಗಿರುವ ಜಿಲ್ಲೆಯ ಮೊದಲ ಸಂಜೀವಿನಿ ಸೂಪರ್ ಮಾರ್ಕೆಟ್ ದೊಡ್ಡ ಮಾಲ್‌ಗಳ ಪೈಪೋಟಿಯ ಮಧ್ಯೆಯೂ ಗ್ರಾಹಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಚೇರ್ಕಾಡಿಯ ಸಮೃದ್ಧಿ ಸ್ವಸಹಾಯ ಸಂಘ ಸೂಪರ್ ಮಾರ್ಕೆಟ್ ನಿರ್ವಹಣೆ ಮಾಡುತ್ತಿದ್ದು ಜಿಲ್ಲೆಯ ಎಲ್ಲ ಸಂಜೀವಿನಿ ಸಂಘಗಳ ಸದಸ್ಯರು ತಯಾರಿಸುವ ಉತ್ಪನ್ನಗಳನ್ನು ಇಲ್ಲಿ ಮಾರಾಟವಾಗುತ್ತಿವೆ.

ಗೃಹಾಲಂಕಾರ ವಸ್ತುಗಳು, ಯಕ್ಷಗಾನದ ಮುಖವಾಡಗಳು, ಕೊರಗ ಸಮುದಾಯ ತಯಾರಿಸುವ ವಿಶೇಷ ಬಿದಿರಿನ ಬುಟ್ಟಿಗಳು, ಮಹಿಳೆಯರ ಹ್ಯಾಂಡ್ ಬ್ಯಾಗ್‌ಗಳು, ಉಡುಪಿಯ ಕೈ ಮಗ್ಗದ ಸೀರೆ, ಮಣ್ಣಿನ ಮಡಕೆ, ಹೆಬ್ರಿ ಜೇನುತುಪ್ಪ, ಸಾವಯವ ಬೆಲ್ಲ, ದೇಸಿ ಗೋ ಉತ್ಪನ್ನಗಳು, ಚಿಕ್ಕಿ, ಚಕ್ಕುಲಿ, ಹಪ್ಪಳ, ಉಪ್ಪಿನಕಾಯಿ ಸೇರಿದಂತೆ 260ಕ್ಕೂ ಹೆಚ್ಚು ಉತ್ಪನ್ನಗಳು ಸೂಪರ್ ಮಾರ್ಕೆಟ್‌ನಲ್ಲಿ ಲಭ್ಯವಿದೆ.

ಸಂಜೀವಿನಿ ಸಂಘಗಳ ಮಹಿಳೆಯರು ತಯಾರಿಸುವ ಉತ್ಪನ್ನಗಳನ್ನು ಸೂಪರ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಲು ಅವಕಾಶವಿದ್ದು ಉತ್ಪನ್ನಗಳ ಬೆಲೆಯ ಶೇ 5ರಿಂದ 10ರಷ್ಟನ್ನು ನಿರ್ವಹಣಾ ವೆಚ್ಚವಾಗಿ ಕಡಿತಗೊಳಿಸಿ ಉಳಿದ ಹಣವನ್ನು ಮಹಿಳೆಯರಿಗೆ ನೀಡಲಾಗುತ್ತಿದೆ. ಮುಂದೆ ಎಲ್ಲ ತಾಲ್ಲೂಕುಗಳಲ್ಲಿ, ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಸಂಜೀವಿನಿ ಸೂಪರ್ ಮಾರ್ಕೆಟ್ ಆರಂಭಿಸುವ ಚಿಂತನೆ ಇದೆ ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಸಿಇಒ ಪ್ರತೀಕ್ ಬಾಯಲ್.

ಸೂಪರ್ ಮಾರ್ಕೆಟ್ ನಿರ್ಮಾಣಕ್ಕೆ ನಬಾರ್ಡ್ 3 ವರ್ಷಗಳ ಆರ್ಥಿಕ ನೆರವು ನೀಡುತ್ತಿದೆ. ಉತ್ಪನ್ನಗಳಿಗೆ ಬ್ರಾಂಡಿಂಗ್, ಲೇಬಲಿಂಗ್ ಸಹಿತ ಮಾರುಕಟ್ಟೆ ತಂತ್ರಗಳ ಕೌಶಲ ತರಬೇತಿಯನ್ನು ಜಿಲ್ಲಾ ಪಂಚಾಯಿತಿ ಒದಗಿಸುತ್ತಿದೆ. ಸಾವಯವ ಉತ್ಪನ್ನಗಳು, ಗೋಮಯದಿಂದ ತಯಾರಾದ ವಸ್ತುಗಳು, ಸ್ಥಳೀಯ ವಿಶೇಷ ಖಾದ್ಯಗಳಿಗೆ ಗ್ರಾಹಕರಿಂದ ಹೆಚ್ಚಿನ ಬೇಡಿಕೆ ಇದೆ.

ಆರಂಭದಲ್ಲಿ ಸಂಜೀವಿನಿ ಸಂಘದ ಮಹಿಳೆಯರು ಉತ್ಪಾದಿಸುತ್ತಿದ್ದ 30 ಉತ್ಪನ್ನಗಳು ಮಾತ್ರ ಸೂಪರ್ ಮಾರ್ಕೆಟ್‌ನಲ್ಲಿ ಇದ್ದವು. ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸದ್ಯ 200ಕ್ಕೂ ಹೆಚ್ಚು ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎನ್ನುತ್ತಾರೆ ಮಾರ್ಕೆಟ್ ಉಸ್ತುವಾರಿ ಸವಿತಾ ಶೆಣೈ.

ಉಡುಪಿ ಜಿಲ್ಲಾ ಪಂಚಾಯ್ತಿಯ ಅಧಿಕಾರಿಗಳ ಮುತುವರ್ಜಿ ಮತ್ತು ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರ ಒಳಗೊಳ್ಳುವಿಕೆಯಿಂದಾಗಿ ಹೆಬ್ರಿ ಜೇನು, ಪಾಳು ಭೂಮಿ ಕೃಷಿ ಹಾಗೂ ಸೂಪರ್ ಮಾರ್ಕೆಟ್ ಜಿಲ್ಲೆಯಲ್ಲಿ ಹೆಸರು ಮಾಡುತ್ತಿದೆ. ಸಮುದಾಯದ ಮತ್ತಷ್ಟು ಕಾಳಜಿ ಮತ್ತು ಪ್ರೋತ್ಸಾಹ ದೊರೆತರೆ ಪ್ರತಿ ಜಿಲ್ಲೆಗಳಲ್ಲೂ ಮಹಿಳಾ ಸಹಕಾರ ಸಂಘಗಳು ಇದೇ ರೀತಿ ಹೆಸರು ಮಾಡಬಹುದು.

ಹೆಬ್ರಿ ಜೇನಿನ ವಿಶೇಷ

ಹೆಬ್ರಿ ತಾಲ್ಲೂಕಿನಲ್ಲಿ ಕಸ ವಿಲೇವಾರಿ ಘಟಕ ಆರಂಭಿಸಲು ಸರ್ಕಾರಿ ಜಾಗ ಹುಡುಕುವಾಗ ಮಧುವನ ಕಣ್ಣಿಗೆ ಬಿತ್ತು. ಈ ಜಾಗವನ್ನು ಹಿಂದೆ ಜೇನು ಕೃಷಿಗೆ ಮೀಸಲಿರಿಸಿರುವ ವಿಚಾರ ತಿಳಿದು ಮೂಲ ಉದ್ದೇಶಕ್ಕೆ ಜಾಗ ಬಳಕೆಯಾಗಬೇಕು ಎಂದು ನಿರ್ಧರಿಸಿ ವನಧನ ವಿಕಾಸ ಯೋಜನೆಯಡಿಯ ಅನುದಾನ ಬಳಸಿಕೊಂಡು ಸಂಜೀವಿನಿ ಸ್ವಸಹಾಯ ಸಂಘದ ಮಹಿಳೆಯರಿಂದ 'ಹೆಬ್ರಿ ಜೇನು' ತಯಾರಿಕಾ ಘಟಕ ಆರಂಭಿಸಲಾಯಿತು.

ಹೆಬ್ರಿ ಜೇನು ಘಟಕ ಸ್ಥಾಪನೆ, ಸಂಜೀವಿನಿ ಸೂಪರ್ ಮಾರ್ಕೆಟ್‌ಗಳ ನಿರ್ಮಾಣ ಹಾಗೂ ಹಡಿಲು ಭೂಮಿ ಕೃಷಿ ಅಭಿಯಾನ ಹೆಚ್ಚು ತೃಪ್ತಿಕೊಟ್ಟ ಕಾರ್ಯಕ್ರಮಗಳು. ಸರ್ಕಾರದ ಯೋಜನೆಗಳನ್ನು ಮಹಿಳಾ ಸಬಲೀಕರಣದ ಜತೆಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಲು ಈ ಕಾರ್ಯಕ್ರಮಗಳಿಂದ ಸಾಧ್ಯವಾಯಿತು. ಹಡಿಲು ಭೂಮಿ ಕೃಷಿ ಅಭಿಯಾನ ಲಾಭದಾಯಕವಲ್ಲದಿದ್ದರೂ ಜಿಲ್ಲೆಯಲ್ಲಿ ದಶಕಗಳಿಂದ ಉಳುಮೆಯಾಗದೆ ಬಿದ್ದಿದ್ದ ಭೂಮಿ ಹಸನಾಯಿತು. ಹೊಸದಾಗಿ ಕೃಷಿ ಮಾಡಲು ಹಲವರಿಗೆ ಪ್ರೇರಣೆ ದೊರೆಯಿತು. ವಿಶೇಷವಾಗಿ ಮಹಿಳೆಯರು ಭತ್ತ ಬೆಳೆದು ಸಮಾಜಕ್ಕೆ ಮಾದರಿಯಾದರು.

ಎಚ್.ಪ್ರಸನ್ನ, ಉಡುಪಿ ಜಿಲ್ಲಾ ಪಂಚಾಯಿತಿಯ ಹಿಂದಿನ ಸಿಇಒ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 25-2-1999

- **ಬಿಹಾರ ನಿರ್ಣಯದಲ್ಲಿ ಸೋತರೂ ರಾಜೀನಾಮೆ ಇಲ್ಲ: ಬಿಜೆಪಿ**

ನವದೆಹಲಿ, ಫೆ. 24– ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಿರುವುದನ್ನು ದೃಢಪಡಿಸುವ ನಿರ್ಣಯವನ್ನು ಸಂಸತ್ತಿನಲ್ಲಿ ಬೆಂಬಲಿಸುವ ಕುರಿತಂತೆ ತೆಲುಗುದೇಶಂ ಇನ್ನೂ ಯಾವುದೇ ನಿರ್ಧಾರ ಕೈಗೊಳ್ಳದೇ ಇರುವುದರಿಂದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರದ ಭವಿಷ್ಯ ಇನ್ನೂ ಅನಿಶ್ಚಿತವಾಗಿಯೇ ಮುಂದುವರಿದಿದೆ.

ಈ ನಡುವೆ, ಬಿಹಾರ ನಿರ್ಣಯಕ್ಕೆ ಸಂಸತ್ತಿನಲ್ಲಿ ಸೋಲುಂಟಾದರೂ ಅಧಿಕಾರಕ್ಕೆ ಅಂಟಿಕೊಳ್ಳಲು ಬಿಜೆಪಿ ನೇತೃತ್ವದ ಸರ್ಕಾರ ಇಂದು ನಿರ್ಧರಿಸುವುದರೊಂದಿಗೆ ಸೋಲಿನಿಂದ ಆಗುವ ಮುಜುಗರನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದೆ.

50 ವರ್ಷಗಳ ಹಿಂದೆ

ಸೋಮವಾರ, 25-2-1974

- **'ಬಾಂಗ್ಲಾದೇಶ ಪಾಕ್ ಯುದ್ಧ ಬಂದಿಗಳ ವಿಚಾರಣೆ ನಡೆಸದು'**

ಲಾಹೋರ್, ಫೆ. 24– ಯುದ್ಧಾಪರಾಧಕ್ಕಾಗಿ 195 ಮಂದಿ ಪಾಕಿಸ್ತಾನಿ ಯುದ್ಧ ಬಂದಿಗಳ ವಿಚಾರಣೆ ನಡೆಸುವುದನ್ನು ಬಾಂಗ್ಲಾದೇಶ ಕೈ ಬಿಡುತ್ತದೆ ಎಂದು ಈಜಿಪ್ಟಿನ ಅಧ್ಯಕ್ಷ ಅನ್ವರ್ ಸಾದತ್ ಅವರು ಇಂದು ಸೂಚಿಸಿದರು.

ಇಲ್ಲಿ ನಡೆಯುತ್ತಿರುವ ಇಸ್ಲಾಮಿ ಶೃಂಗಸಭೆಯಲ್ಲಿ ಬಾಂಗ್ಲಾದೇಶದ ಪ್ರಧಾನಿ ಮುಜೀಬುರ್ ರೆಹಮಾನ್ ಅವರು ಭಾಗವಹಿಸಲನುವಾಗುವಂತೆ ಸಕಾಲದಲ್ಲಿ ತಮ್ಮ ರಾಷ್ಟ್ರದ ಪೂರ್ವ ವಿಭಾಗಕ್ಕೆ ಸ್ವತಂತ್ರ ರಾಷ್ಟ್ರದ ಮಾನ್ಯತೆ ನೀಡಿದ ಪಾಕಿಸ್ತಾನದ ಪ್ರಧಾನಿ ಭುಟ್ಟೋ ಅವರನ್ನು ಸಾದತ್ ಅವರು ಕೊಂಡಾಡಿದರು.

ದಿನ ಭವಿಷ್ಯ

ವಿದ್ವಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಫೆಬ್ರುವರಿ 25, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಪ್ರತಿಪದ್ ಗಂ. 20-36 **ನಕ್ಷತ್ರ:** ಪೂರ್ವಫಲ್ಗುನಿ ಗಂ. 25-24 **ಯೋಗ:** ಸುಕರ್ಮ ಗಂ. 14-28
ಕರಣ: ಕೌಲವ ಗಂ. 20-36, ಕುಂಭ ಮಾಸದ 12 ನೇ ದಿನ, ಮಳೆನಕ್ಷತ್ರ: ಶತಭಿಷ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-52 **ಸೂರ್ಯಾಸ್ತ:** 06-35
ಮುಸ್ಲಿಂ ದಿನಾಂಕ: 14 ಶಬನ್
ಅದೃಷ್ಟ ಸಂಖ್ಯೆ: 8, 1

ಮೇಷ: ನಿಮ್ಮ ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ ತೋರಿಬರುವುದು. ಗಣನೀಯವಾದ ಆದಾಯವಿದ್ದರೂ ಜೊತೆಯಲ್ಲಿಯೇ ಮನರಂಜನ ಬಯಕೆಯಿಂದಾಗಿ ಖರ್ಚುಗಳು ಸಂಭವಿಸಲಿದೆ.

ವೃಷಭ: ಕುಟುಂಬದ ಸಮಸ್ಯೆ ಬಗ್ಗೆ ಯೋಚಿಸಿ ತೀರ್ಮಾನಿಸುವುದರಿಂದ ಸಂಬಂಧಗಳಿಗೆ ಧಕ್ಕೆ ಉಂಟಾಗುವುದಿಲ್ಲ. ಯಂತ್ರೋಪಕರಣಗಳ ರಾಟದಿಂದ ಹೆಚ್ಚಿನ ಲಾಭ. ಮನೆಯವರ ಆರೋಗ್ಯ ಉತ್ತಮವಾಗಿರುವುದು.

ಮಿಥುನ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಹೊಸ ಅವಕಾಶಗಳು ದೊರೆಯಲಿದೆ. ಯಂತ್ರೋಪಕರಣಗಳ ವ್ಯಾಪಾರ ಮೂಲಕ ಲಾಭ ಪಡೆಯಬಹುದು. ಮನೆಯಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಇರುತ್ತದೆ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸ ಅಥವಾ ವಿವಾಹದ ವಿಚಾರವಾಗಿ ಅನಾವಶ್ಯಕವಾದ ಹಾಗೂ ಅತಿಯಾದ ಯೋಚನೆಗಳನ್ನು ಮಾಡಬೇಡಬೇಕಾಗುತ್ತದೆ. ದೂರದ ಊರಿನಲ್ಲಿ ವೃತ್ತಿ ಜೀವನವು ಆರಂಭಗೊಳ್ಳುವುದು.

ಸಿಂಹ: ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಸ್ಸು ಪರಿವರ್ತನೆ ಮಾಡುವಲ್ಲಿ ವಿಫಲರಾಗುವಿರಿ. ಪೆಟ್ರೋಲ್ ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಅಲಂಕಾರಿಕ ವಸ್ತುಗಳ ಖರೀದಿ ಆಗಲಿದೆ.

ಕನ್ಯಾ: ಖಾಸಗಿ ಬದುಕಿನ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹುರುಪು ಮೂಡಲಿದೆ. ಧರ್ಮಕಾರ್ಯಗಳಿಗೆ ಹಣ ವಿನಿಯೋಗಿಸುವಿರಿ. ಮನೋಭಿಲಾಷೆ ಪೂರೈಕೆಗೆ ವಾಮಮಾರ್ಗ ಸರಿಯಲ್ಲ.

ತುಲಾ: ಇಂದಿನ ಎಲ್ಲಾ ಸನ್ನಿವೇಶಗಳು ನಿಮಗೆ ವಿರೋಧವಾಗಿರುವುದರಿಂದ ಮನಸ್ಸಿಗೆ ನಕಾರಾತ್ಮಕ ಯೋಚನೆಗಳು ಬರಲಿವೆ. ರಹಸ್ಯ ವ್ಯಕ್ತಿಗಳಿಂದ ಸಿಗುವ ಬೆಂಬಲದಿಂದ ನಿಮ್ಮ ಕನಸುಗಳು ನನಸಾಗುವುದು.

ವೃಶ್ಚಿಕ: ನಿಮಗೆ ಅವಶ್ಯಕತೆ ಇರುವ ನಿಮ್ಮ ಸುತ್ತಮುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ. ಈ ದಿನದ ಮೊದಲ ಆದ್ಯತೆ ನಿಮ್ಮ ಕೆಲಸಗಳ ಬಗೆಗೆ ಮಾತ್ರ ಇರಲಿ. ದುಡಿಮೆ ಸಾರ್ಥಕವಾಗುವ ಕೆಲಸವನ್ನು ಮಾಡಿ.

ಧನು: ನಿಮ್ಮ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ವ್ಯವಹರಿಸುವುದರಿಂದ ಲಾಭಾಂಶ ವೃದ್ಧಿಯಾಗಲಿದೆ. ನಿಮ್ಮ ಅನಿವಾರ್ಯ ಕಾಲಕ್ಕೆ ಇಷ್ಟ ಮಿತ್ರರಿಂದ ಸಕಾಲದಲ್ಲಿ ಸಹಕಾರವು ಒದಗಿ ಬರಲಿದೆ.

ಮಕರ: ಕೆಲವು ವಿಷಯಗಳಲ್ಲಿ ಇತರರ ಸಲಹೆ ಪಡೆಯುವುದು ಅಥವಾ ಕೊನೇಪಕ್ಷ ಕಾಲಾವಕಾಶವನ್ನು ತೆಗೆದುಕೊಂಡು ಯೋಚಿಸಿ ಉತ್ತರ ನೀಡುವುದು ಉತ್ತಮ. ಬಿಳಿ ಬಣ್ಣ ಇಂದು ಶುಭಪ್ರದವಾಗಿರುತ್ತದೆ.

ಕುಂಭ: ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನ ಸಾರ್ಥಕವಾಗುತ್ತದೆ. ಮುದ್ರಣ ವೃತ್ತಿಯವರಿಗೆ ಉತ್ತಮ ಬೇಡಿಕೆ ಪ್ರಾಪ್ತಿಯಾಗುವುದು. ಕೆಲಸಗಳೆಲ್ಲವೂ ತನ್ನಷ್ಟಕ್ಕೆ ತಾನೆಗಿಯೇ ಪೂರ್ಣಗೊಳ್ಳುವವು.

ಮೀನ: ಅನವಶ್ಯಕವಾದ ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ತ್ವರಿತವಾಗಿ ಪೂರ್ತಿ ಮಾಡುವಿರಿ. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯಗಳಿಕೆ ಆಗಲಿದೆ. ದೃಢ ನಿರ್ಧಾರ ಕೈಗೊಳ್ಳಲು ಹಿಂಜರಿಕೆ ಬೇಡ.

ಪದಬಂಧ 5602 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಅಮೋನಿಯಾ ಮತ್ತು ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
5.ಸರೀಕರೆದುರು ಧರಿಸಿಕೊಂಡಿರುವ ಕಂಠಾಭರಣ (3)
7.ಏರುತಗ್ಗಿಲ್ಲದಿರುವುದು (3)
9.ಜೂಜಿನಲ್ಲಿ ಒಡ್ಡುವ ಪಣ (3)
10.ಆನೆ ನಡೆಸುವವನು (3)
11.ಅಂತರಂಗದಲ್ಲಿರುವ ಅಲೆ (3)
12.ಮರದೊಳಗೆ ಸವಿಯಾದುದು ಬಂದಿದೆ (3)
14.ಪ್ರಾಧಿಕಾರದ ಸುತ್ತವಿರುವ ಪೌಳಿ (3)
15.ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ
1.ಅದೇ ತಾನೆ ಬಿರಿದ ಹೂವು (4)
2.ತಲೆಗೂದಲನ್ನು ತೆಗೆಯುವುದು (2)
3.ಪಣ ಹೂಡಿ ತೋರಿದ ಅಳತೆ (4)
6.ತಮ್ಮನಿಗೆ ಈ ತರಹ ಬೇಧಭಾವವೇ? (4)
8.ಗಮ ಗಮ ಎನ್ನುತ್ತಲೇ ಸೇರುವಿಕೆ! (4)
11.ತರತರದ ಕಾಯಿಪಲ್ಲೆ (4)
13.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
15. ವಿರಕ್ತನ ಮೈಯಲ್ಲಿ ಹರಿಯುತ್ತಿರುವ ನೆತ್ತರು (2)



5601ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಕಾಗೆಬಂಗಾರ
4.ಕಡಿವಾಣ 6.ರುದ್ರಭೂಮಿ
8.ಹಾವುಗೆ 9.ಅಜ್ಞಾನಿ
11.ಸಮಂಜಸ 13.ಮಧುಕರ
15.ಸಮೂಹಗಾನ 16.ಗಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ಕಾರಣ
3.ಬಂಜರು 5.ಡಿಕಾವು
7.ಮಿಸುನಿ 8.ಹಾಯಸ
10.ಜ್ಞಾಪಕ 12.ಸನಿಹ
13.ಮನನ 14.ರಮಣಿ

ಸುಡೊಕು 5987

	7				3		8	1
		3		8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5986 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಬಸ್‌ಗಳಲ್ಲಿ ಸೀಟ್ ಬೆಲ್ಟ್ ಕಡ್ಡಾಯಗೊಳಿಸಿ

ನವದೆಹಲಿ (ಪಿಟಿಐ): ಬಸ್‌ಗಳು ಸೇರಿದಂತೆ ಭಾರಿ ವಾಹನಗಳಲ್ಲಿ ಸೀಟ್ ಬೆಲ್ಟ್‌ಗಳನ್ನು ಕಡ್ಡಾಯವಾಗಿ ಬಳಸುವಂತೆ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವನ್ನು ಜಾಗತಿಕ ರಸ್ತೆ ಸುರಕ್ಷತಾ ಸಂಸ್ಥೆಯಾದ 'ಇಂಟರ್ ನ್ಯಾಷನಲ್ ರೋಡ್ ಫೆಡರೇಶನ್' (ಐಆರ್‌ಎಫ್) ಒತ್ತಾಯಿಸಿದೆ.

ಐಆರ್‌ಎಫ್ ಅಧ್ಯಕ್ಷ ಕೆ.ಕೆ. ಕಪಿಲ ಅವರು ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ಬಸ್‌ಗಳಲ್ಲಿ ಸೀಟ್ ಬೆಲ್ಟ್‌ಗಳನ್ನು ಒದಗಿಸುವ ತುರ್ತು ಅಗತ್ಯವಿದ್ದು, ಅದನ್ನು ಕಡ್ಡಾಯಗೊಳಿಸಬೇಕಾಗಿದೆ. ರಸ್ತೆ ಅಪಘಾತಗಳಲ್ಲಿ ಸಾವು ನೋವುಗಳು ಮತ್ತು ಗಾಯಗಳನ್ನು ಕಡಿಮೆ ಮಾಡಲು ಈ ಕ್ರಮ ಅಗತ್ಯವಾಗಿದೆ. ಬಸ್ ಅಪಘಾತಗಳಿಂದಾಗಿ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಒಂದು ವೇಳೆ ಸೀಟ್ ಬೆಲ್ಟ್ ಧರಿಸಿದ್ದರೆ ಅವರಲ್ಲಿ ಅನೇಕರನ್ನು ಉಳಿಸಬಹುದಾಗಿತ್ತು ಎಂದು ಹೇಳಿದ್ದಾರೆ.

ಕಟ್ಟುನಿಟ್ಟಾದ ಸುರಕ್ಷತಾ ಮಾನದಂಡಗಳೊಂದಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಗಮನಾರ್ಹ ಫಲಿತಾಂಶಗಳನ್ನು ಸಾಧಿಸಿದ್ದು, ಇದರಿಂದಾಗಿ ಇಲ್ಲಿ ಅಪಘಾತಗಳ ಸಂಖ್ಯೆ ಕಡಿಮೆ ಆಗಿದೆ. ಆದರೆ, ಭಾರತದಲ್ಲಿನ ಅಂಕಿ ಅಂಶವು ಬಸ್‌ಗಳಲ್ಲಿ ಸುರಕ್ಷತಾ ಮಾನದಂಡಗಳನ್ನು ಕಡ್ಡಾಯಗೊಳಿಸುವಲ್ಲಿ ಲೋಪವನ್ನು ಸೂಚಿಸುತ್ತದೆ ಎಂದು ತಿಳಿಸಿದ್ದಾರೆ.

ಉಬರ್ ಗ್ಲೋಬಲ್ ಸಿಇಒ, ಅದಾನಿ ಭೇಟಿ

ನವದೆಹಲಿ (ಪಿಟಿಐ): ಭಾರತಕ್ಕೆ ಭೇಟಿ ನೀಡಿರುವ ಉಬರ್ ಗ್ಲೋಬಲ್ ಸಿಇಒ ಡಾರಾ ಖೋಸ್ರೋಶಾಹಿ ಅವರನ್ನು ಉದ್ಯಮಿ ಗೌತಮ್ ಅದಾನಿ ಭೇಟಿ ಮಾಡಿದ್ದು, ಉಬರ್ ಜೊತೆಗೆ ಭವಿಷ್ಯದಲ್ಲಿನ ಸಹಯೋಗದ ಬಗ್ಗೆ ಸುಳಿವು ನೀಡಿದ್ದಾರೆ.

'ಭಾರತದಲ್ಲಿ ಉಬರ್‌ನ ವಿಸ್ತರಣೆಗಾಗಿ ಡಾರಾ ಅವರ ದೃಷ್ಟಿಕೋನವು ನಿಜಕ್ಕೂ ಸ್ಫೂರ್ತಿದಾಯಕವಾಗಿದೆ. ಭಾರತೀಯ ಚಾಲಕರು , ಅವರ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರಿಗೆ ಬದ್ಧತೆ ಇದೆ. ಡಾರಾ ಮತ್ತು ಅವರ ತಂಡದೊಂದಿಗೆ ಭವಿಷ್ಯದಲ್ಲಿನ ಸಹಯೋಗಕ್ಕಾಗಿ ಉತ್ಸುಕರಾಗಿದ್ದೇವೆ' ಎಂದು ಅದಾನಿ ಎಕ್ಸ್‌ನಲ್ಲಿ ಹೇಳಿದ್ದಾರೆ.

ಮುಂದಿನ 5 ವರ್ಷಗಳಲ್ಲಿ ಹೂಡಿಕೆ • 500 ಗೋದಾಮು ನಿರ್ಮಾಣಕ್ಕೆ ಪ್ರಧಾನಿ ಚಾಲನೆ

ಗೋದಾಮು: ₹1.25 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ವಿವಿಧ ರಾಜ್ಯಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿ ವ್ಯಾಪ್ತಿಯಲ್ಲಿ ಗೋದಾಮು ಸೌಲಭ್ಯ ಅಭಿವೃದ್ಧಿಪಡಿಸುವ ಸುಮಾರು ₹1.25 ಲಕ್ಷ ಕೋಟಿ ಹೂಡಿಕೆಯ ಬೃಹತ್ ಆಹಾರ ದಾಸ್ತಾನು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು.

ವಿವಿಧ ರಾಜ್ಯಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿಗಳ ವ್ಯಾಪ್ತಿಯಲ್ಲಿ ನಿರ್ಮಿಸಿರುವ 11 ಗೋದಾಮುಗಳನ್ನು ಉದ್ಘಾಟಿಸಿದರು. ವಿವಿಧ ರಾಜ್ಯಗಳಲ್ಲಿ ಸುಮಾರು 500 ಗೋದಾಮುಗಳ ನಿರ್ಮಾಣ ಕಾಮಗಾರಿಗೂ ಇದೇ ಸಂದರ್ಭದಲ್ಲಿ ಚಾಲನೆ ನೀಡಿದರು.

ಈ ಯೋಜನೆಯಡಿ ಒಟ್ಟು 700 ಲಕ್ಷ ಟನ್ ಪಡಿತರ ದಾಸ್ತಾನು ಸಾಮರ್ಥ್ಯ ಸೃಷ್ಟಿಸುವ ಗುರಿ ಇದೆ. ಮುಂದಿನ ಐದು ವರ್ಷಗಳಲ್ಲಿ ₹1.25 ಲಕ್ಷ ಕೋಟಿ ಹೂಡಿಕೆ ಆಗಲಿದ್ದು, ಸಾವಿರಾರು ಗೋದಾಮುಗಳು ನಿರ್ಮಾಣವಾಗಲಿವೆ ಎಂದು ಪ್ರಧಾನಿ ಪ್ರಕಟಿಸಿದರು.

ಪಡಿತರ ದಾಸ್ತಾನಿಗೆ ಅಗತ್ಯ ಸೌಲಭ್ಯವಿಲ್ಲದ ಕಾರಣಕ್ಕೆ ರೈತರು ದೊಡ್ಡ ಪ್ರಮಾಣದ ನಷ್ಟ ಅನುಭವಿಸುತ್ತಿದ್ದರು. ಈ ಹಿಂದೆ ಆಳಿದ ಸರ್ಕಾರಗಳು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಯತ್ನಿಸಲಿಲ್ಲ ಎಂದು ಮೋದಿ ಟೀಕಿಸಿದರು.

ನರೇಂದ್ರ ಮೋದಿ

ಬೃಹತ್ ದಾಸ್ತಾನು ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದರಿಂದ ಕೃಷಿಕರು ತಮ್ಮ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡುವ, ಅದಕ್ಕೆ ಪ್ರತಿಯಾಗಿ ಸಾಲ ಪಡೆಯಲು ಅವಕಾಶವಿದೆ. ಕೃಷಿ ಬೆಳೆಗಳಿಗೆ ಉತ್ತಮ ಬೆಲೆ ಬಂದಾಗ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬಹುದು ಎಂದರು.

ರಫ್ತು ಪ್ರಮಾಣ ಕುಗ್ಗಿಸಿ: ದ್ವಿದಳ ಧಾನ್ಯಗಳು, ಅಡುಗೆ ಎಣ್ಣೆ ಹಾಗೂ ರಸಗೊಬ್ಬರಗಳು ಒಳಗೊಂಡಂತೆ ಪಡಿತರದ ಆಮದು ಪ್ರಮಾಣವನ್ನು ತಗ್ಗಿಸಲು ಕ್ರಮವಹಿಸಬೇಕು ಎಂದು ಇದೇ ಸಂದರ್ಭದಲ್ಲಿ ಸಹಕಾರ ಸಂಘಟನೆಗಳಿಗೆ ಸಲಹೆ ನೀಡಿದರು.

'ಸಹಕಾರದಿಂದ ಸಮೃದ್ಧಿ' ಚಿಂತನೆಯಡಿ ಕಳೆದ 10 ವರ್ಷಗಳಲ್ಲಿ ಸಹಕಾರ ವಲಯದ ಪ್ರಗತಿಗೆ ಕೈಗೊಂಡ ವಿವಿಧ ಕ್ರಮಗಳನ್ನು ಉಲ್ಲೇಖಿಸಿದರು. ವಿಶೇಷವಾಗಿ ಸಹಕಾರ ವಲಯಕ್ಕೆ ಸಚಿವಾಲಯವನ್ನು ಸೃಷ್ಟಿಸಲಾಗಿದೆ ಎಂದು ತಿಳಿಸಿದರು.

18 ಸಾವಿರ ಪಿಎಸಿಎಸ್‌ಗಳ ಗಣಕೀಕರಣ: ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿಗಳನ್ನು (ಪಿಎಸಿಎಸ್) ಗಣಕೀಕರಣಗೊಳಿಸಲಾಗುತ್ತಿದೆ. ಪ್ರಗತಿಗೆ ಪೂರಕವಾಗಿ ಬಹುರಾಜ್ಯ ಸಹಕಾರ ಸೊಸೈಟಿಗಳ ಕಾಯ್ದೆಗೂ ತಿದ್ದುಪಡಿ ತರಲಾಗಿದೆ ಎಂದು ಹೇಳಿದರು.

ದೇಶಾದ್ಯಂತ ಒಟ್ಟು 18,000 ಪಿಎಸಿಎಸ್‌ಗಳ ಗಣಕೀಕರಣಗೊಳಿಸುವ ಉದ್ದೇಶದ ಯೋಜನೆಗೂ ಅವರು ಚಾಲನೆ ನೀಡಿದರು. ಸಣ್ಣ ರೈತರು ಉದ್ಯಮಿಗಳಾಗಲು, ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ಅನುವಾಗುವಂತೆ ಕೃಷಿ ಉತ್ಪಾದಕ ಸಂಘಟನೆಗಳನ್ನು (ಎಫ್‌ಪಿಒ) ಸ್ಥಾಪಿಸಲಾಗುತ್ತಿದೆ. ಈಗಾಗಲೇ ಇಂತಹ 8 ಸಾವಿರ ಎಫ್‌ಪಿಒಗಳು ಅಸ್ತಿತ್ವಕ್ಕೆ ಬಂದಿವೆ ಎಂದು ತಿಳಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹76
ಮೈಸೂರು	
100ಕ್ಕೆ	₹560

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1490)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹862 (858)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13900
ಎಸಿ	₹7900
ಆರ್‌ಪಿ	₹13000
ಆರ್‌ಸಿ	₹7425

ಮುಂಬೈ ಧಾರಣೆ

ಶೇಂಗಾ

24-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1500)
ಒಂದು ವಾರದ ಡೆಲಿವರಿ	1505 (1495)
ಸೋಯಾ ಕಚ್ಚಾ	900 (890)
ಪಾಮ್ ವಾರದ ಡೆಲಿವರಿ	860 (856)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,025 (61,800)
ಬೆಳ್ಳಿ ಕೆ.ಜಿ ₹69,750 (69,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-10500
ತಿಪಟೂರು	₹8000-9207

ಎಂಜಿನ್‌ನಲ್ಲಿ ದೋಷ: ವಿಮಾನದಲ್ಲಿ ಸಿಲುಕಿಕೊಂಡ ಪ್ರಯಾಣಿಕರು

ಮುಂಬೈ (ಪಿಟಿಐ): ಏರ್ ಮಾರಿಷಸ್ ವಿಮಾನದಲ್ಲಿ ಉಂಟಾದ ಎಂಜಿನ್ ದೋಷದಿಂದಾಗಿ 200 ಪ್ರಯಾಣಿಕರು 5 ಗಂಟೆ ವಿಮಾನದಲ್ಲಿಯೇ ಸಿಲುಕಿಕೊಂಡ ಘಟನೆ ಮುಂಬೈ ವಿಮಾನ ನಿಲ್ದಾಣದಲ್ಲಿ ಶನಿವಾರ ನಡೆದಿದೆ.

200 ಪ್ರಯಾಣಿಕರಿದ್ದ ಏರ್ ಮಾರಿಷಸ್ ವಿಮಾನ ಎಂ ಕೆ 749 ಮುಂಬೈನಿಂದ ಮಾರಿಷಸ್‌ಗೆ ಮುಂಜಾನೆ 4.30ಕ್ಕೆ ಹೊರಡಬೇಕಿತ್ತು. ಆದರೆ ಎಂಜಿನ್‌ನಲ್ಲಿ ಉಂಟಾದ ದೋಷದಿಂದಾಗಿ ಪ್ರಯಾಣಿಕರು ವಿಮಾನದಲ್ಲಿಯೇ ಉಳಿಯುವಂತಾಯಿತು.

ಈ ವೇಳೆ ವಿಮಾನದ ಹವಾನಿಯಂತ್ರಣ ವ್ಯವಸ್ಥೆಯು ಸರಿಯಾಗಿ ಕಾರ್ಯನಿರ್ವಹಿಸದ ಕಾರಣ 78 ವರ್ಷದ ವ್ಯಕ್ತಿಯೊಬ್ಬರು ಉಸಿರಾಟದ ಸಮಸ್ಯೆಯನ್ನು ಅನುಭವಿಸುವಂತಾಯಿತು. ಪ್ರಯಾಣಿಕರು ಹೊರಗೆ ಹೋಗಲು ಸಿಬ್ಬಂದಿ ಅನುಮತಿಸಲಿಲ್ಲ. ವಿಮಾನದ ಎಂಜಿನ್ ದೋಷ ಸರಿಪಡಿಸಲಾಗದ ಕಾರಣ, ವಿಮಾನಯಾನ ಸಂಸ್ಥೆ ಬೆಳಿಗ್ಗೆ 10 ಗಂಟೆಗೆ ವಿಮಾನ ಯಾನವನ್ನು ರದ್ದುಗೊಳಿಸಿತು ಎಂದು ಪ್ರಯಾಣಿಕರು ತಿಳಿಸಿದ್ದಾರೆ.

ಬಡವರ ವ್ಯಾಜ್ಯ ತ್ವರಿತ ಇತ್ಯರ್ಥ: ಮಸೂದೆಗೆ ರಾಷ್ಟ್ರಪತಿ ಅಂಕಿತ

ಬೆಂಗಳೂರು: ಸಣ್ಣ ರೈತರು ಮತ್ತು ಆರ್ಥಿಕವಾಗಿ ದುರ್ಬಲರಾಗಿರುವವರು ದಾಖಲಿಸಿರುವ ಅಥವಾ ಪ್ರತಿವಾದಿಗಳಾಗಿರುವ ವ್ಯಾಜ್ಯಗಳನ್ನು ದಿನದ ವಿಚಾರಣಾ ಪಟ್ಟಿಯಲ್ಲಿ ಆದ್ಯತೆ ಮೇಲೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ 'ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆ–2023'ಕ್ಕೆ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ.

ರಾಜ್ಯ ಸರ್ಕಾರ ಕಳೆದ ಜುಲೈನಲ್ಲಿ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಿತ್ತು. ಉಭಯ ಸದನಗಳು ಅನುಮೋದಿಸಿದ್ದ ಮಸೂದೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಷ್ಟ್ರಪತಿಯ ಅಂಕಿತಕ್ಕೆ ಕಳುಹಿಸಿದ್ದರು. ಫೆ. 21ರಂದು ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಹಿ ಹಾಕಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ವ್ಯಾಜ್ಯಗಳ ವಿರುದ್ಧ ಹೋರಾಡಲು ಬಲವಿಲ್ಲದ ಬಡವರು ಹಾಗೂ ಇತರ ವ್ಯಕ್ತಿಗಳನ್ನು ಒಳಗೊಂಡಿ ರುವ ಪ್ರಕರಣಗಳನ್ನು 6 ತಿಂಗಳಲ್ಲಿ ಇತ್ಯರ್ಥಪಡಿಸಲು ಈ ತಿದ್ದುಪಡಿಯು ಸಹಕಾರಿ ಆಗಲಿದೆ'.

'ಸಣ್ಣ ಅಥವಾ ಅತಿಸಣ್ಣ ರೈತರು, ಎಲ್ಲ ಮೂಲಗಳಿಂದ ಬರುವ ವಾರ್ಷಿಕ ಆದಾಯವು ₹ 50 ಸಾವಿರ ಮೀರದ, ದೀರ್ಘಕಾಲದಿಂದ ನ್ಯಾಯಾಲಯಗಳಲ್ಲಿ ಬಾಕಿ ಇರುವ ವ್ಯಾಜ್ಯದ ವಿರುದ್ಧ ಹೋರಾಡಲು ಶಕ್ತಿ ಇಲ್ಲದ ವ್ಯಕ್ತಿಗಳಿಗೆ ಸೇರಿದ ಪ್ರಕರಣಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲು ಈ ತಿದ್ದುಪಡಿ ಮೂಲಕ ಕಾಲಮಿತಿ ನಿಗದಿಪಡಿಸಲಾಗಿದೆ' ಎಂದು ತಿಳಿಸಿದರು.

'ಸಂವಿಧಾನ ವಿರೋಧಿಗಳ ಕಿತ್ತೆಸೆಯಿರಿ'

ಒಂದನೇ ಪುಟದಿಂದ

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ಮಾತನಾಡಿ, 'ಸಂವಿಧಾನ ಜಾರಿಯಾದ ಮೇಲೆ ದೇಶದಲ್ಲಿ ಸಾಕಷ್ಟು ಕೆಲಸಗಳು ನಡೆದಿವೆ. ಆದರೂ, ದೇಶವು ಆತಂಕದಲ್ಲಿದೆ. ಕೃಷಿ ಕ್ಷೇತ್ರ ಬಿಕ್ಕಟ್ಟಿನಲ್ಲಿದೆ. ಬಡತನ, ಅನಕ್ಷರತೆ, ನಿರುದ್ಯೋಗ, ಭಯೋತ್ಪಾದನೆ, ಮೂಲಭೂತವಾದ, ಅಪರಾಧೀಕರಣ, ಭ್ರಷ್ಟಾಚಾರ, ಸಾಂಸ್ಕೃತಿಕ ದಿವಾಳಿತನ ನಮ್ಮ ಮುಂದಿರುವ ಸವಾಲುಗಳು. ಈ ಸವಾಲುಗಳಿಗೆ ಸಂವಿಧಾನವೇ ಕಾರಣ ಎಂದು ಕೆಲವರು ದೂರುತ್ತಿದ್ದಾರೆ. ಜಂತರ್ ಮಂತರ್‌ನಲ್ಲಿ ಸಂವಿಧಾನದ ಪ್ರತಿಯನ್ನೇ ಸುಟ್ಟು ಹಾಕಿದ್ದರು. ಸಂವಿಧಾನದ ಅರಿವಿಲ್ಲದ ಕೆಲವರಷ್ಟೇ ಅಪವ್ಯಾಖ್ಯಾನ ಮಾಡುತ್ತಿದ್ದಾರೆ' ಎಂದರು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಮಾತನಾಡಿ, 'ಸಂವಿಧಾನದ ಆಶಯಗಳ ಗುರಿ ಮುಟ್ಟಲು ಇನ್ನೂ ಪ್ರಯತ್ನ ಅಗತ್ಯವಿದೆ. ಜ.26ರಿಂದ ಆರಂಭವಾಗಿದ್ದ ಸಂವಿಧಾನ ಜಾಗೃತಿ ಜಾಥಾ ರಾಜ್ಯದ 5,600 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಚರಿಸಿದೆ' ಎಂದು ವಿವರಿಸಿದರು.

'ಎಲ್ಲರಿಗೂ ಆರ್ಥಿಕ ನ್ಯಾಯ ಸಿಕ್ಕಿಲ್ಲ. ಸಮಸಮಾಜ ನಿರ್ಮಾಣವಾಗಿಲ್ಲ. ಅಲ್ಪಸಂಖ್ಯಾತರು, ಕೃಷಿಕರು ಬದುಕಿಗಾಗಿ ಆಕಾಶ ನೋಡುವ ಸ್ಥಿತಿಯಿದೆ' ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿ, 'ಕೇಂದ್ರ ಸರ್ಕಾರ ರಾಜ್ಯದ ಪಾಲಿನ ತೆರಿಗೆ ಹಣವನ್ನು ನೀಡದಿರುವುದೂ ಸಂವಿಧಾನ ವಿರೋಧಿ ಕೆಲಸ. ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದದ್ದು' ಎಂದು ವಿಶ್ಲೇಷಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಂವಿಧಾನ ಪೀಠಿಕೆ ಓದಿದರು.

ಸಚಿವ ಪ್ರಿಯಾಂಕ ಖರ್ಗೆ, ಬಿಜೆಪಿ ಶಾಸಕ ಎಸ್‌.ಟಿ.ಸೋಮಶೇಖರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

> **ಇಂದಿನ ರಾಜಕೀಯ ವ್ಯವಸ್ಥೆಯು ಧರ್ಮ ಹಾಗೂ ಜಾತಿಯನ್ನು ಮುಂದಿಟ್ಟುಕೊಂಡು ಸಮಾಜ ಒಡೆಯುವ ಕೆಲಸ ನಡೆಸುತ್ತಿದೆ.**
> **ಎಚ್‌.ಸಿ.ಮಹದೇವಪ್ಪ,** ಸಮಾಜ ಕಲ್ಯಾಣ ಸಚಿವ

> **ಸಂವಿಧಾನದ ಅಪವ್ಯಾಖ್ಯಾನ ಹಾಗೂ ವಿಧಿಗಳ ಅಪ್ರಸ್ತುತಗೊಳಿಸುವ ಕೆಲಸಗಳು ನಿಲ್ಲಬೇಕು. ಅಪಪ್ರಚಾರ ನಿಲ್ಲದಿದ್ದರೆ ಜನರೇ ಉತ್ತರ ಕೊಡಲಿದ್ದಾರೆ.**
> **ಎಚ್‌.ಎನ್‌.ನಾಗಮೋಹನದಾಸ್,** ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

> **ಸಂವಿಧಾನ ರದ್ದುಪಡಿಸುತ್ತೇವೆ ಎಂದು ಹೇಳಿದವರಿಗೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬುದ್ಧಿ ಕಲಿಸಬೇಕು.**
> **ವಿ.ಗೋಪಾಲಗೌಡ,** ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಪೋರನ ಸಂವಿಧಾನದ ಜ್ಞಾನ

ಸಮಾವೇಶದಲ್ಲಿ ಚಾಮರಾಜನಗರ ಜಿಲ್ಲೆಯ ಕೇಂದ್ರೀಯ ವಿದ್ಯಾಲಯದ 2ನೇ ತರಗತಿ ವಿದ್ಯಾರ್ಥಿ ತೇಜಸ್ ಚಕ್ರವರ್ತಿ ಸಂವಿಧಾನದ ಹಲವು ವಿಧಿಗಳು ಹಾಗೂ ಅವುಗಳ ವಿವರಣೆಯನ್ನು ನಿರರ್ಗಳವಾಗಿ ಹೇಳಿ ಗಮನ ಸೆಳೆದ.

ಸುಮಾರು 10 ನಿಮಿಷಗಳ ಕಾಲ ಸಂವಿಧಾನ ಕುರಿತು ಮಾತನಾಡಿದ ತೇಜಸ್‌ನ ಜ್ಞಾನಕ್ಕೆ ಪ್ರೇಕ್ಷಕರು ತಲೆಬಾಗಿದರು. ನಿವೃತ್ತ ನ್ಯಾಯಮೂರ್ತಿಗಳು, ಸಚಿವರು ಅಭಿನಂದಿಸಿದರು. ಬಳಿಕ, ಬಾಲಕನಿಗೆ ಬಹುಮಾನ ನೀಡಲಾಯಿತು.

ಐದು ಜಿಲ್ಲೆಗಳಿಗೆ ಬಹುಮಾನ

ಸಂವಿಧಾನ ಜಾಗೃತಿ ಜಾಥಾ ಜಿಲ್ಲೆಗಳಿಗೆ ಆಗಮಿಸಿದ್ದ ವೇಳೆ ಅತ್ಯುತ್ತಮ ಚಟುವಟಿಕೆ ಆಯೋಜಿಸಿದ್ದ ತುಮಕೂರು, ದಾವಣಗೆರೆ, ಮೈಸೂರು, ಕೊಡಗು, ಬಳ್ಳಾರಿ ಜಿಲ್ಲೆಗಳಿಗೆ ಬಹುಮಾನ ಹಾಗೂ ನೆನಪಿನ ಕಾಣಿಕೆ ವಿತರಿಸಲಾಯಿತು.

ರಷ್ಯಾ ವಿರುದ್ಧದ ಸಮರ; ಉಕ್ರೇನ್‌ಗೆ ಇನ್ನಷ್ಟು ಬೆಂಬಲದ ಭರವಸೆ

ಮೂರನೇ ವರ್ಷಕ್ಕೆ ಕಾಲಿಟ್ಟ ಯುದ್ಧ

ಕೀವ್, ಉಕ್ರೇನ್ (ಪಿಟಿಐ/ಎಪಿ): ಉಕ್ರೇನ್ ಮೇಲಿನ ರಷ್ಯಾ ಆಕ್ರಮಣ ಶನಿವಾರ ಎರಡು ವರ್ಷ ಪೂರೈಸಿದೆ. 2022ರ ಫೆಬ್ರುವರಿ 24ರ ಮುಂಜಾನೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ 'ವಿಶೇಷ ಸೇನಾ ಕಾರ್ಯಾಚರಣೆ' ಘೋಷಿಸಿದಾಗ ಬಹುತೇಕರು ರಷ್ಯಾ ಕೆಲವೇ ದಿನಗಳಲ್ಲಿ ಜಯ ಸಾಧಿಸಲಿದೆ ಎಂದು ಭಾವಿಸಿದ್ದರು. ಆದರೆ, ರಷ್ಯಾದ ಸೇನೆಯನ್ನು ಹಿಮ್ಮೆಟ್ಟಿಸುವ ಮೂಲಕ ಉಕ್ರೇನ್ ಸಮರ್ಥವಾಗಿ ತಿರುಗೇಟು ನೀಡಿತು.

ಕಳೆದ ಒಂದು ವರ್ಷದ ಅವಧಿಯಲ್ಲಿ ಉಕ್ರೇನ್‌ನ ಪ್ರತಿದಾಳಿಯ ಬಲ ಕುಗ್ಗಿದ್ದು, ಹಿನ್ನಡೆ ಅನುಭವಿಸುವಂತಾಗಿದೆ. ಆದರೆ ಈ ಅವಧಿಯಲ್ಲಿ ರಷ್ಯಾ ತನ್ನ ಸೇನೆಯ ಬಲವರ್ಧನೆ ಮಾಡಿಕೊಂಡಿತು. ಇದೇ ವೇಳೆ ಉಕ್ರೇನ್, ಮಾನವ ಸಂಪನ್ಮೂಲದ ಕೊರತೆ ಮತ್ತು ಪಶ್ಚಿಮದ ದೇಶಗಳಿಂದ ಪೂರೈಕೆಯಾಗುವ ಫಿರಂಗಿ ಹಾಗೂ ಇನ್ನಿತರ ಯುದ್ಧ ಸಾಮಗ್ರಿಗಳ ಕೊರತೆ ಎದುರಿಸುತ್ತಿದೆ.

ಯುದ್ಧದ ಎರಡನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ (ಬಲ) ಅವರನ್ನು ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್‌ಸ್ಕಿ ಬರಮಾಡಿಕೊಂಡರು –ಎಎಫ್‌ಪಿ ಚಿತ್ರ

ಇಷ್ಟಾದರೂ 'ಆಯುಧಗಳ ಪೂರೈಕೆ ಕುರಿತ ನಿರ್ಧಾರವು ನಮ್ಮ ಮುಖ್ಯ ಆದ್ಯತೆಯಾಗಿದೆ' ಎಂದು ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. ಈ ನಡುವೆ 'ನಿರಂಕುಶತ್ವವು ಎಂದೂ ಗೆಲ್ಲುವುದಿಲ್ಲ' ಎಂದಿರುವ ಬ್ರಿಟನ್, ಶನಿವಾರ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಬಳಕೆಗಾಗಿ ₹ 25 ಸಾವಿರ ಕೋಟಿ ನೆರವು ಘೋಷಿಸಿದೆ.

ಶನಿವಾರದ ವರ್ಷಾಚರಣೆಯಲ್ಲಿ ಭಾಗವಹಿಸಲು ಕೀವ್‌ಗೆ ಬಂದ ಯೂರೋಪಿಯನ್ ಒಕ್ಕೂಟ ಆಯೋಗದ ಮುಖ್ಯಸ್ಥೆ ಉರ್ಸುಲಾ ವೊನ್ ಡರ್ ಲೇಯೆನ್ ಉಕ್ರೇನ್‌ನ 'ಅಸಾಮಾನ್ಯ ಪ್ರತಿರೋಧ'ವನ್ನು ಶ್ಲಾಘಿಸಿದರು. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ, ಬೆಲ್ಜಿಯಂ ಪ್ರಧಾನಿ ಅಲೆಕ್ಸಾಂಡರ್ ಡಿ ಕ್ರೂ ಮತ್ತು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಉಕ್ರೇನ್‌ಗೆ ಇನ್ನಷ್ಟು ಬೆಂಬಲದ ಭರವಸೆ ನೀಡಿದರು.

ರಷ್ಯಾ ಉಕ್ಕು ಘಟಕದ ಮೇಲೆ ದಾಳಿ: ರಷ್ಯಾದ ನೊವೊಲಿಪೆಕ್ಸ್ ಉಕ್ಕು ಘಟಕದ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ ಎಂದು ಉಕ್ರೇನ್ ಮೂಲಗಳು ತಿಳಿಸಿವೆ.

> **ಸಾಮಾನ್ಯ ವ್ಯಕ್ತಿಯೊಬ್ಬ ಯುದ್ಧ ಬೇಗ ಕೊನೆಗೊಳ್ಳಲಿ ಎಂದು ಬಯಸುತ್ತಾನೆ. ಆದರೆ, ಯುದ್ಧ ನಿಲ್ಲಿಸಲು ನಾವ್ಯಾರೂ ಬಿಡುವುದಿಲ್ಲ. ಈ ಯುದ್ಧ ಗೆಲ್ಲುತ್ತೇವೆ**
> **ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

ಜಾತಿ ನಿಂದನೆ ಸುಳ್ಳು ಪ್ರಕರಣ: ₹15 ಲಕ್ಷ ದಂಡ

ಪ್ರಯಾಗ್‌ರಾಜ್ (ಪಿಟಿಐ): ಮೂವರು ಹಿರಿಯ ಸಹೋದ್ಯೋಗಿಗಳ ಮೇಲೆ ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆಯನ್ವಯ ಆಧಾರರಹಿತ ಮೊಕದ್ದಮೆ ದಾಖಲಿಸಿದ್ದ ಅಲಹಾಬಾದ್ ವಿಶ್ವವಿದ್ಯಾಲಯದ ಉಪನ್ಯಾಸಕಿಗೆ ಹೈಕೋರ್ಟ್ ₹15 ಲಕ್ಷ ದಂಡ ವಿಧಿಸಿದೆ.

ಉಪನ್ಯಾಸಕಿಯು ದಾಖಲಿಸಿದ್ದ ಎಫ್‌ಐಆರ್ ಅನ್ನು ಕೋರ್ಟ್ ವಜಾ ಮಾಡಿದೆ. ವಿದ್ಯಾವಂತೆಯಾಗಿರುವ ಉಪನ್ಯಾಸಕಿಗೆ ಸ್ಪಷ್ಟವಾಗಿ ಕಾಯ್ದೆಯ ಅರಿವಿದ್ದರೂ, ವೈಯಕ್ತಿಕ ಲಾಭಕ್ಕಾಗಿ ಅದನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಉಪನ್ಯಾಸಕರಾದ ಮನಮೋಹನ್ ಕೃಷ್ಣ, ಪ್ರಹ್ಲಾದ್ ಕುಮಾರ್ ಮತ್ತು ಜಾವೇದ್ ಅಖ್ತರ್ ಅವರು ಈ ಸಂಬಂಧ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಅವರು ಮಾನ್ಯ ಮಾಡಿದರು.

ದೂರುದಾರರಾದ ಅರ್ಥಶಾಸ್ತ್ರ ವಿಭಾಗದ ಉಪನ್ಯಾಸಕಿಯು, ವೈಯಕ್ತಿಕ ದ್ವೇಷ ಸಾಧನೆಗಾಗಿ ವಿಭಾಗದ ಮುಖ್ಯಸ್ಥರು ಮತ್ತು ಸಹೋದ್ಯೋಗಿಗಳ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿರುವ ಪ್ರಕರಣ ಇದಾಗಿದೆ ಎಂದು ವಾದ ಆಲಿಸಿದ ಕೋರ್ಟ್ ಅಭಿಪ್ರಾಯಪಟ್ಟಿತು.

ಮೂರು ಪ್ರಕರಣಗಳಲ್ಲಿ ತಲಾ ₹5 ಲಕ್ಷ ದಂಡವನ್ನು ಕೋರ್ಟ್ ವಿಧಿಸಿತು. ಮೊಕದ್ದಮೆ ದಾಖಲಿಸಿದ್ದರಿಂದ ಸಹೋದ್ಯೋಗಿಗಳ ವರ್ಚಸ್ಸಿಗೆ ಧಕ್ಕೆ ಉಂಟಾಗಿದೆ. ಅವರು ಪೊಲೀಸ್ ಠಾಣೆ, ಕೋರ್ಟ್‌ಗೆ ಅಲೆಯುವಂತಾಗಿದೆ ಎಂದು ಅಭಿಪ್ರಾಯಪಟ್ಟಿತು.

'ಸಹೋದ್ಯೋಗಿಗಳು ನನಗೆ ಅಪಮಾನ ಮಾಡಿದ್ದಾರೆ. ಜಾತಿ ಹೆಸರಿನಲ್ಲಿ ನಿಂದಿಸಿದ್ದಾರೆ' ಎಂದು ಉಪನ್ಯಾಸಕಿಯು ಆಗಸ್ಟ್ 4, 2016ರಂದು ವಿಭಾಗದ ಮುಖ್ಯಸ್ಥ ಮತ್ತು ಇತರ ಇಬ್ಬರ ವಿರುದ್ಧ ಮೊಕದ್ದಮೆ ದಾಖಲಿಸಿದ್ದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(40ಇ):2023-24:ಜೆಇ-2 ದಿನಾಂಕ: 22.02.2024
ಟೆಂಡರ್ ಪ್ರಕಟಣೆ - (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಮಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ:- 5054-04-337-0-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳು - ಸುಧಾರಣೆ ರಡಿ ಇಂಡೆಂಟ್ ನಂ.8774, ಇಂಡೆಂಟ್ ನಂ. 6878 ಮತ್ತು ಲೆಕ್ಕಶೀರ್ಷಿಕೆ:- 3054-03-337-0-05-200 ರಾಜ್ಯ ಹೆದ್ದಾರಿ ಸುಧಾರಣೆರಡಿ ಇಂಡೆಂಟ್ ನಂ. 8945 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 29.02.2024 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಕೆ.ಡಬ್ಲ್ಯೂ-3 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-
DIPR / MNG / 1430 / MPL / 23-24 ಕಾರ್ಯನಿರ್ವಾಹಕ ಇಂಜಿನಿಯರ್

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001. ದೂರವಾಣಿ ಸಂಖ್ಯೆ: 080-22113255
No: BMC/2023-24/IND 0007 Date: 23.02.2024
ಇ-ಟೆಂಡರ್ ಅಧಿಸೂಚನೆ
ಭೂಮಿ ಉಸ್ತುವಾರಿ ಕೋಶದ ಜಿಲ್ಲಾ ಭೂಮಿ ಸಮಾಲೋಚಕರಿಗೆ 42 Mobile Phones ಗಳನ್ನು ಸರಬರಾಜು ಮಾಡಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 02.03.2024 ರಂದು ಸಂಜೆ 5.30 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/- ಸಹಾಯಕ ಆಯುಕ್ತರು,
DIPR/CP/3867(1)/2023-24 ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ದೂರವಾಣಿ ಸಂಖ್ಯೆ: 080-29753354/56, ಇ-ಮೇಲ್: Karbuildworkerswelfare@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
No: KBOCWWB/ADMIN/TND/CR-11 to 13/2023-24 Dated : 22.02.2024
ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಟೆಂಡರನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವ್ಯಾಪ್ತಿಯ (1) ಬೆಂಗಳೂರು-1 ಮತ್ತು ಬೆಂಗಳೂರು-2, (2) ಬೆಳಗಾವಿ ಮತ್ತು ಹಾಸನ ಮತ್ತು (3) ಕಲಬುರಗಿ ಪ್ರಾದೇಶಿಕಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳ ಮಾನವಶಕ್ತಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು ಏಜೆನ್ಸಿಯ ಆಯ್ಕೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯುವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ-ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04-03-2024 ರಂದು ಸಂಜೆ 5.00 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/-
ಜಂಟಿ ಕಾರ್ಯದರ್ಶಿ
DIPR/CP/3844/Zen/2023-24 ಕ.ಕ&ಇ.ನಿ.ಕಾ.ಕ.ಮಂಡಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿ.ಜ.ನಿ.ನಿ, ಭ.ಮೇ.ಯೋ ವಿಭಾಗ-2, ಬಿ.ಆರ್.ಪ್ರಾಜೆಕ್ಟ್-577115
ಸಂ:ಕಾಇಂ/ವಿಜನಿನಿ/ಭಮೇಯೋ/ವಿ2/ಬಿಆರ್‌ಪಿ/ತಾಂಶಾ/2023-24/1075
ದಿನಾಂಕ: 22.02.2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಕುರಿತು ದ್ವಿ-ಲಕೋಟಿ ಪದ್ದತಿ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ-02, ಬಿ.ಆರ್.ಪ್ರಾಜೆಕ್ಟ್ ಇವರು 1 ಸಂಖ್ಯೆಯ 4701 ಎಸ್.ಸಿ.ಪಿ ಯೋಜನೆಯಡಿ ರೂ. 99.46 ಲಕ್ಷಗಳ ಕಾಮಗಾರಿಯಾದ "Improvements to CC road connecting from B N Palaiah house of Gopal village to Karakuchi main road of Tarikere taluka" Indent No.VJNL/2023-24/RD/WORK_INDNET34" ಶೇಕಡವಾರು ದರಗಳಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ KPWD ಗುತ್ತಿಗೆದಾರರಿಂದ, ಟೆಂಡರ್ ಅಹ್ವಾನಿಸಲಾಗಿದ್ದು, ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ದಿ:26.02.2024 ರಿಂದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕಡೆಯ ದಿ:06.03.2024 ಸಂಜೆ 17.00 ರವರೆಗೆ, ಟೆಂಡರ್ ಅಂದಾಜು ಮೊತ್ತ/ ಇ.ಎಂ.ಡಿ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ/ ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ/ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್ ತಿದ್ದುಪಡಿ / ಸೇರಿಕೆಗಳನ್ನು ಕೆ.ಪಿ.ಪಿ.ಪಿ. ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭ.ಮೇ.ಯೋ ವಿಭಾಗ ನಂ.2, ಬಿ.ಆರ್.ಪ್ರಾಜೆಕ್ಟ್-577115
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/193/02/23-24/1368

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ: ಸಂ: 08194-235018 ಇ-ಮೇಲ್: dhochitradurga@gmail.com
ಸಂ.ಜಿಆಕುಕಚಿ/ಟೆಂಡರ್/01/2023-24 ದಿನಾಂಕ: 21.02.2024
ಇ-ಟೆಂಡರ್ ಪ್ರಕಟಣೆ
ಜಿಲ್ಲೆಯ ಅಧೀನ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಫಾರ್ಮಸಿ ಅಧಿಕಾರಿಗಳ ಹುದ್ದೆಗಳ ಪೈಕಿ 21 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಎರಡನೇ ಬಾರಿಗೆ ಇ-ಟೆಂಡರ್ ಕರೆಯಲಾಗಿರುತ್ತದೆ. ಅರ್ಹ ನೋಂದಾಯಿತ ಮತ್ತು ಆಸಕ್ತ ಸಂಸ್ಥೆಗಳು ಈ ಪ್ರಕ್ಯೂರ್ಮೆಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಸೂಚಿಸಿದೆ. ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ದಿನಾಂಕ: 22-02-2024 ರಿಂದ ದಿನಾಂಕ: 07-03-2024 ರವರೆಗೆ ಸಮಯ ಅಪರಾಹ್ನ 5.00ರ ವರೆಗೆ ಅಪ್‌ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 11-03-2024 ರ ಬೆಳಗ್ಗೆ 11:00 ಗಂಟೆಗೆ. ಟೆಂಡರ್ ಪ್ರತಿಯೊಂದು ಷರತ್ತು ಮತ್ತು ನಿಬಂಧ'ನೆಗಳನ್ನು http://kppp.karnataka.gov.in ಅಂತರ್‌ಜಾಲದಲ್ಲಿ ಪಡೆದುಕೊಳ್ಳಬಹುದು.
ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಚಿತ್ರದುರ್ಗ, ಇಲ್ಲಿನ ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು.
DIPR/CTA/KSMCA/621/2023-24 ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.
Cantonment Area, Director:8147796529, PA: 8147796539,
e-mail : vimsballaridirector@karnataka.gov.in , directorvimsballari@gmail.com
website: vims.karnataka.gov.in
ಸಂ:ವಿಮ್ಸ್/ಸರಬರಾಜು/ಟೆಂಡರ್/14/2023-24 ದಿನಾಂಕ:21.02.2024
ಮರು-ಟೆಂಡರ್ ಅಧಿಸೂಚನೆ
ವಿಮ್ಸ್ ಸಂಸ್ಥೆ, ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಹಾಸ್ಟೆಲ್ ಬ್ಲಾಕ್ಸ್, ದಂತಕಾಲೇಜು, ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಟಿಬಿ ಆಸ್ಪತ್ರೆ & ನಗರ ಆರೋಗ್ಯ ಕೇಂದ್ರ, ವಿಮ್ಸ್, ಬಳ್ಳಾರಿ ಇಲ್ಲಿಗೆ ಸ್ವಚ್ಛತಾ ಮತ್ತು ನೈರ್ಮಲ್ಯತೆ ಸೇವೆಗಳು, ಪ್ಲಂಬರ್ & ವಾಹನ ಚಾಲಕರ ಸೇವೆಗಳಿಗಾಗಿ ಒಟ್ಟು 122 ಮಾನವ ಸಂಪನ್ಮೂಲ, ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಮರು-ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್‌ನಲ್ಲಿ ಮರು-ಟೆಂಡರ್ ಅನ್ನು ದಿನಾಂಕ:29/02/2024ರ ಸಂಜೆ5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.183.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ www.vims.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- ಡೀನ್ & ನಿರ್ದೇಶಕರು, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/902/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ.
Pho: 08194-234488 Email:-eerdwsd.chd@gmail.com
ನಂ.ಗ್ರಾ.ನೀ.ಸ.&ನೈ./ಚಿದು/ಆಶಾ/ಹೊ.ಗು/ಟೆಂಡರ್/2023-24/2235 ದಿ:-22.02.2024
ಟೆಂಡರ್ ಪ್ರಕಟಣೆ
(E-Procurement Portal Only)
ವಿಷಯ : ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ/ಉಪ ವಿಭಾಗ ಕಛೇರಿಗಳಿಗೆ ತಾತ್ಕಾಲಿಕವಾಗಿ ಮಾನವ ಸಂಪನ್ಮೂಲ ಸರಬರಾಜು (Providing Services of Manpower on outsource basis for Rural Drinking Water and Sanitation Division Chitradurga) ಏಜೆನ್ಸಿ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ.
ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಕಛೇರಿ ಹಾಗೂ ಉಪ ವಿಭಾಗ ಕಛೇರಿಗಳಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ಭೂವಿಜ್ಞಾನಿ ಒಂದು ಹುದ್ದೆ, ಸೀನಿಯರ್ ಅನಾಲಿಸಿಸ್ಟ್-04 ಹುದ್ದೆಗಳು (ಕೆಮಿಸ್ಟ್ ಮತ್ತು ಮೈಕ್ರೋಬಯಾಲಜಿಸ್ಟ್), ಸ್ಯಾಂಪಲ್ ಸೆಲ್ ಇಂಚಾರ್ಜ್-01 ಹುದ್ದೆ ಜೂನಿಯರ್ ಅನಾಲಿಸಿಸ್ಟ್-02 ಹುದ್ದೆಗಳು (ಕೆಮಿಸ್ಟ್ ಮತ್ತು ಮೈಕ್ರೋಬಯಾಲಜಿಸ್ಟ್), ಸ್ಯಾಂಪಲ್ ಕಲೆಕ್ಟರ್-06 ಹುದ್ದೆಗಳು, ಹೌಸ್ ಕೀಪಿಂಗ್-04 ಹುದ್ದೆಗಳನ್ನು ಒದಗಿಸಲು ಮಾನವ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಟೆಂಡರ್ ಕರೆಯಲಾಗಿರುತ್ತದೆ.
(1) ಟೆಂಡರ್ ಪ್ರಕಟಣೆ ದಿನಾಂಕ 22.02.2024 (2) ಇ-ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 11.03.2024 ಅಪರಾಹ್ನ 4.00 ಗಂಟೆಗೆ (3) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 12.03.2024. (4) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ : 13.03.2024 (5) ಇ-ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ ರೂ. 1,25,000-00 ಹೆಚ್ಚಿನ ವಿವರಗಳನ್ನು www.kppp.karnataka.gov.in ರಲ್ಲಿ ನೋಡಬಹುದು.
DIPR/CTA/KSMCA/618/2023-24 ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ನಗರಸಭೆ ರಾಯಚೂರು
Website:-www.raichurcity.gov.in,E-mail:itstaff_ulb_raichura@yahoo.com
Phone No: 08532-226768 Fax No: 08532-226316
ಸಂಖ್ಯೆ.ನಸರಾ/ಆ.ಶಾ/ವಾಹನ/ಅ/01/2023-24 ದಿನಾಂಕ: 21-02-2024.
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)
ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಸರಬರಾಜು ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಸರಬರಾಜುದಾರರು, ಗುತ್ತಿಗೆದಾರರು ಮತ್ತು ಏಜೆನ್ಸಿದಾರರು WWW. KPPP.karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity .mrc. gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.
ಅನುದಾನದ ವಿವರ: ನಗರಸಭೆ ಅನುದಾನದಲ್ಲಿ, **ಕಾಮಗಾರಿಗಳ ವಿವರ:** Puches of Auto Tipper 3.2 Cubic Meter for SWM in Raichur City Limits.Estimate Amount Rs. 90,00,000/- **ಇಂಡೆಂಟ್ ನಂಬರ:** DMA/2023-24/IND1557
ಸಹಿ/- ಪೌರಾಯುಕ್ತರು,
DIP/RCR/534/KSMC&A/531/2023-24 ನಗರಸಭೆ, ರಾಯಚೂರು

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472 - 278604, Fax No : 08472 – 278604,
ಇಮೇಲ್ ವಿಳಾಸ: ka.kalaburagi.dudc@gmail.com www.kalaburagidudc.mrc.gov.in
ಸಂ:ಜಿನಕೋ/ಇಂದಿರಾ ಕ್ಯಾಂಟೀನ್/01/2023-24 ದಿನಾಂಕ : 23.02.2024
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
ಮಾನ್ಯ ಜಿಲ್ಲಾಧಿಕಾರಿಗಳು ಕಲಬುರಗಿ ಜಿಲ್ಲೆ, ಕಲಬುರಗಿ ಜಿಲ್ಲೆಯ ನಗರ ಸ್ಥಳಿಯ ಸಂಸ್ಥೆಗಳಾದ ಪುರಸಭೆ ಚಿತ್ತಾಪೂರ ಹಾಗೂ ಚಿಂಚೋಳಿ ವ್ಯಾಪ್ತಿಯಲ್ಲಿ ಬರುವ **"ಇಂದಿರಾ ಕ್ಯಾಂಟೀನ್"** ನ ಹೋಟೆಲ್/ ರೆಸ್ಟೋರೆಂಟ್ ನಿರ್ವಹಣೆ ಸಲುವಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮುಖಾಂತರ 2 ಕವರ್ ಸಿಸ್ಟಮ್ ಕೆ.ಜಿ-2ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ನಿರ್ವಹಣೆಗಾರರು (Caterer/Suppliers) ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ. 1) ಕಾಮಗಾರಿಯ ವಿವರ : **TENDER No: DMA/2023-24/IND1602,** 2) ನಿಗಧಿಪಡಿಸಿದ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) : **113.15,** 3) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ): **1.69**
ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: **23.02.2024** ರಿಂದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ www.eproc.karnataka.gov.in ರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು. ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.
1) ಪೂರ್ವಭಾವಿ ಸಭೆ ದಿನಾಂಕ (Pre-Bid Meeting) : **29.02.2024 ಬೆಳಿಗ್ಗೆ 11.00 ಗಂಟೆಗೆ,** 2) ಟೆಂಡರ್ ಕುರಿತಂತೆ ಪ್ರಶ್ನೆಗಳಿದ್ದಲ್ಲಿ (Queries) : **01.03.2024 ಸಂಜೆ 5.30 ಗಂಟೆಗೆ ವರೆಗೆ,** 3) ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಲು ಕೊನೆಯ ದಿನಾಂಕ: **02.03.2024 ಸಂಜೆ 5.30 ಗಂಟೆಗೆ ವರೆಗೆ,** 4) ಟೆಂಡರ್ ತೆರೆಯುವ ದಿನಾಂಕ : (ತಾಂತ್ರಿಕ ಬಿಡ್) : **04.03.2024 ಬೆಳಿಗ್ಗೆ 11.00 ಗಂಟೆಗೆ,** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : **07.03.2024 ಬೆಳಿಗ್ಗೆ 11.00 ಗಂಟೆಗೆ**
ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/- ಜಿಲ್ಲಾಧಿಕಾರಿಗಳು
ವಾ.ಸಾ.ಸಂ.ಇ/ಕಲಬುರಗಿ/897/ಕೆ.ಎಸ್.ಎಂ.ಸಿ.&ಎ/2023-24 ಕಲಬುರಗಿ ಜಿಲ್ಲೆ, ಕಲಬುರಗಿ.

ದೆಹಲಿ ಚಲೋ: 12ನೇ ದಿನವೂ ಮುಂದುವರಿದ ರೈತರ ಪ್ರತಿಭಟನೆ

ಸಿಂಘು, ಟಿಕ್ರಿ ಗಡಿ ಭಾಗಶಃ ಮುಕ್ತ

ನವದೆಹಲಿ/ ಚಂಡೀಗಢ (ಪಿಟಿಐ): ರೈತರ 'ದೆಹಲಿ ಚಲೋ' ಮೆರವಣಿಗೆ ಕಾರಣದಿಂದ ಎರಡು ವಾರಗಳ ಹಿಂದೆ ಬಂದ್ ಮಾಡಲಾಗಿದ್ದ ಹರಿಯಾಣದ ಸಿಂಘು ಮತ್ತು ಟಿಕ್ರಿ ಗಡಿಗಳನ್ನು ಶನಿವಾರ ಭಾಗಶಃ ತೆರೆಯಲಾಯಿತು.

ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲು ಸಿಂಘು ಮತ್ತು ಟಿಕ್ರಿ ಗಡಿಯಲ್ಲಿ ಒಂದೊಂದು ಲೇನ್ ಅನ್ನು ತೆರೆಯಲಾಗುತ್ತಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಇದರಿಂದ ದೆಹಲಿಯಿಂದ ಹರಿಯಾಣಕ್ಕೆ ಪ್ರಯಾಣಿಸುವವರಿಗೆ ತುಸು ನೆಮ್ಮದಿ ಸಿಗಲಿದೆ.

ಶಂಭು ಗಡಿಯಲ್ಲಿ ಧರಣಿ ಕುಳಿತಿರುವ ರೈತರು –ಪಿಟಿಐ ಚಿತ್ರ

12ನೇ ದಿನವೂ ಮುಂದುವರಿದ ಧರಣಿ: ಪಂಜಾಬ್ ಮತ್ತು ಹರಿಯಾಣದ ಗಡಿಯಾದ ಖನೌರಿ ಮತ್ತು ಶಂಭುವಿನಲ್ಲಿ ರೈತರು ನಡೆಸುತ್ತಿರುವ ಧರಣಿ 12ನೇ ದಿನವಾದ ಶನಿವಾರವೂ ಮುಂದುವರಿಯಿತು. ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಮತ್ತು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಅಡಿಯಲ್ಲಿ ರೈತರು ಶನಿವಾರವೂ ಮೇಣದಬತ್ತಿ ಮೆರವಣಿಗೆ ನಡೆಸಿದರು.

ಖನೌರಿ ಗಡಿಯಲ್ಲಿ ರೈತರು ಮತ್ತು ಪೊಲೀಸರ ನಡುವೆ ನಡೆದ ಘರ್ಷಣೆಯಲ್ಲಿ ಯುವ ರೈತ ಶುಭಕರಣ್ ಸಿಂಗ್ ಮೃತಪಟ್ಟಿದ್ದರಿಂದ, ರೈತ ಮುಖಂಡರು ಬುಧವಾರ 'ದೆಹಲಿ ಚಲೋ'ಗೆ ಎರಡು ದಿನಗಳ ಮಟ್ಟಿಗೆ ವಿರಾಮ ಘೋಷಿಸಿದ್ದರು. ಶುಕ್ರವಾರ ಹಿಸಾರ್‌ನಲ್ಲಿ ಪುನಃ ಘರ್ಷಣೆ ನಡೆದ ಬೆನ್ನಲ್ಲೇ ರೈತ ಮುಖಂಡರು ವಿರಾಮವವನ್ನು ಇದೇ 29ರವರೆಗೂ ವಿಸ್ತರಿಸುವುದಾಗಿ ಘೋಷಿಸಿದ್ದರು.

'ರೈತ ಶುಭಕರಣ್ ಸಾವಿಗೆ ಕಾರಣರಾದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಅಲ್ಲಿಯವರೆಗೂ ಮರಣೋತ್ತರ ಪರೀಕ್ಷೆ ನಡೆಸಲೂ ಬಿಡುವುದಿಲ್ಲ' ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ ಪ್ರತಿಕ್ರಿಯಿಸಿದ್ದಾರೆ.

ಶನಿವಾರವೂ ಇಂಟರ್‌ನೆಟ್ ಸ್ಥಗಿತ: ರೈತರ ಪ್ರತಿಭಟನೆ ಹಿನ್ನೆಲೆಯಲ್ಲಿ ಹರಿಯಾಣ ಸರ್ಕಾರವು ಅಂಬಾಲಾ, ಕುರುಕ್ಷೇತ್ರ, ಕೈತಾಲ್, ಜಿಂದ್, ಹಿಸಾರ್, ಫತೇಹಾಬಾದ್ ಮತ್ತು ಸಿರ್ಸಾದಲ್ಲಿ ಮೊಬೈಲ್ ಇಂಟರ್‌ನೆಟ್ ಮತ್ತು ಎಸ್‌ಎಂಎಸ್ ಸೇವೆಗಳನ್ನು ಶನಿವಾರವೂ ಸ್ಥಗಿತಗೊಳಿಸಿತ್ತು. ಫೆಬ್ರುವರಿ 11ರಿಂದ ಈ ಸ್ಥಗಿತ ಚಾಲ್ತಿಯಲ್ಲಿದೆ.

ನೀತಿ ಸಂಹಿತೆ ಬಂದರೂ ಪ್ರತಿಭಟನೆ ನಿಲ್ಲದು: 'ಬೇಡಿಕೆಗಳು ಈಡೇರುವವರೆಗೂ ಪ್ರತಿಭಟನೆ ಮುಂದುವರಿಯುತ್ತದೆ. ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಾದರೂ ನಮ್ಮ ಈ ಹೋರಾಟ ನಿಲ್ಲದು. ನಾವೇನು ಟಿಕೆಟ್ ಹಂಚುವುದಿಲ್ಲ. ಮತಗಟ್ಟೆಗೆ ಹೋಗಿ ಪ್ರಚಾರವನ್ನೂ ಮಾಡುವುದಿಲ್ಲ. ಹೀಗಾಗಿ ನೀತಿ ಸಂಹಿತೆ ಬಗ್ಗೆ ಚಿಂತಿಸುವುದಿಲ್ಲ' ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ್ ಸುದ್ದಿಗಾರರಿಗೆ ತಿಳಿಸಿದರು.

ಗಾಯಗೊಂಡ ರೈತನ ಹಸ್ತಾಂತರಕ್ಕೆ ಒಪ್ಪಿಗೆ

ರೈತರ 'ದೆಹಲಿ ಚಲೋ' ಸಂದರ್ಭದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ರೈತನನ್ನು ಚಂಡೀಗಢದ ಪಿಜಿಐಎಂಇಆರ್ ಆಸ್ಪತ್ರೆಗೆ ಸ್ಥಳಾಂತರಿಸಲು ಹರಿಯಾಣ ಸರ್ಕಾರ ಒಪ್ಪಿದೆ.

ಗಾಯಗೊಂಡ ರೈತನನ್ನು ಹಸ್ತಾಂತರಿಸುವಂತೆ ಪಂಜಾಬ್ ಮುಖ್ಯ ಕಾರ್ಯದರ್ಶಿ ಅನುರಾಗ್ ವರ್ಮಾ ಅವರು ಹರಿಯಾಣದ ಮುಖ್ಯ ಕಾರ್ಯದರ್ಶಿ ಸಂಜೀವ್ ಕೌಶಲ್ ಅವರಿಗೆ ಪತ್ರ ಬರೆದರು ಕೆಲವೇ ಗಂಟೆಗಳಲ್ಲಿ ಹರಿಯಾಣ ಈ ಬೇಡಿಕೆಗೆ ಸ್ಪಂದಿಸಿದ್ದನ್ನು ಪಂಜಾಬ್ ಆರೋಗ್ಯ ಸಚಿವ ಬಲಬೀರ್ ಸಿಂಗ್ ಸ್ಪಷ್ಟಪಡಿಸಿದರು.

'ಫೆಬ್ರುವರಿ 21ರಂದು ಹರಿಯಾಣದ ಭದ್ರತಾ ಸಿಬ್ಬಂದಿ ಕೆಲ ರೈತರನ್ನು ಥಳಿಸಿ ತಮ್ಮೊಂದಿಗೆ ಕರೆದೊಯ್ದಿದ್ದಾರೆ. ಈ ಪೈಕಿ ಗಾಯಗೊಂಡ ಪಂಜಾಬ್‌ನ ಪ್ರೀತ್ಪಾಲ್ ಸಿಂಗ್ ಎಂಬುವವರು ರೋಹ್ಟಕ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ' ಎಂದು ವರ್ಮಾ ಪತ್ರದಲ್ಲಿ ಉಲ್ಲೇಖಿಸಿದ್ದರು. ಪಂಜಾಬಿನಲ್ಲಿ ಪ್ರೀತ್ಪಾಲ್ ಸಿಂಗ್ ಅವರಿಗೆ ಉಚಿತ ಚಿಕಿತ್ಸೆ ನೀಡುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದೂ ಹೇಳಿದ್ದರು.

'ಪ್ರೀತ್ಪಾಲ್ ಸಿಂಗ್ ಅನ್ನು ಹರಿಯಾಣ ಪೊಲೀಸರು ಅಪಹರಿಸಿ, ಗಾಯಗೊಳಿಸಿದ್ದಾರೆ' ಎಂದು ಶಿರೋಮಣಿ ಅಕಾಲಿದಳದ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಶುಕ್ರವಾರ ಆರೋಪಿಸಿದ್ದರು.

ರಾಜ್ಯಸಭೆ ಕಣ: ಅಭ್ಯರ್ಥಿಗಳ ಸರಾಸರಿ ಆಸ್ತಿ ₹127.81 ಕೋಟಿ

36 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ

ನವದೆಹಲಿ (ಪಿಟಿಐ): ರಾಜ್ಯಸಭೆಯ ಚುನಾವಣಾ ಕಣದ ಅಭ್ಯರ್ಥಿಗಳ ಪೈಕಿ ಶೇ 36ರಷ್ಟು ಮಂದಿ ತಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳಿರುವುದಾಗಿ ಘೋಷಿಸಿಕೊಂಡಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

ಅಭ್ಯರ್ಥಿಗಳ ಪೈಕಿ ಶೇ 21ರಷ್ಟು ಮಂದಿ ಶತಕೋಟ್ಯಧಿಪತಿಗಳಾಗಿದ್ದು, ಇವರ ಸರಾಸರಿ ಆಸ್ತಿ ₹127.81 ಕೋಟಿ ಆಗಿದೆ ಎಂದು ವರದಿ ಹೇಳಿದೆ.

ಪ್ರಮುಖ ಮೂವರು ಶತಕೋಟ್ಯಧಿಪತಿಗಳು

ಅಭ್ಯರ್ಥಿ ಹೆಸರು	ಪಕ್ಷ	ಕಣಕ್ಕಿಳಿದಿರುವ ರಾಜ್ಯ	ಘೋಷಿಸಿಕೊಂಡ ಆಸ್ತಿ ಮೌಲ್ಯ
ಅಭಿಷೇಕ್ ಮನು ಸಿಂಘ್ವಿ	ಕಾಂಗ್ರೆಸ್	ಹಿಮಾಚಲ ಪ್ರದೇಶ	₹1,872 ಕೋಟಿ
ಜಯ ಅಮಿತಾಬ್ ಬಚ್ಚನ್	ಸಮಾಜವಾದಿ ಪಕ್ಷ	ಉತ್ತರ ಪ್ರದೇಶ	₹1,578 ಕೋಟಿ
ಕುಪೇಂದ್ರ ರೆಡ್ಡಿ	ಜೆಡಿಎಸ್	ಕರ್ನಾಟಕ	₹871 ಕೋಟಿ
ಕಡಿಮೆ ಆಸ್ತಿ ಘೋಷಿಸಿಕೊಂಡ ಪ್ರಮುಖ ಮೂವರು			
ಬಾಲಯೋಗಿ ಉಮೇಶ್ ನಾಥ್	ಬಿಜೆಪಿ	ಮಧ್ಯ ಪ್ರದೇಶ	₹47 ಲಕ್ಷ
ಸಮಿಕ್ ಭಟ್ಟಾಚಾರ್ಯ	ಬಿಜೆಪಿ	ಪಶ್ಚಿಮ ಬಂಗಾಳ	₹1 ಕೋಟಿ
ಸಂಗೀತಾ	ಬಿಜೆಪಿ	ಉತ್ತರ ಪ್ರದೇಶ	₹1 ಕೋಟಿ

ರಾಜ್ಯಸಭಾ ಚುನಾವಣೆ ಇದೇ 27ರಂದು ನಡೆಯಲಿದೆ. 15 ರಾಜ್ಯಗಳಲ್ಲಿನ 56 ಸ್ಥಾನಗಳಿಗೆ ಒಟ್ಟು 59 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇವರಲ್ಲಿ 58 ಮಂದಿಯ ಅಫಿಡವಿಟ್‌ಗಳನ್ನು ವಿಶ್ಲೇಷಿಸಿ ಎಡಿಆರ್ ವರದಿ ಸಿದ್ಧಪಡಿಸಿದೆ.

ಕರ್ನಾಟಕದ ಕಾಂಗ್ರೆಸ್ ಅಭ್ಯರ್ಥಿ ಜಿ.ಸಿ.ಚಂದ್ರಶೇಖರ್ ಅವರ ದಾಖಲೆಗಳು ಸ್ಪಷ್ಟವಾಗಿ ಕಾಣಿಸದ (ಸರಿಯಾಗಿ 'ಸ್ಕ್ಯಾನ್' ಆಗಿಲ್ಲ) ಕಾರಣ ಅವರನ್ನು ವಿಶ್ಲೇಷಣೆಯಿಂದ ಕೈಬಿಡಲಾಗಿದೆ ಎಂದು ಎಡಿಆರ್ ಹೇಳಿದೆ.

ಕ್ರಿಮಿನಲ್ ಪ್ರಕರಣಗಳಿರುವುದಾಗಿ ಘೋಷಿಸಿಕೊಂಡಿರುವ ಅಭ್ಯರ್ಥಿಗಳ ಪೈಕಿ ಶೇ 17ರಷ್ಟು ಅಭ್ಯರ್ಥಿಗಳು ಗಂಭೀರ ಸ್ವರೂಪದ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿದ್ದರೆ, ಒಬ್ಬರು ಕೊಲೆ ಯತ್ನದ ಪ್ರಕರಣ ಎದುರಿಸುತ್ತಿದ್ದಾರೆ.

ಬಿಜೆಪಿಯ ಒಟ್ಟು 30 ಅಭ್ಯರ್ಥಿಗಳ ಪೈಕಿ 8 (ಶೇ 27), ಕಾಂಗ್ರೆಸ್ 9 ಅಭ್ಯರ್ಥಿಗಳ ಪೈಕಿ 6 (ಶೇ 67), ಟಿಎಂಸಿಯ 4 ಅಭ್ಯರ್ಥಿಗಳ ಪೈಕಿ ಒಬ್ಬರು (ಶೇ 25), ಎಸ್‌ಪಿಯ ಮೂವರಲ್ಲಿ ಇಬ್ಬರು (ಶೇ 67), ವೈಎಸ್‌ಆರ್‌ಪಿಸಿಯ ಮೂವರಲ್ಲಿ ಒಬ್ಬರು (ಶೇ 33), ಆರ್‌ಜೆಡಿಯ ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬರು (ಶೇ 50), ಬಿಜೆಡಿಯ ಇಬ್ಬರ ಪೈಕಿ ಒಬ್ಬರು (ಶೇ 50) ಮತ್ತು ಬಿಆರ್‌ಎಸ್‌ನ ಒಬ್ಬರ (ಶೇ 100) ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ.

ಅಭ್ಯರ್ಥಿಗಳ ವಿದ್ಯಾರ್ಹತೆ: ಶೇ 79ರಷ್ಟು ಅಭ್ಯರ್ಥಿಗಳು ಪದವಿ ಅಥವಾ ಅದಕ್ಕಿಂತ ಹೆಚ್ಚಿನ ವ್ಯಾಸಂಗ ಮಾಡಿದ್ದರೆ, ಶೇ 17ರಷ್ಟು ಅಭ್ಯರ್ಥಿಗಳು 5ನೇ ತರಗತಿಯಿಂದ 12ನೇ ತರಗತಿವರೆಗೆ ಓದಿದ್ದಾರೆ. ಶೇ 76ರಷ್ಟು ಮಂದಿ 51ರಿಂದ 70ರ ವಯಸ್ಸಿನವರು. ಶೇ 16ರಷ್ಟು 31ರಿಂದ 50ರ ವಯಸ್ಸಿನವರು. ಒಟ್ಟು ಅಭ್ಯರ್ಥಿಗಳಲ್ಲಿ ಕೇವಲ ಶೇ 19ರಷ್ಟು ಮಹಿಳೆಯರಿದ್ದಾರೆ ಎಂದು ವರದಿ ತಿಳಿಸಿದೆ.

ಉತ್ತರಪ್ರದೇಶ: ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆ ರದ್ದು

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ನಡೆದಿದ್ದ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ಇಲ್ಲಿನ ರಾಜ್ಯ ಸರ್ಕಾರ ಶನಿವಾರ ರದ್ದುಪಡಿಸಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ಈ ಪರೀಕ್ಷೆಗಳನ್ನು ರದ್ದುಪಡಿಸಿದ್ದು, ಮುಂದಿನ ಆರು ತಿಂಗಳೊಳಗೆ ಮತ್ತೆ ಪರೀಕ್ಷೆಗಳನ್ನು ನಡೆಸುವಂತೆ ಸರ್ಕಾರ ಆದೇಶಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, 'ಪರೀಕ್ಷೆಗಳ ಮಾನ್ಯತೆ ವಿಚಾರದಲ್ಲಿ ರಾಜಿ ಸಾಧ್ಯವಿಲ್ಲ. ಯುವಜನರ ಶ್ರಮದ ವಿಷಯದಲ್ಲಿ ಆಟವಾಡುವವರರನ್ನು ಸುಮ್ಮನೆ ಬಿಡುವುದಿಲ್ಲ. ಅಂಥ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಆರೋಪಕ್ಕೆ ಸಂಬಂಧಿಸಿದಂತೆ ವಿಶೇಷ ಕಾರ್ಯಪಡೆ ಮೂಲಕ ತನಿಖೆ ನಡೆಸಲಾಗುವುದು' ಎಂದು ತಿಳಿಸಿದ್ದಾರೆ.

ನೇಮಕಾತಿ ಪರೀಕ್ಷೆಯಲ್ಲಿ ನ್ಯಾಯಯುತವಲ್ಲದ ಮಾರ್ಗಗಳ ಮೂಲಕ ಪರೀಕ್ಷೆ ಬರೆಯಲು ಯೋಜಿಸಿದ್ದರು ಎನ್ನಲಾದ 240ಕ್ಕೂ ಹೆಚ್ಚು ಮಂದಿಯನ್ನು ಈಗಾಗಲೇ ರಾಜ್ಯದಾದ್ಯಂತ ಪೊಲೀಸರು ಬಂಧಿಸಿದ್ದಾರೆ.

'ಪರೀಕ್ಷೆ ವೇಳೆ ಯಾವ ಹಂತದಲ್ಲಿ ಲೋಪ ಕಂಡುಬಂದಿದೆಯೋ ಆ ಹಂತದಲ್ಲೇ ಎಫ್‌ಐಆರ್ ದಾಖಲಿಸಿ, ಮುಂದಿನ ಕ್ರಮದ ಬಗ್ಗೆ ಖಚಿತಪಡಿಸಿಕೊಳ್ಳಬೇಕೆಂದು ಸರ್ಕಾರವು ನೇಮಕಾತಿ ಮಂಡಳಿಗೆ ನಿರ್ದೇಶಿಸಿದೆ' ಉತ್ತರಪ್ರದೇಶದ ಗೃಹ ಇಲಾಖೆ ಹೇಳಿದೆ.

ಉತ್ತರಪ್ರದೇಶದಲ್ಲಿ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗಾಗಿ ಫೆಬ್ರುವರಿ 17 ಮತ್ತು 18ರಂದು ಪರೀಕ್ಷೆ ನಡೆಸಲಾಗಿತ್ತು. 48 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

'ವಿದ್ಯಾರ್ಥಿಗಳ ಶಕ್ತಿಗೆ ಸಂದ ಜಯ'

ನವದೆಹಲಿ (ಪಿಟಿಐ): 'ಉತ್ತರಪ್ರದೇಶ ಸರ್ಕಾರವು ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆಗಳನ್ನು ರದ್ದುಪಡಿಸಿರುವ ಪ್ರಕ್ರಿಯೆಯು ವಿದ್ಯಾರ್ಥಿಗಳ ಶಕ್ತಿಗೆ ಸಂದ ಜಯವಾಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪ್ರತಿಕ್ರಿಯಿಸಿದ್ದಾರೆ.

'ಯುವಶಕ್ತಿ ಮುಂದೆ ತಲೆಬಾಗಿದ ಸರ್ಕಾರ': ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆ ರದ್ದಾಗಿರುವುದಕ್ಕೆ ಸಂಬಂಧಿಸಿ, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು, 'ಯುವಶಕ್ತಿ ಮುಂದೆ ಸರ್ಕಾರ ತಲೆಬಾಗಿದೆ. ನಿನ್ನೆಯವರೆಗೆ ಸರ್ಕಾರದ ಅಧಿಕಾರಿಗಳು ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದನ್ನು ನಿರಾಕರಿಸುವ ಯತ್ನದಲ್ಲಿ ಹೇಳಿಕೆಗಳನ್ನು ನೀಡುತ್ತಿದ್ದರು. ಯುವಶಕ್ತಿ ಮುಂದೆ ಅವರ ಸುಳ್ಳು ಹೇಳಿಕೆಗಳು ನಡೆಯುವುದಿಲ್ಲ ಎಂದು ತಿಳಿದ ಬಳಿಕ ಸರ್ಕಾರ ಈ ಪರೀಕ್ಷೆಗಳನ್ನು ರದ್ದುಪಡಿಸಿದೆ' ಎಂದು ಹೇಳಿದ್ದಾರೆ.

ಟಿಡಿಪಿ– ಜನಸೇನಾ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಅಮರಾವತಿ (ಆಂಧ್ರಪ್ರದೇಶ) (ಪಿಟಿಐ): ಕೆಲ ತಿಂಗಳಲ್ಲಿ ನಡೆಯಲಿರುವ ಆಂಧ್ರಪ್ರದೇಶ ವಿಧಾನಸಭೆ ಚುನಾವಣೆಗಾಗಿ ಟಿಡಿಪಿ ಮತ್ತು ಜನಸೇನಾ ಮೈತ್ರಿಕೂಟವು 118 ಸ್ಥಾನಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ.

118 ಸ್ಥಾನಗಳಲ್ಲಿ 94 ಸ್ಥಾನಗಳಲ್ಲಿ ಟಿಡಿಪಿ ಮತ್ತು 24ರಲ್ಲಿ ಜನಸೇನಾ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.

ಬಿಜೆಪಿಯು ಮೈತ್ರಿಕೂಟವನ್ನು ಸೇರಲು ನಿರ್ಧರಿಸಿದರೆ ಅದಕ್ಕೂ ಸ್ಥಾನಗಳನ್ನು ಬಿಟ್ಟುಕೊಡುವುದನ್ನು ಮನಸ್ಸಿನಲ್ಲಿರಿಸಿಕೊಂಡು ಸೀಟು ಹಂಚಿಕೆ ಮಾಡಲಾಗಿದೆ ಎಂದು ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಮತ್ತು ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಅವರು ಹೇಳಿದರು.

'ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಚುನಾವಣೆಗೆ ತಯಾರಿವೆ. ಇದು ರಾಜ್ಯದ ಪ್ರತಿಯೊಬ್ಬರಿಗೂ ಸಿಹಿಸುದ್ದಿಯಾಗಿದೆ. ರಾಜ್ಯದ ಭವಿಷ್ಯಕ್ಕಾಗಿ ಈ ಮೈತ್ರಿಕೂಟ ರಚಿಸಲಾಗಿದೆ' ಎಂದು ಚಂದ್ರಬಾಬು ನಾಯ್ಡು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೇವಲ 24 ಸ್ಥಾನಗಳಲ್ಲಿ ಜನಸೇನಾ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಪವನ್ ಕಲ್ಯಾಣ್ ಅವರು, 'ಹೆಚ್ಚು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಪ್ರಯೋಗ ಮಾಡುವುದಕ್ಕಿಂತ ಕಡಿಮೆ ಸ್ಥಾನಗಳಲ್ಲಿ ಸ್ಪರ್ಧಿಸುವುದೇ ಉತ್ತಮ' ಎಂದು ಉತ್ತರಿಸಿದರು.

ಸಂದೇಶ್‌ಖಾಲಿಗೆ ಭೇಟಿ ನೀಡಿದ್ದ ಎನ್‌ಸಿಎಸ್‌ಟಿ ತನಿಖಾ ತಂಡದ ಆರೋಪ

'ಟಿಎಂಸಿ ವಿರುದ್ಧ ಮತ ಹಾಕಿದ್ದಕ್ಕೆ ಕಿರುಕುಳ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಹೊತ್ತಿರುವ ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಮತ್ತು ಸಹಚರರು, ತಮ್ಮ ಪಕ್ಷದ ವಿರುದ್ಧ ಮತ ಚಲಾಯಿಸಿದ್ದಕ್ಕಾಗಿ ಬಡ ಬುಡಕಟ್ಟು ಕುಟುಂಬಗಳಿಗೆ ಕಿರುಕುಳ ನೀಡಿದ್ದಾರೆ ಎಂದು ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗದ (ಎನ್‌ಸಿಎಸ್‌ಟಿ) ತನಿಖಾ ತಂಡ ಆರೋಪಿಸಿದೆ.

ಸಂದೇಶ್‌ಖಾಲಿಗೆ ತೆರಳುತ್ತಿದ್ದ ಡಿವೈಎಫ್‌ಐ ಪಶ್ಚಿಮ ಬಂಗಾಳ ಘಟಕ ಕಾರ್ಯದರ್ಶಿ ಮೀನಾಕ್ಷಿ ಮುಖರ್ಜಿ ಅವರನ್ನು ಪೊಲೀಸರು ಶನಿವಾರ ತಡೆದರು –ಪಿಟಿಐ ಚಿತ್ರ

ಬುಡಕಟ್ಟು ಕುಟುಂಬಗಳ ನರೇಗಾ ಕೂಲಿಯನ್ನು ಬಲವಂತವಾಗಿ ಕಿತ್ತುಕೊಂಡಿರುವುದಾಗಿಯೂ ದೂರುಗಳು ಲಭಿಸಿವೆ ಎಂದು ಹೇಳಿದೆ.

ಎನ್‌ಸಿಎಸ್‌ಟಿ ಉಪಾಧ್ಯಕ್ಷ ಅನಂತ ನಾಯಕ್ ಅವರ ನೇತೃತ್ವದಲ್ಲಿ ತ್ರಿಸದಸ್ಯ ತಂಡವು ಈಚೆಗೆ ಸಂದೇಶ್‌ಖಾಲಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿತ್ತು.

ಶಹಜಹಾನ್ ಮತ್ತು ಸಹಚರರಿಗೆ ಪಶ್ಚಿಮ ಬಂಗಾಳದ ಪೊಲೀಸರು ರಕ್ಷಣೆ ನೀಡುತ್ತಿದ್ದಾರೆ ಎಂದೂ ಜನರು ಆರೋಪಿಸಿರುವುದಾಗಿ ಎನ್‌ಸಿಎಸ್‌ಟಿ ತಂಡ ತಿಳಿಸಿದೆ. ದೆಹಲಿಗೆ ಮರಳಿರುವ ತನಿಖಾ ತಂಡವು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವ ಪ್ರಕ್ರಿಯೆಯಲ್ಲಿದೆ ಎಂದು ಮೂಲಗಳು ಹೇಳಿವೆ.

ಶಹಜಹಾನ್ ಮತ್ತು ಸಹಚರರು ಬುಡಕಟ್ಟು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಭೂಮಿ ಕಸಿದುಕೊಂಡಿದ್ದಾರೆ ಎಂದು ಆರೋಪಿಸಿರುವ 50ಕ್ಕೂ ಹೆಚ್ಚು ದೂರುಗಳು ಆಯೋಗಕ್ಕೆ ಲಭಿಸಿವೆ ಎಂದು ಅನಂತ ನಾಯಕ್ ತಿಳಿಸಿದರು.

ದೌರ್ಜನ್ಯದ ಕುರಿತು ಪೊಲೀಸರ ಮೊರೆ ಹೋದರೆ ಅವರು ಎಫ್‌ಐಆರ್ ದಾಖಲಿಸುತ್ತಿಲ್ಲ ಎಂದು ದೂರುದಾರರು ಆರೋಪಿಸಿರುವುದಾಗಿಯೂ ಅವರು ವಿವರಿಸಿದರು.

ದೌರ್ಜನ್ಯ ಪ್ರಕರಣ ನಡೆದ ಬಳಿಕ ಶಹಜಹಾನ್ ಮತ್ತು ಸಹಚರರು ತಲೆಮರೆಸಿಕೊಂಡಿದ್ದಾರೆ.

ನಂದಿಗ್ರಾಮಕ್ಕೆ ಹೋಲಿಸಿದ ಬಿಜೆಪಿ

ಸಂದೇಶ್‌ಖಾಲಿಯಲ್ಲಿ ಗ್ರಾಮಸ್ಥರ ಭೂಮಿ ಕಸಿದಿರುವ ಪ್ರಕರಣವನ್ನು ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಅವರು ನಂದಿಗ್ರಾಮ ಪ್ರಕರಣಕ್ಕೆ ಹೋಲಿಸಿದ್ದಾರೆ.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಮೂಲಕ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಲಾಗಿದೆ ಎಂದು ಅವರು ಹೇಳಿದರು.

ಬಿಜೆಪಿ ಕಿಸಾನ್ ಮೋರ್ಚಾ ಪ್ರತಿಭಟನೆ: ಟಿಎಂಸಿ ಮುಖಂಡರು ಸಂದೇಶ್‌ಖಾಲಿಯಲ್ಲಿ ಗ್ರಾಮಸ್ಥರ ಮೇಲೆ ನಡೆಸಿರುವ ದೌರ್ಜನ್ಯವನ್ನು ಖಂಡಿಸಿ ಬಿಜೆಪಿ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಯಿತು.

ಗಿರೀಶ್ ಪಾರ್ಕ್‌ನಿಂದ ಉತ್ತರ ಕೋಲ್ಕತ್ತದವರೆಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಕಾರ್ಯಕರ್ತರು, ಟಿಎಂಸಿ ಮುಖಂಡರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸಚಿವರ ಭೇಟಿ, ಸಿಪಿಎಂ ನಿಯೋಗಕ್ಕೆ ತಡೆ

ಕೋಲ್ಕತ್ತ (ಪಿಟಿಐ): ಹಿಂಸಾಚಾರ ಪೀಡಿತ ಸಂದೇಶ್‌ಖಾಲಿಗೆ ಪಶ್ಚಿಮ ಬಂಗಾಳದ ಸಚಿವರಾದ ಸುಜಿತ್ ಬೋಸ್ ಮತ್ತು ಪಾರ್ಥ ಭೌಮಿಕ್ ಅವರು ಶನಿವಾರ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಇದೇ ವೇಳೆ ಅಲ್ಲಿಗೆ ತೆರಳುತ್ತಿದ್ದ ಡಿವೈಎಫ್‌ಐ ಪಶ್ಚಿಮ ಬಂಗಾಳ ಘಟಕದ ಕಾರ್ಯದರ್ಶಿ ಮೀನಾಕ್ಷಿ ಮುಖರ್ಜಿ ನೇತೃತ್ವದ ಸಿಪಿಎಂ ನಿಯೋಗವನ್ನು ಪೊಲೀಸರು ಅರ್ಧದಾರಿಯಲ್ಲಿಯೇ ತಡೆದಿದರು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ನಿಯೋಗವು ಹಿಂಸಾಚಾರಪೀಡಿತ ಪ್ರದೇಶಕ್ಕೆ ಶನಿವಾರವೂ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಗ್ರಾಮಸ್ಥರ ಕೃಷಿ ಭೂಮಿ ಹಿಂದಿರುಗಿಸಿ: ಟಿಎಂಸಿ ಮುಖಂಡರಾದ ಶಹಜಹಾನ್ ಶೇಖ್, ಶಿಬಾ ಪ್ರಸಾದ್ ಹಜ್ರಾ ಮತ್ತು ಉತ್ತಮ್ ಸರ್ದಾರ್ ಅವರು ಕಿತ್ತುಕೊಂಡಿರುವ ಕೃಷಿ ಭೂಮಿಯನ್ನು ಕೂಡಲೇ ಗ್ರಾಮಸ್ಥರಿಗೆ ಹಿಂದಿರುಗಿಸಬೇಕು ಎಂದು ಮೀನಾಕ್ಷಿ ಮುಖರ್ಜಿ ಒತ್ತಾಯಿಸಿದರು.

ಈ ಮೂವರನ್ನು ಬಂಧಿಸಿ ತನಿಖೆಗೆ ಒಳಪಡಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ ಎಂದೂ ಅವರು ತಿಳಿಸಿದರು.

1,250ಕ್ಕೂ ಹೆಚ್ಚು ದೂರು ಸಲ್ಲಿಕೆ: ಸಂದೇಶ್‌ಖಾಲಿ ಮತ್ತು ಸಮೀಪ ಪ್ರದೇಶಗಳಲ್ಲಿ ಅಹವಾಲು ಸ್ವೀಕರಿಸಲು ಅಧಿಕಾರಿಗಳು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 1,250ಕ್ಕೂ ಹೆಚ್ಚು ದೂರುಗಳನ್ನು ಗ್ರಾಮಸ್ಥರು ಸಲ್ಲಿಸಿದ್ದು, ಅದರಲ್ಲಿ 400ರಷ್ಟು ದೂರುಗಳು ಭೂಮಿ ಕಬಳಿಕೆಗೆ ಸಂಬಂಧಿಸಿವೆ ಎಂದು ಮೂಲಗಳು ತಿಳಿಸಿವೆ.

ಟ್ರ್ಯಾಕ್ಟರ್ ಮಗುಚಿ 24 ಸಾವು

ಲಖನೌ (ಪಿಟಿಐ): ಟ್ರ್ಯಾಕ್ಟರ್ ಟ್ರಾಲಿ ಮಗುಚಿ ಕೊಳಕ್ಕೆ ಬಿದ್ದು, ಗಂಗಾ ನದಿಯಲ್ಲಿ ಸ್ನಾನಕ್ಕೆ ಹೋಗುತ್ತಿದ್ದವರಲ್ಲಿ ಎಂಟು ಮಕ್ಕಳು ಸೇರಿ 24 ಜನರು ಮೃತಪಟ್ಟಿದ್ದಾರೆ. ಉತ್ತರ ಪ್ರದೇಶದ ಕಾಸ್‌ಗಂಜ್ ಜಿಲ್ಲೆಯಲ್ಲಿ ಶನಿವಾರ ಬೆಳಿಗ್ಗೆ ಈ ಅವಘಡ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇವರೆಲ್ಲರೂ ಏಟ ಜಿಲ್ಲೆಯ ಜೈಥರಾ ಜಿಲ್ಲೆಯಿಂದ ಗಂಗಾ ಸ್ನಾನಕ್ಕೆ ಹೋಗುತ್ತಿದ್ದರು. ಪಟಿಯಾಲಿ ಪ್ರದೇಶದಲ್ಲಿ ಪಟಿಯಾಲಿ–ದರಿಯಾಗಂಜ್ ರಸ್ತೆಯಲ್ಲಿ ಅಪಘಾತ ಸಂಭವಿಸಿದೆ. ಗಾಯಗೊಂಡಿರುವ 15ರಿಂದ 20 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಲ್ಲಿ ಎಂಟು ಮಕ್ಕಳು ಇದ್ದಾರೆ ಎಂದು ಅಲಿಗಢ ವ್ಯಾಪ್ತಿಯ ಐಜಿ ಶಲಭ್ ಮಾಥುರ್ ತಿಳಿಸಿದ್ದಾರೆ.

ವಾಹನ ಹಿಂದಿಕ್ಕಲು ಚಾಲಕ ಪ್ರಯತ್ನಿಸಿದಾಗ ಟ್ರ್ಯಾಕ್ಟರ್ ನಿಯಂತ್ರಣ ಕಳೆದುಕೊಂಡು ಟ್ರಾಲಿ ಮುಗುಚಿ 7ರಿಂದ 8 ಅಡಿ ಆಳದ ಕೊಳಕ್ಕೆ ಬಿದ್ದಿದೆ. ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಮತ್ತು ಗಾಯಾಳುಗಳ ಕುಟುಂಬಗಳಿಗೆ ತಲಾ ₹50 ಸಾವಿರ ಹಣಕಾಸು ನೆರವನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಘೋಷಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕಾಸ್‌ಗಂಜ್ ಜಿಲ್ಲೆಯಲ್ಲಿ ರಸ್ತೆ ಅಪಘಾತದಲ್ಲಿ ಸಂಭವಿಸಿದ ಜೀವ ಹಾನಿಯು ಅತ್ಯಂತ ಹೃದಯ ವಿದ್ರಾವಕವಾದುದು. ಎಲ್ಲ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಮತ್ತು ಮೃತರ ಕುಟುಂಬಗಳಿಗೆ ತಕ್ಷಣದ ನೆರವು ನೀಡಲು ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಯೋಗಿ ಆದಿತ್ಯನಾಥ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಇದೊಂದು ಅತ್ಯಂತ ದುಃಖಕರ ಮತ್ತು ಹೃದಯವಿದ್ರಾವಕ ಘಟನೆ. ಪರಿಹಾರ ಮತ್ತು ರಕ್ಷಣಾ ಕಾರ್ಯ ತ್ವರಿತಗೊಳಿಸುವಂತೆ ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದೇವೆ. ಘಟನೆಯ ಸಂತ್ರಸ್ತ ಕುಟುಂಬಗಳಿಗೆ ಎಲ್ಲ ರೀತಿಯ ನೆರವು ಮತ್ತು ಪರಿಹಾರ ಒದಗಿಸಲು ಪಕ್ಷದ ಕಾರ್ಯಕರ್ತರಿಗೂ ವಿನಂತಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಲ್ದ್ವಾನಿ ಹಿಂಸಾಚಾರ ಸಂಚುಕೋರನ ಬಂಧನ

ಹಲ್ದ್ವಾನಿ (ಪಿಟಿಐ): ಹಲ್ದ್ವಾನಿ ಹಿಂಸಾಚಾರದ ಪ್ರಮುಖ ಸಂಚುಕೋರ ಅಬ್ದುಲ್ ಮಲಿಕ್‌ನನ್ನು ನವದೆಹಲಿಯಲ್ಲಿ ಶನಿವಾರ ಬಂಧಿಸಲಾಗಿದೆ ಎಂದು ನೈನಿತಾಲ್ ಎಸ್‌ಎಸ್‌ಪಿ ನಾರಾಯಣ್ ಮೀನಾ ತಿಳಿಸಿದ್ದಾರೆ.

'ಮಲಿಕ್ ಮತ್ತು ಆತನ ಮಗ ಅಬ್ದುಲ್ ಮೊಯಿದ್ ಪತ್ತೆ ಹಚ್ಚಲು ಗುಜರಾತ್, ನವದೆಹಲಿ, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಬಿಹಾರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಆರು ತಂಡಗಳನ್ನು ರಚಿಸಲಾಗಿತ್ತು. ಅದರಲ್ಲಿ ಒಂದು ತಂಡ ಮಲ್ಲಿಕ್‌ನನ್ನು ನವದೆಹಲಿಯಲ್ಲಿ ಪತ್ತೆಹಚ್ಚಿ ಬಂಧಿಸಿದ್ದು, ಆತನ ಮಗನ ಸುಳಿವು ಪತ್ತೆಯಾಗಿಲ್ಲ' ಎಂದು ಮಾಹಿತಿ ನೀಡಿದರು.

ಬನ್‌ಭೂಲ್‌ಪುರದಲ್ಲಿ ಮಲಿಕ್ ಅಕ್ರಮವಾಗಿ ನಿರ್ಮಿಸಿದ್ದ ಮದರಸವನ್ನು ಸ್ಥಳೀಯಾಡಳಿತವು ಫೆಬ್ರವರಿ 8ರಂದು ತೆರವುಗೊಳಿಸಲು ಮುಂದಾದ ಹಿನ್ನೆಲೆ ಘರ್ಷಣೆ ನಡೆದಿತ್ತು. ಹಿಂಸಾಚಾರದಲ್ಲಿ 6 ಮಂದಿ ಸಾವನ್ನಪ್ಪಿದ್ದು, ಪೊಲೀಸರು, ಪತ್ರಕರ್ತರು ಸೇರಿದಂತೆ ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು.

ಸರಸ್ವತಿ ಪೂಜೆಗೆ ನಿರಾಕರಣೆ: ಶಿಕ್ಷಕಿ ಅಮಾನತು

ಜೈಪುರ: ಸರಸ್ವತಿ ದೇವಿಯನ್ನು ಪೂಜಿಸಲು ನಿರಾಕರಿಸಿದ ಸರ್ಕಾರಿ ಶಾಲೆಯ ಶಿಕ್ಷಕಿಯನ್ನು ರಾಜಸ್ಥಾನ ಸರ್ಕಾರ ಅಮಾನತುಗೊಳಿಸಿದೆ.

ಬಾರಾನ್ ಜಿಲ್ಲೆಯ ಕಿಶನ್‌ಗಂಜ್ ಪ್ರದೇಶದ ಲಡ್ಕೈ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಜ. 26ರಂದು ನಡೆದ ಗಣರಾಜ್ಯೋತ್ಸವದಲ್ಲಿ ಸರಸ್ವತಿ ದೇವಿಯನ್ನು ಪೂಜಿಸಲು ನಿರಾಕರಿಸಿದ್ದಕ್ಕಾಗಿ ಹಾಗೂ ಸ್ಥಳೀಯರ ಧಾರ್ಮಿಕ ಭಾವನೆಗಳನ್ನು ನೋಯಿಸಿದ್ದಕ್ಕಾಗಿ, ಪ್ರಾಥಮಿಕ ಶಾಲಾ ಶಿಕ್ಷಕಿ ಹೇಮಲತಾ ಬೈರ್ವಾ ಅಮಾನತುಗೊಂಡಿದ್ದಾರೆ.

'ಹೇಮಲತಾ' ಹ್ಯಾಷ್‌ಟ್ಯಾಗ್‌ನೊಂದಿಗೆ ಇದು ಟ್ರೆಂಡಿಂಗ್‌ನಲ್ಲಿತ್ತು. ಇದಕ್ಕೆ ಮೆಚ್ಚುಗೆ–ಟೀಕೆ ವ್ಯಕ್ತವಾಗಿದ್ದವು.

ಮತಾಂತರದಲ್ಲಿ ತೊಡಗಿದ್ದಾರೆ ಎಂಬ ಆರೋಪದಲ್ಲಿ ಕೋಟಾದ ಸಂಗೋಡ್ ಪ್ರದೇಶದಲ್ಲಿ ಇಬ್ಬರು ಶಿಕ್ಷಕರನ್ನು ಈ ಹಿಂದೆ ಅಮಾನತುಗೊಳಿಸಲಾಗಿದೆ. ಶಿಕ್ಷಕರೊಬ್ಬರ ವಿರುದ್ಧ ತನಿಖೆಯೂ ನಡೆದಿದೆ.

ಇಂಫಾಲ್: ಬಾಂಬ್ ಸ್ಫೋಟ– ಒಬ್ಬ ಸಾವು

ಇಂಫಾಲ್ (ಪಿಟಿಐ): 'ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಕಚ್ಚಾ ಬಾಂಬ್ ಸ್ಫೋಟಗೊಂಡು ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಮತ್ತೊಬ್ಬ ವ್ಯಕ್ತಿ ಗಾಯಗೊಂಡಿದ್ದಾನೆ' ಎಂದು ಪೊಲೀಸರು ಶನಿವಾರ ತಿಳಿಸಿದರು.

'ಡಿ.ಎಂ ಕಾಲೇಜಿನ ಸಂಕೀರ್ಣದಲ್ಲಿ ಶುಕ್ರವಾರ ರಾತ್ರಿ ಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಒಯಿನಮ್ ಕೆನೆಗಿ ಎಂಬಾತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಸಾವಿಗೀಡಾಗಿದ್ದಾನೆ. ಗಾಯಗೊಂಡ ಮತ್ತೊಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದರು.

'ಇಲ್ಲಿಯವರೆಗೆ ಯಾವುದೇ ಸಂಘಟನೆಯು ಬಾಂಬ್ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ಈ ಮಧ್ಯೆ ಇಂಫಾಲ್ ಪಶ್ಚಿಮ ಜಿಲ್ಲೆಯ ಲಾಮ್‌ಫೆಲ್ ಪಾತ್‌ನಲ್ಲಿರುವ ಯುನೈಟೆಡ್ ಕಮಿಟಿ ಮಣಿಪುರ ಎಂಬ ಸಂಘಟನೆಯ ಕಚೇರಿಗೆ ಕೆಲವು ಅಪರಿಚಿತ ವ್ಯಕ್ತಿಗಳು ಬೆಂಕಿ ಹಚ್ಚಿದ್ದಾರೆ' ಎಂದಿದ್ದಾರೆ.

'ಅಲ್ಲದೇ ಇಂಫಾಲ್ ಪೂರ್ವ ಜಿಲ್ಲೆಯಲ್ಲಿರುವ ಶಾಲೆಯೊಂದರ ಆಡಳಿತ ವಿಭಾಗಕ್ಕೆ ಕೆಲವು ಅಪರಿಚಿತ ವ್ಯಕ್ತಿಗಳು ಶುಕ್ರವಾರ ಬೆಂಕಿ ಹಚ್ಚಿದ್ದಾರೆ. ಶಾಲೆಯ ಆವರಣದಲ್ಲಿದ್ದ ವಾಹನವೂ ಸುಟ್ಟು ಕರಕಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ರಾಮಮಂದಿರಕ್ಕೆ ₹25 ಕೋಟಿ ದೇಣಿಗೆ

ಅಯೋಧ್ಯೆ (ಪಿಟಿಐ): ಇಲ್ಲಿ ನೂತನವಾಗಿ ನಿರ್ಮಿಸಿರುವ ರಾಮಮಂದಿರಕ್ಕೆ ಒಂದು ತಿಂಗಳ ಅವಧಿಯಲ್ಲಿ, 25 ಕೆ.ಜಿ. ಚಿನ್ನ ಹಾಗೂ ಬೆಳ್ಳಿ ಆಭರಣಗಳು ಸೇರಿದಂತೆ ಅಂದಾಜು ₹25 ಕೋಟಿ ದೇಣಿಗೆ ಲಭಿಸಿದೆ ಎಂದು ರಾಮ ಮಂದಿರ ಟ್ರಸ್ಟ್‌ನ ಅಧಿಕಾರಿ ಪ್ರಕಾಶ್ ಗುಪ್ತಾ ಶನಿವಾರ ತಿಳಿಸಿದರು.

ಚೆಕ್, ಡ್ರಾಫ್ಟ್ ಮತ್ತು ನಗದು ರೂಪದಲ್ಲಿ ದೇಣಿಗೆ ಲಭಿಸಿದೆ. ಟ್ರಸ್ಟ್‌ನ ಬ್ಯಾಂಕ್ ಖಾತೆಗೆ ನೇರವಾಗಿ ಆನ್‌ಲೈನ್ ವಹಿವಾಟಿನ ಮೂಲಕ ಲಭಿಸಿರುವ ದೇಣಿಗೆಯ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದೂ ಅವರು ಹೇಳಿದರು.

ಜನವರಿ 23ರಿಂದ ಇದುವರೆಗೆ ಅಂದಾಜು 60 ಲಕ್ಷ ಭಕ್ತರು ದೇಗುಲಕ್ಕೆ ಭೇಟಿ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ರಾಮ ನವಮಿಯ ವೇಳೆ ದೇವಾಲಯಕ್ಕೆ 50 ಲಕ್ಷ ಮಂದಿ ಭಕ್ತರು ಭೇಟಿ ನೀಡುವ ನಿರೀಕ್ಷೆ ಇದೆ ಎಂದರು.

ಶರದ್ ಬಣದ ಎನ್‌ಸಿಪಿ ಚಿಹ್ನೆ ಅನಾವರಣ

ಮುಂಬೈ (ಪಿಟಿಐ): ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಸ್ಥಾಪಕ ಶರದ್ ಪವಾರ್ ಅವರು ಶನಿವಾರ ರಾಯಗಢ ಕೋಟೆಯಲ್ಲಿ ಪಕ್ಷದ ತಮ್ಮ ಬಣದ 'ತುತ್ತೂರಿ ಊದುತ್ತಿರುವ ವ್ಯಕ್ತಿ'ಯ ಚಿತ್ರ ಒಳಗೊಂಡ ನೂತನ ಚಿಹ್ನೆ ಬಿಡುಗಡೆಗೊಳಿಸಿದರು.

'ಜನರ ಕಲ್ಯಾಣಕ್ಕಾಗಿ ಹೋರಾಟ ಹಾಗೂ ಜನರ ಏಳಿಗೆಗಾಗಿ ಕಾರ್ಯನಿರ್ವಹಿಸುವ ಸರ್ಕಾರದ ಸ್ಥಾಪನೆಗಾಗಿ ಈ ಚಿಹ್ನೆ ಪ್ರೇರೇಣೆ ನೀಡಲಿದೆ' ಎಂದು 83 ವರ್ಷದ ಶರದ್ ಪವಾರ್ ಈ ಸಂದರ್ಭದಲ್ಲಿ ಪ್ರತಿಪಾದಿಸಿದರು.

ಪಕ್ಷದ ವಿಭಜನೆಯ ಬಳಿಕ ಮುಖಂಡ ಅಜಿತ್ ಪವಾರ್ ನೇತೃತ್ವದ ಬಣವು ಏಕನಾಥ ಶಿಂದೆ ನೇತೃತ್ವದ ಶಿವಸೇನೆ–ಬಿಜೆಪಿ ಮೈತ್ರಿ ಸರ್ಕಾರದ ಜೊತೆಗೆ ಗುರುತಿಸಿಕೊಂಡಿತ್ತು. ಚುನಾವಣಾ ಆಯೋಗವು ಇತ್ತೀಚೆಗೆ ಅಜಿತ್ ನೇತೃತ್ವದ ಬಣವೇ ನಿಜವಾದ ಎನ್‌ಸಿಪಿ ಎಂದು ಮಾನ್ಯ ಮಾಡಿತ್ತು. ಈ ಮೂಲಕ ಎನ್‌ಸಿಪಿಯ ಮೂಲಚಿಹ್ನೆ 'ಗೋಡೆ ಗಡಿಯಾರ'ವು ಅಜಿತ್ ಪವಾರ್ ನೇತೃತ್ವದ ಬಣದಲ್ಲಿಯೇ ಉಳಿದಿತ್ತು.

ಎನ್‌ಸಿಪಿಯ ನೂತನ ಚಿಹ್ನೆ ಪ್ರದರ್ಶಿಸುತ್ತಿರುವ ಪಕ್ಷದ ನಾಯಕಿ ಸುಪ್ರಿಯಾ ಸುಳೆ –ಪಿಟಿಐ ಚಿತ್ರ

ಅಲ್ಲದೆ, ಶರದ್ ಪವಾರ್ ನೇತೃತ್ವದ ಬಣಕ್ಕೆ 'ರಾಷ್ಟ್ರೀಯವಾದಿ ಕಾಂಗ್ರೆಸ್ ಪಾರ್ಟಿ –ಶರದ್ ಚಂದ್ರ ಪವಾರ್' ಎಂಬ ಹೆಸರನ್ನು ಅಂತಿಮಗೊಳಿಸಿದ್ದ ಆಯೋಗ, ಗುರುವಾರವಷ್ಟೇ ಈ ಬಣಕ್ಕೆ 'ತುತ್ತೂರಿ ಊದುತ್ತಿರುವ ಮನುಷ್ಯ'ನ ಚಿತ್ರವನ್ನು ಚಿಹ್ನೆಯಾಗಿ ಹಂಚಿಕೆ ಮಾಡಿತ್ತು.

ಅಸ್ಸಾಂ: ಸರ್ಕಾರದ್ದು ಮುಸ್ಲಿಂ ವಿರೋಧಿ ನೀತಿ- ವಿರೋಧ ಪಕ್ಷಗಳ ಆರೋಪ

ಮುಸ್ಲಿಂ ವಿವಾಹ ನೋಂದಣಿ ಕಾಯ್ದೆ ರದ್ದತಿಗೆ ತೀರ್ಮಾನ

ಪ್ರಜಾವಾಣಿ ವಾರ್ತೆ/ ಪಿಟಿಐ

ಗುವಾಹಟಿ: ಬಾಲ್ಯ ವಿವಾಹವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ, 'ಅಸ್ಸಾಂ ಮುಸ್ಲಿಂ ವಿವಾಹಗಳು ಮತ್ತು ವಿಚ್ಛೇದನಗಳ ನೋಂದಣಿ ಕಾಯ್ದೆ–1935' ಅನ್ನು ರದ್ದುಗೊಳಿಸಲು ಅಸ್ಸಾಂ ಸಂಪುಟ ಒಪ್ಪಿಗೆ ನೀಡಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ಈ ಮೂಲಕ ಅಸ್ಸಾಂ ಸರ್ಕಾರವು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ತರುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ ಎನ್ನಲಾಗುತ್ತಿದೆ.



ಹಿಮಂತ ಬಿಸ್ವ ಶರ್ಮ

ಸರ್ಕಾರದ ಈ ನಿರ್ಧಾರವನ್ನು ವಿರೋಧ ಪಕ್ಷಗಳು ಟೀಕಿಸಿದ್ದು, 'ಮುಸ್ಲಿಂ ವಿರೋಧಿ ನೀತಿ' ಎಂದು ಆಕ್ರೋಶ ವ್ಯಕ್ತಪಡಿಸಿವೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ ಶರ್ಮಾ, 'ಕಾನೂನಿನ ಪ್ರಕಾರ ವಿವಾಹವಾಗುವ ವಧು ಮತ್ತು ವರನಿಗೆ ಕ್ರಮವಾಗಿ 18 ಮತ್ತು 21 ವರ್ಷಗಳಾಗಿರಬೇಕು. ಆದರೆ ಇಷ್ಟು ವಯಸ್ಸು ಆಗಿಲ್ಲದಿದ್ದರೂ ವಿವಾಹ ನೋಂದಣಿಗೆ ಅವಕಾಶ ನೀಡುವ ನಿಬಂಧನೆಗಳನ್ನು ಈ ಕಾಯ್ದೆ ಒಳಗೊಂಡಿದೆ. ಹೀಗಾಗಿ ಅಸ್ಸಾಂನಲ್ಲಿ ಬಾಲ್ಯ ವಿವಾಹಗಳನ್ನು ನಿಷೇಧಿಸುವ ಮತ್ತೊಂದು ಮಹತ್ವದ ಹೆಜ್ಜೆಯನ್ನು ಸರ್ಕಾರ ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದ್ದಾರೆ.

ಸ್ವಾತಂತ್ರ್ಯ ಪೂರ್ವದ ಈ ಹಳೆಯ ಕಾಯ್ದೆಯನ್ನು ರದ್ದುಗೊಳಿಸುವ ನಿರ್ಧಾರವನ್ನು ಶುಕ್ರವಾರ ತಡರಾತ್ರಿ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಯಿತು ಎಂದು ಅವರು ತಿಳಿಸಿದ್ದಾರೆ.

ಸಂಪುಟ ನಿರ್ಧಾರಗಳ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವ ಜಯಂತ್ ಮಲ್ಲಬರುವಾ ಅವರು, 'ವಸಾಹತುಶಾಹಿ ಯುಗದ ಕಾಯ್ದೆಯನ್ನು ರದ್ದುಗೊಳಿಸುವ ಮತ್ತು ಏಕರೂಪ ನಾಗರಿಕ ಸಂಹಿತೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಇದು ಮುಖ್ಯಮಂತ್ರಿ ಶರ್ಮ ಅವರ ಮಹತ್ವದ ಹೆಜ್ಜೆಯಾಗಿದೆ. ಎಲ್ಲ ವಿವಾಹಗಳು ವಿಶೇಷ ವಿವಾಹ ಕಾಯ್ದೆಯಡಿ ನೋಂದಣಿಯಾಗಬೇಕು ಎಂದು ನಾವು ಬಯಸುತ್ತೇವೆ' ಎಂದು ಹೇಳಿದರು.

'ಪ್ರಸ್ತುತ 94 ಮುಸ್ಲಿಂ ವಿವಾಹ ನೋಂದಣಿದಾರರ ಬಳಿ ನೋಂದಣಿ ಕುರಿತ ದಾಖಲೆಗಳಿವೆ. ಇನ್ನು ಆ ದಾಖಲೆಗಳನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ನೋಂದಣಾಧಿಕಾರಿಗಳ ಸುಪರ್ದಿಗೆ ನೀಡಲಾಗುತ್ತದೆ. ಮುಸ್ಲಿಂ ವಿವಾಹ ನೋಂದಣಿದಾರರ ಪುನರ್ವಸತಿಗಾಗಿ ಒಂದು ಬಾರಿಗೆ ಎರಡು ಲಕ್ಷ ರೂಪಾಯಿ ಪರಿಹಾರ ನೀಡಲಾಗುತ್ತದೆ' ಎಂದು ಅವರು ವಿವರಿಸಿದರು.

ಬಹುಪತ್ನಿತ್ವ ನಿಷೇಧಕ್ಕೂ ಚಿಂತನೆ: ಉತ್ತರಾಖಂಡ ಸರ್ಕಾರವು ಇತ್ತೀಚೆಗೆ ಯುಸಿಸಿ ಮಸೂದೆಯನ್ನು ಅಂಗೀಕರಿಸಿದ ಬಳಿಕ, ಬಹುಪತ್ನಿತ್ವವನ್ನು ಕೊನೆಗೊಳಿಸಲು ರಾಜ್ಯ ಸರ್ಕಾರ ಬಲಿಷ್ಠ ಮಸೂದೆ ತರಲು ಯೋಜಿಸುತ್ತಿದೆ ಎಂದು ಶರ್ಮಾ ಈ ಹಿಂದೆ ಘೋಷಿಸಿದ್ದರು. ತಮ್ಮ ಸರ್ಕಾರವು ಏಕರೂಪ ನಾಗರಿಕ ಸಂಹಿತೆಯನ್ನು ಬೆಂಬಲಿಸುತ್ತದೆ. ಆದರೆ ರಾಜ್ಯದಲ್ಲಿ ತಕ್ಷಣವೇ ಬಹುಪತ್ನಿತ್ವವನ್ನು ನಿಷೇಧಿಸಲು ಬಯಸುತ್ತದೆ ಎಂದು ಅವರು ತಿಳಿಸಿದ್ದರು.

'ರಾಜ್ಯ ಸರ್ಕಾರದಿಂದ ಲಾಭ ಮಾಡಿಕೊಳ್ಳುವ ಯತ್ನ'

ಅಸ್ಸಾಂ ಸರ್ಕಾರದ ಈ ನಡೆಯನ್ನು ಬದ್ರುದ್ದೀನ್ ಅಜ್ಮಲ್ ನೇತೃತ್ವದ ಎಐಯುಡಿಎಫ್ ಮತ್ತು ಕಾಂಗ್ರೆಸ್ ಪಕ್ಷಗಳು ಶನಿವಾರ ಟೀಕಿಸಿವೆ. ಇದು ಸರ್ಕಾರದ ಮುಸ್ಲಿಂ ವಿರೋಧಿ ನೀತಿಯಾಗಿದ್ದು, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಾಗ ಕೋಮು ಕಾರ್ಯಸೂಚಿ ಬಳಸಿ ಲಾಭ ಮಾಡಿಕೊಳ್ಳಲು ಸರ್ಕಾರ ಯತ್ನಿಸುತ್ತಿದೆ ಎಂದು ಅವು ದೂರಿವೆ.

'ಸರ್ಕಾರದ ಕ್ರಮ ನನಗೆ ಆಶ್ಚರ್ಯ ತಂದಿಲ್ಲ. ಏಕೆಂದರೆ ಈಗಾಗಲೇ ಆಜಾನ್ ವಿಷಯದಲ್ಲಿ ಬಿಜೆಪಿ ಹಸ್ತಕ್ಷೇಪಕ ಮಾಡಿದೆ. ಅಲ್ಲದೆ ಮದರಾಸಗಳನ್ನು ಮುಚ್ಚುವುದು, ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನಿಲ್ಲಿಸುವುದೂ ಸೇರಿದಂತೆ ಹಲವು ಮುಸ್ಲಿಂ ವಿರೋಧಿ ನಿರ್ಧಾರಗಳನ್ನು ತೆಗೆದುಕೊಂಡಿದೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಇಂತಹ ಹಲವು ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ' ಎಂದು ಅಜ್ಮಲ್ ಬೇಸರದಿಂದ ಹೇಳಿದರು.

ಒಟ್ಟು 14 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಅಸ್ಸಾಂನಲ್ಲಿ ಬಿಜೆಪಿ ಕನಿಷ್ಠ 11 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದೆ. 2019ರ ಚುನಾವಣೆಯಲ್ಲಿ ಬಿಜೆಪಿ ಒಂಬತ್ತರಲ್ಲಿ, ಕಾಂಗ್ರೆಸ್ ಮೂರರಲ್ಲಿ ಗೆದ್ದಿತ್ತು. ಅಸ್ಸಾಂ ಜನಸಂಖ್ಯೆಯಲ್ಲಿ ಶೇ 34ರಷ್ಟು ಮುಸ್ಲಿಮರಿದ್ದಾರೆ. ಬಂಗಾಳಿ ಮಾತನಾಡುವ ವಲಸಿಗ ಮುಸ್ಲಿಮರನ್ನು ಅಕ್ರಮ ವಲಸಿಗರು ಎಂದು ಕರೆಯುವ ಬಿಜೆಪಿ, ಇವರಿಂದ ಸ್ಥಳೀಯ ಸಮುದಾಯಕ್ಕೆ ಬೆದರಿಕೆ ಇದೆ ಎಂದು ಪ್ರತಿಪಾದಿಸುತ್ತದೆ.

ಮಾಜಿ ಕುಸ್ತಿ ಕೋಚ್‌ಗೆ ಮರಣದಂಡನೆ

ಚಂಡೀಗಢ (ಪಿಟಿಐ): ನಾಲ್ಕು ವರ್ಷದ ಬಾಲಕ ಸೇರಿದಂತೆ ಆರು ಜನರ ಕೊಲೆ ಪ್ರಕರಣದ ಅಪರಾಧಿ, ಮಾಜಿ ಕುಸ್ತಿ ಕೋಚ್‌ಗೆ ಇಲ್ಲಿನ ರೋಹ್ಟಕ್‌ನ ಜಿಲ್ಲಾ ನ್ಯಾಯಾಲಯ ಮರಣದಂಡನೆ ಹಾಗೂ ₹ 1.26 ಲಕ್ಷ ದಂಡವನ್ನು ವಿಧಿಸಿದೆ.

ಮಾಜಿ ಕುಸ್ತಿ ಕೋಚ್ ಸುಖ್‌ವಿಂದರ್ ಶಿಕ್ಷೆಗೊಳಗಾದವರು. ಐಪಿಸಿಯ ವಿವಿಧ ಸೆಕ್ಷನ್‌ಗಳು ಹಾಗೂ ಶಸ್ತ್ರಾಸ್ತ್ರ ಕಾಯ್ದೆಯಡಿ ಸಾಕ್ಷ್ಯ ನಾಶಪಡಿಸಿದ ಆರೋಪ ಸಾಬೀತಾದ ಕಾರಣ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಗಗನ್ ಗೀತ್ ಕೌರ್ ಅವರು ಸಜೆ ವಿಧಿಸಿ ಆದೇಶಿಸಿದರು.

ಸೋನೆಪತ್ ಜಿಲ್ಲೆಯ ಬರೌಡ ಗ್ರಾಮದ ಸುಖ್‌ವಿಂದರ್, ಫೆಬ್ರುವರಿ 12, 2021ರಲ್ಲಿ ಪತ್ನಿ ಸಾಕ್ಷಿ ಮಲ್ಲಿಕ್, ಮನೋಜ್ ಮಲ್ಲಿಕ್, ಪುತ್ರ ಸರ್ತಾಜ್, ಕೋಚ್‌ಗಳಾಗಿದ್ದ ಸತೀಶ್ ಕುಮಾರ್, ಪ್ರದೀಪ್ ಮಲ್ಲಿಕ್ ಮತ್ತು ಕುಸ್ತಿಪಟು ಪೂಜಾ ಅವರನ್ನು ಹತ್ಯೆ ಮಾಡಿದ್ದರು.

ಘಟನೆಯಲ್ಲಿ ಅಮರಜೀತ್ ಎಂಬುವವರು ಗಾಯಗೊಂಡಿದ್ದರು. ರೋಹ್ಟಕ್‌ನ ಖಾಸಗಿ ಕಾಲೇಜಿಗೆ ಹೊಂದಿಕೊಂಡಿದ್ದ ಕುಸ್ತಿ ಆವರಣದಲ್ಲಿ ಕೃತ್ಯ ನಡೆದಿತ್ತು. ದೂರುಗಳ ಹಿನ್ನೆಲೆಯಲ್ಲಿ ಸೇವೆಯಿಂದ ಕೈಬಿಟ್ಟಿದ್ದರಿಂದ ಕುಪಿತರಾಗಿ ಕೃತ್ಯ ಎಸಗಿದ್ದರು ಎಂದು ಪೊಲೀಸರು ಬಳಿಕ ತಿಳಿಸಿದ್ದರು. ಪಂಜಾಬ್–ಹರಿಯಾಣ ಹೈಕೋರ್ಟ್ ದೃಢೀಕರಿಸುವವರೆಗೂ, ಶಿಕ್ಷೆಯನ್ನು ಜಾರಿಗೊಳಿಸಬಾರದು ಎಂದೂ ನ್ಯಾಯಾಧೀಶರು ಆದೇಶಿಸಿದರು.

ಈ ಆಯವ್ಯಯದ ಮೂಲಕ ಕರ್ನಾಟಕ ಮಾದರಿ ಅಭಿವೃದ್ಧಿ ಪರಿಕಲ್ಪನೆ ಪ್ರಸ್ತುತ ಪಡಿಸಿದ ಮುಖ್ಯಮಂತ್ರಿ

ಸಾಮಾಜಿಕ ನ್ಯಾಯಕ್ಕೆ ಹಂಬಲಿಸುವ ಬಜೆಟ್

ಈ ಸಲದ ಬಜೆಟ್ ಕೆಲವು ಕಾರಣಕ್ಕಾಗಿ ಬಹು ಮುಖ್ಯವೆನಿಸುತ್ತದೆ: ಅದು ಲೋಕಸಭಾ ಚುನಾವಣೆಯನ್ನು ಕೇಂದ್ರಿಕರಿಸಿ ಮಂಡಿಸಿದ ಬಜೆಟ್‌ಗಿಂತಲೂ ಸಾಮಾಜಿಕ ಅಸ್ಮಿತೆಯನ್ನು, ಗುರುತಿಸುವಿಕೆಯನ್ನು ಕೇಂದ್ರಿಕರಿಸಿ ಮಂಡಿಸಿದ ಬಜೆಟ್ ಎನ್ನಬಹುದು. ಅತ್ಯಂತ ತುಚ್ಚೀಕರಿಸಲ್ಪಟ್ಟ ಅಲೆಮಾರಿ, ಅರೆ-ಅಲೆಮಾರಿ ಅದರಲ್ಲೂ ಕಾಡಿನಂಚಿನಲ್ಲಿ ಬದುಕುತ್ತಿರುವ ಕೊರಗ, ಸೋಲಿಗ, ಮಲೆಕುಡಿಯ, ಜೇನುಕುರುಬ, ಕಾಡುಕುರುಬ ಇತ್ಯಾದಿ ಸಮುದಾಯಗಳನ್ನು ಗುರುತಿಸಿದ ಬಜೆಟ್ ಇದಾಗಿದೆ. ಹಿಂದುಳಿದ ವರ್ಗಗಳ ಇತಿಹಾಸ ಪುರುಷರಾದ ನಾರಾಯಣಗುರು ಅವರನ್ನು, ಜ್ಯೋತಿಬಾ ಫುಲೆ ಅವರನ್ನು, ಸೂಫಿ ಸಂತರನ್ನು, ತತ್ವಪದಕಾರರನ್ನು ಅವರ ಹಿರಿಮೆಯೊಂದಿಗೆ ಗುರುತಿಸಿದ ಬಜೆಟ್ ಇದಾಗಿದೆ. ಆದಿಮ ಸಂಸ್ಕೃತಿಯ ಹೆಗ್ಗುರುತನ್ನೂ ಈ ಬಜೆಟ್ ಗುರುತಿಸಿದೆ. ಅಲ್ಲದೇ ಅಲ್ಪಸಂಖ್ಯಾತರ ಏಳಿಗೆ ಇರುವುದೇ ಶಿಕ್ಷಣದಲ್ಲಿ ಎಂದು ಗುರುತಿಸಿದ ಬಜೆಟ್ ಇದಾಗಿದೆ.

ಸಾಮಾಜಿಕ ನ್ಯಾಯದ ಮೂಲವನ್ನು ಅಂಬೇಡ್ಕರ್‌ರೊಂದಿಗೆ ಬಸವಣ್ಣನವರ ಕಾಯಕ ಮತ್ತು ದಾಸೋಹ ಸಂಸ್ಕೃತಿಯಲ್ಲಿ ಹುಡುಕಾಡಿದ ಬಜೆಟ್ ಇದು ಅನ್ನಬಹುದು. ಈ ಸಲದ ಬಜೆಟ್ ಪ್ರಥಮ ಬಾರಿಗೆ ಕರ್ನಾಟಕ ಮಾದರಿ ಅಭಿವೃದ್ಧಿ ಪರಿಕಲ್ಪನೆಯನ್ನು ಸಾರ್ವತ್ರಿಕ ಮತ್ತು ಜನಪ್ರಿಯಗೊಳಿಸಿದ್ದು ಒಂದು ವಾಸ್ತವ. ಈ ಬಜೆಟ್ ಅನ್ನು ಗುರುತಿಸುವಿಕೆ ರಾಜಕಾರಣದ ಭಾಗವಾಗಿ ನೋಡುವುದು ಕೂಡ ಅಷ್ಟೇ ಸೂಕ್ತ.

ವಿಶ್ಲೇಷಣೆ
ಮುಜಾಫ್ಫರ್ ಅಸ್ಸಾದಿ

ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಈ ಸಾರಿ ಬಜೆಟ್ ನೀಡಿದ ಕೊಡುಗೆಗಳನ್ನು ಎರಡು ರೂಪದಲ್ಲಿ ವಿಶ್ಲೇಷಿಸಬಹುದು. ಒಂದನೆಯದಾಗಿ, ಸಾರ್ವತ್ರಿಕ ಮತ್ತು ಜನಪ್ರಿಯ ಯೋಜನೆಗಳ ಫಲಾನುಭವಿಗಳ ರೂಪದಲ್ಲಿ. ಎರಡನೆಯದಾಗಿ, ಈ ವರ್ಗ ಅಥವಾ ಸಮುದಾಯಗಳ ಹೆಸರಿನೊಂದಿಗೆ ಪ್ರಸ್ತಾವಿತವಾದ ಅನುದಾನ ಮತ್ತು ಯೋಜನೆಗಳಲ್ಲಿ. ವಾಸ್ತವವಾಗಿ ಸರ್ಕಾರದ ಐದು ಗ್ಯಾರಂಟಿಗಳು ಒಂದು ಸಮುದಾಯ ಅಥವಾ ವರ್ಗಕ್ಕೆ ಸೀಮಿತವಾಗಿದೆ ಎಂದರೆ ಅದು ಒಂದು ನಿರ್ಮಿತ ಮಿಥ್ಯೆ. ಶಕ್ತಿ ಯೋಜನೆ, ಗೃಹ ಜ್ಯೋತಿ, ಗೃಹಲಕ್ಷ್ಮಿ ಯೋಜನೆ, ಯುವ ನಿಧಿ ಮತ್ತು ಅನ್ನಭಾಗ್ಯ ಯಥಾವತ್ತಾಗಿ ಈ ವರ್ಗಗಳಿಗೂ ವರ್ಗಾವಣೆಯಾಗುವುದು ದಿಟ. ಇದೊಂದು ದಿಟ್ಟ ಪ್ರಯೋಗ.

ಬಹುಸಂಖ್ಯಾತ ಫಲಾನುಭವಿಗಳು ಈ ವರ್ಗದವರಾಗಿರುವುದು ವಿಶೇಷವಲ್ಲ. ಮೂಲತಃ ಈ ವರ್ಗಗಳಲ್ಲಿ ಅತೀ ಹೆಚ್ಚು ಜನ ಬದುಕುವುದು ಬಡತನ ರೇಖೆಯಡಿಯಲ್ಲಿ, ಆರ್ಥಿಕ ಸಂಕಷ್ಟದಲ್ಲಿ. ಸಾಮಾಜಿಕ ಹಿಂದುಳಿಯುವಿಕೆಯಲ್ಲಿ, ಮಹಿಳೆಯ ಕೌಟಂಬಿಕ ಸ್ವಾತಂತ್ರ್ಯದ ನಷ್ಟದಲ್ಲಿ, ಹಿಂಸೆ ಮತ್ತು ಅಧೀನತೆಯಲ್ಲಿ, ಐದು ಗ್ಯಾರಂಟಿ ಯೋಜನೆಗಳು ಈ ಮೂರು ವರ್ಗಗಳಿಗೆ ಒಂದಿಷ್ಟು ನೆಮ್ಮದಿಯನ್ನು ತಂದವು, ನೆಲೆಗಳನ್ನು ಗಟ್ಟಿಗೊಳಿಸಿದವು. ಕೋವಿಡ್‌ನಿಂದ ತಲ್ಲಣಗೊಂಡಿದ್ದ ಚಿಕ್ಕ ಪುಟ್ಟ ವ್ಯಾಪಾರಿಗಳಿಗೆ ಹೊಸ ಭರವಸೆಯನ್ನು ನೀಡಿದವು. ಇದು ಹೊಸ ಆರ್ಥಿಕತೆಯ ಮೀಮಾಂಸೆಯನ್ನು ನಿರ್ಮಿಸಿತ್ತು. ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ರೈತ ಸಮೃದ್ಧಿ ಯೋಜನೆ, ಮತ್ಸ್ಯ ಆಶಾಕಿರಣ ಯೋಜನೆ, ಬಡ್ಡಿ ಸಾಲ ಯೋಜನೆ ಇತ್ಯಾದಿ ಉಳಿದ ಯೋಜನೆಗಳು ಕೂಡ ಈ ಮೂರು ವರ್ಗಗಳಿಗೆ ಸಮಷ್ಟಿಯಾಗಿ ತಲುಪುವುದರಲ್ಲಿ ಸಂಶಯವಿಲ್ಲ. ಐದು ಗ್ಯಾರಂಟಿಗಳ ನಡುವೆ ಇನ್ನೊಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ಮೀನುಗಾರಿಕೆ, ಜೇನುಗಾರಿಕೆ, ಕುರಿ ಸಾಕಣೆಗಳನ್ನು ಕೇಂದ್ರೀಕರಿಸಿ ಒಂದು ಲಕ್ಷ ಸ್ತ್ರಿ ಶಕ್ತಿ ಸಂಘಟನೆಗಳ ಸ್ಥಾಪನೆ ಕುರಿತು ಬಜೆಟ್‌ನಲ್ಲಿರುವ ಪ್ರಸ್ತಾವನೆ ಸ್ತ್ರೀ ಶಕ್ತಿ ಯೋಜನೆಗೆ ಇನ್ನಷ್ಟು ಶಕ್ತಿಯನ್ನು ತುಂಬಬಹುದು.

ಲೇಖಕ: ವಿಶ್ರಾಂತ ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾನಿಲಯ

ಮೊತ್ತ ಕೋಟಿಗಳಲ್ಲಿ (ಆವರಣದಲ್ಲಿ ಇರುವುದು 2023-24ರ ಲೆಕ್ಕ)

ಬಜೆಟ್ ಗಾತ್ರ	₹3,71,383	(₹3,27,747)
ರಾಜಸ್ವ ವೆಚ್ಚ	₹2,63,178	(₹2,38,410)
ರಾಜಸ್ವ ಕೊರತೆ	₹27,354	(₹12,522)
ವಿತ್ತೀಯ ಕೊರತೆ	₹82,981	(₹68,505)
ಸಾಲ	₹1,05,246	(₹85,818)

ಅನುದಾನ ಮತ್ತು ವರ್ಗಗಳು



ವಿಭಿನ್ನ ಸಮುದಾಯಗಳ ಅಸ್ತಿತ್ವವನ್ನು ಒಂದೆಡೆ ಗುರುತಿಸುತ್ತಾ, ಬಜೆಟ್ ಇವುಗಳ ಏಳಿಗೆಯ ಅಭಾವಕ್ಕೆ ಕಾರಣಗಳನ್ನು ಹುಡುಕಿದ್ದು ಶಿಕ್ಷಣದಲ್ಲಿ ಎನ್ನಬಹುದು. ಅಂಬೇಡ್ಕರ್ ಅವರ ಪ್ರಭಾವ ಈ ನಿಟ್ಟಿನಲ್ಲಿ ಖಂಡಿತವಾಗಿ ಕಂಡುಬರುತ್ತದೆ. ಹಿಂದುಳಿದ ವರ್ಗಕ್ಕೆ ಪೂರಕವಾಗಿ ಏಳು ವಿಷಯಗಳಿವೆ: ಮೆಟ್ರಿಕೋತ್ತರ ಹೊಸ ಹಾಸ್ಟೆಲ್‌ಗಳ ಸ್ಥಾಪನೆ, ಮೊರಾರ್ಜಿ ದೇಸಾಯಿ ಶಾಲೆಗಳ ಉನ್ನತೀಕರಣ, ಹಳೆ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಹೊಸ ಹಾಸ್ಟೆಲ್‌ಗಳ ಸ್ಥಾಪನೆ, ಮ್ಯಾಟ್ ಪರೀಕ್ಷೆಗಳಿಗಾಗಿ ತರಬೇತಿ, ನೀಟ್ ಪರೀಕ್ಷೆಗೆ ಪ್ರೊತ್ಸಾಹ ಧನ ಇತ್ಯಾದಿ. ಅಲ್ಲದೆ ಹಿಂದುಳಿದ ಕಲ್ಯಾಣ ಇಲಾಖೆಯಡಿಯಲ್ಲಿರುವ ಆಶ್ರಮ ಶಾಲೆಗಳ ಹೆಸರನ್ನು ದೇವರಾಜ ಅರಸು ಅವರ ಹೆಸರಿಗೆ ಬದಲಾಯಿಸುವ ಪ್ರಸ್ತಾವವಿದೆ. ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಸಾಮಾಜಿಕ ಸ್ಥಾನಮಾನವನ್ನು ಅಭ್ಯಸಿಸಲು ಆಯೋಗದ ರಚನೆ ಕೂಡ ಇಲ್ಲಿ ಪ್ರಸ್ತಾವಿಸಲಾಗಿದೆ.

ಈ ಬಜೆಟ್ ಅಲ್ಪಸಂಖ್ಯಾತರನ್ನು 'ಮುಸ್ಲಿಂ' ಎಂದು ಕರೆಯುವುದಿಲ್ಲ ಅಥವಾ ಆ ಪದವನ್ನು ಉಪಯೋಗಿಸುವುದಿಲ್ಲ. ಜನ ಸಾಮಾನ್ಯವಾಗಿ ಅಲ್ಪಸಂಖ್ಯಾತರೆಂದರೆ ಮುಸ್ಲಿಮರು ಎಂಬ ಸಮೀಕರಣ ಚಾಲ್ತಿಯಲ್ಲಿರುವ ಕಾರಣ ಈ ಪದದ ಬಳಕೆ ಇಲ್ಲಿ ಉಪಯೋಗಿಸಲಿಲ್ಲವೆಂದೇ ಹೇಳಬಹುದು. ಅದೇ ಸಂದರ್ಭದಲ್ಲಿ ಬಜೆಟ್ ಇನ್ನಿತರ ಅಲ್ಪಸಂಖ್ಯಾತರನ್ನು ಅವರ ಸಮುದಾಯದ ಹೆಸರಿನೊಂದಿಗೆ ಗುರುತಿಸುತ್ತದೆ- ಸಿಖ್ಖರು, ಕ್ರೈಸ್ತರು, ಬೌದ್ಧರು, ಕೆಲವು ಯೋಜನೆಗಳು ಎಲ್ಲಾ ಅಲ್ಪಸಂಖ್ಯಾತರಿಗೆ ಅನ್ವಯವಾಗುತ್ತವೆ. ಅದರ ಫಲಾನುಭವಿಗಳು ಒಂದೇ ಸಮುದಾಯಕ್ಕೆ ಸೀಮಿತವಾಗಿರುವುದಿಲ್ಲ. ಅವುಗಳಲ್ಲಿ ಬಹುಮುಖ್ಯವೆನಿಸುವುದು 50 ಮೊರಾರ್ಜಿ ಶಾಲೆಗಳ ಸ್ಥಾಪನೆ, ನೂರು ಮೆಟ್ರಿಕೋತ್ತರ ಹಾಸ್ಟೆಲ್‌ಗಳ ಸ್ಥಾಪನೆ, 25 ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ, ಸ್ತ್ರಿಶಕ್ತಿ ಸಂಘಟನೆಗಳ ಸ್ಥಾಪನೆ, 100 ಮೌಲಾನ ಆಜಾದ್ ಶಾಲೆಗಳ ಸ್ಥಾಪನೆ ಇತ್ಯಾದಿ. ವಕ್ಫ್ ಆಸ್ತಿಯ ಅಭಿವೃದ್ಧಿ, ಮೌಲ್ವಿಗಳಿಗೆ ತರಬೇತಿ, ಮಂಗಳೂರಿನಲ್ಲಿ ಹಜ್ ಭವನದ ಸ್ಥಾಪನೆ ಇತ್ಯಾದಿ-ಇವುಗಳನ್ನು ಮುಸ್ಲಿಂ ಅಲ್ಪಸಂಖ್ಯಾತರಿಗೆ ನಿಚ್ಚಳವಾಗಿ ಸೀಮಿತವಾಗಿರುವ ಯೋಜನೆಗಳು ಎನ್ನಬಹುದು. ಉಳಿದ ಅಲ್ಪಸಂಖ್ಯಾತರನ್ನು ಕೂಡ ಬಜೆಟ್ ಅವಗಣಿಸುವುದಿಲ್ಲ. ಜೈನ ಮತ್ತು ಸಿಖ್ಖರ ಪವಿತ್ರ, ತೀರ್ಥಸ್ಥಳಗಳ ಅಭಿವೃದ್ಧಿಗೆ ಉತ್ತೇಜನ, ಕ್ರೈಸ್ತರ ಅಭಿವೃದ್ಧಿಗೆ ₹200 ಕೋಟಿ ಧನ ಸಹಾಯ, ಬೌದ್ಧರ ಗ್ರಂಥವಾದ ತ್ರಿಪಿಟಿಕದ ಕನ್ನಡ ಅನುವಾದದ ಯೋಜನೆ ಇತ್ಯಾದಿಗಳನ್ನು ಈ ನಿಟ್ಟಿನಲ್ಲಿ ಪಟ್ಟಿ ಮಾಡಬಹುದು.

ಪರಿಶಿಷ್ಟ ಪಂಗಡದವರ ಬಹು ದಿನದ ಬೇಡಿಕೆಯಾದ ಆಶ್ರಮ ಶಾಲೆಗಳ ಪುನರ್ ರಚನೆಯನ್ನು ಮನ್ನಿಸಿದೆ. ವಾಸ್ತವವಾಗಿ ಆಶ್ರಮ ಶಾಲೆಗಳು ಬುಡಕಟ್ಟುಗಳ ಶೈಕ್ಷಣಿಕ ಜೀವನವನ್ನು ಸುಧಾರಿಸುವ ಕಡೆ ಗಮನಹರಿಸಿದ್ದು ಬಹಳ ಕಡಿಮೆ. ಸಾಂಸ್ಕೃತಿಕ ಪರಕೀಯತೆ, ಮತ್ತು ಜ್ಞಾನದ ಭಾಷೆಗಳ ತೊಡಕಿನಿಂದಾಗಿ ಆದಿವಾಸಿ ಮಕ್ಕಳಿಗೆ ಉನ್ನತ ಶಿಕ್ಷಣ ಒಂದು ಮರೀಚಿಕೆಯೆ ಸರಿ. ಇದನ್ನು ಸರಿಪಡಿಸಲು ಬಜೆಟ್‌ನಲ್ಲಿ ಒಂದಿಷ್ಟು ಪ್ರಸ್ತಾವಗಳಿವೆ. ಕಲಿಕಾ ತರಗತಿ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದು, ಹೊಸ ಹಾಸ್ಟೆಲ್‌ಗಳ ಸ್ಥಾಪನೆ, ಡ್ರೋನ್ ತಂತ್ರಜ್ಞಾನದಲ್ಲಿ ತರಬೇತಿ, ಪೋಸ್ಟ್ ಡಾಕ್ಟರಲ್ ಫೆಲೋಶಿಫ್ ಮೊದಲಾದವುಗಳನ್ನು ಉದಾಹರಿಸಬಹುದು. ಇನ್ನು ಮುಂದೆ ಆಶ್ರಮ ಶಾಲೆಗಳು ವಾಲ್ಮೀಕಿ ಮಹರ್ಷಿ ಹೆಸರಿನಲ್ಲಿ ಕರೆಯಲ್ಪಡುತ್ತವೆ, ವಾಸ್ತವಾಗಿ 23 ಬುಡಕಟ್ಟುಗಳಲ್ಲಿ ರೇಶನ್ ಕಾರ್ಡು ಇಲ್ಲದಿರುವುದನ್ನು ಬಜೆಟ್ ಗಮನಿಸಿದೆ. ಅಂಚಿನಲ್ಲಿರುವ ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ರೂಪಕಗಳಾದ ಕಲೆ, ಸಂಸ್ಕೃತಿಯನ್ನು ಉಳಿಸುವ ಮತ್ತು ಬೆಳೆಸುವ ಪ್ರಸ್ತಾವವಿದೆ. ಉಳಿದ ಪರಿಶಿಷ್ಟ ಪಂಗಡದವರಿಗೆ 'ನನ್ನ ಗುರುತು' ದಾಖಲೆಗಳ ಡಿಜಿಟಲೀಕರಣ ಎಂಬ ಹೊಸ ಯೋಜನೆ ಇದೆ.

ಮೇಲಿನ ಮೂರು ಸಮುದಾಯಗಳನ್ನು ಗಮನದಲ್ಲಿರಿಸಿ ವಿಶ್ಲೇಷಿಸುವುದಾದರೆ ಬಜೆಟ್ ಅನ್ನು ಗುರುತಿಸುವಿಕೆ ರಾಜಕಾರಣದ ಒಂದು ಭಾಗ ಎನ್ನಬಹುದು. ಸರ್ಕಾರಗಳು ಸಮುದಾಯಗಳನ್ನು ವಿವಿಧ ರೂಪದಲ್ಲಿ ಗುರುತಿಸುವುದು ಸಾಮಾನ್ಯ - ಮೀಸಲಾತಿ ಮೂಲಕ, ಜನಗಣತಿ ಮೂಲಕ, ಆಯೋಗಗಳ ಮೂಲಕ. ಬಜೆಟ್ ಈ ಗುರುತಿಸುವಿಕೆಗೆ ಹೊಸ ರೂಪ ಅಥವಾ ಕಾಯಕಲ್ಪ ನೀಡಿದೆ. ಇದನ್ನು 'ಸಿದ್ಧರಾಮಯ್ಯ ಸಮಾಜವಾದ'ದ ವಿಸ್ತೃತ ತಳಹದಿಯ ಭಾಗವೆಂದರೂ ತಪ್ಪಾಗಲಾರದು.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಸ್ತ್ರೀ ಸಬಲೀಕರಣಕ್ಕೆ ದಿಟ್ಟ ಹೆಜ್ಜೆ

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಡಿ ಘೋಷಿಸಿದಂತೆ ಮಹಿಳೆಯರಿಗೆ ಮಾಸಿಕ ₹ 2 ಸಾವಿರ ಒದಗಿಸಲು ಗೃಹಲಕ್ಷ್ಮಿ ಯೋಜನೆ ಜಾರಿಗೆ ₹ 28,608 ಕೋಟಿ ಒದಗಿಸಿರುವುದು ಮಹಿಳಾ ಸಬಲೀಕರಣದತ್ತ ಇಟ್ಟಿರುವ ದಿಟ್ಟ ಹೆಜ್ಜೆಯೇ ಆಗಿದೆ. ಇದು ಸ್ತುತ್ಯರ್ಹವಾದ ಕ್ರಮ.

ಹೆಣ್ಣು ಮಕ್ಕಳು ಈ ಹಣವನ್ನು ಮಕ್ಕಳು, ಕುಟುಂಬದ ಏಳಿಗೆಗೆ ಬಳಸುತ್ತಾರೆ. ಅವರಿಗೆ ತಮ್ಮ ಮಕ್ಕಳ ಮತ್ತು ಕುಟುಂಬದ ಸೌಲಭ್ಯಗಳೇ ಪ್ರಮುಖವಾಗಿರುತ್ತವೆ. ಅವರು, ಅವಶ್ಯಕ ಖರ್ಚುಗಳ ಮಿತವ್ಯಯವಾಗಿ ಬಳಸುವುದರಲ್ಲಿ ಪರಿಣಿತರಾಗಿರುತ್ತಾರೆ. ಗೃಹಬಳಕೆ ವಸ್ತುಗಳ ಖರೀದಿ, ಮಕ್ಕಳಿಗೆ ಪುಸ್ತಕ, ಟ್ಯೂಷನ್ ಶುಲ್ಕಕ್ಕಾಗಿ ವ್ಯಯಿಸುತ್ತಾರೆ.

ಇದರಿಂದ ಮಾರುಕಟ್ಟೆ ವೃದ್ಧಿಯಾಗಲಿದೆ. ಉತ್ಪಾದನೆ ಹೆಚ್ಚಾಗಿ ಉದ್ಯೋಗಾವಕಾಶಗಳು ಹೆಚ್ಚಲಿವೆ. ಅರ್ಥಶಾಸ್ತ್ರಜ್ಞರ ಪ್ರಕಾರ ಈ ಯೋಜನೆಗಳು ಹಣದುಬ್ಬರದ ದಿನಮಾನಗಳಲ್ಲಿ ಆರ್ಥಿಕತೆಗೆ ಹೊಸ ದಿಕ್ಕು ತೋರಿಸಿದಂತಾಗಿದೆ.

ಜೊತೆಗೆ ₹ 200 ಕೋಟಿ ವೆಚ್ಚದಲ್ಲಿ ರಾಜ್ಯದ ಒಂದು ಸಾವಿರ ಅಂಗನವಾಡಿಗಳ ನಿರ್ಮಾಣ ಕ್ರಮವು ಬಡ ಮಕ್ಕಳ ಕಲಿಕೆಗೆ ಇಂಬು ನೀಡಿದಂತಾಗುತ್ತದೆ. ಮಹಿಳಾ ಉದ್ದೇಶಿತ ಯೋಜನೆಗಳಿಗೆ ₹ 86 ಸಾವಿರ ಕೋಟಿ ಹಾಗೂ ಮಕ್ಕಳ ಉದ್ದೇಶಿತ ಯೋಜನೆಗಳಿಗಾಗಿ ₹ 54,600 ಕೋಟಿ ತೆಗೆದಿರಿಸಿರುವುದು ಸ್ವಾಗತಾರ್ಹ. ಇಷ್ಟು ಹಣ ಖರ್ಚು ಮಾಡಲು ಸಾಧ್ಯವಾದರೆ ಹಲವು ಗುಣಾತ್ಮಕ ಬದಲಾವಣೆಗಳನ್ನು ನಿರೀಕ್ಷಿಸಬಹುದು.

ಎಲ್ಲ ವರ್ಗದ ವಿದ್ಯಾರ್ಥಿನಿಯರಿಗೆ ಇನ್ನಷ್ಟು ಹಾಸ್ಟೆಲ್ ನಿರ್ಮಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾವ ಮಾಡಬೇಕಿತ್ತು.

ನಲಿನಿ ಮಹಾಗಾಂವಕರ್, ವಾಸ್ತುಶಿಲ್ಪಿ, ಕಲಬುರಗಿ

ಯುವನಿಧಿ ಮೊದಲ ಕಂತು: 1 ಲಕ್ಷ ಯುವಕರಿಗೆ ನೆರವು

- ಕೇಂದ್ರ-ರಾಜ್ಯ ಸರ್ಕಾರಗಳ ಎಲ್ಲ ಇಲಾಖೆ, ಸಂಸ್ಥೆಗಳ ನೇಮಕಾತಿ ಅಧಿಸೂಚನೆ ಪ್ರಕಟಣೆಗೆ ಒಂದೇ ಜಾಲತಾಣ
- ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಕೌಶಲ ಅಕಾಡೆಮಿ ಸ್ಥಾಪನೆ
- ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಮತ್ತು ನಿರಂತರ ಅನುಸರಣೆಗಾಗಿ ₹ 20 ಕೋಟಿ ವೆಚ್ಚದಲ್ಲಿ ಪ್ರತಿ ಜಿಲ್ಲೆಯಲ್ಲೂ 'ಒಂದು ಡೇ-ಕೇರ್ ಕಿಮೋಥೆರಪಿ' ಕೇಂದ್ರದ ಸ್ಥಾಪನೆಗೆ ಕ್ರಮ
- ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ ಅನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ಚಿಕಿತ್ಸೆ ನೀಡಲು 20 ಜಿಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಮ್ಯಾಮೋಗ್ರಫಿ ಯಂತ್ರಗಳ ಅಳವಡಿಕೆಗೆ ನಿರ್ಧಾರ
- ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಉಡುಪಿ, ಕೋಲಾರ, ದಾವಣಗೆರೆ ಜಿಲ್ಲಾ ಆಸ್ಪತ್ರೆಗಳಿಗೆ ಕಾಲ್ಪಸ್ಕೋಪಿ ಉಪಕರಣಗಳ ಖರೀದಿಗೆ ₹21 ಕೋಟಿ
- ಆನೇಕಲ್, ನೆಲಮಂಗಲ, ಹೊಸಕೋಟೆ, ಶೃಂಗೇರಿ, ಶಿರಹಟ್ಟಿ ಖಾನಾಪುರ, ಬಳ್ಳಾರಿ, ಯಳಂದೂರಿನಲ್ಲಿ ಒಟ್ಟು ₹ 280 ಕೋಟಿ ವೆಚ್ಚದಲ್ಲಿ ತಲಾ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ
- 15 ಜಿಲ್ಲೆಗಳಲ್ಲಿ ಆಧುನಿಕ ಕ್ರಿಟಿಕಲ್ ಕೇರ್ ಬ್ಲಾಕ್‌ಗಳ ಸ್ಥಾಪನೆ. ಪ್ರಸಕ್ತ ಸಾಲಿನಲ್ಲಿ ಉಡುಪಿ, ದಾವಣಗೆರೆ, ವಿಜಯಪುರ, ಮೈಸೂರು, ಮಂಡ್ಯ, ಧಾರವಾಡ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ₹ 187 ಕೋಟಿ ವೆಚ್ಚದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು

ಮಹಿಳಾ ಆರೋಗ್ಯಕ್ಕೆ ಸಿ.ಎಂ ಸ್ಪಂದನೆ

ರಾಜ್ಯ ಸರ್ಕಾರ ಈ ಬಾರಿಯ ಬಜೆಟ್ಟಿನಲ್ಲಿ 20 ಜಿಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಮ್ಯಾಮೋಗ್ರಫಿ ಯಂತ್ರಗಳು ಮತ್ತು ಕೆಲವು ಜಿಲ್ಲಾ ಆಸ್ಪತ್ರೆಗಳಲ್ಲಿ ಕಾಲ್ಪೊಸ್ಕೋಪಿ ಉಪಕರಣ ಖರೀದಿಗೆ 21 ಕೋಟಿ ರೂಪಾಯಿ ನಿಗದಿಪಡಿಸಿರುವುದು ಗ್ರಾಮೀಣ ಭಾಗದ ಮಹಿಳೆಯರಲ್ಲಿ ಭರವಸೆಯ ಭಾವ ಮೂಡಿಸಿದೆ. ಕ್ಯಾನ್ಸರ್ ವಿರುದ್ಧದ ಸೆಣಸಾಟದಲ್ಲಿ ರೋಗ ಪತ್ತೆಯೇ ಪ್ರಥಮ ಹೆಜ್ಜೆಯಾಗಿದ್ದು ಅದಕ್ಕೆ ಆದ್ಯತೆ ಕೊಟ್ಟಿರುವುದು ಆತಂಕವನ್ನು ದೂರ ಮಾಡಿದೆ. ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ ಆಧಾರಿತ ಸಂಶೋಧನೆಗಳು ಮತ್ತು ಬೆಳವಣಿಗೆಗಳು ಆಗಿದ್ದರೂ ಜನಸಾಮಾನ್ಯರನ್ನು ಅವು ತಲುಪುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಯೋಗಾಲಯಗಳ ಸ್ಥಾಪನೆಗೆ ಮುಂದಾಗಿರುವುದು ಸರ್ಕಾರಕ್ಕಿರುವ ಕಾಳಜಿಯನ್ನು ತೋರಿಸುತ್ತದೆ.

ಗ್ರಾಮೀಣ ಮಹಿಳೆಯರು ಬಡತನ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ಮತ್ತು ಮನೆಯ ಪುರುಷರ ಬೇಜವಾಬ್ದಾರಿಗಳಿಂದ ಅನಾರೋಗ್ಯಕ್ಕೀಡಾಗುವುದು ಸಾಮಾನ್ಯ. ಅವರು ಪೌಷ್ಟಿಕ ಆಹಾರದ ಕೊರತೆ, ಅನೈರ್ಮಲ್ಯ, ಸೋಂಕು ಮತ್ತು ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿದ್ದಾರೆ. ಇವುಗಳೊಂದಿಗೆ ಇತ್ತೀಚೆಗೆ ಹೆಚ್ಚಾಗುತ್ತಿರುವ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳು ಸೇರಿಕೊಂಡಿವೆ. ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವತ್ತ ಸರ್ಕಾರ ಹೆಜ್ಜೆ ಇರಿಸಿರುವುದು ಸ್ವಾಗತಾರ್ಹವಾಗಿದೆ.

ಮಹಿಳೆಯರನ್ನು ಬಾಧಿಸುವ ಅನೇಕ ಆರೋಗ್ಯ ಸಮಸ್ಯೆಗಳಲ್ಲಿ ಸ್ತನ ಕ್ಯಾನ್ಸರ್ ಮುಂಚೂಣಿಯಲ್ಲಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡುಬರುತ್ತಿರುವುದಕ್ಕಿಂತ ಹೆಚ್ಚಾಗಿ ಭಾರತದಲ್ಲಿ ಕಿರಿಯ ವಯಸ್ಸಿನಲ್ಲಿ ಸ್ತನದ ಕ್ಯಾನ್ಸರ್ ಕಂಡುಬರುತ್ತಿದೆ. ಸ್ತನದ ಕ್ಯಾನ್ಸರಿನಿಂದ ಮರಣಿಸುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ. ಬಹಳಷ್ಟು ಮಹಿಳೆಯರು ಆರಂಭಿಕ ಹಂತದಲ್ಲಿಯೇ ತಪಾಸಣೆಗೊಳಪಡದಿರುವುದು, ರೋಗಪತ್ತೆಗೆ ಪ್ರಯೋಗಾಲಯ ಸೌಲಭ್ಯಗಳು ಇಲ್ಲದಿರುವುದರಿಂದ ದೂರದೂರಿಗೆ ಪ್ರಯಾಣಿಸಲು ಮತ್ತು ಅದಕ್ಕೆ ತಗಲುವ ಖರ್ಚಿಗೆ ಹಿಂಜರಿದು ಕ್ಯಾನ್ಸರ್ ಉಲ್ಬಣಿಸಿದ ಮೇಲೆಯೇ ಅನಿವಾರ್ಯವಾಗಿ ಆಸ್ಪತ್ರೆಯ ಮೆಟ್ಟಿಲು ಹತ್ತುತ್ತಾರೆ. ಈ ಸಮಸ್ಯೆಯನ್ನು ಬಜೆಟ್ ಸರಿಯಾಗಿ ಗುರುತಿಸಿದ್ದು, ಪರಿಹಾರ ಕಂಡುಕೊಳ್ಳುವತ್ತ ಸರಿಯಾದ ಮಾರ್ಗದಲ್ಲಿ ಹೆಜ್ಜೆಯಿಟ್ಟಿದೆ. ಮ್ಯಾ ಮೋ ಗ್ರಾ ಮ್ ಪರೀಕ್ಷೆಯ ಮೂಲಕ ಗೆಡ್ಡೆಯನ್ನು ರೋಗಲಕ್ಷಣಗಳು ಉಂಟುಮಾಡುವಷ್ಟು ದೊಡ್ಡದಾಗುವ ಮೊದಲೇ ಪತ್ತೆ ಹಚ್ಚಲು ಸಹಾಯವಾಗುತ್ತದೆ. ಆಗ ಸಹಜವಾಗಿ ಚಿಕಿತ್ಸೆಗೂ ಸುಲಭವಾಗುತ್ತದೆ. ಇದರಿಂದ ಜೀವಕ್ಕೆ ಎರವಾಗುವ ಪರಿಸ್ಥಿತಿ ಉದ್ಭವಿಸಲಾರದು. ಗೆಡ್ಡೆಯು ಪೆನ್ಸಿಲ್ ತುದಿಯಷ್ಟು (1 ಮಿಮೀ) ಅಥವಾ ಸ್ವಲ್ಪ ದೊಡ್ಡದಿರುವಾಗಲೇ ಮ್ಯಾಮೋಗ್ರಫಿಯ ಮುಖಾಂತರ ಪತ್ತೆ ಹಚ್ಚಬಹುದಾಗಿದೆ.

ವಿಶ್ಲೇಷಣೆ
ಡಾ. ವಸುಂಧರಾ ಭೂಪತಿ

ರಾಷ್ಟ್ರೀಯ ಕ್ಯಾನ್ಸರ್ ನೋಂದಣಿ ಕಾರ್ಯಕ್ರಮದ (ಎನ್‌ಸಿಆರ್‌ಪಿ) ಅಂಕಿಅಂಶಗಳ ಪ್ರಕಾರ ಕರ್ನಾಟಕದಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಮತ್ತು ಮರಣ ಪ್ರಮಾಣ ಎರಡೂ ಏರಿಕೆಯಾಗಿದೆ. ಅದರಲ್ಲಿಯೂ ಮರಣ ಪ್ರಮಾಣ ಎರಡರಷ್ಟು ಹೆಚ್ಚಾಗಿದೆ. ಸ್ತನ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆಯು 2019ರಲ್ಲಿ 13,085, 2020ರಲ್ಲಿ 13,427, 2021ರಲ್ಲಿ 13,774 ಮತ್ತು 2022ರಲ್ಲಿ 14,126 ಆಗಿದೆ. ನ್ಯಾಷನಲ್ ಸೆಂಟರ್ ಫಾರ್ ಡಿಸೀಸ್ ಇನ್ಫರ್ಮ್ಯಾಟಿಕ್ಸ್ ಅಂಡ್ ರಿಸರ್ಚ್ (ಎನ್‌ಸಿಡಿಐಆರ್) ವರದಿ ಮಾಡಿರುವಂತೆ ವಿಶೇಷವಾಗಿ 25-30 ವರ್ಷದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿರುವುದು ದಿಗಿಲು ಹುಟ್ಟಿಸುತ್ತದೆ. ಮುಖ್ಯಮಂತ್ರಿಯವರು ಈ ಯೋಜನೆ ರೂಪಿಸುವಾಗ ಇದನ್ನೆಲ್ಲ ಗಮನಿಸಿದಂತಿದೆ.

ಸ್ತನ ಕ್ಯಾನ್ಸರಿನೊಂದಿಗೆ ಗರ್ಭಕಂಠದ ಕ್ಯಾನ್ಸರ್ ಮಹಿಳೆಯರಲ್ಲಿ ನಾಲ್ಕನೇ ಅತ್ಯಂತ ಸಾಮಾನ್ಯ ಕ್ಯಾನ್ಸರ್ ಆಗಿದೆ. ಜಾಗತಿಕವಾಗಿ ಪ್ರತಿವರ್ಷ ಪತ್ತೆಯಾಗುವ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳ ಪೈಕಿ ಕಾಲುಭಾಗದಷ್ಟು ಪ್ರಕರಣಗಳು ಭಾರತದಲ್ಲಿಯೇ ಪತ್ತೆಯಾಗುತ್ತಿವೆ. ಯಾವುದೇ ಲಕ್ಷಣ ಇಲ್ಲದೇ ಇದು ವೇಗವಾಗಿ ಹರಡುತ್ತದೆ. 35 ವರ್ಷ ಮೇಲ್ಪಟ್ಟ ಮಹಿಳೆಯರಲ್ಲಿ ಇದು ಸಾಮಾನ್ಯ. ಹೆಚ್ಚು ಹೆರಿಗೆಗಳು, ದೀರ್ಘಕಾಲ ಗರ್ಭನಿರೋಧಕಗಳ ಬಳಕೆ, ರೋಗನಿರೋಧಕ ಶಕ್ತಿ ಕುಂಠಿತವಾಗಿರುವ ಸಂದರ್ಭಗಳಲ್ಲಿ, ಪದೇ ಪದೇ ಗರ್ಭಪಾತಗಳಾಗುವುದು ಮುಂತಾದ ಕಾರಣಗಳಿಂದ ಗರ್ಭಕಂಠದ ಕ್ಯಾನ್ಸರಿಗೆ ಕಾರಣವಾಗುವ ವೈರಾಣುವಿನ ಸೋಂಕಿಗೆ ಮಹಿಳೆಯರು ಒಳಗಾಗುವ ಸಂಭವ ಹೆಚ್ಚು. ಆದ್ದರಿಂದ ಕನಿಷ್ಠ ವರ್ಷಕ್ಕೊಮ್ಮೆ 30 ವರ್ಷ ಮೇಲ್ಪಟ್ಟ ಎಲ್ಲ ಮಹಿಳೆಯರೂ ಗರ್ಭಕಂಠದ ಕ್ಯಾನ್ಸರ್ ಪರೀಕ್ಷೆಗೆ ಒಳಗಾಗಲೇಬೇಕು. ಆರಂಭದಲ್ಲೇ ಗರ್ಭಕಂಠದ ಕ್ಯಾನ್ಸರ್ ಪತ್ತೆಯಾದಲ್ಲಿ ಚಿಕಿತ್ಸೆಗೆ ಸುಲಭ ಮತ್ತು ಗುಣಮುಖವಾಗುವ ಸಾಧ್ಯತೆ ಹೆಚ್ಚು. ಹೀಗಾಗಿ ಸರ್ಕಾರದಿಂದ ಇಂತಹದ್ದೊಂದು ಕ್ರಮ ಅಗತ್ಯವಾಗಿತ್ತು.

ಕ್ಯಾನ್ಸರ್ ರೋಗಿಗಳು ದೂರದ ರಾಜಧಾನಿಗೆ ಬಂದು ವಿವಿಧ ಆಸ್ಪತ್ರೆಗಳಿಗೆ ಎಡತಾಕಿ ಚಿಕಿತ್ಸೆ ಪೂರ್ಣಗೊಳಿಸಲು ಆಸ್ತಿ ಮಾರುವ ಸ್ಥಿತಿ ಇದೆ. ಜೀವವನ್ನು ಉಳಿಸಿಕೊಳ್ಳಲು ಸಾಲದ ಕುಣಿಕೆಯಲ್ಲಿ ಜಾರುತ್ತಿರುವ ಕುಟುಂಬಗಳ ಸಂಖ್ಯೆಯೂ ಹೆಚ್ಚಾಗಿದೆ. ಇದನ್ನು ಮನಗಂಡು ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಸುಲಭವಾಗುವಂತೆ ಪ್ರತಿ ಜಿಲ್ಲೆಯಲ್ಲಿ ಒಂದು ಡೇ ಕೇರ್ ಕೀಮೋಥೆರಪಿ ಕೇಂದ್ರ ಸ್ಥಾಪನೆಗೆ ಸರ್ಕಾರ 20 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದೆ. ಇದು ಕ್ಯಾನ್ಸರಿನಿಂದ ಬಳಲುತ್ತಿರುವ ರೋಗಿಗಳಲ್ಲಿ ಆಶಾದಾಯಕ ಭಾವನೆ ಹುಟ್ಟಿಸಿದೆ. ತೀರಾ ತುರ್ತುಪರಿಸ್ಥಿತಿಯಲ್ಲಿರುವ ರೋಗಿಗಳಿಗೆ ಅನುಕೂಲವಾಗುವ ದಿಸೆಯಲ್ಲಿ ಏಳು ಜಿಲ್ಲೆಗಳಲ್ಲಿ ಕ್ರಿಟಿಕಲ್ ಕೇರ್ ಬ್ಲಾಕ್ ಕಟ್ಟಡ ಆರಂಭಿಸಲು 187 ಕೋಟಿ ರೂಪಾಯಿಗಳನ್ನು ಸರ್ಕಾರ ತೆಗೆದಿರಿಸಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಜನರ ಪಾಲಿಗೆ ಆರೋಗ್ಯ ಕನಸಿನ ಗಂಟಾಗಿತ್ತು. ಜನಸಾಮಾನ್ಯರ ಆರೋಗ್ಯ ಸುಧಾರಣೆಗೆ 46 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಮುಂದಾಗಿರುವುದು ಮತ್ತು ಅದಕ್ಕಾಗಿ ₹221 ಕೋಟಿ ತೆಗೆದಿರಿಸಿರುವುದು ಕಲ್ಯಾಣ ಕರ್ನಾಟಕದ ಜನತೆಯಲ್ಲಿ ನಿರಾಳ ತಂದಿದೆ. ಜೊತೆಗೆ ಅನೇಕ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಪತ್ತೆ ಮಾಡಲು ಮತ್ತು ಚಿಕಿತ್ಸೆಗೆ ಅನುಕೂಲ ಮಾಡಿಕೊಟ್ಟಿರುವುದು ಉತ್ತಮ ಬೆಳವಣಿಗೆ.

ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ

ಬಹಳ ಜನರಿಗೆ ಕೆ.ಸಿ. ಜನರಲ್ ಆಸ್ಪತ್ರೆ ಎಂದರೆ ಕೆಂಪ ಚೆಲುವರಾಜಮ್ಮಣ್ಣಿ ಸಾರ್ವಜನಿಕ ಆಸ್ಪತ್ರೆ ಎಂದು ತಿಳಿದಿಲ್ಲ. ಈ ಆಸ್ಪತ್ರೆಯು 1939ರಲ್ಲಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ಆರಂಭವಾಯಿತು. ಮೈಸೂರು ಸಂಸ್ಥಾನದ ಮಹಾರಾಣಿ ಕೆಂಪ ಚೆಲುವಾಜಮ್ಮಣ್ಣಿಯವರು ಒಮ್ಮೆ ಬೆಂಗಳೂರಿನಲ್ಲಿ ಸಾರೋಟಿನಲ್ಲಿ ಹೋಗುವಾಗ ಬೀದಿಬದಿಯಲ್ಲಿ ಹೆರಿಗೆ ನೋವಿನಿಂದ ಬಳಲುತ್ತಿದ್ದ ಮಹಿಳೆಯೊಬ್ಬಳನ್ನು ನೋಡಿ ಆಕೆಯ ದುಃಖಮಯ ಪರಿಸ್ಥಿತಿಯನ್ನು ನೋಡಿ ಮನನೊಂದರು. ಆಗ ಅವರು ಬೆಂಗಳೂರು ನಗರದಲ್ಲಿ ಹೆರಿಗೆ ಆಸ್ಪತ್ರೆಯೊಂದರ ಅವಶ್ಯಕತೆಯನ್ನು ಮನಗಂಡು ತಮ್ಮ ಒಡವೆಗಳನ್ನು ನೀಡಿ ಹೆರಿಗೆ ಆಸ್ಪತ್ರೆ ಆರಂಭವಾಗಲು ಕಾರಣವಾದರು. ನಂತರ ಈ ಆಸ್ಪತ್ರೆ ಅವರ ಹೆಸರಿನಿಂದಲೇ (ಕೆ.ಸಿ. ಜನರಲ್ ಆಸ್ಪತ್ರೆ ಎಂದರೆ ಕೆಂಪ ಚೆಲುವರಾಜಮ್ಮಣ್ಣಿ ಸಾರ್ವಜನಿಕ ಆಸ್ಪತ್ರೆ) ಖ್ಯಾತಿ ಪಡೆಯಿತು. ಇಂದು ಬೆಂಗಳೂರು ನಗರ ಮಾತ್ರವಲ್ಲ ಸುತ್ತಮುತ್ತಲಿನ ಹಲವು ಹಳ್ಳಿಗಳಿಂದ ಪ್ರತಿವರ್ಷ ಸಾವಿರಾರು ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಹೆರಿಗೆಗೆ ಮತ್ತು ಶಸ್ತ್ರಚಿಕಿತ್ಸೆಗೆ ಈ ಆಸ್ಪತ್ರೆಗೆ ಬರುತ್ತಾರೆ. ಇಂಥ ಆಸ್ಪತ್ರೆಯನ್ನು ಮತ್ತಷ್ಟು ಉನ್ನತೀಕರಿಸಲು ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಮೂಲಸೌಕರ್ಯಕ್ಕೆ ಬಜೆಟ್ಟಿನಲ್ಲಿ 150 ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ. ಆರೋಗ್ಯ ಕ್ಷೇತ್ರದ ಸುಧಾರಣೆಯ ವಿಷಯದಲ್ಲಿ ಈ ಬಜೆಟ್ ದೃಢವಾದ ಹೆಜ್ಜೆ ಇಟ್ಟಿರುವುದು ಎದ್ದು ಕಾಣುತ್ತದೆ.

ಲೇಖಕಿ: ಆಯುರ್ವೇದ ವೈದ್ಯೆ

ಕನ್ನಡ, ಸಂಸ್ಕೃತಿಗೆ ಸಿಕ್ಕಿದ್ದೇನು?

- ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಸ್ಮಾರಕವನ್ನು ನಿರ್ಮಿಸಲಾಗುವುದು
- ತತ್ವಪದಕಾರರು, ಸೂಫಿಗಳ ಬದುಕು, ಸಂದೇಶಗಳ ಅಧ್ಯಯನ ಕ್ಕಾಗಿ ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ಅಧ್ಯಯನ ಪೀಠ ಸ್ಥಾಪನೆ. ಶಿವಯೋಗಿ ಸಿದ್ಧರಾಮೇಶ್ವರರ ಬದುಕು-ಬರಹ ಕುರಿತು ಅಕ್ಕಮಹಾದೇವಿ ಮಹಿಳಾ ವಿ.ವಿ ಯಲ್ಲಿ ಅಧ್ಯಯನ ಪೀಠ ಆರಂಭ
- ಅಳಿವಿನಂಚಿನಲ್ಲಿರುವ ಜಾನಪದ ಕಲಾಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ, ಕರಗ ಮುಂತಾದವುಗಳ ಪುನರುಜ್ಜೀವನಕ್ಕೆ ತರಬೇತಿ ಮತ್ತು ಪ್ರದರ್ಶನಗಳ ಆಯೋಜನೆ
- ತ್ರಿಪದಿಗಳ ಮೂಲಕ ಜೀವನಸಾರ ಹೇಳಿದ ವಚನಕಾರ ಸರ್ವಜ್ಞನ ಸ್ಮಾರಕವನ್ನು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸಲಾಗುವುದು
- ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರದ ಮೂಲಕ ತತ್ವಪದ, ಕೀರ್ತನ ಸಾಹಿತ್ಯ ಮತ್ತು ಭಕ್ತಿ ಚಳವಳಿ ಸೇರಿದಂತೆ ಸಾಹಿತ್ಯ ಸಮೀಕ್ಷೆ, ಸಂಗ್ರಹಣೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೊಳ್ಳಲು ₹ 1 ಕೋಟಿ ಒದಗಿಸಲಾಗುವುದು



ಒಂದು ಸಾವಿರ ಪಂಚಾಯಿತಿಗಳಲ್ಲಿ 'ನನ್ನ ಗುರುತು'

- ಕಲ್ಯಾಣ ಕರ್ನಾಟಕ ಭಾಗದ ಎಸ್‌ಸಿ ಮತ್ತು ಎಸ್‌ಟಿ ಪಂಗಡದವರಿಗೆ ಸರ್ಕಾರಿ ಮಾನ್ಯತೆಯ ದಾಖಲೆಗಳನ್ನು ಡಿಜಿ ಲಾಕರ್ ಆ್ಯಪ್‌ನಲ್ಲಿ ಸುರಕ್ಷಿತವಾಗಿರಿಸಲು 1,000 ಪಂಚಾಯ್ತಿಗಳಲ್ಲಿ 'ನನ್ನ ಗುರುತು' ಅಭಿಯಾನ
- 'ಪ್ರೇರಣಾ' ಕಾರ್ಯಕ್ರಮದಡಿ ಸ್ವಸಹಾಯ ಗುಂಪುಗಳ ಮಹಿಳೆಯರು, ಗ್ರಾಮ ಪಂಚಾಯಿತಿಗಳ ಮಹಿಳಾ ಸದಸ್ಯರು ಹಾಗೂ ಗ್ರಾಮೀಣ ಪ್ರದೇಶದ ಮುಂಚೂಣಿಯ ಕಾರ್ಯಕರ್ತೆಯರಲ್ಲಿ 'ಮುಟ್ಟಿನ ಕಪ್' ಬಳಕೆಗೆ ಪ್ರೋತ್ಸಾಹ
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಡಳಿತ ವ್ಯವಸ್ಥೆ ಬಲವರ್ಧನೆಗೆ ಸದಸ್ಯರಿಗೆ ಮತ್ತು ಒಕ್ಕೂಟಗಳ ಸದಸ್ಯರಿಗೆ ತರಬೇತಿ. ದೇಶದ ಪ್ರಥಮ 'ವರ್ತುಲ ಆರ್ಥಿಕತೆ'ಯ ಪ್ರಯೋಗಾಲಯ ಸ್ಥಾಪನೆಗೆ ₹2 ಕೋಟಿ
- ಜೀತ ಕಾರ್ಮಿಕ ಪದ್ಧತಿಯಿಂದ ಬಿಡುಗಡೆಯಾದ ಕಾರ್ಮಿಕರ ಪುನರ್ವಸತಿಗಾಗಿ ನೀಡುತ್ತಿರುವ ಮಾಸಿಕ ಪ್ರೋತ್ಸಾಹಧನ ₹2,000 ಕ್ಕೆ ಏರಿಕೆ
- ಆಯ್ದ 100 ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಉದ್ಯೋಗಾಧಾರಿತ ಕೌಶಲ ತರಬೇತಿಗಾಗಿ 'ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ' ಆರಂಭ
- ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತಲಾ ₹1 ಲಕ್ಷ ನೆರವಿನೊಂದಿಗೆ ಎಸ್‌ಎಚ್‌ಜಿ ಸಹಯೋಗದೊಂದಿಗೆ ಎಣ್ಣೆ ಗಾಣ ಸ್ಥಾಪನೆ



ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿಗೆ ಒತ್ತು

ವಿಶ್ಲೇಷಣೆ

ಡಿ.ಆರ್.ಪಾಟೀಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಸರ್ವರಿಗೂ ಪಾಲು' ಎಂಬ ಮಂತ್ರದ ಅಡಿಯಲ್ಲಿ ಈ ಬಾರಿಯ ಬಜೆಟ್‌ನಲ್ಲಿ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ನೀರಾವರಿ ಕ್ಷೇತ್ರಗಳ ಅಭಿವೃದ್ಧಿಗಾಗಿ ಭರಪೂರ ಯೋಜನೆಗಳನ್ನು ಘೋಷಿಸಿದ್ದಾರೆ.

ನೀರಾವರಿ ಕ್ಷೇತ್ರದ ಅಭಿವೃದ್ಧಿಗಾಗಿ ಬೃಹತ್ ನೀರಾವರಿ ಯೋಜನೆಗಳ ಅನುಷ್ಠಾನ ಕುರಿತು ಘೋಷಣೆ ಮಾಡಲಾಗಿದೆ.

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿದ್ದರಿಂದ ಉಂಟಾಗಿರುವ ನೀರು ಸಂಗ್ರಹ ಸಾಮರ್ಥ್ಯದ ಕೊರತೆ ನಿವಾರಿಸಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮತೋಲನಾ ಜಲಾಶಯ ನಿರ್ಮಾಣಕ್ಕೆ ವಿವರವಾದ ಯೋಜನಾ ವರದಿ ಸಿದ್ಧವಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳೊಂದಿಗೆ ಸಮಾಲೋಚನೆ ಪ್ರಕ್ರಿಯೆ ಚಾಲನೆಗೊಳಿಸಿದ್ದು, ಯೋಜನೆ ಕಾರ್ಯಗತಗೊಳಿಸಲು ಆದ್ಯತೆ ನೀಡಲಾಗುವುದು ಎಂದು ಹೇಳಿರುವುದು ಸ್ವಾಗತಾರ್ಹವಾಗಿದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ದೊಡ್ಡನಗರದ ಬಳಿಯ ವಿತರಣಾ ತೊಟ್ಟಿಯವರೆಗೆ ಪೂರ್ವ ಪರೀಕ್ಷಾರ್ಥವಾಗಿ ನೀರು ಹರಿಸಿ ಚಾಲನೆಗೊಳಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯೋಜನೆಯ ಎಲ್ಲಾ ಲಿಫ್ಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಗುರುತ್ವ ಕಾಲುವೆಗೆ ನೀರು ಹರಿಸಲಾಗುವುದರ ಜೊತೆ ಸಮತೋಲನಾ ಜಲಾಶಯದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಲಾಗಿದೆ.

ಉತ್ತರ ಕರ್ನಾಟಕದ ಪ್ರಮುಖ ಯೋಜನೆಯಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಯೋಜನೆಯಡಿಯ ಉಪ ಯೋಜನೆಗಳನ್ನು ಪೂರ್ಣಗೊಳಿಸಲು ಹಾಗೂ ಇದರಡಿ ಭೂಸ್ವಾಧೀನ ಮತ್ತು ಪುನರ್ವಸತಿ ಹಾಗೂ ಪುನರ್ ನಿರ್ಮಾಣಕ್ಕೆ ಆದ್ಯತೆ ನೀಡುವುದಾಗಿ ಹೇಳಿದ್ದಾರೆ. ಕೃಷ್ಣಾ ನ್ಯಾಯಮಂಡಳಿ-2ರ ಅಂತಿಮ ತೀರ್ಪಿನ ಬಾಕಿಯಿರುವ ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದರೊಂದಿಗೆ ಅಗತ್ಯವಿರುವ ಕಾನೂನಾತ್ಮಕ ಕ್ರಮಗಳನ್ನು ಮುಂದುವರಿಸಲಾಗುವುದು ಎಂದು ಹೇಳಿರುವುದು ಹೊಸ ಭರವಸೆ ಮೂಡಿಸಿದೆ.

ಮಳೆಯ ಕೊರತೆಯಿಂದಾಗಿ ಸಣ್ಣ ನೀರಾವರಿ ಕೆರೆಗಳ ವಿನ್ಯಾಸಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರು ದೊರೆಯುತ್ತಿಲ್ಲ. ಕುಡಿಯುವ ನೀರಿಗೂ ತೊಂದರೆಯಾಗುತ್ತಿದೆ. ಇಂತಹ ಕೆರೆಗಳನ್ನು ಸಮೀಪದ ಜೀವನದಿಗಳಿಂದ ತುಂಬಿಸಲು ಯೋಜನೆಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ.

ಸಣ್ಣ ನೀರಾವರಿ ಇಲಾಖೆ ಮೂಲಕ ರಾಯಚೂರಿನ ಚಿಕ್ಕಲಪರ್ವಿ ಬಳಿ ತುಂಗಭದ್ರಾ ನದಿಗೆ ಬಿಸಿಬಿ ನಿರ್ಮಾಣ, ಮಾನ್ವಿ ತಾಲ್ಲೂಕಿನ ಕುರ್ಡಿಕೆರೆ ತುಂಬಿಸುವುದು, ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಕೆಸ್ತೂರು ಕೊಪ್ಪಲು ಏತ ನೀರಾವರಿ, ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದ ಬಳಿ ಏತ ನೀರಾವರಿ ಸೇರಿದಂತೆ ಇನ್ನಿತರ ಯೋಜನೆಗಳ ಅನುಷ್ಠಾನಕ್ಕೆ ₹850 ಕೋಟಿ ಮೀಸಲಿಡುವುದಾಗಿ ಘೋಷಿಸಲಾಗಿದೆ.

ಕುಡಿಯುವ ನೀರು, ಕೃಷಿ ಹಾಗೂ ಕೈಗಾರಿಕೆಗಳಿಗೆ ನೀರನ್ನು ಸಮರ್ಪಕವಾಗಿ ಪೂರೈಸಲು ಕೆರೆಗಳ ಅಭಿವೃದ್ಧಿ, ಚೆಕ್ ಡ್ಯಾಂ ಮತ್ತು ಬ್ರಿಡ್ಜ್ ಕಂ ಬ್ಯಾರೇಜ್ ನಂತಹ 115 ಕಾಮಗಾರಿಗಳನ್ನು ₹200 ಕೋಟಿ ವೆಚ್ಚದಲ್ಲಿ ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳುವುದಾಗಿ ತಿಳಿಸಿದ್ದು, ಅದು ಕಾರ್ಯರೂಪಕ್ಕೆ ಬಂದರೆ ನಾಡಿನ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಬೆಣ್ಣೆಹಳ್ಳದಿಂದ ಪ್ರವಾಹಕ್ಕೊಳಗಾಗುವ ಗ್ರಾಮಗಳಲ್ಲಿ ತಡೆಗೋಡೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುವುದು ಎಂದು ಹೇಳಲಾಗಿದೆ. ಇದರಿಂದ ಜನರ ಸಂಕಷ್ಟಕ್ಕೆ ಶಾಶ್ವತ ಪರಿಹಾರ ಸಿಗಲಿದೆ.

ಕೃಷಿ ಕ್ಷೇತ್ರಕ್ಕೆ ಉತ್ತೇಜನ

ಸಮಗ್ರ ಕೃಷಿ ಮೂಲಕ ರೈತರು ಆದಾಯದಲ್ಲಿ ಸುಸ್ಥಿರತೆ ಕಂಡುಕೊಳ್ಳಲು ಅನುವಾಗುವಂತೆ ಈ ಬಾರಿಯ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಬರದ ಛಾಯೆ, ಕೃಷಿಯ ಅಸ್ಥಿರ ಬೆಳವಣಿಗೆ ನಡುವೆಯೂ ಚೇತರಿಕೆ ನೀಡುವ ಆಶಾದಾಯಕ ಅಂಶ ಬಜೆಟ್‌ನಲ್ಲಿವೆ.

₹200 ಕೋಟಿ ಅನುದಾನದೊಂದಿಗೆ ಕೃಷಿ ಭಾಗ್ಯ ಯೋಜನೆ ಮುಂದುವರಿಸಿ ರುವುದು, 'ನಮ್ಮ ಮಿಲ್ಲೆಟ್' ಎಂಬ ಹೊಸ ಕಾರ್ಯಕ್ರಮ ಸಿರಿ ಧಾನ್ಯ ಬೆಳೆಯಲು ಕೃಷಿಕರನ್ನು ಉತ್ತೇಜಿಸಲಿದೆ. ನರೇಗಾ ಯೋಜನೆ ಅಡಿ ಐದು ವರ್ಷಗಳಲ್ಲಿ ಐದು ಸಾವಿರ ಸಣ್ಣ ಕೆರೆಗಳ ನಿರ್ಮಾಣ ಮಾಡುವುದಾಗಿ ಹೇಳಿದ್ದು, ಅದರಿಂದಾಗಿ ಮಳೆಯಾಶ್ರಿತ ಪ್ರದೇಶದ ಜನರಿಗೆ ದೊಡ್ಡ ಅನುಕೂಲ ಆಗಲಿದೆ. ಅಂತರ್ಜಲ ವೃದ್ಧಿಗೂ ಸಹಾಯಕವಾಗಲಿದೆ.

ಮಣ್ಣಿನ ಗುಣ ಹಾಗೂ ಮಾರುಕಟ್ಟೆ ಬೇಡಿಕೆ ಆಧಾರದಲ್ಲಿ ಯಾವ ಬೆಳೆ ಬೆಳೆಯಬೇಕು, ಮಣ್ಣು ಪರೀಕ್ಷೆ ಮತ್ತು ಗುಣಮಟ್ಟ ಕುರಿತು ಮಾಹಿತಿ ಒದಗಿಸುವುದಾಗಿ ತಿಳಿಸಿದ್ದಾರೆ. ಕಣ್ಮರೆಯಾಗುತ್ತಿರುವ ಹಾಗೂ ನಶಿಸಿ ಹೋಗುತ್ತಿರುವ ಸ್ಥಳೀಯ ಬೆಳೆಗಳ ತಳಿಗಳನ್ನು ಸಂಗ್ರಹಿಸಲು ಮತ್ತು ಸಂರಕ್ಷಿಸುವ ಉದ್ದೇಶದಿಂದ ಒಂದು ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆ, ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ, ಕೃಷಿ ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ನೀಡುವುದಾಗಿ ತಿಳಿಸಲಾಗಿದೆ. ಇದರಿಂದ ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲ ಆಗುವುದರ ಜತೆಗೆ ಆರ್ಥಿಕ ಸದೃಢತೆಗೂ ನೆರವಾಗಲಿದೆ.

'ನಮ್ಮ ಮಿಲ್ಲೆಟ್' ಯೋಜನೆ ಅತ್ಯಂತ ವಿಶೇಷವಾಗಿದೆ. ಸಿರಿಧಾನ್ಯಗಳ ಸೇವನೆಯಿಂದ ಆರೋಗ್ಯ ವೃದ್ಧಿ, ಆರ್ಥಿಕ ಸಬಲತೆ ಸಾಧಿಸಬಹುದಾಗಿದ್ದು ಈ ಬಗ್ಗೆ ಜಾಗೃತಿ ಮೂಡಿಸಲು ಒತ್ತು ನೀಡಬೇಕಿದೆ.

ಕೃಷಿ ಉತ್ಪನ್ನಗಳು ವ್ಯರ್ಥವಾಗದಂತೆ ತಡೆಯಲು ಹಾಗೂ ಬೆಳೆಗಳಿಗೆ ಸಮರ್ಪಕ ಬೆಲೆ ದೊರಕಿಸುವ ಸಲುವಾಗಿ ಕೃಷಿ ಇಲಾಖೆ ಅಧೀನದಲ್ಲಿ ಪ್ರತ್ಯೇಕ ಆಹಾರ ಸಂಸ್ಕರಣಾ ಆಯುಕ್ತಾಲಯ ರಚಿಸಲಾಗುವುದು ಎಂದು ಹೇಳಿದ್ದು, ಅದು ಆದಷ್ಟು ಬೇಗ ಅನುಷ್ಠಾನಕ್ಕೆ ಬಂದರೆ ರೈತ ಸಮೂಹಕ್ಕೆ ದೊಡ್ಡ ಮಟ್ಟದ ಲಾಭ ಆಗಲಿದೆ.

ಗ್ರಾಮೀಣಾಭಿವೃದ್ಧಿಗೆ ಆದ್ಯತೆ

ಗ್ರಾಮ ಪಂಚಾಯ್ತಿಗಳನ್ನು ಗ್ರಾಮ ಸರ್ಕಾರಗಳನ್ನಾಗಿ ಮಾಡುವುದಾಗಿ ಹೇಳಿದ್ದು, ಇದು ಅನುಷ್ಠಾನಗೊಂಡರೆ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ರಾಜ್ಯವು ದೊಡ್ಡ ಜಿಗಿತ ಕಾಣಲಿದೆ. ಗ್ರಾಮ ಪಂಚಾಯಿತಿಗಳಿಗೆ ಆ ಅಧಿಕಾರ ಸಿಕ್ಕರೆ ಸ್ಥಳೀಯವಾಗಿರುವ ಬಹಳಷ್ಟು ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರಗಳು ಸಿಗಲಿವೆ. ಆಗ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆ ಅಸ್ತಿತ್ವಕ್ಕೆ ಬರಲು ಸಾಧ್ಯವಾಗುತ್ತದೆ.

ಗ್ರಾಮೀಣ ಭಾಗದ ರಸ್ತೆ ಸಂಪರ್ಕ ಜಾಲವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ಪ್ರಗತಿ ಪಥ ಯೋಜನೆ ಘೋಷಣೆ, ಕಲ್ಯಾಣ ಪಥ ಯೋಜನೆಯಡಿ ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಮಾದರಿಯಲ್ಲಿ ಒಟ್ಟು 1,150 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡುವುದಾಗಿ ತಿಳಿಸಿದ್ದು, ಇವು ಜಾರಿಯಾದರೆ ರೈತರ ಭೂಮಿಗೆ ಬಂಗಾರದ ಬೆಲೆ ಬರುವುದರ ಜತೆಗೆ ಅವರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ನೆರವಾಗಲಿದೆ.

ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ತ್ವರಿತ ಸೇವೆ, ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಐದು ಉಪಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿರುವುದು ಮತ್ತೊಂದು ಪ್ರಮುಖ ಅಂಶ. ಜತೆಗೆ ರಾಜ್ಯದ 100 ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರ ಆಕಾಂಕ್ಷೆ ಮತ್ತು ಆಸಕ್ತಿಗೆ ಅನುಗುಣವಾಗಿ ಉದ್ಯೋಗಾಧಾರಿತ ಕೌಶಲ ತರಬೇತಿ ನೀಡಲು 'ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ' ಪ್ರಾರಂಭಿಸುವುದಾಗಿ ಹೇಳಿದ್ದು, ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ನೆರವಾಗಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರೈತರು, ಗ್ರಾಮೀಣ ಜನರ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ಅವರ ಉನ್ನತಿಗಾಗಿ ರಾಜ್ಯದ ಪ್ರಗತಿಗಾಗಿ ಈ ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ. ರೈತರಿಗೆ ಸೂಕ್ತ ಮಾರ್ಗದರ್ಶನ, ಹೊಲಕ್ಕೆ ತೆರಳಲು ರಸ್ತೆ, ಕೃಷಿ ಚಟುವಟಿಕೆಗೆ ನೀರು ಸಿಕ್ಕರೆ ಸಾಕು. ಅವರು ಉತ್ತಮ ಫಸಲು ತೆಗೆಯುತ್ತಾರೆ. ರೈತರು ನೆಮ್ಮದಿಯ ಜೀವನ ನಡೆಸಲು ಬೇಕಿರುವ ವಾತಾವರಣ ನಿರ್ಮಾಣಕ್ಕೆ ಪೂರಕವಾದ ಎಲ್ಲ ಅಂಶಗಳು ಈ ಬಜೆಟ್‌ನಲ್ಲಿವೆ.

ಲೇಖಕ: ಮಾಜಿ ಶಾಸಕ

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ಸರ್ವರ ಹಿತ; ಬಜೆಟ್‌ನ ಮೂಲ ಸ್ರೋತ



ವಿಶ್ಲೇಷಣೆ

ಡಾ.ಎಸ್.ಆರ್.ಕೇಶವ

ಸಮಾಜದ ಎಲ್ಲರನ್ನೂ ಒಳಗೊಳ್ಳುವ ಅರ್ಥಶಾಸ್ತ್ರದ ಅಂಶಗಳನ್ನು ಬಳಸಿಕೊಂಡು ಆಯವ್ಯಯ ರಚಿಸಿ ಅನುಷ್ಠಾನಗೊಳಿಸಿದರೆ ಜನಸಾಮಾನ್ಯರ ಬಾಳು, ಹಸನಾಗುತ್ತದೆ. ಇದಲ್ಲದೆ ಆಯವ್ಯಯವು ಆ ಕಾಲಘಟ್ಟದ ಜನರ ಆಶೋತ್ತರಗಳನ್ನು ಈಡೇರಿಸುವತ್ತ ಗಮನಹರಿಸಿದರೆ ಅದು ಉತ್ತಮ ಆಯವ್ಯಯವಾಗಿರುತ್ತದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ 'ಕರ್ನಾಟಕದ ಆಯವ್ಯಯ 2024-25' ನೋಡಬಹುದಾಗಿದೆ.

ಶಿಕ್ಷಣ

ಮೂರನೆಯ ಹಾಗೂ ನಾಲ್ಕನೆಯ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳು ಸರಳವಾದ ಮೂರು ಅಂಕಿಯನ್ನು ಒಂದು ಅಂಕಿಯಿಂದ ವಿಭಜಿಸುವ ಗಣಿತದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಬೇಕು. ಆದರೆ ASER ವರದಿ 2023 ಹೇಳುವಂತೆ , 14-18 ವಯಸ್ಸಿನ ಅಥವಾ 8 ರಿಂದ 10 ತರಗತಿಗಳಲ್ಲಿ ಓದುತ್ತಿರುವ ಶೇ 56.7ರಷ್ಟು ವಿದ್ಯಾರ್ಥಿಗಳಿಗೆ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಿಲ್ಲ. ಇದಲ್ಲದೆ ಎಂಟರಿಂದ 10ನೇ ತರಗತಿ ಓದುವ ವಿದ್ಯಾರ್ಥಿಗಳಿಗೆ ಸರಳವಾದ ಇಂಗ್ಲಿಷ್ ವಾಕ್ಯಗಳನ್ನು ಓದಲು ಸಾಧ್ಯವಾಗದವರ ಸಂಖ್ಯೆ ಶೇ 42.7 ರಷ್ಟು, ಇನ್ನು ಇಂಗ್ಲಿಷ್ ಓದಲು ಬರುವ ವಿದ್ಯಾರ್ಥಿಗಳಲ್ಲಿ ಶೇ 25ರಷ್ಟು ವಿದ್ಯಾರ್ಥಿಗಳಿಗೆ ತಾವು ಓದಿದ ಸರಳ ಇಂಗ್ಲಿಷ್ ವಾಕ್ಯಗಳ ಅರ್ಥ ಹೇಳಲು ಬರುವುದಿಲ್ಲ. ಇದನ್ನು ಮನಗಂಡು ಕರ್ನಾಟಕದ ಆಯವ್ಯಯ 2024-25 ರಲ್ಲಿ3 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ J-PAL ಸಂಸ್ಥೆಯ ಸಹಯೋಗದೊಂದಿಗೆ ಗಣಿತ-ಗಣಕ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದೆ. ಈ ಕಾರ್ಯಕ್ರಮದ ಉದ್ದೇಶವು ವಿದ್ಯಾರ್ಥಿಗಳು ಇಷ್ಟಪಟ್ಟು ಕಲಿಯುವ ಹಾಗೆ ಗಣಿತವನ್ನು ಬೋಧಿಸುವುದು. ಶೈಕ್ಷಣಿಕವಾಗಿ ಹಿಂದುಳಿದಿರುವ 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಸುಧಾರಿಸಲು 'ಮರು ಸಿಂಚನ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದಲ್ಲದೆ 2000 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ದ್ವಿಭಾಷಾ ಶಾಲೆಗಳಾಗಿ ಮೇಲ್ದರ್ಜೆಗೇರಿ,ಸಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತದೆ. ಇದರಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವಿದ್ಯಾರ್ಥಿಗಳಿಗೆ ವಿಷಯದ ಜ್ಞಾನದ ಜೊತೆಗೆ ಆ ಭಾಷೆಗಳಲ್ಲಿ ಸಂವಹನದ ಜ್ಞಾನವು ದೊರಕಿದಂತಾಗುತ್ತದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ನೀಟ್ ಹಾಗೂ ಜೆಇಇ ಪರೀಕ್ಷೆಗಳಿಗೆ ಹಾಜರಾಗಲು ತರಬೇತಿ ಸಿಗುತ್ತಿರಲಿಲ್ಲ. ಅಲ್ಲಿ ಓದುತ್ತಿರುವ ಬಹುತೇಕ ವಿದ್ಯಾರ್ಥಿಗಳು ಬಡ ಕುಟುಂಬದಿಂದ ಬಂದವರಾದ್ದರಿಂದ ಅವರಿಗೆ ದುಬಾರಿ ಶುಲ್ಕ ಕೊಟ್ಟು ಖಾಸಗಿ ಕೋಚಿಂಗ್ ಪಡೆಯಲು ಸಾಧ್ಯವಾಗುತ್ತಿರಲಿಲ್ಲ, ಹಾಗಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದಲ್ಲಿ ಕಲಿಯುತ್ತಿರುವ ಸುಮಾರು 20,000 ವಿದ್ಯಾರ್ಥಿಗಳಿಗೆ ನೀಟ್/ಜೆಇಇ/ಸಿಇಟಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದಾಗಿ ಹೇಳಲಾಗಿದೆ. ಈ ಮೂಲಕ ಭವಿಷ್ಯದ ಪ್ರಜೆಗಳನ್ನು ಬಲಿಷ್ಠಗೊಳಿಸುವ ರೂಪುರೇಷೆ ಹಾಕಿಕೊಳ್ಳಲಾಗಿದೆ.

ಮಹಿಳಾ ಸಬಲೀಕರಣ : ಮಹಿಳೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಳಾದರೆ ಕುಟುಂಬ ಮಾತ್ರವಲ್ಲದೆ ಅಭಿವೃದ್ಧಿಯತ್ತ ರಾಜ್ಯದ ನಡಿಗೆ ಅಡೆತಡೆಯಿಲ್ಲದೆ ಸಾಗುತ್ತದೆ. ಈ ನಿಟ್ಟಿನಲ್ಲಿ ಆಯವ್ಯಯದಲ್ಲಿ ಮೀನುಗಾರಿಕೆ, ಜೇನುಸಾಕಣೆ, ಕೋಳಿ, ಕುರಿ ಮತ್ತು ಮೇಕೆ ಸಾಕಾಣಿಕೆಯಲ್ಲಿ ಒಂದು ಲಕ್ಷ ಮಹಿಳಾ ಸ್ವಸಹಾಯ ಸಂಘಗಳನ್ನು ಮಾರುಕಟ್ಟೆಗೆ ಮುಂದುವರಿಕೆಯೊಂದಿಗೆ ಬೆಂಬಲಿಸಲು ಪ್ರಸ್ತಾಪಿಸಲಾಗಿದೆ. ಅಲ್ಲದೆ, 2,500 ಕಾಫಿ ಕಿಯೋಸ್ಕ್‌ಗಳನ್ನು ವಿಶೇಷವಾಗಿ ಎಸ್‌ಎಚ್‌ಜಿ ಮಹಿಳೆಯರು ನಿರ್ವಹಿಸುತ್ತಾರೆ. ಕಾಫಿ ಮಂಡಳಿಯ ಸಹಯೋಗದಲ್ಲಿ ಸ್ವಸಹಾಯ ಸಂಘಗಳ ಒಂದು ಲಕ್ಷ ಮಹಿಳಾ ಸದಸ್ಯರಿಗೆ ಕಾಫಿ ಉದ್ಯಮಿಗಳಾಗಿ ತರಬೇತಿ ನೀಡಲಾಗುವುದು. ಕೆಫೆ ಸಂಜೀವಿನಿ ಹೆಸರಿನ 50 ಮಹಿಳಾ ಕೆಫೆಗಳನ್ನು ಈ ವರ್ಷದಲ್ಲಿ ರಾಜ್ಯಾದ್ಯಂತ ಪ್ರಾರಂಭಿಸಲಾಗುವುದು. ಮಹಿಳೆಯರು ಹೈನುಗಾರಿಕೆ ವೃತ್ತಿಯನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸಲು, ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಷರತ್ತಿನ ಮೇಲೆ ಆರು ಶೇಕಡಾ ಬಡ್ಡಿ ಸಹಾಯಧನವನ್ನು ಒದಗಿಸಲಾಗುತ್ತದೆ. ವಿದ್ಯಾರ್ಥಿಗಳು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ನಗರಗಳಲ್ಲಿ ರಾತ್ರಿಯ ತಂಗಲು ಕೈಗೆಟುಕುವ ಮತ್ತು ಸುರಕ್ಷಿತ ಸಾರಿಗೆ ವಸತಿ ನಿಲಯಗಳು ಸ್ಥಾಪಿಸಲಾಗುವುದು.

ಕೃಷಿ ಅಭಿವೃದ್ಧಿ: ರೈತರ ಆದಾಯವನ್ನು ಹೆಚ್ಚಿಸಲು ಕೆಲವು ಹೊಸ ಉಪಕ್ರಮಗಳನ್ನು ಆಯವ್ಯಯದಲ್ಲಿ ಘೋಷಿಸಲಾಗಿದೆ. ಅವುಗಳಲ್ಲಿ ಕೃಷಿ ಉತ್ಪನ್ನ ವ್ಯರ್ಥವಾಗುವುದನ್ನು ತಡೆಯಲು ಹಾಗೂ ಬೆಳೆಗಳಿಗೆ ಸೂಕ್ತ ಬೆಲೆ ದೊರಕಿಸಲು ಕೃಷಿ ಇಲಾಖೆ ಅಡಿಯಲ್ಲಿ ಪ್ರತ್ಯೇಕ ಆಹಾರ ಸಂಸ್ಕರಣಾ ಆಯೋಗ ರಚಿಸಲಾಗುವುದು.



' ನಮ್ಮ ಮಿಲ್ಲೆಟ್ 'ಎಂಬ ಹೊಸ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಘೋಷಿಸಲಾಗಿದ್ದು, ಅಲ್ಲಿ ಸಂಸ್ಕರಿಸಿದ ಸಿರಿಧಾನ್ಯಗಳು ಹಾಗೂ ಮೌಲ್ಯವರ್ಧಿತ ಸಿರಿಧಾನ್ಯ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಇದರಿಂದ ಮಿಲ್ಲೆಟ್ ಬೆಳೆದ ರೈತನಿಗೆ ಒಳ್ಳೆಯ ಆದಾಯ ಬರುತ್ತದೆ. ಹಾಗೆಯೇ ಈ ಪದಾರ್ಥಗಳನ್ನು ಅಗ್ರಿ ಟೆಕ್ ಕಂಪನಿಗಳು ಮತ್ತು ಚಿಲ್ಲರೆ ಸರಪಳಿ ಅಂಗಡಿಗಳ ಸಹಭಾಗಿತ್ವದೊಂದಿಗೆ ಮಾರುವುದರಿಂದ ಗ್ರಾಹಕರಿಗೂ ಕೈಗೆಟುಕುವ ಬೆಲೆಗಳಲ್ಲಿ ಪೌಷ್ಟಿಕಾಂಶದ ಆಹಾರ ದೊರಕುತ್ತದೆ. ಕೃಷಿ ಮತ್ತು ಪೂರಕ ಚಟುವಟಿಕೆಗಳ ನೀತಿಗಳು ಮತ್ತು ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಸಮನ್ವಯಕ್ಕೆ ಅನುಕೂಲವಾಗುವಂತೆ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಸಹಕಾರ, ಪಶುಸಂಗೋಪನೆ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೃಷಿ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆ. ರಚನೆ ಆಗುತ್ತಿರುವುದು ಸ್ವಾಗತಾರ್ಹವಾದ ಕ್ರಮವಾಗಿದೆ. ಕಣ್ಮರೆಯಾಗುತ್ತಿರುವ ಮತ್ತು ಸಾಯುತ್ತಿರುವ ಸ್ಥಳೀಯ ಬೆಳೆ ತಳಿಗಳನ್ನು ಸಂಗ್ರಹಿಸಿ ಸಂರಕ್ಷಿಸಲು ಸಮುದಾಯ ಬೀಜ ಬ್ಯಾಂಕ್ ಸ್ಥಾಪಿಸುವುದು ಒಂದು ದೂರ ದೃಷ್ಟಿಯ ಕ್ರಮವಾಗಿದೆ.

ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ: ಬೆಂಗಳೂರು ದಟ್ಟಣೆ ವಿಶ್ವದ ಆರನೇ ಅತಿ ಹೆಚ್ಚು ದಟ್ಟಣೆಯ ನಗರ ಮತ್ತು ದೇಶದ ಅತ್ಯಂತ ಜನದಟ್ಟಣೆಯ ನಗರ. ಬೆಂಗಳೂರಿನ ಜನಸಂದಣಿಯನ್ನು ಕಡಿಮೆ ಮಾಡಲು ಮತ್ತು ರಾಜ್ಯದ ಇತರ ನಗರ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಬಹು ಘೋಷಣೆಗಳನ್ನು ಮಾಡಲಾಗಿದೆ.. ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಯು ಅರ್ಹವಾದ ಗಮನವನ್ನು ಪಡೆಯುವುದರೊಂದಿಗೆ ಬೆಂಗಳೂರಿಗರು ಸ್ವಲ್ಪ ನೆಮ್ಮದಿಯ ನಿಟ್ಟುಸಿರು ಬಿಡಬಹುದು!

ತೆರಿಗೆ ಹಂಚಿಕೆಯಲ್ಲಿ ನ್ಯಾಯ ದೊರಕಿಸಿಕೊಳ್ಳಲು ಪ್ರಯತ್ನ: ತೆರಿಗೆ ಹಂಚಿಕೆಯಲ್ಲಿ ಕರ್ನಾಟಕದ ಪಾಲನ್ನು 14 ನೇ ಹಣಕಾಸು ಆಯೋಗದ ಅಡಿಯಲ್ಲಿ ಶೇ 4.713 ರಿಂದ 15 ನೇ ಹಣಕಾಸು ಆಯೋಗದ ಅಡಿಯಲ್ಲಿ ಶೇಕಡಾ ಶೇ 3.647 ಕ್ಕೆ ಇಳಿಸಲಾಯಿತು. ಇದರ ಪರಿಣಾಮವಾಗಿ ಕರ್ನಾಟಕ ರಾಜ್ಯಕ್ಕೆ ₹62000 ಕೋಟಿ ನಷ್ಟವಾಗಿದೆ. ಹದಿನಾರನೆಯ ಹಣಕಾಸು ಆಯೋಗವನ್ನು ರಚಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ರಕ್ಷಿಸಲು ಆಯೋಗಕ್ಕೆ ವಾಸ್ತವಿಕತೆಯನ್ನು ಅಂಕಿ ಅಂಶಗಳೊಂದಿಗೆ ಪ್ರಸ್ತುತಪಡಿಸಲು ಒಂದು ಸಮಿತಿಯನ್ನು ರಚಿಸಲಾಗುವುದೆಂದು ಆಯವ್ಯಯದಲ್ಲಿ ಘೋಷಿಸಲಾಗಿದೆ. ಆ ಸಮಿತಿಯು 16ನೆಯ ಹಣಕಾಸು ಆಯೋಗದ ಮುಂದೆ ಪೂರ್ವಸಿದ್ಧತೆಯೊಂದಿಗೆ ಹಣಕಾಸಿನ ಆಯೋಗಕ್ಕೆ ಸಿದ್ಧಪಡಿಸಿಕೊಂಡ ಮೆಮೊರಾಂಡಮ್ ಅನ್ನು ಕೊಟ್ಟು ಕರ್ನಾಟಕ ರಾಜ್ಯಕ್ಕೆ ನ್ಯಾಯಯುತವಾಗಿ ದೊರಕಬೇಕಾದ ಹಣಕಾಸನ್ನು ನೀಡಲು ಕೋರಿಕೊಳ್ಳುತ್ತಾರೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಅಧ್ಯಯನ ಸಮಿತಿ: ನಂಜುಂಡಪ್ಪನವರ ವರದಿ ಆಧಾರದ ಮೇಲೆ ಹಿಂದುಳಿದ ಭಾಗಗಳಿಗೆ ಸಾಕಷ್ಟು ಅಭಿವೃದ್ಧಿಗೊಳ್ಳಲು ಹಣಕಾಸಿನ ನೆರವಿನೊಂದಿಗೆ ಕಾರ್ಯಕ್ರಮಗಳನ್ನು ಒಂದು ದಶಕಕ್ಕಿಂತ ಹೆಚ್ಚು ವರ್ಷಗಳು ನೀಡುತ್ತಾ ಬಂದಿದೆ. ಅವುಗಳ ಪರಿಣಾಮವನ್ನು ತಿಳಿಯಲು ಹಾಗೂ ಈಗ ಯಾವ ಪ್ರದೇಶಗಳು ಹಿಂದುಳಿದಿವೆ ಎಂದು ಅಧ್ಯಯನ ಮಾಡಲು ಕರ್ನಾಟಕದ ಪ್ರಾದೇಶಿಕ ಅಸಮಾನತೆಗಳನ್ನು ಸಮಿತಿಯ ರಚನೆಗೆ ಪ್ರಸ್ತಾಪಿಸಿರುವುದು ಕರ್ನಾಟಕದಲ್ಲಿ ಹಿಂದುಳಿದಿರುವ ಪ್ರದೇಶಗಳನ್ನು ಗುರುತಿಸಲು ಹಾಗೂ ಅವುಗಳ ಅಭಿವೃದ್ಧಿಗೆ ಶ್ರಮಿಸಲು ಪೂರಕವಾದ ಕ್ರಮವಾಗಿದೆ.

ಲೇಖಕ: ಅರ್ಥಶಾಸ್ತ್ರದ ಪ್ರಾಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕೈಗಾರಿಕಾ ಕ್ಷೇತ್ರಕ್ಕೆ ಅನುದಾನ ಏರಿಕೆ

(ಕೋಟಿಗಳಲ್ಲಿ)



43% ಸಣ್ಣ ಕೈಗಾರಿಕೆಗಳ ಅನುದಾನದಲ್ಲಿ ಆದ ಏರಿಕೆ ಪ್ರಮಾಣ

22.4% ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಅನುದಾನದಲ್ಲಿ ಆದ ಏರಿಕೆ ಪ್ರಮಾಣ

ತಜ್ಞರ ಅಭಿಪ್ರಾಯ

ಉದ್ಯಮಿಗಳಲ್ಲಿ ಆಶಾಭಾವ

ಕೈಗಾರಿಕಾ ಕ್ಷೇತ್ರದ ಎಲ್ಲ ಮಜಲುಗಳನ್ನೂ ತಲುಪಿರುವ ಬಜೆಟ್, ಉದ್ಯಮಿಗಳಲ್ಲಿ ಆಶಾಭಾವ ಮೂಡಿಸಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರು ಕಟ್ಟೆಗಳ ಸಂಪರ್ಕ ವೃದ್ಧಿಗೆ ₹1,600 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಗೊಳಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಜತೆಗೆ, ರಸ್ತೆಗಳು ಮತ್ತು ಬಂದರುಗಳ ಅಭಿವೃದ್ಧಿಯ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸ್ತುತ ರಾಜ್ಯದ ಬಹುಪಾಲು ರಫ್ತು ಉತ್ಪನ್ನಗಳು ಚೆನ್ನೈ ಬಂದರು ಮೂಲಕ ರವಾನೆಯಾಗುತ್ತವೆ. ನಮ್ಮ ಕರಾವಳಿ ಜಿಲ್ಲೆಗಳ ಬಂದರುಗಳು ಉನ್ನತೀಕರಣಗೊಂಡರೆ, ಉತ್ಪನ್ನಗಳನ್ನು ಸ್ಥಳೀಯ ಬಂದರುಗಳ ಮೂಲಕ ರವಾನಿಸಬಹುದು. ಇದರಿಂದ ಸ್ಥಳೀಯ ಮಾರುಕಟ್ಟೆ ಉನ್ನತಿಗೇರುತ್ತದೆ. ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಜವಳಿ, ನೇಕಾರಿಕೆ ಅಭಿವೃದ್ಧಿ, ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣದ ಪ್ರಸ್ತಾವವು, ಕೈಗಾರಿಕೆಗಳ ವಿಸ್ತರಣೆಗೆ ಪೂರಕವಾಗಿದೆ. ಇದರಿಂದಾಗಿ 4 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಗೆ ಅವಕಾಶವಾಗಲಿದೆ. ಉದ್ಯೋಗ ವಲಸೆಯ ಪ್ರಮಾಣ ತಗ್ಗಬಹುದು.

2025ರ ಫೆಬ್ರುವರಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸುವ ಭರವಸೆಯು ಕೈಗಾರಿಕಾ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಲಿದೆ. ಐಐಎಂ- ಬಿ ಸಹಭಾಗಿತ್ವದಲ್ಲಿ ಮಹಿಳಾ ಉದ್ಯಮಿಗಳ ಸಬಲೀಕರಣದ ಪ್ರಸ್ತಾವ ಮಹಿಳೆಯರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ. ಆದರೆ, ಬಜೆಟ್‌ನಲ್ಲಿ ಹೇಳಿರುವ ಎಲ್ಲ ಭರವಸೆಗಳು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳ್ಳುವುದು ಮುಖ್ಯ. ಆಶ್ವಾಸನೆಗಳು ಅನುಷ್ಠಾನಕ್ಕೆ ಬಂದಾಗ ಮಾತ್ರ ನಿಜವಾದ ಯಶಸ್ಸು.

ಎಂ. ಆತ್ಮಿಕಾ ಅಮಿನ್, ಉದ್ಯಮಿ, ಚೇರ್ ಪರ್ಸನ್, ಯಂಗ್ ಇಂಡಿಯನ್ಸ್ ಮಂಗಳೂರು ಚಾಪ್ಟರ್

ಆರ್ಥಿಕ ಬೆಳವಣಿಗೆಗೆ ಪೂರಕ

ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಸಾರಿಗೆ ವ್ಯವಸ್ಥೆಯು ವ್ಯಾಪಾರೋದ್ಯಮಗಳ ಸರಪಳಿಯನ್ನು ನಿರ್ಮಿಸುತ್ತದೆ. ಈ ಬಾರಿಯ ಬಜೆಟ್‌ನಲ್ಲಿ ರಾಜ್ಯದ ಸುಮಾರು 2 ಸಾವಿರ ಕಿ.ಮೀ. ಉದ್ದದ ಹೆದ್ದಾರಿಗಳು, ಮೇಲುಸೇತುವೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿರ್ಧಾರವು ಆಶಾದಾಯಕ ಬೆಳವಣಿಗೆ.

ಮಂಗಳೂರು ಬಂದರಿನಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ಬೀದರ್‌ವರೆಗೆ ಸಂಪರ್ಕ ಕಲ್ಪಿಸುವ ಎರಡು ಆರ್ಥಿಕ ಕಾರಿಡಾರ್‌ಗಳ ನಿರ್ಮಾಣದಿಂದ ರಾಜ್ಯದೆ ಲ್ಲೆಡೆಯಿಂದ ಸರಕು ಸಾಗಣೆ ಹಾಗೂ ವಿದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲು ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರವು ಅನುಷ್ಠಾನ ಗೊಳಿಸುತ್ತಿರುವ ಜಲ ಮತ್ತು ವಾಯು ಸಾರಿಗೆ ಯೋಜನೆಗಳ ಜೊತೆಗೂಡಿ, ನಾಡಿನ ಕರಾವಳಿ ತೀರಪ್ರದೇಶ, ಮೈಸೂರು, ಹಾಸನ, ರಾಯಚೂರು, ವಿಜಯಪುರದ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಕೈಗಾರಿಕೆಗಳನ್ನು ಆಕರ್ಷಿಸಲು ಈ ಪ್ರಯತ್ನವು ಹೆಚ್ಚು ಅನುಕೂಲಕರವಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ನಿರ್ಮಿಸ ಲಾಗುತ್ತಿರುವ ಸಿಗ್ನೇಚರ್ ಬಿಸಿನೆಸ್ ಪಾರ್ಕ್, ಜಾಗತಿಕ ಮಟ್ಟದ ಹೂಡಿಕೆಗೆ ಬೆಂಗಳೂರನ್ನು ಬಹುದೊಡ್ಡ ಆಕರ್ಷಣೆಯ ಕೇಂದ್ರಬಿಂದುವಾಗಿಸಲಿದೆ. ಇಂತಹ ಮೂಲಸೌಕರ್ಯಗಳು ರಾಜ್ಯದೆಲ್ಲೆಡೆ ಹಲವು ಕೈಗಾರಿಕೆ, ನವ ಉದ್ಯಮ ಹಾಗೂ ಹೂಡಿಕೆಗೆ ಪ್ರಶಸ್ತ ವಾತಾವರಣ ಕಲ್ಪಿಸಿಕೊಡಲಿವೆ.

ಪ್ರೊ. ಬಿ. ಸದಾಶಿವೇಗೌಡ, ಶಿಕ್ಷಣ–ಆರ್ಥಿಕ ತಜ್ಞ, ಮೈಸೂರು

₹88,150 ಕೋಟಿ 2023–24ನೇ ಸಾಲಿನಲ್ಲಿ ಹೂಡಿಕೆಯಾಗಿರುವ ಮೊತ್ತ

₹200 ಕೋಟಿ ಅಮೃತ್ 2.0 ಯೋಜನೆಯಡಿ 7.5 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ

ಎಲೆಕ್ಟ್ರಾನಿಕ್ ಸಿಸ್ಟಂ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ (ಇಎಸ್‌ಡಿಎಂ), ವಿದ್ಯುತ್ ಚಾಲಿತ ವಾಹನಗಳಿಗೆ ಲಿಥಿಯಂ ಅಯಾನ್ ಬ್ಯಾಟರಿ ತಯಾರಿಕೆ, ತಯಾರಿಕಾ ವಲಯ, ಆಟೊಮೊಬೈಲ್, ಡೇಟಾ ಸೆಂಟರ್ ಮತ್ತಿತರ ವಲಯಗಳಲ್ಲಿ ಈ ಹೂಡಿಕೆ ಮಾಡಲಾಗಿದೆ.

ನೆಲ, ನುಡಿ ಗುರುತುಗಳ ಹುಡುಕಾಟ 13

ಲಂಟಾನಾ ಆನೆಗಳು... 14

ಸೋಮವಾರಪೇಟೆ ಸಮೀಪದ ಮೇರನಕೋಟೆ ಬೆಟ್ಟ ಚಿತ್ರ: ಡಿ.ಪಿ.ಲೋಕೇಶ್

ಚಾರಣ

ಮಾಡಬೇಡಿ ಪ್ರಕೃತಿ ಹೈರಾಣ

ಚಾರಣ ಇತ್ತೀಚಿನ ವರ್ಷಗಳಲ್ಲಿ ಟ್ರೆಂಡ್ ಆಗಿದೆ. ಯುವಜನತೆ ರಜಾ ದಿನಗಳಲ್ಲಿ ಬೆನ್ನಿಗೆ ಬ್ಯಾಗ್ ಏರಿಸಿಕೊಂಡು ಚಾರಣಕ್ಕೆ ಹೊರಟುಬಿಡುತ್ತಾರೆ. ಚಾರಣ ಮೈ-ಮನಸ್ಸನ್ನು ಅರಳಿಸುತ್ತದೆ, ಹೊಸ ಅನುಭವವನ್ನು ಕೊಡುತ್ತದೆ. ಆದರೆ, ಪ್ರಕೃತಿಗೆ ಹಾನಿ ಮಾಡಬಾರದು ಎನ್ನುವ ನಾಗರಿಕ ಪ್ರಜ್ಞೆ ಚಾರಣಿಗರು ಮತ್ತು ಆಯೋಜಕರಿಗೆ ಇರಬೇಕು.

ಜಯಸಿಂಹ ಆರ್

ಅದು ರಾಜ್ಯದ ಅತಿ ಎತ್ತರದ ಎರಡನೇ ತುದಿ. ಆ ತುದಿಯಲ್ಲಿ ನಿಂತಾಗ ನಾಲ್ಕೂ ದಿಕ್ಕಿನಿಂದ ಬೀಸುವ ಗಾಳಿ ಪರಸ್ಪರ ಡಿಕ್ಕಿ ಹೊಡೆದು, ಗಿರಗಿರನೆ ತಿರುಗುತ್ತವೆ. ಅಂತಹ ತುದಿಯಲ್ಲೊಂದು ಕಲ್ಲುಗುಡಿ, ಕಲ್ಲುಗುಡಿಯೆಂದರೆ ಅಕ್ಷರಃ ಕಾಡುಗಲ್ಲುಗಳನ್ನು ಜೋಡಿಸಿ ನಿರ್ಮಿಸಿದ ಕಲ್ಲುಗುಡಿ. ಆ ತುದಿಯಲ್ಲಿ ಒಂದೆರಡು ಇಂಚಿನಷ್ಟು ಅಗಲದ ಒರತೆಯಾಗಿ ಒಸರುವ ನೀರು ಮೂರೂ ದಿಕ್ಕಿಗೆ ಇಳಿಯುತ್ತದೆ. ಒಂದು ಉತ್ತರಕ್ಕೆ, ಮತ್ತೊಂದು ದಕ್ಷಿಣಕ್ಕೆ, ಇನ್ನೊಂದು ಪಶ್ಚಿಮಕ್ಕೆ. ಅವು ಮುಂದೆ ಬೇರೆ ಬೇರೆ ಹೊಳೆಗಳನ್ನು ಸೇರುತ್ತವೆ. ಅಂಥದ್ದೊಂದು ಒರತೆಯಲ್ಲಿ ಬಟ್ಟೆ ಒದ್ದೆ ಮಾಡಿ ಆ ಬಟ್ಟೆಯನ್ನು ಬಾಟಲಿಗಳಿಗೆ ಹಿಂಡಿಕೊಂಡು ನೀರು ಸಂಗ್ರಹಿಸಬೇಕು. ಆ ಒರತೆಯ ಮೂರು ಕವಲುಗಳಲ್ಲಿ ಒಂದು ಮುಂದೆ ಕುಮಾರಧಾರಾ ಸೇರುತ್ತದೆ. ಅಂತಹ ಹೆಸರಿಲ್ಲದ ಒರತೆಯ ಉಗಮ ಸ್ಥಾನದಲ್ಲಿ ನಾವಿದ್ದೆವು! ಹೌದು, ಅದು ಪುಷ್ಪಗಿರಿ. ಪುಷ್ಪಗಿರಿ ಏಕ ಪರ್ವತವಲ್ಲ, ಹಲವು ಪರ್ವತಗಳ ಸಾಲು. ಪುಷ್ಪಗಿರಿ, ಅದಕ್ಕಿಂತ ಕೆಲವೇ ಮೀಟರ್ ಎತ್ತರ ಕಡಿಮೆ ಇರುವ ಕುಮಾರ ಪರ್ವತ, ಅದಕ್ಕಿಂತಲೂ ತುಸು ಕಡಿಮೆ ಎತ್ತರದ ಶೇಷಗಿರಿ–ಈ ಮೂರೂ ಪರ್ವತಗಳ ತುದಿಗಳನ್ನು ಮುಟ್ಟಲು ಅತ್ತಿತ್ತ ನೂರು ಮೀಟರ್ ಹೆಜ್ಜೆ ಹಾಕಿದರಾಯಿತು.

ಪುಷ್ಪಗಿರಿ, ಕುಮಾರ ಪರ್ವತ ಚಾರಣವನ್ನು ಬಹುತೇಕ ಮಂದಿ ಕುಕ್ಕೆ ಸುಬ್ರಹ್ಮಣ್ಯ ಕಡೆಯಿಂದ ಆರಂಭಿಸುತ್ತಾರೆ. ಇದು ಚಾರಣದ ಸುಲಭದ ಹಾದಿ. ಕುಕ್ಕೆಗೆ ಬಂದಿಳಿದು, ಕೊಂಚ ದೂರ ಹೆಜ್ಜೆ ಹಾಕಿದರೆ ಚಾರಣದ ಜಾಡು ಸಿಗುತ್ತದೆ. 11 ಕಿ.ಮೀ.ನಷ್ಟಿರುವ ಈ ಜಾಡು ಹಂತ-ಹಂತವಾಗಿ ಮೇಲೇರುತ್ತಾ ಹೋಗುತ್ತದೆ. ಹೀಗಾಗಿ ಆಯಾಸ ಎನಿಸುವುದಿಲ್ಲ. ಇದರ ಹೊರತಾಗಿ ಪುಷ್ಪಗಿರಿ ತುದಿ ಮುಟ್ಟಲು ಸೋಮವಾರಪೇಟೆ ಕಡೆಯಿಂದಲೂ ಹೋಗಬಹುದು. ಕುಮಾರಳ್ಳಿ ತಲುಪಿ ಅಲ್ಲಿಂದ ಫಾರೆಸ್ಟ್ ಕ್ಯಾಂಪ್‌ಗೆ ಐದಾರು ಕಿ.ಮೀ. ನಡೆದು ನಂತರ ಚಾರಣ ಆರಂಭಿಸಬೇಕು. ಅಲ್ಲಿಂದ ಕುಮಾರ ಪರ್ವತದ ತುದಿ ತಲುಪಲು ಇರುವ ಅಂತರ ಏಳು ಕಿ.ಮೀ ಮಾತ್ರ. ಆದರೆ ಈ ಹಾದಿಯಲ್ಲಿ ಪ್ರತಿ ಹೆಜ್ಜೆಯನ್ನೂ ಮೆಟ್ಟಿಲು ಹತ್ತಿದಂತೆ ಒಂದಡಿ ಮೇಲಕ್ಕೇ ಇಡಬೇಕು. ಅತ್ಯಂತ ಕಡಿದಾದ ಈ ಹಾದಿಯು, ಕರ್ನಾಟಕದ ಅತ್ಯಂತ ಕಠಿಣ ಚಾರಣಗಳಲ್ಲಿ ಒಂದು.

ಎರಡು ಕಡೆ ಹೊಳೆ ದಾಟಬೇಕು, ಹಲವೆಡೆ 35 ಡಿಗ್ರಿಗಿಂತಲೂ ಕಡಿದಾಗಿರುವ ಮತ್ತು ನೂರಾರು ಮೀಟರ್‌ವರೆಗೆ ಚಾಚಿರುವ ಬಂಡೆಗಳನ್ನು ಹಾದುಹೋಗಬೇಕು. ಕೆಲವೆಡೆಯಂತೂ ಕೇವಲ ಒಂದಡಿ ಅಗಲದ ಹಾದಿಯಲ್ಲಿ ಹೆಜ್ಜೆಯ ಮೇಲೆ ಹೆಜ್ಜೆ ಇಡಬೇಕು. ಎಡಕ್ಕೆ ಕಡಿದಾದ ಬಂಡೆ, ಬಲಕ್ಕೆ ಆಳವಾದ ಕಮರಿ. ತುದಿ ಹತ್ತಿರವಾದಂತೆ ಬೃಹತ್ ಬಂಡೆಯನ್ನು ದಾಟಬೇಕು. ಬಂಡೆಯ ಮುಕ್ಕಾಲುಪಾಲು ನೀರು ಜಿನುಗುತ್ತಿರುತ್ತದೆ. ಉಳಿದ ನಾಲ್ಕೈದು ಅಡಿ ಅಗಲದ ಹಾದಿಯಲ್ಲಿ ಮೇಲೆ ಏರಬೇಕು. ಚಾರಣದ ಅತ್ಯಂತ ಕ್ಲಿಷ್ಟವಾದ ಹಂತವಿದು. ಅದನ್ನು ದಾಟಿದರೆ, ಗಿಡಗಂಟೆಗಳ ಸುರಂಗ ಎದುರಾಗುತ್ತದೆ. ತಲೆಬಗ್ಗಿಸಿಕೊಂಡೇ ಅದನ್ನು ಕ್ರಮಿಸಿದರೆ ಕುಮಾರ ಪರ್ವತದ ತುದಿಯಲ್ಲಿ ಇರುತ್ತೇವೆ. ಪಕ್ಕಕ್ಕೆ ಪುಷ್ಪಗಿರಿ ಸವಾಲೆಸೆದು ಕರೆಯುತ್ತದೆ. ಅದರಾಚೆಗೆ ಶೇಷಗಿರಿ. ಅಂತಹ ಕಠಿಣ ಹಾದಿಯನ್ನು ಹಾದು ಕುಮಾರ ಪರ್ವತ ತಲುಪಿದ್ದೆವು. ಆನಂತರ ಪುಷ್ಪಗಿರಿಯನ್ನು ಮುಟ್ಟಿದಾಗ, ಅಲ್ಲಿಯವರೆಗೆ ತಲುಪಲು ಆಗಿದ್ದ ಆಯಾಸವೆಲ್ಲವೂ ಗಾಳಿಯಲ್ಲಿ ಚದುರಿಹೋಗುತ್ತದೆ. ಅದೊಂದು ಸಂಭ್ರಮ, ಏನನ್ನೋ ಗೆದ್ದ ಹೆಮ್ಮೆ.

ಚಾರಣಕ್ಕೆ ಇರಲಿ ನಿಯಮ

ಪರಿಸರ ಸ್ನೇಹಿ ಚಾರಣಕ್ಕೆ ನೀತಿಯೊಂದರ ಅವಶ್ಯಕತೆ ಇದೆ. ಚಾರಣ ಕೈಗೊಳ್ಳುವವರು ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಹೇಳಬೇಕು. ಚಾರಣ ಆಯೋಜಿಸುವವರಿಗೆ ಇದರ ಹೊಣೆಗಾರಿಕೆಯನ್ನು ಹೊರಿಸಬೇಕು. ಅರಣ್ಯ ಇಲಾಖೆ ಸಿಬ್ಬಂದಿ ಅದರ ಮೇಲ್ವಿಚಾರಣೆ ನಡೆಸಬೇಕು. ಇವೆಲ್ಲವನ್ನೂ ಒಳಗೊಂಡ ನೀತಿಯನ್ನು ರೂಪಿಸುವ ಕೆಲಸ ಅರಣ್ಯ ಇಲಾಖೆ ಮಾಡಿದರೆ, ಪರಿಸರಕ್ಕೆ ಧಕ್ಕೆಯಾಗದಂತೆ ಅದನ್ನು ಆಸ್ವಾದಿಸುವುದು ಹೇಗೆ ಎಂಬುದನ್ನು ಅನುಭವಿ ಚಾರಣಿಗರು ತಮ್ಮ ನಂತರದ ತಲೆಮಾರಿಗೆ ಹೇಳಿಕೊಡಬೇಕು.



ಈ ಚಾರಣವನ್ನು ಇಲ್ಲಿ ಪ್ರಸ್ತಾಪಿಸಲು ಕಾರಣವಿದೆ. ಚಾರಣಕ್ಕೊಂದು ಶಿಸ್ತಿರಬೇಕು. ಕುಮಾರ ಪರ್ವತ ಚಾರಣಕ್ಕೆ ಅರಣ್ಯ ಇಲಾಖೆ ಇತ್ತೀಚೆಗೆ ನಿರ್ಬಂಧ ಹೇರಿದೆ. ಸಾವಿರಾರು ಮಂದಿ ಚಾರಣಕ್ಕೆಂದು ಅಲ್ಲಿ ಕಿಕ್ಕಿರಿದು ತುಂಬಿದ್ದೇ ಅದಕ್ಕೆ ಕಾರಣ. ಪರಿಣಾಮವಾಗಿ ರಾಜ್ಯದ ನೆಚ್ಚಿನ ಚಾರಣದ ಸ್ಥಳಗಳಲ್ಲಿ, ಅರಣ್ಯ ಇಲಾಖೆಯು ಚಾರಣಕ್ಕೆ ನಿರ್ಬಂಧ ಹೇರಿತು. ಆನ್‌ಲೈನ್ ಬುಕ್ಕಿಂಗ್‌ಗೆ ಅವಕಾಶವಿರುವ ಚಾರಣಪಥಗಳಲ್ಲಿ ಮಾತ್ರ ಚಾರಣಕ್ಕೆ ಅನುಮತಿ ನೀಡುತ್ತಿದೆ. ಬೇರೆಡೆ ಸದ್ಯದ ಮಟ್ಟಿಗೆ ಚಾರಣಕ್ಕೆ ನಿಷೇಧವಿದೆ. ಇದನ್ನು ಚಾರಣಿಗರು ಕಟುವಾಗಿ ಟೀಕಿಸುತ್ತಿದ್ದಾರೆ. ಆದರೆ ಸರ್ಕಾರದ ಇಂತಹ ನಿರ್ಬಂಧಕ್ಕೆ ಕಾರಣರಾದವರು ಯಾರು? ಜವಾಬ್ದಾರಿ ಮರೆತ ಚಾರಣಿಗರು ಅಲ್ಲವೇ?

ಐದಾರು ವರ್ಷಗಳಲ್ಲಿ ಚಾರಣದ ಸ್ವರೂಪವೇ ಬದಲಾಗಿ ಹೋಗಿದೆ. ಹಿಂದೆ ಚಾರಣ ಎಂದರೆ ಪ್ರತಿ ಹೆಜ್ಜೆಯಲ್ಲೂ ಹೊಸತರ ಕಲಿಕೆಗೆ ಅವಕಾಶವಿದೆ ಎಂದು ಭಾವಿಸಲಾಗುತ್ತಿತ್ತು. ಅಲ್ಲಿನ ಗಿಡಗಂಟಿಗಳು, ಹುಲ್ಲು-ಪೊದೆಗಳು, ಪ್ರಾಣಿ-ಪಕ್ಷಿಗಳನ್ನು ನೋಡುತ್ತಾ ಅವುಗಳ ಇರುವಿಕೆಯನ್ನು ಆಸ್ವಾದಿಸುತ್ತಾ ಗಮ್ಯವನ್ನು ತಲುಪಲಾಗುತ್ತಿತ್ತು. ಅದು ಗಿರಿ–ಪರ್ವತದ ತುದಿ ಇರಬಹುದು, ನದಿ–ತೊರೆಗಳು, ಆಳ ಕಣಿವೆ ಇರಬಹುದು. ಎಲ್ಲವೂ ಅವರ್ಣನೀಯ ಅನುಭವ.

ಕೋವಿಡ್ ಸಂದರ್ಭದಲ್ಲಿ ರೀಲ್ಸ್, ವ್ಲಾಗಿಂಗ್‌ನ ಭರಾಟೆ ಜೋರಾಯಿತು. ಚಾರಣಕ್ಕೂ ಅವು ಕಾಲಿಟ್ಟವು. ಚಾರಣದ ವಿಡಿಯೊ ಮಾಡುವುದು, ರೀಲ್ಸ್ ಮಾಡುವುದು, ಸೆಲ್ಫಿ ತೆಗೆಯುವುದು... ಚಾರಣ ಎಂದರೆ ಬರೀ ಇದೇ ಎಂಬಂತಾಯಿತು. ಅಂದಚಂದದ ಆ ಫೋಟೊಗಳನ್ನು ನೋಡಿ, ಎಲ್ಲರೂ ಅದೇ ಜಾಗಕ್ಕೆ ಹೋಗುವುದು ಮತ್ತು ಅಂಥದ್ದೇ ಫೋಟೊ ತೆಗೆಯುವುದನ್ನು ಮಾಡಿದರು. ಅಂತಹ ಚಾರಣಗಳನ್ನು ಆಯೋಜಿಸುವ ಹೊಸ ತಂಡಗಳೇ ಹುಟ್ಟಿಕೊಂಡವು. ಅದರ ಪರಿಣಾಮವಾಗಿಯೇ ಚಾರಣಕ್ಕೆ ಜನ ಮುಗಿಬೀಳುವುದು ಶುರುವಾಯಿತು. ಕುಮಾರ ಪರ್ವತದಲ್ಲಿ ಆಗಿದ್ದೂ ಇದೇ. ಎಲ್ಲಾ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವಂತೆ ವಾರಾಂತ್ಯಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಕುಮಾರ ಪರ್ವತಕ್ಕೆ ಬರತೊಡಗಿದರು. ಅವಘಡಗಳು ಸಂಭವಿಸಿದವು. ಮೊದಲಿಗೆ ಮಳೆಗಾಲದಲ್ಲಿ ನಿರ್ಬಂಧ ಹೇರಲಾಯಿತು, ನಂತರ ಬೇಸಿಗೆಯಲ್ಲಿ, ಈಗ ಚಳಿಗಾಲದಲ್ಲೂ.

ಸಾವಿರಾರು ಮಂದಿ ಒಮ್ಮೆಗೇ ಕಾಡಿಗೆ ನುಗ್ಗಿದರೆ ಏನಾಗುತ್ತದೆ ಎನ್ನುವುದಕ್ಕೊಂದು ನಿದರ್ಶನ ಇಲ್ಲಿದೆ: ಬೆಂಗಳೂರು ಹೊರವಲಯದ ನಿಜಗಲ್ಲು ಕೋಟೆಯಲ್ಲಿ ಗೆಳೆಯರೊಬ್ಬರು 'ಪರಿಸರ ಚಾರಣ' ಆಯೋಜಿಸಿದ್ದರು. ಅದರಲ್ಲಿ 85 ಮಂದಿ ಇದ್ದರು. ಬೆಟ್ಟದ ಬುಡದಲ್ಲಿ ಮುತ್ತುಗದ ಬಯಲು. ಮುತ್ತುಗದ ಮರಗಳು ಕೆಂಪನ್ನೇ ಮುಕ್ಕಳಿಸುವಂತೆ ಹೂ ಕಟ್ಟಿ ನಿಂತಿದ್ದವು.

13ನೇ ಪುಟಕ್ಕೆ...

ಹಸಿರು ಗಾಜಿನ ಬಳೆಗಳೆ...

ಉಧೋ ಉಧೋ ಯಲ್ಲಮ್ಮ

ಭಾರತ ಹುಣ್ಣಿಮೆಯಿಂದ ಮಹಾಶಿವರಾತ್ರಿವರೆಗೆ (ಫೆ.24ರಿಂದ ಮಾರ್ಚ್ 10) ಗುಡ್ಡಕ್ಕೆ ಬರುವ ಮಹಿಳೆಯರು ಹೊಸ ಬಳೆಗಳನ್ನು ತೊಡಿಸಿಕೊಳ್ಳುತ್ತಾರೆ. ಇಲ್ಲಿನ ಬಳೆಗಳ ವೈಭವವನ್ನು ನೋಡಬೇಕೆಂದರೆ ನೀವೊಮ್ಮೆ ಗುಡ್ಡಕ್ಕೆ ಬರಬೇಕು.

ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮನಗುಡ್ಡದಲ್ಲಿ ನಡೆಯುವ ಜಾತ್ರೆಯಲ್ಲಿ ಯಲ್ಲಮ್ಮ ದೇವಸ್ಥಾನದಿಂದ ಪಶ್ಚಿಮ ದಿಕ್ಕಿಗೆ ಕಣ್ಣು ಹಾಯಿಸಿದರೆ ವೈವಿಧ್ಯಮಯ ಬಣ್ಣ ಬಣ್ಣದ ಬಳೆಗಳ ಮಾರಾಟ ಕಂಡುಬರುತ್ತದೆ. ಹಿಂದೆ 'ಬಳೆಕಟ್ಟೆ' ಎಂದು ಕರೆಯಲಾಗುತ್ತಿದ್ದ ಸ್ಥಳವೀಗ 'ಬಳೆಪೇಟೆ' ಆಗಿದೆ. ನೂರಾರು ಕುಟುಂಬಗಳು ದಶಕಗಳಿಂದ ಬಳೆ ಮಾರಾಟ ಮಾಡುತ್ತ ಬಂದಿವೆ. ಈಗೀಗ ಮಾರುಕಟ್ಟೆಯಲ್ಲಿ ಜಾಗ ಸಾಲದ್ದಕ್ಕೆ ಗುಡ್ಡದ ಪರಿಸರದಲ್ಲಿ ಎಲ್ಲೆಂದರಲ್ಲಿ ಬಳೆಗಳ ಮಾರಾಟ ನಡೆಯುತ್ತದೆ. ಹುಣ್ಣಿಮೆ ಸಮೀಪಿಸುತ್ತಲೇ ಎಲ್ಲ ಅಂಗಡಿಗಳನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗುತ್ತದೆ. ಬಳೆಗಳನ್ನು ಒಪ್ಪ-ಓರಣವಾಗಿ ಜೋಡಿಸಲಾಗುತ್ತದೆ. ದೇವಸ್ಥಾನದ ಪಶ್ಚಿಮ ಮತ್ತು ಉತ್ತರದಿಕ್ಕಿನಲ್ಲಿರುವ ವ್ಯಾಪಾರಿಗಳು ವರ್ಷವಿಡೀ ಬಳೆ ಮಾರುತ್ತಾರೆ. ಉಳಿದವರು ಜಾತ್ರೆಗೆ ಮಾತ್ರ ಬಂದು ವ್ಯಾಪಾರ ಮಾಡಿ ಮರಳುತ್ತಾರೆ.

ಈ ಜಾತ್ರೆಯಲ್ಲಿ ಬಳೆಗಳದ್ದೇ ವಿಶೇಷ. ಇದಕ್ಕೆ ಧಾರ್ಮಿಕ, ಭಾವನಾತ್ಮಕ ಹಾಗೂ ಸಾಂಸ್ಕೃತಿಕ ಕಾರಣಗಳಿವೆ. ಇಲ್ಲಿ ವರ್ಷದ ಹನ್ನೆರಡು ಹುಣ್ಣಿಮೆಗಳಲ್ಲೂ ಜಾತ್ರೆ ನಡೆಯುತ್ತದೆ. ಅದರಲ್ಲಿ ಹೊಸ್ತಿಲ ಹುಣ್ಣಿಮೆ ಹೊರತುಪಡಿಸಿ, 11 ಹುಣ್ಣಿಮೆಗಳಲ್ಲಿ ಬಳೆ ಮಾರಾಟವಾಗುತ್ತದೆ. ಹೊಸ್ತಿಲ ಹುಣ್ಣಿಮೆ ದಿನ ದೇವಿ ವಿಧವೆ ಆಗುತ್ತಾಳೆ. ಭಾರತ ಹುಣ್ಣಿಮೆಗೆ ಮತ್ತೆ ಮುತ್ತೈದೆ ಆಗುತ್ತಾಳೆ. ಇದೇ ಕಾರಣಕ್ಕೆ ಮಹಿಳೆಯರು ತಾವೂ ನಿತ್ಯ ಮುತ್ತೈದೆ ಆಗಬೇಕೆಂಬ ಬಯಕೆಯಿಂದ ಇಲ್ಲಿ ಬಳೆ ಖರೀದಿಗೆ ಮುಂದಾಗುತ್ತಾರೆ.

ಭಾರತ ಹುಣ್ಣಿಮೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬಳೆಗಳ ವ್ಯಾಪಾರ ನಡೆಯುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಗೋವಾ, ಗುಜರಾತ್ ಸೇರಿದಂತೆ ದೇಶದ ನಾನಾ ಭಾಗಗಳಿಂದ ಮಹಿಳೆಯರು ಇಲ್ಲಿಗೆ ಬರುತ್ತಾರೆ. ತಮ್ಮಿಷ್ಟದ ಬಳೆಗಳನ್ನು ಧರಿಸಿ ಸಂಭ್ರಮಿಸುತ್ತಾರೆ.

ಯಲ್ಲಮ್ಮನಗುಡ್ಡದಲ್ಲಿ ಮಹಿಳೆಗೆ ಬಳೆ ತೊಡಿಸುತ್ತಿರುವುದು. ಚಿತ್ರಗಳು: ಗೋವಿಂದರಾಜ ಜವಳಿ

ಭಾರತ ಹುಣ್ಣಿಮೆಯಲ್ಲಿ ದೇವಿಗೆ ಬಳೆ, ಕಂಕಣ, ಮಡಿ, ಕುಂಕುಮ-ಭಂಡಾರದಂಥ ಮಂಗಳಕರ ವಸ್ತುಗಳನ್ನು ನೀಡಿದರೆ ತಮಗೆ ಭಾಗ್ಯ ಪ್ರಾಪ್ತವಾಗುತ್ತದೆ ಎಂಬುದು ನಂಬಿಕೆ.

'ಬಳೆಗಳೆಂದರೆ ಹೆಣ್ಣುಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ. ಅದರಲ್ಲೂ ಯಲ್ಲಮ್ಮನಗುಡ್ಡದಲ್ಲಿ ಬಳೆ ಖರೀದಿಸಿ ತೊಟ್ಟರೆ ಮಂಗಳವಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ. ಪ್ರತಿ ವರ್ಷ ಇಲ್ಲಿ ಖರೀದಿಸಿದ ಹಸಿರು ಗಾಜಿನ ಬಳೆಗಳನ್ನೇ ತೊಟ್ಟುಕೊಳ್ಳುತ್ತೇನೆ' ಎಂದು ದಾವಣಗೆರೆಯ ಮಂಜುಳಾ ಷಣ್ಮುಖ ಹೇಳಿದರೆ, 'ಹೊಸ್ತಿಲ ಹುಣವ್ಯಾಗ ಅಮ್ಮ(ಯಲ್ಲಮ್ಮ) ವಿಧವೆ ಆಗೋದಕ್ಕ, ಕೈಯ್ಯಾಗಿನ ಹಳೇ ಬಳಿ ಎಲ್ಲಾ ತಗೀತೇವ್ರಿ. ಭಾರತ ಹುಣವ್ಯಾಗ ಮತ್ತ ಹೊಸ ಬಳಿ ಹಾಕೊಂಡು ಖುಷಿಪಡ್ತೇವ್ರಿ' ಎನ್ನುತ್ತಾರೆ ಗದುಗಿನ ಜೋಗಪ್ಪ ತಿಪ್ಪಣ್ಣ.

'ಒಂದೆರಡ ವರ್ಷ ಅಲ್ರಿ, ಅರವತ್ತ ವರ್ಷದಿಂದ ಇಲ್ಲೇ ಬಳಿ ಮಾರಾಕತ್ತೇವ್ರಿ. ಈ ಹುಣವ್ಯಾಗ ಹದಿನೈದ ದಿನಾ ಹಗಲ–ರಾತ್ರಿ ಅನ್ನದ, ನಾಲ್ಕೈದ ಮಂದಿ ಬಳಿ ಇಡಿಸ್ತೇವ್ರಿ. ಈ ಟೈಮದಾಗ್ ಏನಿಲ್ಲ ಅಂದ್ರು, ಇಪತ್ತೈದ ಸಾವಿರ ಡಜನ್(3 ಲಕ್ಷ) ಬಳಿ ಅಂತೂ ಪಕ್ಕಾ ಮಾರ್ತೇವ್ರಿ' ಎಂದು ವ್ಯಾಪಾರಿ ಇರ್ಷಾದ್ ನೇಸರಗಿ ಹೇಳಿದರು. ಅವರೊಂದಿಗೆ ಇನ್ನಷ್ಟು ಮಾತನಾಡುವುದಿತ್ತು. ಆದರೆ, ಅವರು ಬಳೆ ತೋರಿಸುವುದು, ಚೌಕಾಶಿಗೆ ಇಳಿದವರೊಂದಿಗೆ ಮಾತನಾಡುವುದು, ಬಳೆ ತೊಡಿಸುವುದರಲ್ಲೇ ಮುಳುಗಿ ಹೋಗಿದ್ದರು. ಅದೇ ಸಾಲಿನಲ್ಲಿದ್ದ ಮತ್ತೊಂದು ಅಂಗಡಿಯಲ್ಲಿ ಚಹಾ ಕುಡಿಯಲೂ ಪುರುಸೊತ್ತು ಇಲ್ಲದ ಸಂತೋಷ ಬಡಿಗೇರ, 'ನಮ್ಮನ್ಯಾಗ ಸಣ್ಣಾವರಿದಂದ ದೊಡ್ಡಾವರ ಮಟಾ ಎಲ್ಲಾರೂ ಗುಡ್ಡಕ್ಕ ಬಂದ ಬಳಿ ಮಾರಾತೇವ್ರಿ. ಇಲ್ಲಿ ದುಡಿಯೋ ರೊಕ್ಕದಾಗ ಬಾಳ್ವೆ ನಡಸಾತೇವ್ರಿ' ಎಂದು ಚಹಾವನ್ನು ಗುಟುಕಿಸಿದರು.

ಎಲ್ಲಿಂದ ಬರುತ್ತವೆ ಬಳೆಗಳು?

ಉತ್ತರಪ್ರದೇಶದ ಫಿರೋಜಾಬಾದ್‌ನ ಕಾರ್ಖಾನೆಯಲ್ಲಿ ಗಾಜಿನ ಬಳೆಗಳು ತಯಾರಾಗುತ್ತವೆ. ಅಲ್ಲಿಂದ ಸವದತ್ತಿ, ಬೈಲಹೊಂಗಲ, ಬಾಗಲಕೋಟೆ ಜಿಲ್ಲೆಯ ಜಮಖಂಡಿಗೆ ಬರುವ ಬಳೆಗಳನ್ನು ಸಗಟು ವ್ಯಾಪಾರಿಗಳ ಬಳಿ ಯಲ್ಲಮ್ಮನಗುಡ್ಡದ ವ್ಯಾಪಾರಿಗಳು ಖರೀದಿಸುತ್ತಾರೆ. ಇದಲ್ಲದೆ, ಸವದತ್ತಿ, ಮುರಗೋಡ, ನೇಸರಗಿ ಮತ್ತು ಚನ್ನಮ್ಮನ ಕಿತ್ತೂರಿನಲ್ಲಿ ಕೈಯಿಂದ ತಯಾರಿಸುವ ಬಳೆಗೆ ಹೆಚ್ಚಿನ ಬೇಡಿಕೆಯಿದೆ. 'ನಾವು ಬಳೆಚೂರುಗಳನ್ನೆಲ್ಲ ಕರಗಿಸಿ ಆಣ ಮಾಡುತ್ತೇವೆ. ನಂತರ ವೃತ್ತಾಕಾರದ ಕಬ್ಬಿಣದ ಸಲಾಕೆ ಮೂಲಕ ವಿವಿಧ ಅಳತೆಯ ಬಳೆ ತಯಾರಿಸುತ್ತೇವೆ. ಯಾವುದೇ ತುಣುಕು ಹೊಂದಿರದ ಈ ಅಖಂಡ ಬಳೆಗಳನ್ನು ಪೂಜೆ, ಶುಭ ಸಮಾರಂಭಗಳಲ್ಲಿ ಬಳಸಲಾಗುತ್ತದೆ. ಭಕ್ತರು ಹೆಚ್ಚಾಗಿ ಇಷ್ಟಪಡುತ್ತಾರೆ' ಎಂದು ಕಿತ್ತೂರಿನ ರಾಜು ಉಗರಖೋಡ ಹೇಳುತ್ತಾರೆ.

ಗುಡ್ಡದಲ್ಲಿ ಒಂದು ಚುಕ್ಕೆ, ಎರಡು ಚುಕ್ಕೆ, ಮೂರು ಚುಕ್ಕೆ ಸೇರಿದಂತೆ ವಿವಿಧ ಹೆಸರಿನಿಂದ ಕರೆಯುವ ನಾನಾ ಬಣ್ಣಗಳ ಬಳೆ ಮಾರಾಟವಾಗುತ್ತವೆ. ಆದರೆ, ಶೇಕಡ 80 ರಷ್ಟು ಹಸಿರು ಬಣ್ಣದ ಬಳೆಗಳೇ ಮಾರಾಟವಾಗುವುದು.

ಬಳೆ ಮಾರುವವರ ಪೈಕಿ ಹೆಚ್ಚಿನವರು ಬೆಳಗಾವಿ, ವಿಜಯಪುರ ಜಿಲ್ಲೆಯವರು. ರಸ್ತೆಬದಿಯ ಸಣ್ಣ ಅಂಗಡಿಗಳೂ ಸೇರಿ ಇಲ್ಲಿ 150 ಅಂಗಡಿಗಳಿವೆ. ಅಲ್ಲಿ ಮಹಿಳೆಯರಿಗೆ ಬಳೆ ತೊಡಿಸುವವರ ಸಂಖ್ಯೆ ಆಧರಿಸಿ, ವ್ಯಾಪಾರ-ವಹಿವಾಟು ನಡೆಯುತ್ತದೆ. ಕೆಲವರು ಭಾರತ ಹುಣ್ಣಿಮೆಯ ಅವಧಿಯಲ್ಲೇ ₹1 ಲಕ್ಷ ಗಳಿಸಿದರೆ, ಕೆಲವರು ₹3 ಲಕ್ಷದಿಂದ ₹4 ಲಕ್ಷದವರೆಗೆ ಸಂಪಾದಿಸುತ್ತಾರೆ.

13ನೇ ಪುಟಕ್ಕೆ...

ದಾರುಣತೆಯ ಕೋಮಲ ಅಭಿವ್ಯಕ್ತಿ

ಎಂ.ಡಿ.ಒಕ್ಕುಂದ

'ಗುಲ್ಜಾರ್' ಅಂದರೆ ಅರಬ್ಬಿಯಲ್ಲಿ ಅರಳಿದ ಹೂಗಳ ತೋಟ. ಆದರೆ ಅವರ ಕಾವ್ಯದಲ್ಲಿ ಹೂವುಗಳ ಶವಯಾತ್ರೆಯೂ ಇದೆ. ಗುಂಡಿಗೆ ಎದೆಯೊಡ್ಡಿ ಮನೆಯ ಹೊಸ್ತಿಲ ಮೇಲೆ ಬಿದ್ದ ಸತ್ಯಶೋಧಕ ಗುರುವಿನ ರಕ್ತಸಿಕ್ತ ದೇಹವೂ ಇದೆ. ಹುತಾತ್ಮ ಸೈನಿಕನ ಸಮವಸ್ತ್ರವನ್ನು ಮತ್ತೆ ಮತ್ತೆ ತೊಳೆವ ವಿಧವೆ ಹೆಣ್ಣುಮಗಳಿದ್ದಾಳೆ. ಸ್ವಾತಂತ್ರ್ಯೋತ್ತರ ಭಾರತದ ಬಹುಮುಖಿ ಸಂಕಟ ಹಾಗೂ ದಾರ್ಶನಿಕ ಕನಸುಗಾರಿಕೆಗಳನ್ನು ತಮ್ಮ ಕಾವ್ಯದಲ್ಲಿ ಬಿತ್ತಿ ಬೆಳೆದು 'ಗುಲ್ಜಾರ್' ಪದಕ್ಕೆ ಹೊಸ ಅರ್ಥವಂತಿಕೆಯನ್ನು ತುಂಬಿದರು. ಕೋಮಲ ಭಾಷೆಯ ಮಾರ್ದವ ಮನಸ್ಸು ಬದುಕಿನ ಕಠೋರತೆಗೆ ಬೆಚ್ಚಿ ಪಲಾಯನ ಮಾಡುವುದು ಒಂದು ಸಾಧ್ಯತೆ. ಬದುಕಿನ ದಾರುಣತಗಳೆಲ್ಲವನ್ನೂ ಮಾರ್ದವ ಮನಸ್ಸು ಕೋಮಲ ಭಾಷೆಯಲ್ಲಿಯೇ ಧ್ಯಾನಸ್ಥವಾಗಿ ಅಭಿವ್ಯಕ್ತಿಸುವುದು ಇನ್ನೊಂದು ಸಾಧ್ಯತೆ. ಈ ಎರಡನೆಯ ಸಾಧ್ಯತೆಯ ಮೂಲಕ ಕಾವ್ಯಭಾಷೆಗೆ ಹೊಸ ಆಯಾಮ ನೀಡಿ ಉರ್ದುವಿಗೆ ಜ್ಞಾನಪೀಠ ಪ್ರಶಸ್ತಿಯ ಗೌರವವನ್ನು ಸಂದಾಯ ಮಾಡಿದ್ದಾರೆ.

'ಗುಲ್ಜಾರ್' ಕಾವ್ಯನಾಮ. ಹೆಸರು ಸಂಪೂರ್ಣಸಿಂಗ್ ಕಾಲ್ರಾ. ತಂದೆ ಮಖಾನ್ ಸಿಂಗ್ ಕಾಲ್ರಾ ವ್ಯಾಪಾರಿ. ಮುಖವೂ ನೆನಪಿರಲಾರದಷ್ಟು ಮೊದಲೇ ತೀರಿಹೋದ ತಾಯಿ ಸುಜನ್ ಕೌರ್. ಹುಟ್ಟಿದ್ದು ಆಗಸ್ಟ್ 18, 1936. ಈಗಿನ ಪಾಕಿಸ್ತಾನದ ಜೇಲಂ ಜಿಲ್ಲೆಯ ದೀನಾ ಎಂಬ ಹಳ್ಳಿಯಲ್ಲಿ. ಮಲತಾಯಿ ಮಲಸಹೋದರರ ಬಳಕೆಯ ವಸ್ತುವಾಗಿದ್ದ ಸಂಪೂರ್ಣಸಿಂಗ್ ಘಾಸಿಗೊಂಡಿದ್ದ. ಇದಕ್ಕಿಂತಲೂ ಭೀಕರ ದೇಶ ವಿಭಜನೆಯ ಹಿಂಸಾಕಾಂಡ. ರಸ್ತೆಯಲ್ಲಿ ಕಾಲಕೆಳಗೇ ತೂರಿ ಬರುವ ಹೆಣಗಳು. ಕಂಡದ್ದಕ್ಕೆಲ್ಲ ಬೆಂಕಿ ಇಟ್ಟು ಸಿಕ್ಕದ್ದನ್ನೆಲ್ಲ ಲೂಟಿ ಮಾಡುವ ಗಲಭೆಕೋರರು. ಅತ್ಯಾಚಾರಕ್ಕೊಳಗಾದ ಹೆಣ್ಣುಗಳ ಆಕ್ರಂದನ, ಇರಿದು ಕೊಂದ ಮೇಲೂ ದೇಹಗಳನ್ನು ತುಂಡು ಮಾಡಿ ಬಿಸಾಕಿ ಬೀದಿ ನಲ್ಲಿಯಲ್ಲಿ ಕೈತೊಳೆವ ಗಂಡಸರು, ಅರೆಬೆಂದ ದೇಹ, ಬಿಡಿಬಿಡಿ ಅಂಗಾಂಗಗಳನ್ನು ಹೊತ್ತೊಯ್ಯುವ ಕಸ ತುಂಬುವ ಲಾರಿಗಳು... ಇಂಥ ದುರ್ದಿನಗಳಲ್ಲೂ ಅಪ್ಪ ಮಖಾನ್ ಸಿಂಗ್ ಮತ್ತು ಅವನ ಮುಸ್ಲಿಂ ಗೆಳೆಯರು ಪರಸ್ಪರ ರಕ್ಷಣೆ ನೀಡುತ್ತ ಮನುಷ್ಯತ್ವವನ್ನು ಉಸಿರಾಡುತ್ತಿದ್ದರು. ಬಾಲ್ಯದಲ್ಲಿ ಕಂಡ ಈ ಕ್ರೌರ್ಯ ಮತ್ತು ಮಾನವೀಯತೆ ಗುಲ್ಜಾರ್ ಅವರನ್ನು ಕವಿಯಾಗಿ ರೂಪಿಸಿದವು.

ಎಸ್ಸೆಸ್ಸೆಲ್ಸಿ ಪಾಸು ಮಾಡಿ ಸದಾ ಸಾಹಿತ್ಯದ ಗುಂಗಿನಲ್ಲಿದ್ದ ಸಂಪೂರ್ಣನನ್ನು ಬಡ ಸಾಹಿತಿಯಾದಾನೆಂಬ ಆತಂಕದಲ್ಲಿ ಮಖಾನ್ ಸಿಂಗ್ ಮುಂಬೈನಲ್ಲಿ ವ್ಯಾಪಾರಿಯಾಗಿದ್ದ ಹಿರಿಯ ಮಗ ಜಸ್ಮೀರ್‌ನಿಗೆ ಒಪ್ಪಿಸುತ್ತಾರೆ. ಅಣ್ಣನ ವ್ಯವಹಾರಕ್ಕೆ ದುಡಿಯುತ್ತ ರಾತ್ರಿ ಬೀದಿಬೀದಿಗಳನ್ನು, ಉದ್ಯಾನಗಳನ್ನು ಸುತ್ತುತ್ತ, ಸಂಗೀತ ಕಛೇರಿ, ಚಿತ್ರಕಲಾ ಪ್ರದರ್ಶನಗಳಿಗೆ ಲಗ್ಗೆ ಇಡುತ್ತ, ಗಜಲ್, ಶಾಹಿರಿ ಹಾಗೂ ಕವಿತೆಗಳನ್ನು ಬರೆಯುತ್ತ ಹೆಸರು ಮಾಡುತ್ತಿರುವಾಗಲೇ ಭಾರತದ ಸಾಂಸ್ಕೃತಿಕ ಬದುಕಿಗೆ ಹೊಸ ತಿರುವು ನೀಡಿದ ಪ್ರಗತಿಶೀಲ ಬರಹಗಾರರ ಒಕ್ಕೂಟ ಹಾಗೂ ಭಾರತೀಯ ಜನಕಲಾ ಮಂಡಳಿಗಳ ಸಂಪರ್ಕ ಒದಗಿ ಬಂತು.

ಸರ್ದಾರ್ ಜಾಫರಿ, ಕೃಷ್ಣಚಂದರ್, ಕೈಫಿ ಆಜ್ಮಿ, ಫೈಜ್ ಅಹಮದ್ ಫೈಜ್, ಸಾಹಿರ ಲುದಿಯಾನ್ವಿಯವರಂಥ ಹಿರಿಯರ ಒಡನಾಟದಲ್ಲಿ ಓದುವ, ಬರೆಯುವ ಉತ್ಸಾಹ ಮುಗಿಲಿಗೇರಿತು. ತೀವ್ರ ಸಂವೇದನಾಶೀಲ ಮನಸ್ಸಿಗೆ ಸಿಕ್ಕ ಸಮಾಜವಾದಿ ಚಿಂತನೆಯ ತಾತ್ವಿಕ ಸ್ಪರ್ಶ ಅವರ ಸೃಜನಶೀಲ ವ್ಯಕ್ತಿತ್ವದ ಚಿಮ್ಮು ಹಲಗೆಯಾಯಿತು. ಅದೇ ವೇಳೆಗೆ ಪಂಜಾಬಿ ಸಾಹಿತ್ಯದ ಪ್ರಸಿದ್ಧ ಲೇಖಕರಾದ ಗುರುವೆಲ್ ಸಿಂಗ್ ಪನ್ನು, ರಾಜೆಂದ್ರಸಿಂಗ್ ಬೇಡಿ, ಬಲರಾಮ ಸಿನ್ಹಾ ಅವರೊಂದಿಗೆ ಸ್ನೇಹ ಬೆಳೆದು ಸಾಹಿತ್ಯವೇ ತನ್ನ ಕರ್ಮಭೂಮಿ ಎಂಬುದನ್ನು ಖಚಿತಪಡಿಸಿಕೊಂಡರು.

ಮನೆ ಬಿಟ್ಟು ಸುದರ್ಶನ ಭಕ್ಷಿಯವರ ವಿಚಾರೆ ಗ್ಯಾರೇಜಿನಲ್ಲಿ ಕಾರುಗಳ ಕಿತ್ತು ಹೋದ ಭಾಗಕ್ಕೆ ಬಣ್ಣ ಬಳಿಯುವ ಕೆಲಸಕ್ಕೆ ಸೇರಿಕೊಳ್ಳುತ್ತಾರೆ.

14ನೇ ಪುಟಕ್ಕೆ...



ಹರಿಹರೇಶ್ವರ ದೇಗುಲಕ್ಕೆ 800 ವರ್ಷ


ಹರಿಹರೇಶ್ವರ ದೇವಸ್ಥಾನ
ಚಿತ್ರಗಳು: ಸತೀಶ್ ಬಡಿಗೇರ

ಎಚ್.ಎಸ್. ಹರಿಶಂಕರ್

ಸಂಭ್ರಮ

ದಾವಣಗೆರೆ ಜಿಲ್ಲೆಯ ಹರಿಹರ ಪ್ರಾಚೀನ ಕಾಲದ ಊರು ಹಾಗೂ ಯಾತ್ರಾಸ್ಥಳ. ಈ ಊರನ್ನು 'ಹರೀಶಪುರ', 'ಗುಹಾರಣ್ಯ ಕ್ಷೇತ್ರ', 'ಕೂಡಲೂರು', 'ಕೂಡೂರು' ಎಂದು ಶಾಸನದಲ್ಲಿ ಬಗೆ ಬಗೆಯಾಗಿ ಕರೆದಿದೆ. ಹರಿ ಮತ್ತು ಹರರು ಕೂಡಿ ಹರಿಹರೇಶ್ವರ ಆಗಿರುವುದರಿಂದ ಈ ಊರಿಗೆ ಹರಿಹರ ಎಂಬ ಹೆಸರೂ ಬಂದಿದೆ. ಹರಿಹರರು ಒಂದಾಗಿರುವ ಊರು ಹರೀಶಪುರ. ಗುಹಾಸುರನಿದ್ದ ಪ್ರದೇಶ ಗುಹಾರಣ್ಯ ಕ್ಷೇತ್ರ. ಹರಿಹರರು ಒಂದಾಗಿ ಗುಹಾಸುರ ಎಂಬ ರಾಕ್ಷಸನನ್ನು ಮೆಟ್ಟಿ ಪಾತಾಳಕ್ಕೆ ಕಳುಹಿಸಿದ ಸ್ಥಳ. ಕೂಡಲೂರು ಮತ್ತು ಕೂಡೂರು ಹರಿಹರರ ಸಮನ್ವಯವನ್ನು ಸೂಚಿಸುತ್ತದೆ. ಇಲ್ಲಿ ಹರಿಯುವ ತುಂಗಭದ್ರಾ ನದಿಗೆ ಸಮೀಪದ ಮತ್ತೊಂದು ಕಿರುಹಳ್ಳ ಹರಿದ್ರಾ ನದಿ ಸೇರುವುದರಿಂದಲೂ, ಕೂಡಲೂರು ಹೆಸರು ಬಂದಿರಬಹುದು. ಈ ಊರಿಗೆ ಸುಮಾರು ಸಾವಿರದ ಐನೂರು ವರ್ಷಗಳಿಗೂ ಮಿಕ್ಕ ಇತಿಹಾಸವಿದೆ.

> ಹೊಯ್ಸಳರ ವಾಸ್ತುಶಿಲ್ಪಕ್ಕೆ ಹರಿಹರೇಶ್ವರ ದೇವಾಲಯ ಮಾದರಿ. ಇದು ಅಪರೂಪದ ವಿನ್ಯಾಸ ಹೊಂದಿದೆ. ದೇವಾಲಯದ ರಂಗಮಂಟಪದಲ್ಲಿ ಬಹು ಸೊಗಸಾದ ಅರವತ್ತೆಂಟು ಕಂಬಗಳ ಸಾಲೇ ಇದೆ.

68 ಸಾಲಿನ ಕಂಬಗಳ ದೇವಸ್ಥಾನದ ಪ್ರಾಂಗಣ

ದೇವಾಲಯದ ಹೊರಗಡೆ, ಹರಿಹರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಐವತ್ತಕ್ಕೂ ಹೆಚ್ಚಿನ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಕೆಲವಂತೂ ಪ್ರಸಿದ್ಧವಾಗಿದ್ದು ಚಾಲುಕ್ಯರ ಕಾಲದಿಂದ ಹಿಡಿದು ವಿಜಯನಗರದ ಅರಸರ ಕಾಲದವರೆಗೂ ವ್ಯಾಪಿಸಿವೆ.

ಹರಿಹರೇಶ್ವರ ಮೂರ್ತಿ: ಸ್ವಯಂಭು ಮೂರ್ತಿ. ಕ್ರಿ.ಶ. 694ನೆಯ ಇಮ್ಮಡಿ ಪುಲಿಕೇಶಿಯ ಮೊಮ್ಮಗ ವಿನಾಯಾದಿತ್ಯ ಶಾಸನವು ಈ ಮೂರ್ತಿಯನ್ನು ಹೆಸರಿಸುತ್ತದೆ. ಮುಂದೆ ಐದು ಶತಮಾನಗಳ ಕಾಲ ಹರಿಹರನ ಬಗೆಗಾಗಲಿ ಅಥವಾ ಶ್ರೀ ದೇವರ ಬಗ್ಗೆಯಾಗಲಿ ಯಾವ ಸಂಗತಿಗಳೂ ಕಾಣಬರುವುದಿಲ್ಲ. ಬಹುಶಃ ಆ ಕಾಲದ ರಾಜಕೀಯ ಕ್ಷೋಭೆಗಳಿಂದಾಗಿ ಈ ಗತಿ ಒದಗಿ ಬಂದಿರಬೇಕು. ದೇವರಿಗೆ ಒಂದು ಸರಿಯಾದ ಗುಡಿ ಇದ್ದಿರಲಾರದು ಎಂಬ ಅಂಶ ಶಾಸನಗಳಲ್ಲಿ ಕಂಡು ಬರುತ್ತದೆ.

ಹರಿಹರದ ಹರಿಹರೇಶ್ವರ ದೇವರಿಗೆ ಒಂದು ಸುಂದರವಾದ ನೆಲೆ ಮಾಡಿಸುವ ಸಂಕಲ್ಪ ಬಂದದ್ದು ಪೋಲಾಳ್ವ ದಂಡನಾಯಕ ಎಂಬ ದಂಡಾಧಿಪತಿಗೆ. ಇವನು ಆಂಧ್ರಪ್ರದೇಶದವನು. ಈತನ ಊರು ನಾರಣಪುರ. ಈತನು ಹೊಯ್ಸಳ ಸಾಮ್ರಾಜ್ಯದ ವೀರಬಲ್ಲಾಳನಿಗೂ, ಅವನ ಮಗ ವೀರ ನಾರಸಿಂಹನಿಗೂ ಮತ್ತು ವೀರಬಲ್ಲಾಳನ ಮೊಮ್ಮಗ ವೀರ ಸೋಮೇಶ್ವರನಿಗೂ ದಂಡಾಧಿಪತಿಯಾಗಿದ್ದ ಎಂದ ಮೇಲೆ ಈತನ ಸಾಮರ್ಥ್ಯವನ್ನು ಏನು ಹೇಳುವುದು? ಲೋಕವನ್ನು ಬೆಳಗತಕ್ಕ ಕೀರ್ತಿ, ಮುಗಿಲನ್ನು ಮುಟ್ಟುವ ಹಿರಿಮೆ, ಸಮುದ್ರಕ್ಕೆ ಸ್ಪರ್ಧಿಯಾದ ಗಾಂಭೀರ್ಯ, ಐಶ್ವರ್ಯವನ್ನು ಲೋಕಕ್ಕೆ ನೀಡುವ ಉದಾರ ನೀತಿ ಮತ್ತು ಪ್ರೀತಿಗಳು ಇವನಲ್ಲಿ ಸಂಗಮಿಸಿದ್ದುವು ಎಂದು ದಾವಣಗೆರೆಯ 24ನೆಯ ಶಾಸನ ಇವನನ್ನು ವರ್ಣಿಸುತ್ತದೆ.

ಈಗಿರುವ ದೇವಸ್ಥಾನವನ್ನು ಹೊಯ್ಸಳ ದಂಡಾಧಿಪತಿ ಪೋಲಾಳ್ವ ದಂಡನಾಥನು ಶಕಾಬ್ಧ್ಯದನ ಶಕವರ್ಷ 1145 ಸ್ವಭಾನು ಸಂವತ್ಸರದ ಮಾಘ ಶುದ್ಧ ಏಕಾದಶಿ ಬೃಹಸ್ಪತಿವಾರದಂದು (1224 ಫೆಬ್ರುವರಿ 8 ರಂದು) ನೂರ ಹದಿನೈದು ಚಿನ್ನದ ಕಲಶಗಳಿಂದ ಮೆರೆಯುವಂತೆ ಮಾಡಿಸಿ ಅದನ್ನು ಶ್ರೀ ದೇವರಿಗೆ ಅರ್ಪಿಸಿದನು. ಈ ಉತ್ಸವಕ್ಕೆ ಈ ದಂಡನಾಯಕನ ಗುಣಗಳಿಂದ ಆಕರ್ಷಿತರಾದ ಇತರ ಪ್ರಧಾನಿಗಳೂ ಕವಿಗಳೂ ವಿದ್ವಾಂಸರು ಆಗಮಿಸಿದ್ದು ಅದರಲ್ಲಿ ಭಾಗವಹಿಸಿರಬೇಕು.

ಶ್ರೀ ಹರಿಹರೇಶ್ವರ ದೇವಾಲಯ ಸುಮಾರು ದೊಡ್ಡದಾಗಿದೆಯೆಂದೇ ಹೇಳಬೇಕು. ಇಂಥದೊಂದು ದೇವಾಲಯವನ್ನು ಕಟ್ಟಿಸಿ, ಅದನ್ನು ನೂರಾರು ಚಿನ್ನದ ಕಳಸಗಳಿಂದ ಅಲಂಕರಿಸಬೇಕಾದರೆ ಪೋಲಾಳ್ವನ ಐಶ್ವರ್ಯ, ಅದನ್ನು ಸರಿಗಟ್ಟುವ ಅವನ ಧರ್ಮಶ್ರದ್ಧೆ ಅನನ್ಯವಾದದ್ದು. ಕಲಾವೈಭವದಿಂದ ಕೂಡಿದ ಈ ದೇವಸ್ಥಾನವನ್ನು ಶಾಸನಕವಿ ಮನೋಹರವಾಗಿ ಬಣ್ಣಿಸಿದ್ದಾನೆ.

ಗರ್ಭಗುಡಿಯಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿಯ ಭಿನ್ನವಾದ ಮೂರ್ತಿಯಿದೆ, ಇತ್ತೀಚೆಗೆ ಶ್ರೀಮೂರ್ತಿಗೆ ವಜ್ರಲೇಪನ ಮಾಡಿ ಮತ್ತೆ ಪೂಜೆಗೆ ಅನುವು ಮಾಡಿಕೊಟ್ಟಿದ್ದಾರೆ. ಈ ದೇವಸ್ಥಾನದ ನವರಂಗದ ಎರಡು ಪಕ್ಕಗಳಲ್ಲಿ - ಉತ್ತರ ದಕ್ಷಿಣ ದಿಕ್ಕುಗಳಲ್ಲಿ ಎರಡು ದ್ವಾರಗಳಿವೆ. ಇದು ಬಹಳ ಅಪರೂಪ. ದೇವಸ್ಥಾನದ ರಂಗಮಂಟಪದಲ್ಲಿ ಬಹು ಸೊಗಸಾದ ಅರವತ್ತೆಂಟು ಕಂಬಗಳ ಸಾಲೇ ಇದೆ. ಈ ಕಂಬಗಳು ಎಷ್ಟು ನುಣುಪಾಗಿ ಸೌಂದರ್ಯಯುತವಾಗಿವೆಯೆಂದರೆ, ಆಧುನಿಕ ಯಂತ್ರಗಳ ಸೌಕರ್ಯವಿಲ್ಲದಿರುವಾಗಲೂ, ಇಂಥ ಕಂಬಗಳನ್ನು ಮಾಡಿರುವುದು ಶಿಲ್ಪಿಗಳ ಕೈಚಳಕವನ್ನು ತೋರಿಸುತ್ತದೆ. ಈ ರಂಗಮಂಟಪ ಎಷ್ಟೊಂದು ವಿಸ್ತಾರವಾಗಿದೆಯೆಂದರೆ ಇದರಲ್ಲಿ ನೂರಾರು ಮಂದಿ ಮಲಗಬಹುದಾಗಿದೆ. ಹೊಯ್ಸಳರ ವಾಸ್ತುಶಿಲ್ಪಕ್ಕೆ ಇದೊಂದು ಮಾದರಿಯಾಗಿದೆ.

ಹರಿಹರರ ಸಮನ್ವಯವನ್ನು ಕುರಿತಂತೆ ದಾವಣಗೆರೆ 25ನೆಯ ಶಾಸನ ಹೀಗೆ ಹೇಳುತ್ತದೆ : ಹರಿಯನ್ನು ಬಿಟ್ಟರೆ ಬೇರೆ ಇನ್ನು ಯಾವ ದೈವ ಇಲ್ಲವೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಹರನನ್ನು ಬಿಟ್ಟು ಅನ್ಯದೈವವಿಲ್ಲೆಂದು ಹೇಳುತ್ತಾರೆ. ಈ ಜನರ ಸಂದೇಹವನ್ನು ಹೋಗಲಾಡಿಸುವ ಸಲುವಾಗಿ ಹರಿಹರರು ಈ ಕೂಡಲೂರಿನಲ್ಲಿ (ಹರಿಹರದಲ್ಲಿ) ನೆಲೆ ನಿಂತಿದ್ದಾರೆ. ಇವರು ನಮ್ಮನ್ನು ರಕ್ಷಿಸಲಿ.

ಹರಿಹರೇಶ್ವರ ದೇವಾಲಯವನ್ನು ಕಟ್ಟಿ ಎಂಟುನೂರು ವರ್ಷಗಳು ಸಂದಿವೆ. ಪರಕೀಯರ ದಾಳಿಗೆ ಸಿಕ್ಕು ಅಲ್ಲಲ್ಲಿ ದೇವಾಲಯದ ಹೊರಗೋಡೆಯ ಶಿಲ್ಪಗಳು ಭಿನ್ನಗೊಂಡಿದ್ದರೂ ಒಟ್ಟು ದೇವಾಲಯದ ನೋಟ ಚೆನ್ನಾಗಿದೆ. ನಮ್ಮ ಮುಂದಿನ ಪೀಳಿಗೆ ಈ ದೇವಾಲಯ ನಿರ್ಮಾಣಗೊಂಡ ಸಾವಿರ ವರ್ಷಗಳನ್ನು ಕಾಣುವಂತಾಗಲಿ. ❖

ನೆಲ, ನುಡಿ ಗುರುತುಗಳ ಹುಡುಕಾಟ

ಕೆ.ನರಸಿಂಹಮೂರ್ತಿ

ರಂಗಭೂಮಿ

'ಅಯ್ಯೋ, ಕಟ್ಟಿಗೆ ಮಾರೋ ಸಿಟಿಜನ್....ಲಿಜನ್....ನಾವು ಚಂದ್ರಯಾನ ಪೂರೈಸಿ ಸೂರ್ಯಯಾನಕ್ಕೆ ಸಿದ್ಧತೆ ಮಾಡ್ತಾ ಇರೋರು! ಶೇರ್ ಮಾರ್ಕೆಟ್ಟಿನ ಶೂರರು, ಅಮೆಜಾನ್‌ನಲ್ಲಿ ಅಮೇಸಿಂಗ್ ಆದವರು..ಸ್ವಿಗ್ಗಿ ಆಪಲ್ಲಿ ಸುಗ್ಗಿ ಮಾಡೋರು, ನೀರೂ ನಿದ್ದೆ ಬಿಟ್ರೂ ಸೋಶಿಯಲ್ ಮೀಡಿಯಾ ಬಿಡದೋರು...'

–ಮಾರ್ಕೆಟ್ಟಲ್ಲಿ ಸೌದೆ ಮಾರಲು ದುಂಡಯ್ಯನಿಗೆ ಜಾಗ ಬಿಡದ ಜನ ಹೇಳೋ ಮಾತುಗಳು ಇವು.

ದುಂಡಯ್ಯ ಯಾರೆಂದಿರಾ? ಮಂಡ್ಯ ಜಿಲ್ಲೆ ಮಳವಳ್ಳಿಯ ಅದ್ಭುತ ಜನಪದ ಕತೆಗಾರ. 'ಈ ಕಾಲದಲ್ಲಿ ದುಂಡಯ್ಯ ಬದುಕಿದ್ದರೆ' ಎಂಬ ಕಲ್ಪನೆಯಲ್ಲೆ ಕೋಲಾರ ಸೀಮೆಯ ಕೋಟಿಗಾನಹಳ್ಳಿ ರಾಮಯ್ಯನವರು ಬರೆದ 'ಚಿಕ್ ಮಾರಿ ದೊಡ್ ಮಾರಿ' ನಾಟಕದ ಈ ದೃಶ್ಯ, ಅತ್ಯಾಧುನಿಕ ಜೀವನದ ಜನಪದವನ್ನೂ, ಈ ನೆಲದ ಸಾಮಾನ್ಯರ ಅತಂತ್ರ ಸ್ಥಿತಿಯನ್ನೂ ಏಕಕಾಲಕ್ಕೆ ರಂಗದ ಮೇಲೆ ತರುತ್ತದೆ.

ಮೂವತ್ತು ವರ್ಷದ ಹಿಂದೆ ಇದೇ ರಾಮಯ್ಯ, ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ (ಡಿಪಿಇಪಿ) ಅಡಿ ಎಂಟು ಜಿಲ್ಲೆಗಳ ಜನಪದ ಕತೆಗಾರರನ್ನು ಹುಡುಕಿ ಕೋಲಾರದ ಗೊಲ್ಲಹಳ್ಳಿಯಲ್ಲಿ ಶಿಬಿರ ಮಾಡಿದ್ದಾಗ, ದುಂಡಯ್ಯ ಕೂಡ ಪಾಲ್ಗೊಂಡಿದ್ದರು.

ಕೋಲಾರದ ತೇರಳ್ಳಿ ಬೆಟ್ಟ ಇಳಿದು ಮೇಲುಕೋಟೆಯ ಬೆಟ್ಟ ಏರಿರುವ ರಾಮಯ್ಯನವರು ಮಂಡ್ಯ ಜಿಲ್ಲೆಯಲ್ಲಿ ನಡೆಸಿರುವ ನೆಲ ಗುರುತು, ನುಡಿ ಗುರುತುಗಳ ಹುಡುಕಾಟದ ಕತೆಗಳಿವು. ಕತೆ ಎಂದರೆ ಕತೆಯಷ್ಟೇ ಅಲ್ಲ, ನಾಟಕವೂ ಹೌದು. ಏಕೆಂದರೆ, ಮಂಡ್ಯ ನೆಲದ ಕೆಲವು ಜನಪದ ಕತೆಗಳನ್ನು ಆಧರಿಸಿಯೇ ಅವರು ಸರಣಿ ಕತೆ–ನಾಟಕಗಳನ್ನು ಬರೆದಿದ್ದಾರೆ. ಆರು ಕತೆಗಳು ಮತ್ತು ಎರಡು ಗೀತ ರೂಪಕಗಳು ಮಂಡ್ಯದಲ್ಲಿ ಮತ್ತು ಮೇಲುಕೋಟೆಯಲ್ಲಿ ಫೆಬ್ರುವರಿಯ ಎರಡು ವಾರಾಂತ್ಯಗಳಲ್ಲಿ ಮಕ್ಕಳಿಂದ ಪ್ರದರ್ಶನಗೊಂಡಿರುವುದು ವಿಶೇಷ.

'ಸೀರೆ ಹೇಳಿದ ಸಾವಿತ್ರಿ ಬಾ ಫುಲೆ ಕತೆ' ನಾಟಕದ ದೃಶ್ಯ.

'ಉಜ್ಜಿನಿ ಚೌಡಮ್ಮ' ನಾಟಕದ ದೃಶ್ಯ.

'ಆದಿಮ' ಸಂಸ್ಥೆಯ ಬಂಡೆಗಳ ನಡುವಿನ ಚಿಗುರುಗಳ ಕತೆಗಳನ್ನೇ ಅವರು ನಾಟಕಗಳನ್ನಾಗಿಸಿ, ಮಕ್ಕಳಿಂದಲೇ ಆಡಿಸಿದರು. ಮಂಡ್ಯ ಸೀಮೆಯಲ್ಲಿ ಕಳೆದ ಒಂದು ತಿಂಗಳಲ್ಲಿ ಆಗಿದ್ದೂ ಅದೇ. ಜಿಲ್ಲೆಯ ಹಲವು ಸರ್ಕಾರಿ ಶಾಲೆಗಳ ಮಕ್ಕಳು ನಾಟಕವಾಡುತ್ತಲೇ, ತಮ್ಮ ನೆಲದ–ನುಡಿಯ ಗುರುತುಗಳತ್ತ ಮನ ಕೊಟ್ಟರು. ಮೇಲುಕೋಟೆಯ ಪುತಿನ ರಂಗಮಂದಿರ, ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜಿನ ವನರಂಗ ಈ ರಂಗ ಪಯಣಕ್ಕೆ ಸಾಕ್ಷಿಯಾದವು. ಮೇಲುಕೋಟೆಯ 'ದೃಶ್ಯ ಟ್ರಸ್ಟ್'ನ ಗಿರೀಶ್ ಉತ್ಸವದ ಚಾಲಕ ಶಕ್ತಿಯಾಗಿ ನಿಂತರು. ಹಲವು ವರ್ಷಗಳ ಹಿಂದೆ ಅವರು ರಾಮಯ್ಯನವರ ನಾಟಕಗಳಲ್ಲಿ ಬಾಲನಟರಾಗಿದ್ದವರು.

'ಸೋಮನಹಳ್ಳಿ ಬ್ರಿಡ್ಜ್' ಎನ್ನುವುದು ನೆಲ ಗುರುತನ್ನು ಹಿಡಿದಿಟ್ಟ ಇನ್ನೊಂದು ನಾಟಕ. 'ಯಾರದೋ ಸಂತರ ಹೆಜ್ಜೆ ಗುರುತು ಅಳಿಸದೆ ಇರಲಿ ಅಂಥ ಸೇತುವೆಯನ್ನು ಒಂದಡಿ ಅಗಲ ಕಿರಿದಾಗಿ ಕಟ್ಟಿದೆ. ಇದು ತಮಗೆ ತಿಳಿದಿರಲಿ ಅನ್ನೋದಷ್ಟೇ ನನ್ನ ಇಚ್ಛೆ. ಶಿಕ್ಷೆ ಕಡಿಮೆ ಮಾಡಿ ಅನ್ನೋದಲ್ಲ' ಎಂದು ಡಿಸ್ಟ್ರಿಕ್ಟ್ ಕಲೆಕ್ಟರ್ ಬಳಿ ಧೈರ್ಯವಾಗಿ ಹೇಳಿದ ನಿಡಘಟ್ಟದ ಗುತ್ತಿಗೆದಾರ ಅಣ್ಣೇಗೌಡರ ದುರಂತ ಕತೆ.

ಒಂದು ರೂಪಾಯಿ ದಂಡ ವಿಧಿಸಿದ್ದಕ್ಕೆ ಅವರು ಅದೇ ಸೇತುವೆ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡರೆಂಬುದು ಇಲ್ಲಿನ ಜನರ ಮನದಲ್ಲಿದೆ. 'ಸೋಮನಹಳ್ಳಿ ಬ್ರಿಡ್ಜ್' ಅಂಥ ನೆಲ ಗುರುತು. ಅದನ್ನು ಹೇಳದೆ ಮಕ್ಕಳ ಶಿಕ್ಷಣ ಪೂರ್ಣಗೊಳ್ಳುವುದೇ ಎಂಬುದು ರಾಮಯ್ಯನವರ ಪ್ರಶ್ನೆ.

'ಚಿಕ್ಕಂಕನಹಳ್ಳಿ ಮರಗಳು ಹೇಳಿದ ಕತೆ', 'ಉಜ್ಜಿನಿ ಚೌಡಮ್ಮ', 'ದೊಡ್ ಮಾರಿ ಚಿಕ್ ಮಾರಿ', 'ಸೀರೆ ಹೇಳಿದ ಸಾವಿತ್ರಿ ಬಾ ಫುಲೆಯ ಕತೆ'ಯೂ ಇಂಥ ನೆಲ–ನುಡಿ ಗುರುತುಗಳನ್ನೇ ಗುರಿಯಾಗಿಸಿಕೊಂಡ ನಾಟಕಗಳು. ಉಳಿದಂತೆ, 'ಪುಟಕ್ ಜರ್ ಜರ ಡುಬಕ್ ಮ್ಯಾ..' ಗೀತರೂಪಕಗಳಾದ 'ಕೋಳಿಕೆ ರಂಗ', 'ಕೀಚ್ ಕೀಚ್ ಇಲಿ ಮತ್ತು ವ್ಯಾನಿಟಿ ಬ್ಯಾಗ್' ಮಕ್ಕಳು, ಪ್ರೇಕ್ಷಕರನ್ನು ರಂಜಿಸಿದವು.

ನಾಟಕಗಳು ಪ್ರದರ್ಶನಗೊಂಡಿದ್ದು ಎರಡು ಪ್ರದೇಶಗಳಲ್ಲಿ. ಆದರೆ ಪ್ರದರ್ಶಿಸಿದ್ದು ಮಾತ್ರ ಜಿಲ್ಲೆಯ ವಿವಿಧ ದಿಕ್ಕುಗಳಲ್ಲಿರುವ ಸರ್ಕಾರಿ ಶಾಲೆಗಳ ಮಕ್ಕಳು ಎಂಬುದೇ ವಿಶೇಷ. ಕೇವಲ ಒಂದು ತಿಂಗಳಲ್ಲಿ ಈ ಮಕ್ಕಳನ್ನು ರಂಗಕ್ಕೆ ಸಜ್ಜುಗೊಳಿಸಿದ್ದು, ದೃಶ್ಯ ಟ್ರಸ್ಟ್, ಶಿಕ್ಷಕರು ಮತ್ತು ನಿರ್ದೇಶಕರ ಪರಿಶ್ರಮಕ್ಕೆ ಸಾಕ್ಷಿ.

ಈ ನಾಟಕಗಳನ್ನಾಡಿದ ಕೆ.ಆರ್.ಪೇಟೆಯ ಕಿತ್ತೂರುರಾಣಿ ಚನ್ನಮ್ಮ ವಸತಿ ಶಾಲೆ, ಹುಳಿಗೆರೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ, ದೇವಲಾಪುರದ ಕರ್ನಾಟಕ ಪಬ್ಲಿಕ್ ಶಾಲೆ, ಪಾಂಡವಪುರದ ದೊಡ್ಡಬ್ಯಾಡರಹಳ್ಳಿ, ಮದ್ದೂರಿನ ಕೆ.ಹೊನ್ನಲಗೆರೆ, ಮಳವಳ್ಳಿಯ ಮಾದರಹಳ್ಳಿ ಸರ್ಕಾರಿ ಶಾಲೆಗಳ ಮಕ್ಕಳಲ್ಲಿ ಮತ್ತು ಶಿಕ್ಷಕರಲ್ಲಿ ಈಗ ಹೊಸ ರಂಗ ಜೀವನೋತ್ಸಾಹ ಮೂಡಿದೆ. ಇವರೊಂದಿಗೆ, ಶ್ರೀರಂಗಪಟ್ಟಣದ 'ಗಮ್ಯ' ತಂಡವೂ ಹಲವು ಶಾಲೆಗಳ ಮಕ್ಕಳ ತಮ್ಮದೇ ತಂಡದೊಂದಿಗೆ ಸೇರಿಕೊಂಡಿದೆ.

ಗುರುತುಗಳ ಹುಡುಕಾಟದಲ್ಲಿ ಮಕ್ಕಳಿಗೆ ನಟನೆಯ ಪಾಠ ಹೇಳಿಕೊಟ್ಟ ನಿರ್ದೇಶಕರನ್ನು ನೋಡಿದರೆ ಇನ್ನಷ್ಟು ಅಚ್ಚರಿ ಗ್ಯಾರಂಟಿ. ಕೊಪ್ಪಳದ ಶರೀಫ್, ಗೋಣಿಬಸು, ಬದಾಮಿಯ ಕುಮಾರ್, ಮೈಸೂರಿನ ಶೃತಿ ರಮೇಶ್, ಕೋಲಾರ ದೊಮ್ಮಸಂದ್ರದ ನರಸಿಂಹ, ಮಳವಳ್ಳಿ ಮಧು, ಕಾತ್ಯಾಯಿನಿ ಯಶೋಮಿತ್ರ...ಎಲ್ಲರೂ ಮೈಸೂರು–ಮಂಡ್ಯ–ಬಯಲುಸೀಮೆಯ ನುಡಿ–ನೆಲ ಗುರುತುಗಳನ್ನು ಎಳೆಯ ಮಕ್ಕಳೊಂದಿಗೆ ಹುಡುಕಾಡಿದ ಹದಿವಯಸ್ಸಿನ, ರಂಗಲೋಕದ ಕನಸುಗಾರರು.

'ನಾಟಕದ ಮೂಲಕ ಮಕ್ಕಳಿಗೆ ಅದೆಷ್ಟು ಜ್ಞಾನಶಿಸ್ತುಗಳನ್ನು ಕಲಿಸಬಹುದು ಎಂಬುದಕ್ಕೆ ನೆಲ ಸಂಸ್ಕೃತಿ ನಾಟಕೋತ್ಸವ ಒಂದು ಚಿಕ್ಕ ಉದಾಹರಣೆಯಷ್ಟೇ' ಎನ್ನುತ್ತಾರೆ ರಾಮಯ್ಯ. 'ಇತಿಹಾಸ, ವಿಜ್ಞಾನ, ನೈತಿಕ, ಸಾಮಾಜಿಕ ಮೌಲ್ಯಗಳು, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜೀವಶಾಸ್ತ್ರ ಎಲ್ಲವನ್ನೂ ಶುಷ್ಕವಾಗಿ ಹೇಳಿಕೊಡುವುದಕ್ಕಿಂತ ಆಯಾ ನೆಲದ ಮತ್ತು ನುಡಿಯ ಗುರುತುಗಳ ಮೂಲಕವೇ ಹೇಳಿಕೊಡಬೇಕೆಂದೇ ಸರಣಿ ನಾಟಕಗಳನ್ನು ಬರೆದೆ' ಎನ್ನುವ ಅವರು ಇನ್ನೂ ಹಲವು ನಾಟಕಗಳ ರಚನೆಗೆಂದು ಮಂಡ್ಯದಲ್ಲೇ ನೆಲೆ ನಿಂತಿದ್ದಾರೆ.

'ಸಾವಿತ್ರಿ ಬಾ ಫುಲೆ ನಮ್ಮ ನೆಲ ದೇವತೆ, ಇದು ಈ ನೆಲದ ಹೆಣ್ಣುಭ್ರೂಣ ಹತ್ಯೆಗೆ ನಾವು ತೋರುತ್ತಿರುವ ಪ್ರತಿರೋಧ..'

–'ಸೀರೆ ಹೇಳಿದ ಸಾವಿತ್ರಿ ಬಾ ಫುಲೆ' ನಾಟಕದ ಕೊನೆಯಲ್ಲಿ ಮೇಳದವರು ಹೇಳುವ ಮಾತುಗಳಿವು.

ಮಹಿಳೆಯೊಬ್ಬಳು ಶಿಕ್ಷಕಿಯಾಗುವುದಕ್ಕೆ ಸಮ್ಮತಿ ಇಲ್ಲದ ಕಾಲದಲ್ಲಿ, ಶಾಲೆಗೆ ಪಾಠ ಮಾಡಲು ಹೋಗುವಾಗ ಜನ ಕೆಸರು, ಸೆಗಣಿ ಎಸೆಯುತ್ತಿದ್ದರೆಂಬ ಕಾರಣಕ್ಕೆ ತಮ್ಮ ಬ್ಯಾಗಿನಲ್ಲಿ ಸೀರೆಯೊಂದನ್ನು ಇಟ್ಟುಕೊಂಡಿರುತ್ತಿದ್ದ ಮಹಾತಾಯಿ ಸಾವಿತ್ರಿಯ ಸೀರೆಯ ಕತೆಯ ನೆಪದಲ್ಲಿ, ಮಂಡ್ಯದ ಹೆಣ್ಣುಭ್ರೂಣ ಹತ್ಯೆಯನ್ನು ಖಂಡಿಸಬೇಕೆಂದು ಮಕ್ಕಳಿಗೆ ಹೇಳಲು ಈ ನಾಟಕಕ್ಕಿಂತ ಬೇರೆ ಯಾವ ಪಾಠ ಬೇಕು? ❖

ಹಸಿರು ಗಾಜಿನ...

12ನೇ ಪುಟದಿಂದ...

₹3 ಕೋಟಿ ವಹಿವಾಟು

'ಭಾರತ ಹುಣ್ಣಿಮೆ ಅವಧಿಯಲ್ಲಿ ₹3 ಕೋಟಿಗೂ ಅಧಿಕ ವಹಿವಾಟು ನಡೆಯುತ್ತದೆ. ಇದಲ್ಲದೆ, ಪ್ರತಿ ಮಂಗಳವಾರ, ಶುಕ್ರವಾರ, ಹುಣ್ಣಿಮೆ ದಿನಗಳು ಮತ್ತು ನವರಾತ್ರಿಯಲ್ಲಿ ಹೆಚ್ಚಾಗಿ ಬಳೆ ಮಾರಾಟ ಕಂಡುಬರುತ್ತದೆ' ಎನ್ನುತ್ತಾರೆ ಯಲ್ಲಮ್ಮ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎಸ್‌ಪಿಬಿ ಮಹೇಶ.

'ನಾವ ಕರ್ನಾಟಕ, ಮಹಾರಾಷ್ಟ್ರದಾಗ ಆಗೋ ಭಾಳಷ್ಟ ಜಾತ್ರಿಗೂ ಹೋಗ್ತೇವ್ರಿ. ಆದ್ರ ಯಲ್ಲವ್ವನ ಗುಡ್ಡಕ್ಕ ಬಂದಾಗ, ತಪ್ಪಸಲ್ದ ಬಳಿ ಹಾಕಸ್ಕೊಂಡು ಹೋಗ್ತೇವ್ರಿ. ನಾವಷ್ಟ ಅಲ್ಲ; ಊರಾಗಿರೋ ಹೆಣ್ಮಕ್ಳಿಗೂ ಪ್ರಸಾದ ರೂಪದಾಗ ಬಳಿ ಕೊಡ್ತೇವ್ರಿ' ಎನ್ನುತ್ತಾರೆ ಗದಗ ಜಿಲ್ಲೆಯ ಯಂಡಿಗೇರಿಯ ಗೌರವ್ವ ಭಜಂತ್ರಿ.

ಭಾರತ ನಂಬಿಕೆಗಳನ್ನೇ ಉಸಿರಾಡುವ ದೇಶ. ಇಲ್ಲಿ ಸಾವಿರಾರು ನಂಬಿಕೆಗಳಿವೆ. ಜನರ ಇಂಥ ನಂಬಿಕೆಗಳೇ ಅಸಂಖ್ಯಾತ ಕುಟುಂಬಗಳಿಗೆ ಕೈ ತುಂಬ ಕೆಲಸ, ಒಂದಿಷ್ಟು ಆದಾಯವನ್ನು ತಂದುಕೊಡುತ್ತವೆ.

ಧಾರ್ಮಿಕ ಹಿನ್ನೆಲೆಯೂ ಇದೆ

''ಕಾಶ್ಮೀರದ ಅರಸ ರೇಣುಕರಾಜನ ಪುತ್ರಿ ರೇಣುಕಾ ಯಲ್ಲಮ್ಮ ದೇವಿ. ಆಕೆ ಜಮದಗ್ನಿ ಮುನಿಯನ್ನು ವರಿಸುತ್ತಾಳೆ. ತಮ್ಮ ಬಳಿಯಿದ್ದ ಕಾಮುಧೇನುವನ್ನು ನೀಡಲು ಒಪ್ಪದಿದ್ದಾಗ, ಜಮದಗ್ನಿ ಮುನಿಯನ್ನು ಕಾರ್ತಿವೀರ್ಯಾರ್ಜುನ ಮಹಾರಾಜ ಸಂಹರಿಸುತ್ತಾನೆ. ಆಗ, ಗಂಡನನ್ನು ಕಳೆದುಕೊಂಡ ದೇವಿ ಮೂರು ಘಳಿಗೆ ವಿಧವೆಯಾಗುತ್ತಾಳೆ. ನಂತರ ದೇವಿಯು ಪುತ್ರ ಪರಶುರಾಮನನ್ನು ಕರೆದು, 'ನನ್ನ ಗಂಡ ನನಗೆ ಬೇಕು. ಕೈಲಾಸದಿಂದ ಅಮೃತಕಳಶ ತರಬೇಕು' ಎಂದು ಆದೇಶಿಸುತ್ತಾಳೆ. ಆತ ಕೈಲಾಸಕ್ಕೆ ಹೋಗಿ ಅಮೃತ ಕಳಸ ತಂದ ನಂತರ, ಜಮದಗ್ನಿ ಮುನಿ ಮರುಜನ್ಮ ಪಡೆಯುತ್ತಾರೆ. ದೇವಿ ಮುತ್ತೈದೆಯಾಗುತ್ತಾಳೆ. ಹೀಗಾಗಿ ಎಲ್ಲ ಮಹಿಳೆಯರೂ ಅದರ ಸಂಕೇತವಾಗಿರುವ ಬಳೆ ಧರಿಸುತ್ತಾರೆ. ತಮ್ಮ ಮನೆಗೆ ಕುಂಕುಮ– ಭಂಡಾರವನ್ನೂ ಒಯ್ಯುತ್ತಾರೆ'' ಎನ್ನುತ್ತಾರೆ ದೇವಸ್ಥಾನದ ಅರ್ಚಕ ಏಕನಗೌಡ ಮುದ್ದನಗೌಡ್ರ.

ಚಾರಣ...

12ನೇ ಪುಟದಿಂದ...

ಆ ಬಯಲಿನಲ್ಲೇ ಊಟಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದರು. ಅಡುಗೆಯೇನೋ ತಯಾರಾಗಿತ್ತು. ಆದರೆ ಆಯೋಜಕರು ಊಟಕ್ಕೆ ಎಲೆ ತರುವುದನ್ನು ಮರೆತಿದ್ದರು. 'ಮುತ್ತುಗದ ಎಲೆಯನ್ನೇ ಕಟ್ಟಿಕೊಂಡು ಊಟ ಮಾಡೋ. ಏನೂ ಇಲ್ಲದಿದ್ದಾಗ ಪರಿಸರದಲ್ಲಿ ಇರುವುದನ್ನೇ ಬಳಸಿಕೊಳ್ಳಬೇಕು. ಇದೂ ಸಹ ಪರಿಸರ ಚಾರಣ' ಎಂದು ಸಮರ್ಥಿಸಿಕೊಂಡರು. ಮರುಕ್ಷಣವೇ ಎಲ್ಲರೂ ಮುತ್ತುಗದ ಎಲೆಗಳಿಗೆ ಕೈ ಹಾಕಿದರು. ಕೆಲವೇ ನಿಮಿಷಗಳಲ್ಲಿ ಆ ಮರಗಳು ಗರಿಕಿತ್ತ ನವಿಲಿನಂತಾಗಿದ್ದವು.

'ಹಣ ಮಾಡುವ ಉದ್ದೇಶದಿಂದಲೇ ಚಾರಣ ಆಯೋಜಿಸುವವರ ಸಂಖ್ಯೆ ಹೆಚ್ಚಾಗಿದೆ. ಹೋದಲ್ಲೆಲ್ಲಾ ಕ್ಯಾಂಪ್‌ಫೈರ್ ಮಾಡವುದು, ಎಲ್ಲೆಂದರಲ್ಲಿ ಕಸ ಎಸೆಯುವುದು, ಕಾಡಿನಲ್ಲಿ ಅರಚಾಡುತ್ತಾ ಗದ್ದಲ ಎಬ್ಬಿಸುವುದು, ಕಾಡುಪ್ರಾಣಿಗಳ ಹಿಂದೆ ಓಡುವುದು ಸಾಮಾನ್ಯವಾಗಿದೆ. ಇಂತಹ ಚಟುವಟಿಕೆಗಳನ್ನು ಬಿಗಿ ಮಾಡಿದರೆ, ಚಾರಣಕ್ಕೆ ಬರುವುದೇ ಇಲ್ಲ ಎಂಬಂತಾಗಿದೆ' ಎನ್ನುತ್ತಾರೆ ವೃತ್ತಿಪರ ಚಾರಣಿಗರಾದ ಬೆಂಗಳೂರಿನ ನಿತ್ಯಾನಂದ ಮತ್ತು ಸುನಿಲ್ ರಾಮಕೃಷ್ಣ.

'ಪರಿಸರ ಅಧ್ಯಯನವೇ ಚಾರಣದ ಮೂಲಮಂತ್ರ. ಇಲ್ಲದಿದ್ದಲ್ಲಿ ಅದನ್ನೂ ಒಂದು ಟೂರ್ ಎಂದು ಕರೆಯಬಹುದಿತ್ತಲ್ಲವೇ. ಈಗಂತೂ ಚಾರಣ ಎಂಬುದು ಟೂರ್ ಎಂಬಂತೆಯೇ ಆಗಿಹೋಗಿದೆ. ಒಂದಷ್ಟು ಕಿ.ಮೀ. ನಡೆದು, ಫೋಟೊ ತೆಗೆದು ಬಂದು ಬಿಡಬೇಕು. ಅರಣ್ಯ ಪ್ರದೇಶದಲ್ಲಿ ಚಾರಣ ಆಯೋಜಿಸಿದಾಗ, ಮೊಬೈಲ್ ಬಳಸಬಾರದು ಎಂಬ ನಿರ್ಬಂಧ ಹೇರುತ್ತಿದ್ದೆವು. ಈಗ ಮೊಬೈಲ್ ಬಳಸಬೇಡಿ ಎಂದರೆ ಚಾರಣಕ್ಕೆ ಬರುವುದೇ ಇಲ್ಲ' ಎನ್ನುತ್ತಾರೆ ವೃತ್ತಿಪರ ಚಾರಣಿಗ ಹರಿಪ್ರಸಾದ್.

ರಾಜ್ಯದ ಅತ್ಯಂತ ಎತ್ತರದ ಸ್ಥಳ ಮುಳ್ಳಯ್ಯನಗಿರಿ. ಮುಳ್ಳಯ್ಯನಗಿರಿಯ ತುತ್ತತುದಿಗಿಂತ ಕೆಲವೇ ಮೀಟರ್ ಕೆಳಗಿನವರೆಗೂ ವಾಹನಗಳು ಹೋಗುತ್ತವೆ. ಅಲ್ಲಿಯವರೆಗೂ ವಾಹನದಲ್ಲೇ ಹೋಗಿ, 10–15 ನಿಮಿಷ ಮೆಟ್ಟಿಲತ್ತಿ ಇಳಿದು ಬಂದರೆ ಚಾರಣ ಮುಗಿದುಹೋಯಿತು. ಆದರೆ, ಮುಳ್ಳಯ್ಯನಗಿರಿಯ ತಪ್ಪಲಿನಿಂದಲೇ ಚಾರಣ ಆರಂಭಿಸುವ ಪರಿಪಾಟ ಹಿಂದೊಮ್ಮೆ ಇತ್ತು. ಬೆಳಿಗ್ಗೆಯೇ ಚಾರಣ ಆರಂಭಿಸಿದರೆ ಬಿಸಿಲು ಇಳಿಯುವ ಹೊತ್ತಿಗೆ ತುದಿ ಮುಟ್ಟಬಹುದಿತ್ತು. ಮಠದಲ್ಲಿ ಅನುಮತಿ ಪಡೆದು, ಉಳಿದುಕೊಂಡು ಬೆಳಿಗ್ಗೆ ಮತ್ತೆ ಗಿರಿಯನ್ನು ಇಳಿಯಬೇಕಿತ್ತು. ಅಂತಹದ್ದೊಂದು ಚಾರಣ ಇತ್ತು ಎಂದು ಹೇಳಿದರೆ ಈಗಿನ ಬಹುತೇಕ ಚಾರಣಿಗರು ನಂಬಲಾರರು. ರಾಜ್ಯದ ಅತ್ಯಂತ ಕಠಿಣ ಚಾರಣಗಳಲ್ಲಿ ಅದೂ ಒಂದು. ಕೊಡಚಾದ್ರಿಯದ್ದೂ ಇದೇ ಕತೆ. ಎಲ್ಲರೂ ಕೊಲ್ಲೂರು ಕಡೆಯಿಂದ ಜೀಪನ್ನು ಏರಿ ಕೊಡಚಾದ್ರಿಯ ತುದಿ ತಲುಪುತ್ತಾರೆ. ಜೀಪಿನಲ್ಲೇ ಪರ್ವತವನ್ನು ಇಳಿದುಬಿಡುತ್ತಾರೆ. ಆದರೆ ಕೊಲ್ಲೂರಿನಿಂದ ಎದುರು ದಿಕ್ಕಿನಲ್ಲಿ ಪರ್ವತದ ತಪ್ಪಲಿನಿಂದಲೇ ಚಾರಣ ಆರಂಭಿಸುವ ಹಾದಿಯೊಂದಿತ್ತು. ಹಲವು ಎಸ್ಟೇಟ್, ಅರಣ್ಯ ಪ್ರದೇಶವನ್ನು ಹಾದುಹೋಗುವ ಆ ಹಾದಿಯಲ್ಲಿ ಏಳೆಂಟು ಕಡೆ ಹೊಳೆಯನ್ನೂ ದಾಟಬೇಕಿತ್ತು. ಸೊಬಗಿನ ಚಾರಣದ ಆ ಹಾದಿಯೂ ಈಗಿನ ಚಾರಣಿಗರ ಪಟ್ಟಿಯಲ್ಲಿ ಇಲ್ಲ. ಇಂತಹ ಚಾರಣಗಳು ಇಲ್ಲದ, ತ್ವರಿತವಾಗಿ ಮುಗಿದುಬಿಡುವ ಚಾರಣವನ್ನು ಅನುಭವಿ ಚಾರಣಿಗರು 'ಫಾಸ್ಟ್‌ಫುಡ್ ಚಾರಣ' ಎಂದಿದ್ದಾರೆ.

ಜನಪ್ರಿಯ ಚಾರಣ ಸ್ಥಳಗಳಿಗೆ ಸಿದ್ಧತೆ ಇಲ್ಲದೆ ಹೀಗೆ ಹೋಗಿ, ಹಾಗೆ ಬಂದುಬಿಡಬೇಕು ಎಂಬ ಮನಸ್ಥಿತಿಯೇ ಕುಮಾರ ಪರ್ವತದಲ್ಲಿ ಜನಜಂಗುಳಿ ಉಂಟಾಗಲು ಕಾರಣ. ಅರಣ್ಯ ಇಲಾಖೆ ಹೇರಿರುವ ನಿರ್ಬಂಧವು ಜನಜಂಗುಳಿಯನ್ನೇನೋ ತಡೆಯುತ್ತದೆ. ಆದರೆ ಈಗಿನ ಚಾರಣದ ಸ್ವರೂಪದಿಂದ ಪರಿಸರಕ್ಕೆ ಆಗುವ ಧಕ್ಕೆಯನ್ನು ತಡೆಯಲೂ ಕ್ರಮ ತೆಗೆದು ಕೊಳ್ಳಬೇಕಿದೆ.

ಪರಿಸರ ತನ್ನ ಒಡಲೊಳಗೆ ಅಪರೂಪದ ಜೀವವೈವಿಧ್ಯವನ್ನು ಇಟ್ಟುಕೊಂಡು ಉಸಿರಾಡುತ್ತಿದೆ. ಇದಕ್ಕೆ ಹಾನಿ ಮಾಡುವುದು ನಮಗೇ ನಾವು ಮಾಡಿಕೊಂಡ ಹಾನಿಗೆ ಸಮ. ಪರಿಸರವನ್ನು ಗೌರವಿಸುವುದು ನಾಗರಿಕ ನಡೆ ಅಲ್ಲವೇ? ❖

ಮುನ್ನೋಟ 25-02-2024 ರಿಂದ -02-03-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಎಲ್ಲವೂ ನನಗೆ ಗೊತ್ತಿದೆ ಎಂಬ ಭಾವನೆ ನಿಮ್ಮಲ್ಲಿ ಇರುತ್ತದೆ, ಆದರೆ ಬೇರೆಯವರು ಮಾತನಾಡಿದಾಗ ಸಾಕಷ್ಟು ತಿಳಿದಿಲ್ಲವೆಂದು ನಿಮಗೆ ಅರ್ಥವಾಗುತ್ತದೆ. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ನಟರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಭೂಮಿಯ ವ್ಯವಹಾರವನ್ನು ಮಾಡುವವರಿಗೆ ಲಾಭವಿರುತ್ತದೆ. ಅಡುಗೆ ಎಣ್ಣೆಯನ್ನು ತಯಾರಿಸಿ ಮಾರುವವರಿಗೆ ಲಾಭ ಹೆಚ್ಚುತ್ತದೆ.

ವೃಷಭ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ಕೃಷಿ ಚಟುವಟಿಕೆ ನಡೆಸಲು ಹಿರಿಯರೊಂದಿಗೆ ಜೊತೆಯಾಗುವಿರಿ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಬಹಳ ವ್ಯಾವಹಾರಿಕವಾಗಿ ಮಾತನಾಡಿ ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಪಶು ಸಂಗೋಪನೆ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ತಾಯಿ ಮತ್ತು ಸೋದರಿಯರ ಸಹಕಾರಗಳು ನಿಮಗೆ ದೊರೆಯುತ್ತವೆ. ಆಸ್ತಿ ಮಾಡುವ ವಿಚಾರದಲ್ಲಿ ಹೆಚ್ಚು ಆತುರತೆ ಬೇಡ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಶಸ್ತ್ರಚಿಕಿತ್ಸೆ ಮಾಡುವ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸಂಗಾತಿಯೊಡನೆ ಕೂಡಿ ಮಾಡಿರುವ ಹಣಕಾಸಿನ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆಲಸೀತನವಿದ್ದರೂ ಬಲವಂತದಿಂದ ಕೆಲಸ ಕಾರ್ಯ ಆರಂಭಿಸುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಸಂಗೀತಗಾರರಿಗೆ ಹೆಚ್ಚು ಮನ್ನಣೆ ದೊರೆಯುತ್ತದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ಸಂಗಾತಿಯ ಸಹಕಾರದಿಂದ ಆಸ್ತಿಮಾಡಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮನಸ್ಸಿನಲ್ಲಿ ಬಹಳ ಆನಂದವಿರುತ್ತದೆ. ಮಾತನಾಡುವಾಗ ಹೆಚ್ಚು ಧರ್ಮ ಸೂಕ್ಷ್ಮಗಳ ಬಗ್ಗೆ ಗಮನವಿರಲಿ. ನಿಮ್ಮ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿರುತ್ತವೆ. ಆಸ್ತಿಕೊಳ್ಳಲು ಒಟ್ಟು ಮಾಡಿದ್ದ ಹಣ ನಿಮಗೆ ಉಪಯೋಗಕ್ಕೆ ಬರುತ್ತದೆ. ಮಕ್ಕಳಿಗೆ ಅಧ್ಯಯನದಲ್ಲಿ ಉತ್ತಮ ಫಲಿತಾಂಶವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಧರ್ಮ ಗುರುಗಳ ಬಳಿ ಹೋಗಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕೇಳಿಕೊಳ್ಳುವಿರಿ. ಆದಾಯವಿದ್ದರೂ ಕೂಡ ಅದು ನಿಮ್ಮನ್ನು ತಲುಪಲು ನಿಧಾನವಾಗಬಹುದು. ನಿಮ್ಮ ನಡವಳಿಕೆಯಿಂದ ಜನರನ್ನು ಸಂಪಾದನೆ ಮಾಡಿಕೊಳ್ಳುವಿರಿ. ಸಂಸಾರದಲ್ಲಿ ಸ್ವಲ್ಪ ಕಸಿವಿಸಿಗಳು ಇರುತ್ತವೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಅತಿಯಾದ ಆತ್ಮಾಭಿಮಾನ ನಿಮ್ಮಲ್ಲಿ ಇರುತ್ತದೆ. ಮಾತನಾಡುವಾಗ ಎಚ್ಚರ ತಪ್ಪಿ ಆಡುವ ಮಾತು ನಿಮ್ಮನ್ನು ಗಾಸಿಗೊಳಿಸುತ್ತದೆ. ಆದಾಯವು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ನಿಮ್ಮ ನಡವಳಿಕೆಗಳಿಂದ ಹಿರಿಯ ಬಂಧುಗಳನ್ನು ದೂರ ಮಾಡಿಕೊಳ್ಳುವಿರಿ. ಕೃಷಿಯಿಂದ ಆದಾಯ ಇರುತ್ತದೆ. ಕೀಲುನೋವು ಅಥವಾ ಚರ್ಮರೋಗಗಳು ನಿಮ್ಮನ್ನು ಬಾಧಿಸಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೃಷಿಕರಿಗೆ ಹೆಚ್ಚು ವರಮಾನವಿರುತ್ತದೆ. ನಿಮ್ಮ ನಡವಳಿಕೆಗಳಿಂದ ಬಂಧುಗಳ ಜೊತೆ ವಿಶ್ವಾಸ ಹೆಚ್ಚಿಸಿಕೊಳ್ಳಲು ಪ್ರಯತ್ನಪಡುವಿರಿ. ಬಂಧುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಯತ್ನ ಮಾಡುವಿರಿ. ಕೃಷಿಭೂಮಿಯನ್ನು ಖರೀದಿ ಮಾಡುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ನವೀನ ಕೃಷಿಯನ್ನು ಮಾಡುವವರಿಗೆ ಅಗತ್ಯ ಸಹಕಾರ ದೊರೆಯುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಶ್ಚಿತ ಗುರಿಯೊಂದಿಗೆ ಕೆಲಸ ಆರಂಭಿಸುವಿರಿ. ಆದಾಯವು ನಿಮ್ಮ ಅಗತ್ಯಕ್ಕೆ ತಕ್ಕಂತೆ ಇರುತ್ತದೆ. ನಿಮ್ಮ ವೈರಿಗಳು ನಿಮ್ಮ ಸಹಕಾರವನ್ನು ಬಯಸಿ ಬರುವರು. ಯಂತ್ರೋಪಕರಣಗಳನ್ನು ಮಾರಾಟ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿದೇಶಗಳಿಗೆ ಧಾನ್ಯವನ್ನು ರಫ್ತು ಮಾಡುತ್ತಿದ್ದವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿ ಮಾಡಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಆದಾಯವು ಸ್ವಲ್ಪ ಚೇತರಿಕೆ ಕಾಣುತ್ತದೆ. ಬುದ್ಧಿವಂತಿಕೆಯಿಂದ ವ್ಯವಹಾರ ಮಾಡಿ ಹಣ ಉಳಿಸುವಿರಿ. ನಿಮ್ಮ ನಿಗೂಢ ನಡೆಗಳು ವೈರಿಗಳನ್ನು ಕಂಗೆಡಿಸುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿನ ಯಶಸ್ಸು ಇದ್ದೇ ಇರುತ್ತದೆ. ರಕ್ತದೊತ್ತಡ ಇರುವವರು ಉದ್ವೇಗಕ್ಕೆ ಒಳಗಾಗದಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ಕೃಷಿಗೆ ಬೇಕಾದ ಉಪಕರಣಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚು ಲಾಭವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಹಿರಿಯರಿಗೆ ಸಾರ್ವಜನಿಕವಾಗಿ ಹೆಚ್ಚು ಗೌರವ ದೊರೆಯುತ್ತದೆ. ಸ್ಥಿರಾಸ್ತಿ ಖರೀದಿ ವಿಚಾರದಲ್ಲಿ ಮುಂದುವರಿಯುವುದು ಬೇಡ, ನಷ್ಟವಾಗುವ ಸಾಧ್ಯತೆ ಇದೆ. ಗಣಿತ ತಜ್ಞರಿಗೆ ಹೆಚ್ಚು ಕೆಲಸ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಿದೇಶಿ ವಸ್ತುಗಳ ವ್ಯಾಮೋಹ ಅತಿಯಾಗಿ ಇರುತ್ತದೆ. ನೀವು ನಗುನಗುತ್ತಾ ಮಾತನಾಡಿದರೂ, ಅದರ ಹಿಂದಿನ ಕೊಂಕು ಜನರಿಗೆ ತಿಳಿಯುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಬಂಧುಗಳ ಕಡೆಯಿಂದ ಸಾಕಷ್ಟು ನಿಷ್ಠುರ ಕಟ್ಟಿಕೊಳ್ಳುವಿರಿ. ಮನೆಯಲ್ಲಿ ಹಿರಿಯರ ಮಾತಿನಿಂದ ಅಶಾಂತಿ ಉಂಟಾಗಬಹುದು.

ಪದಬಂಧ 2830



ಮೇಲಿನಿಂದ ಕೆಳಕ್ಕೆ
1. ಪರೀಕ್ಷೆಯ ಮುನ್ನ ಬಹಿರಂಗವಾಗಿ ಗೊಂದಲ ಎಬ್ಬಿಸುವ ಪೇಪರ್ 5
2. ಆಗಬೇಕಾದ ಕೆಲಸ ಹೀಗೆ ಶೀಘ್ರಗತಿಯಲ್ಲಿ ಸಾಗಬೇಕು 3
3. ಸ್ಪಷ್ಟ ಕರಾರುವಾಕ್ಕಾದ ನುಡಿ 3
4. ನಿಜಕ್ಕಾಗಿಯೇ ನಡೆಸುವ ಹೋರಾಟ 5
7. ಕೆಡಕು ಮಾಡಲು ಹೂಡುವ ಸಂಚು 3
9. ಇನ್ನೇನು ಚೈತ್ರ ಬರುತ್ತಲೇ ಚಿಗುರೊಡೆಯುವ ಆಮ್ರ ವೃಕ್ಷ 3
11. ಸಂತೋಷ ಸಮಾಧಾನದಿಂದ ಕೂಡಿದ ತೃಪ್ತಿ 3
12. ಬೆಟ್ಟದ ಅಡಿಯಲ್ಲಿ ವಾಸ ಪ್ರದೇಶ 3
13. ನಾರದ ವೀಣಾನಾಮ 3
14. ಕಲ್ಕತ್ತಾ ದೇವಿ ದುರ್ಗಿಯನ್ನು ಅಕ್ಕರೆಯಿಂದ ಹೀಗೆ ಕರೆಯುತ್ತಾರೆ 3
16. ನವಿರು ಮಾತಿನಿಂದಲೇ ಮೋಸ ಮಾಡುವವ 5
17. ಆಡುಮಾತಿನಲ್ಲಿ ವ್ಯವಹಾರ 3
19. ಚಿನ್ನದಂತಹ ಅವಯವದಿಂದ ಹೊಳೆಯುವ ರಾಜ 3
20. ಹರಕೆ ಹೊತ್ತು ಬೆಳಗುವ ಆಜ್ಯ ಜ್ಯೋತಿ 5
22. ಹಣ್ಣಾಗದ ಕಾಯಿ ಮುಖ ಗಂಟಿಕ್ಕಿದೆ 3
23. ಸಭೆಗಳಿಗಾಗಿ ಕಟ್ಟಿದ ಭವ್ಯವಾದ ಬಂಗಲೆ 3

ಎಡದಿಂದ ಬಲಕ್ಕೆ
1. ಆಳಿಸಿಕೊಳ್ಳುವವನೇ ಆಳುವನೆಂಬ ಆಡಳಿತ ವ್ಯವಸ್ಥೆ 5
3. ಶ್ರೇಷ್ಠವಾದ ಬಿಳಿಹಕ್ಕಿಯಂತಹ ಮಹಾನ್ ಸಂತ 5
5. ಹಿಂದಿನ ಕಾಲದ ಅಶ್ವಬಲ 3
6. ಸರ್ವಮತಗಳಲ್ಲೂ ಕಾಣಿಸುವ ಶ್ರೇಷ್ಠ ತಂದೆ 5
8. ಈ ಕವಿ ಹಾಡಿದನೆಮದರೆ ಕಲಿಯುಗ ದ್ವಾಪರವಾಗುವುದು 5
10. ಕಾಯಿಸಿದ ಹಾಲಲ್ಲಿ ಹೇಷಾರವ ಹೇರಳವಾಗಿದೆ 5
13. ಸರಳ ಮಾತಿನಲ್ಲಿ ಸಾವನ್ನುಂಟು ಮಾಡುವವ 5
15. ಮೊಹೆಂಜೋದಾರೊ ಜೊತೆಗಿನ ಅವಳಿ ನಗರ ಹಿಂದುಮುಂದು 3
16. ಹರಿವ ಹೊಳೆಯ ಸುತ್ತಲಿನ ವಿಸ್ತಾರ ಪ್ರದೇಶ 5
18. ಬಾಣದಂತೆ ತೀಕ್ಷ್ಣವಾಗಿ ಮತ್ತೆ ಮರಳಿ ಬರುವ ನುಡಿ 5
21. ಕುಲವನ್ನು ಬೆಳೆಸಿ ಬೆಳಗುವವ 5
23. ಪರಮಾತ್ಮನ ಚರಣಗಳನ್ನು ಹೆಸರಲ್ಲಿ ಪಡೆದ ಅವಧೂತ 5
24. ಇವ ದೊಡ್ಡವನಲ್ಲ ಮನೆಯಲ್ಲಿ ಚಿಕ್ಕವ 3
25. ವಿದ್ಯಾಭ್ಯಾಸ ವ್ಯಾಸಂಗ ಪಡೆದವರು 5
26. ಹೊಸದಾಗಿ ನಿರ್ಮಿಸಿದ ನಾಲ್ಕು ಕಂಬಗಳ ಆಧಾರದ ಚಾವಣಿ 5

ಪದಬಂಧ ಉತ್ತರ -2829

ಮೇಲಿಂದ ಕೆಳಕ್ಕೆ
1.ಭಕುತಿ 2.ತಕ್ಷಕನಾಗ 3.ಸಾರ್ವಜನಿಕ 4.ತನುಜಾ 5.ಕುಸುಮ 7.ಕಿನ್ನರ 10.ವರಾಳಿ 12.ಕದಳಿ 13.ಅಡವಿ 14.ರಸವಿಜ್ಞಾನ 15.ಮುದ್ರಾರಾಕ್ಷಸ 16.ನಮಾಸ 19.ಟಗರು 21.ಸಂಬಳ

ಎಡದಿಂದ ಬಲಕ್ಕೆ
1.ಭರತ 3.ಸಾಮಂತ 5.ಕುಲತಿಲಕ 6.ಜಯಜಾನಕಿ 8.ನಾದಿನಿ 9.ಮದುವಣಿಗ 11.ಕನಕಪುರ 13.ಅರಳಿಮರ 15.ಮುರಳಿಗಾನ 17.ಸಮುದ್ರಾ 18.ವಿಕಟಕವಿ 20.ರಾಜಸಂನ್ಯಾಸ 22.ರುಜಿನ 23.ಸರಳ

ಸಹಬಾಳ್ವೆ ಕತೆ ಹೇಳುವ ಲಂಟಾನಾ ಆನೆಗಳು...

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಗಮನಸೆಳೆದ ಲಂಟಾನಾ ಆನೆಗಳ ಕಲಾಕೃತಿಗಳು. ಚಿತ್ರ/ ರಂಜು ಪಿ

ಕೀರ್ತಿಕುಮಾರಿ ಎಂ.

ಕಲಾಕೃತಿ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಆನೆಗಳ ಹಿಂಡೇ ನೆರೆದಿತ್ತು! ದೊಡ್ಡವರು ಇರಲಿ, ಮಕ್ಕಳೂ ಕೂಡ ಯಾವುದೇ ಭಯವಿಲ್ಲದೇ ಅವುಗಳ ಸೊಂಡಿಲನ್ನು ಮುಟ್ಟಿ, ಪಕ್ಕದಲ್ಲೇ ನಿಂತು ಫೋಟೊಗೆ ಪೋಸು ಕೊಡುತ್ತಿದ್ದವು. ಅರರೆ! ಆ ಆನೆಗಳು ಜನರನ್ನು ಕಂಡು ದಿಕ್ಕಾಪಾಲು ಓಡಲಿಲ್ಲವೆ? ಅವರನ್ನು ಅಟ್ಟಿಸಿಕೊಂಡು ಬರಲಿಲ್ಲವೆ? ಇಂತಹ ಪ್ರಶ್ನೆಗಳು ಮೂಡಿರಲಿಕ್ಕೂ ಸಾಕು. ಅವು ದಿಟದ ಆನೆಗಳಲ್ಲ, ಲಂಟಾನಾ ಆನೆಗಳು!

ಹೌದು, ಅವು ಲಂಟಾನಾ ಆನೆಗಳೇ. ವಿಧಾನಸೌಧ, ಕೆಂಪೇಗೌಡ ಮೆಟ್ರೊ ನಿಲ್ದಾಣ, ಮಹಾತ್ಮಗಾಂಧಿ ಮೆಟ್ರೊ ನಿಲ್ದಾಣ–ಹೀಗೆ ಬೆಂಗಳೂರಿನ ಹತ್ತಾರು ಕಡೆ ಲಂಟಾನಾ ಆನೆಗಳು ಚದುರಿದಂತೆ ಕಂಡು ಬರುತ್ತವೆ. ಈ ಲಂಟಾನಾ ಆನೆಗಳೇಕೆ ದಿಢೀರ್ ಪ್ರತ್ಯಕ್ಷವಾದವು ಎನ್ನುವ ಕುತೂಹಲಕ್ಕೆ ಇಲ್ಲಿದೆ ಉತ್ತರ.

ಲಂಟಾನಾ ಆನೆಗಳು ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಸಂಘರ್ಷದ ಬದಲು 'ಸಹಬಾಳ್ವೆ' ಪಾಠವನ್ನು ಹೇಳಿಕೊಡುವ ಸಲುವಾಗಿಯೇ ಮಹಾನಗರಕ್ಕೆ ಬಂದಿವೆ. ನಗರೀಕರಣ, ಆಧುನೀಕರಣದ ಧಾವಂತದಲ್ಲಿರುವ ನಮಗೆ ಪರಿಸರ ಸಂರಕ್ಷಣೆ, ಮನುಷ್ಯ-ವನ್ಯಜೀವಿಗಳ ಸಹಬಾಳ್ವೆಯ ಅನಿವಾರ್ಯತೆ ಮತ್ತು ಲಂಟಾನಾದಿಂದ ನಿಸರ್ಗಕ್ಕಿರುವ ಅಪಾಯವನ್ನು ತಿಳಿಸಲು ಬಂದಿವೆ. ಇದೇ ಸಂದೇಶ ಹೊತ್ತು ದೇಶ-ವಿದೇಶಗಳಿಗೆ 'ಮಹಾ ವಲಸೆ' ಕೂಡ ಹೊರಟಿವೆ. ಮಾನವನ ಅತಿ ಆಸೆಯು ವನ್ಯಜೀವಿಗಳ ಆವಾಸಸ್ಥಾನ ಮತ್ತು ಆಹಾರವನ್ನು ಆಪೋಷಿಸಿಕೊಳ್ಳುತ್ತಿದೆ. ಕಾಡು ನಾಡಾಗಿ ಪರಿವರ್ತನೆಯಾಗುತ್ತಿದೆ. ಆನೆ, ಹುಲಿ, ಚಿರತೆ ಸೇರಿದಂತೆ ಕಾಡು ಪ್ರಾಣಿಗಳೆಲ್ಲಾ ನಾಡಿಗೆ ಲಗ್ಗೆ ಇಡುತ್ತಿವೆ. ಇಂಥ ಸಂದರ್ಭದಲ್ಲಿ 'ಸಹಬಾಳ್ವೆ'ಯೊಂದೇ ಪರಿಹಾರ ಎನ್ನುತ್ತಿವೆ ಈ ಆನೆಗಳು. ಈ ಆನೆಗಳನ್ನು ಸುಂದರ ಕಲಾಕೃತಿಗಳನ್ನಾಗಿ ಮಾತ್ರ ನೋಡದೆ ವನ್ಯಜೀವಿಗಳ ಪ್ರತಿರೂಪವಾಗಿ ನೋಡುತ್ತಾ ಅವುಗಳನ್ನು ಅರ್ಥ ಮಾಡಿಕೊಳ್ಳಬೇಕು ಎನ್ನುವ ಸಂದೇಶವೂ ಇದೆ.

ಸರ್ಕಾರೇತರ ಸಂಸ್ಥೆಗಳಾದ 'ರಿಯಲ್ ಎಲಿಫೆಂಟ್ ಕಲೆಕ್ಟಿವ್' ಮತ್ತು ಬ್ರಿಟನ್‌ನ 'ಎಲಿಫೆಂಟ್ ಫ್ಯಾಮಿಲಿ' ಸಹಭಾಗಿತ್ವದಲ್ಲಿ ತಮಿಳುನಾಡಿನ ಗುಡಲೂರಿನ ಶೋಲಾ ಟ್ರಸ್ಟ್ ಲಂಟಾನಾದಿಂದ ಆನೆಗಳನ್ನು ರೂಪಿಸುವ ಕೌಶಲವನ್ನು ಆದಿವಾಸಿಗಳಿಗೆ ಪರಿಚಯಿಸಿ, ತರಬೇತಿ ನೀಡುತ್ತಿದೆ. ಈ ಮೂಲಕ ಪರಿಸರ ಸಂರಕ್ಷಣೆ, ಮಾನವ-ವನ್ಯಜೀವಿ ಸಂಘರ್ಷದ ಬಗ್ಗೆ ಜನಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದೆ. ಜೊತೆಗೆ ಜೀವ ವೈವಿಧ್ಯದ ವಿನಾಶಕಾರಿ ಎಂದೇ ಕರೆಯುವ ಸಸ್ಯ ಪ್ರಭೇದ 'ಲಂಟಾನಾ'ವನ್ನು ಬಡಸಮೇತ ಕಿತ್ತು ಹಾಕುವ ಹೊಸ ಮಾರ್ಗೋಪಾಯವನ್ನೂ ತಿಳಿಸುತ್ತಿದೆ.

ಆನೆ ರೂಪುಗೊಳ್ಳುವುದು ಹೀಗೆ...

ಅರಣ್ಯಕ್ಕೆ ತೆರಳಿ ಲಂಟಾನಾದ ಗಿಡಗಳನ್ನು ಕತ್ತರಿಸಿ ತಂದು, ದೊಡ್ಡ ಕಡಾಯಿಗಳಲ್ಲಿ ಹಾಕಿ ಐದು ಗಂಟೆ ಬಿಸಿನೀರಿನಲ್ಲಿ ಬೇಯಿಸುತ್ತಾರೆ. ನಂತರ ಲಂಟಾನಾದ ಸಿಪ್ಪೆಯನ್ನು ಬಿಡಿಸಿಟ್ಟುಕೊಳ್ಳುತ್ತಾರೆ.ಆಗ ಲಂಟಾನಾ ಯಾವ ರೀತಿ ಬೇಕಾದರೂ ಬಾಗುತ್ತದೆ. ಎಷ್ಟು ವರ್ಷ ಇಟ್ಟರೂ ಹಾಳಾಗುವುದಿಲ್ಲ. ಆನೆಯ ಆಕೃತಿಗೆ ಬೇಕಾಗುವ ಉದ್ದ–ಅಗಲ ಸೇರಿದಂತೆ ಕಲಾಕೃತಿಯ ಚೌಕಟ್ಟನ್ನು ಕಬ್ಬಿಣದಿಂದ ತಯಾರಿಸಿ, ಚೌಕಟ್ಟಿನ ಹೊರಭಾಗದಲ್ಲಿ ಲಂಟಾನಾ ಬಳಸಿ ಕಲಾಕೃತಿ ರೂಪಿಸುತ್ತಾರೆ. ಇದಕ್ಕೆ ವಾರ್ನಿಶ್ ಹೊರತುಪಡಿಸಿ ಯಾವುದೇ ರಾಸಾಯನಿಕವನ್ನು ಬಳಸುವುದಿಲ್ಲ. ಆದಿವಾಸಿಗಳು ಈವರೆಗೆ 300ಕ್ಕೂ ಹೆಚ್ಚು ಆನೆಗಳ ಕಲಾಕೃತಿ ಗಳನ್ನು ರಚಿಸಿದ್ದಾರೆ.

ಆನೆಗೆ ಜೀವ ತುಂಬುತ್ತಿರುವ ಕಲಾವಿದ

ವನ್ಯಜೀವಿಗಳಿಗೆ ಕಂಟಕ, ಅರಣ್ಯ ಇಲಾಖೆಗೆ ತಲೆನೋವಾಗಿರುವ ಲಂಟಾನಾ ಕರ್ನಾಟಕ, ತಮಿಳುನಾಡು ಮತ್ತು ಕೇರಳದ ನೀಲಗಿರಿ ಪ್ರದೇಶದಲ್ಲಿ ವಾಸಿಸುವ ಸೋಲಿಗ, ಬೆಟ್ಟ ಕುರುಬ, ಜೇನು ಕುರುಬ ಮತ್ತು ಪಣಿಯನ್ ಬುಡಕಟ್ಟು ಸಮುದಾಯದ ಕುಶಲಕರ್ಮಿಗಳ ನೈಪುಣ್ಯತೆಯಿಂದ ಆನೆಗಳಾಗಿ ಮಾರ್ಪಟ್ಟು ಕಲಾ ಪ್ರಪಂಚದ ಗಮನ ಸೆಳೆಯುತ್ತಿವೆ. ಈ ಆದಿವಾಸಿಗಳು ಲಂಟಾನಾದಿಂದ ಆನೆ ಮಾತ್ರವಲ್ಲ, ಕುರ್ಚಿ, ಟೇಬಲ್, ಸೋಫಾ, ದಿವಾನಗಳನ್ನೂ ಮಾಡುತ್ತ ಜೀವನೋಪಾಯ ಕಂಡುಕೊಂಡಿದ್ದಾರೆ.

ಈ ಕ್ರಮದಿಂದಾಗಿ ಅರಣ್ಯದಲ್ಲಿ ಲಂಟಾನಾ ವ್ಯಾಪಿಸುವುದನ್ನು ತಡೆಯಲು ಹೊಸ ದಾರಿಯೊಂದನ್ನು ಕಂಡುಕೊಂಡಂತಾಗಿದೆ. ಜೊತೆಗೆ ಆದಿವಾಸಿ ಕುಟುಂಬಗಳಿಗೆ ಉದ್ಯೋಗ ಲಭಿಸಿದೆ. ಜೀವನ ಸಾಗಿಸಲು ಗುಳೆ ಹೊರಡುತ್ತಿದ್ದ ಆದಿವಾಸಿಗಳೀಗ ತಮ್ಮವರೊಂದಿಗೆ ಸೇರಿ ತಾವು ಇದ್ದಲ್ಲಿಯೇ ವಿವಿಧ ರೀತಿಯ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಮೂರು ರಾಜ್ಯಗಳ ಸುಮಾರು 150ಕ್ಕೂ ಹೆಚ್ಚು ಆದಿವಾಸಿಗಳು ಲಂಟಾನಾ ಆನೆಗಳು ಮತ್ತು ಇತರ ವಸ್ತುಗಳನ್ನು ತಯಾರಿಕೆಯಲ್ಲಿ ತೊಡಗಿದ್ದಾರೆ. ಕಾಡು ಮತ್ತು ವನ್ಯಜೀವಿಗಳೊಂದಿಗೆ ಅವಿನಾಭಾವ ನಂಟು ಹೊಂದಿರುವ ಅವರು ನೈಜ ಆನೆಗಳ ವೈಶಿಷ್ಟ್ಯಗಳನ್ನು ಗಮನದಲ್ಲಿ ಇಟ್ಟುಕೊಂಡೇ ಲಂಟಾನಾ ಆನೆಗಳನ್ನು ರಚಿಸುತ್ತಾರೆ.

'ಇಪ್ಪತ್ತೈದು ವರ್ಷಗಳಿಂದ ಲಂಟಾನಾದಿಂದ ವಿವಿಧ ಕರಕುಶಲ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೆವು. ಈಗ ಎರಡು ವರ್ಷಗಳಿಂದ ಆನೆಗಳ ಕಲಾಕೃತಿ ರಚನೆ ಮಾಡುತ್ತಿದ್ದೇವೆ. ರಿಯಲ್ ಎಲಿಫೆಂಟ್ ಸಂಸ್ಥೆಯು ಅಡಿಗಳ ಲೆಕ್ಕದಲ್ಲಿ ಹಣ ನೀಡುತ್ತದೆ. ದೊಡ್ಡ ಗಾತ್ರದ ಆನೆಗೆ ಅಂದಾಜು ₹65,000 ಸಿಗುತ್ತದೆ' ಎನ್ನುತ್ತಾರೆ ಬಿಳಿಗಿರಿ ರಂಗನಾಥ ಬೆಟ್ಟದ ಸೋಲಿಗ ಸಮುದಾಯದ ಕುಶಲಕರ್ಮಿ ಪಾಪಣ್ಣ.

ಮಹಾ ವಲಸೆ

140 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಅತಿ ಹೆಚ್ಚು ಜೀವವೈವಿಧ್ಯಗಳಿರುವ ಅಪೂರ್ವ ದೇಶ. ಮನುಷ್ಯ-ವನ್ಯಜೀವಿ ಸಹಬಾಳ್ವೆಗೆ ಭಾರತ ಅತ್ಯುತ್ತಮ ಉದಾಹರಣೆಯಾಗಿಯೂ ನಿಲ್ಲುತ್ತದೆ. ಇತ್ತೀಚೆಗೆ ಪಶ್ಚಿಮಘಟ್ಟದ ಶೇಕಡ 40ರಷ್ಟು ಪ್ರದೇಶ ಮಾನವನಿಂದ ಅತಿಕ್ರಮಣವಾಗಿದೆ ಎಂದು ಅಂಕಿಅಂಶ ಹೇಳುತ್ತದೆ. ಆದರೂ ಆನೆಗಳಂತಹ ಬೃಹತ್ ಜೀವಿಗಳು ಬದಲಾದ ಸನ್ನಿವೇಶಕ್ಕೆ ಹೊಂದಿಕೊಂಡು ಬದುಕುವುದನ್ನು ರೂಢಿಸಿಕೊಂಡಿವೆ. ಇದೇ ರೀತಿ ಅರಣ್ಯಗಳಲ್ಲಿ ಆದಿವಾಸಿಗಳು ವನ್ಯಜೀವಿಗಳ ಬದುಕಿಗೆ ಒಂದಿನಿತೂ ತೊಂದರೆ ಮಾಡದೆ ಸಹಬಾಳ್ವೆಯಿಂದ ಜೀವನ ಸಾಗಿಸುವ ಅನೇಕ ದೃಷ್ಟಾಂತಗಳೂ ಇವೆ. ಈ ಮಾದರಿಯನ್ನು ಜಗತ್ತಿಗೆ ಪರಿಚಯಿಸಲೂ ಈ ಲಂಟಾನಾ ಆನೆಗಳು ಜಗತ್ತಿನಾದ್ಯಂತ 'ಮಹಾ ವಲಸೆ' ಹೊರಟಿವೆ. ಈಗಾಗಲೇ ಲಂಡನ್, ಕೊಚ್ಚಿ ಸುತ್ತಿರುವ ಈ ಆನೆಗಳು ಮಾರ್ಚ್ 3 ರ ನಂತರ ಅಮೆರಿಕ ಸೇರಿದಂತೆ ವಿವಿಧ ದೇಶಗಳತ್ತ ಮುಖ ಮಾಡಲಿವೆ. ಅಲ್ಲಿ ಕೆಲ ಆನೆಗಳನ್ನು ಹರಾಜು ಮಾಡಲಾಗುತ್ತದೆ. ಈ ಹಣವನ್ನು ಕಾಡುಪ್ರಾಣಿಗಳ ಸಂರಕ್ಷಣೆಗೆ ಮೀಸಲಿಡಲಾಗುತ್ತದೆ.

ಜೀವವೈವಿಧ್ಯ ವಿರೋಧಿ ಲಂಟಾನಾ

ಲಂಟಾನಾ ವರ್ಬಿನೇಶಿಯ ಪ್ರಭೇದಕ್ಕೆ ಸೇರಿದ ಸಸ್ಯವರ್ಗ. ದಕ್ಷಿಣ ಮತ್ತು ಮಧ್ಯ ಅಮೆರಿಕ ಮೂಲದ ಅಲಂಕಾರಿಕ ಗಿಡವಾಗಿ ಭಾರತಕ್ಕೆ ಕಾಲಿಟ್ಟು, ಈಗ ದೇಶದ ಅರಣ್ಯ ಪ್ರದೇಶಕ್ಕೆ ಮಾರಕವಾಗುವಷ್ಟು ಬೆಳೆದಿದೆ. ಇದು ಬೆಳೆಯುವ ಜಾಗದಲ್ಲಿ ಹುಲ್ಲು, ಬಿದಿರಿನ ಬೆಳವಣಿಗೆ ಕುಂಠಿತವಾಗಿ ಆನೆ, ಜಿಂಕೆಗಳಂತಹ ಸಸ್ಯಹಾರಿ ಪ್ರಾಣಿಗಳ ಆಹಾರಕ್ಕೆ ಧಕ್ಕೆ ಉಂಟಾಗುತ್ತದೆ. ಕಾಡಿಗೆ ಸುಲಭವಾಗಿ ಬೆಂಕಿ ವ್ಯಾಪಿಸಲು ಈ ಪೊದೆಗಳೇ ಕಾರಣ. ಇಷ್ಟೇ ಅಲ್ಲದೆ, ಕಾಡಿನಲ್ಲಿ ಲಂಟಾನಾ ಪೊದೆಗಳ ಹಿಂದೆ ಆನೆ ಅಥವಾ ಬೇರಾವುದೇ ವನ್ಯಜೀವಿಗಳು ಇರುವುದು ಮನುಷ್ಯರಿಗೆ ಸುಲಭಕ್ಕೆ ಕಾಣಿಸುವುದಿಲ್ಲ. ಮನುಷ್ಯ ಮತ್ತು ವನ್ಯಜೀವಿ ಹಠಾತ್ ಎದುರಾದಾಗ ಅವು ಗಾಬರಿಗೊಂಡು ಮನುಷ್ಯನ ಮೇಲೆ ದಾಳಿ ಮಾಡುತ್ತವೆ. ಇಂಥದ್ದೇ ಕಾರಣಗಳಿಂದ ಹಲವರು ಪ್ರಾಣ ಕಳೆದುಕೊಂಡಿದ್ದಾರೆ.

ವಿದೇಶದಿಂದ ಬಂದ ಈ 'ಕಳೆ'ಯನ್ನು ಕೊಲ್ಲುವ ಸಲುವಾಗಿಯೇ ಅದಕ್ಕೆ 'ಕಲೆ'ಯ ರೂಪವನ್ನು ಕೊಡಲಾಗಿದೆ. ಕಲೆಗೆ ಒಳ್ಳೆಯ ಬೆಲೆ ಬಂದರೆ ಕಳೆ ನಾಶವಾಗುತ್ತದೆ, ಆದಿವಾಸಿಗಳ ಬದುಕು ಸುಧಾರಿಸುತ್ತದೆ. ಮನುಷ್ಯ–ವನ್ಯಜೀವಿಗಳ ಸಹಬಾಳ್ವೆಯೂ ಸಾಧ್ಯವಾಗುತ್ತದೆ.

ಮೊದಲ ಓದು

ಅಕ್ಷರ ಲೋಕದಲ್ಲಿ ಹಂಗಿಲ್ಲದ ಅಲೆಮಾರಿ



ಪು: 219
₹220

ಅಕ್ಷರ ಲೋಕದಲ್ಲಿ ಹಂಗಿಲ್ಲದ ಅಲೆಮಾರಿ- ಭಾಗ 1 ಮತ್ತು 2
ಲೇ: ಪ್ರೊ.ಬಿ.ಗಂಗಾಧರಮೂರ್ತಿ
ಪ್ರ: ಆದಿಮ ಸಾಂಸ್ಕೃತಿಕ ಕೇಂದ್ರ, ಕೋಲಾರ
ಸಂ:9449073119

ಇಂಗ್ಲಿಷ್ ಅಧ್ಯಾಪಕರಾಗಿದ್ದ ಪ್ರೊ. ಬಿ.ಗಂಗಾಧರಮೂರ್ತಿ ನಾಡಿನ ವೈಚಾರಿಕ ವಲಯದಲ್ಲಿ ಗಮನಾರ್ಹ ಕೆಲಸ ಮಾಡಿದವರು. ದಲಿತ ಚಳವಳಿ ಸೇರಿದಂತೆ ಹಲವು ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಅವರು ಅಂಬೇಡ್ಕರ್ ಚಿಂತನೆಗಳನ್ನು ಕನ್ನಡಕ್ಕೆ ತಂದವರು. ಮೂರ್ತಿಯವರ ನಿಧನದ ನಂತರದಲ್ಲಿ ಅವರ 41 ಲೇಖನಗಳನ್ನು 'ಅಕ್ಷರ ಲೋಕದ ಅಂಚಿನಲ್ಲಿ ಹಂಗಿಲ್ಲದ ಅಲೆಮಾರಿ' ಎನ್ನುವ ಹೆಸರಿನಲ್ಲಿ ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ.

ದಲಿತರು, ಮುಸ್ಲಿಮರು, ಹಿಂದುತ್ವ, ಕೋಮುವಾದ, ಆರೆಸ್ಸೆಸ್ ಮುಂತಾದ ವಿಚಾರಗಳ ಬಗ್ಗೆ ಕೃತಿಯಲ್ಲಿ ಅಧ್ಯಯನಪೂರ್ಣವಾದ ಲೇಖನಗಳಿವೆ. ಆನಂದ್ ತೇಲ್ತುಂಬ್ಡೆ ಅವರ 'ಅಂಬೇಡ್ಕರ್ ಮತ್ತು ಮುಸ್ಲಿಮರು' ಪುಸ್ತಕಕ್ಕೆ ಬರೆದ ಮುನ್ನುಡಿ, ವಿಜೇತಾ ದಹಿಯಾ ಸಂಶೋಧನೆಯ ಆಧಾರದ ಮೇಲೆ ಧ್ರುವ ರಾಠಿ ರೂಪಿಸಿದ ಯೂಟ್ಯೂಬ್ ಕಾರ್ಯಕ್ರಮಗಳನ್ನು ಆಧರಿಸಿ ಬರೆದ 'ದೇಶ ವಿಭಜನೆಯ ವಾಸ್ತವ ಸತ್ಯಗಳು', ಮಧು ಲಿಮಯೆ ಅವರ 'ಆರೆಸ್ಸೆಸ್ ನಿಜ ಬಣ್ಣ ಏನು' ಎನ್ನುವ ಅನುವಾದಿತ ಲೇಖನದಂಥ ವಿಚಾರ ಪ್ರಚೋದಕ ಬರಹಗಳು ಪುಸ್ತಕದಲ್ಲಿವೆ. ವೃತ್ತಿಯಿಂದ ಅಧ್ಯಾಪಕರಾಗಿದ್ದ ಗಂಗಾಧರಮೂರ್ತಿಯವರು ಸಹಜವಾಗಿಯೇ ಶಿಕ್ಷಕರ ಗುಣಮಟ್ಟ, ಶಾಲೆಗಳಲ್ಲಿ ವಂದೇ ಮಾತರಂ ಕಡ್ಡಾಯ, ರಾಷ್ಟ್ರೀಯ ಶಿಕ್ಷಣದ ಕೇಸರೀಕರಣದ ಬಗ್ಗೆ ಬರೆದದ್ದು ಕೃತಿಯ ಎರಡನೇ ಭಾಗದಲ್ಲಿದೆ. ಅನಂತಮೂರ್ತಿ, ಕುಮಾರಪ್ಪ, ಎಚ್ಚೆನ್, ನಿಡುಮಾಮಿಡಿ ಸ್ವಾಮೀಜಿ, ಐಎಎಸ್ ಅಧಿಕಾರಿ ಶಂಕರನ್ ಮುಂತಾದವರ ವ್ಯಕ್ತಿಚಿತ್ರಗಳಿವೆ.

ನಮ್ಮ ಸುತ್ತಲಿನ ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ರಂಗದ ಹಲವು ಜ್ವಲಂತ ವಿಚಾರಗಳ ಬಗೆಗಿನ ವಿದ್ವತ್ಪೂರ್ಣ ಹಾಗೂ ಒಳನೋಟಗಳುಳ್ಳ 'ಅಕ್ಷರ ಲೋಕದ ಹಂಗಿಲ್ಲದ ಅಲೆಮಾರಿ' ಕನ್ನಡದ ವಿಚಾರ ಸಾಹಿತ್ಯಕ್ಕೆ ಮುಖ್ಯ ಸೇರ್ಪಡೆಯಾಗಿದೆ.

ಸಾವರ್ಕರ್ ಸ್ವಾತಂತ್ರ್ಯ ಹೋರಾಟಗಾರರೇ?



ಪು: 163
₹180

ವಿ.ಡಿ.ಸಾವರ್ಕರ್: ಏಳು ಮಿಥ್ಯೆಗಳು
ಲೇ: ಶಂಸುಲ್ ಇಸ್ಲಾಂ
ಅನು: ತಡಗಳಲೆ ನರೇಂದ್ರ ರಾವ್
ಪ್ರ: ಕ್ರಿಯಾ ಮಾಧ್ಯಮ ಪ್ರೈ. ಲಿ.
ಸಂ: 9036082005

ಮಹಾತ್ಮಾ ಗಾಂಧಿ ಅವರ ಹತ್ಯೆ ಕುರಿತಂತೆ ಅಂದಿನ ಕೇಂದ್ರ ಗೃಹ ಸಚಿವ ಸರ್ದಾರ್ ವಲ್ಲಭಾಬಾಯ್ ಪಟೇಲ್ ಅವರು 1948ರ ಫೆ. 27ರಂದು ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಪತ್ರ ಬರೆದು, 'ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾದ ಮತಾಂಧರ ಗುಂಪೊಂದು ಪಿತೂರಿಯನ್ನು ಮಾಡುತ್ತಿದೆ. ತಮ್ಮ ಪಿತೂರಿ ನಡೆಯುವಂತೆ ನೋಡಿಕೊಳ್ಳುತ್ತದೆ' ಎಂದು ಕಳವಳ ವ್ಯಕ್ತಪಡಿಸಿದ್ದರು. ಆದರೆ ಇಂದಿನ ಹಿಂದುತ್ವ ಅನುಯಾಯಿಗಳು ಅದೇ ಸರ್ವರ್ಕರ್ ಅವರನ್ನು ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಎಂದೆನ್ನುತ್ತಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನ ಅಧ್ಯಾಪಕ ಡಾ. ಶಂಸುಲ್ ಇಸ್ಲಾಂ ಅವರು 'ಸಾವರ್ಕರ್ ಅನ್‌ಮಾಸ್ಕ್‌ಡ್' ಕೃತಿ ಮೂಲಕ ಈ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನವನ್ನು ಮಾಡಿದ್ದರು. ಈ ಇಂಗ್ಲಿಷ್ ಕೃತಿಯನ್ನು ತಡಗಳಲೆ ನರೇಂದ್ರ ರಾವ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಈ ಕನ್ನಡ ಕೃತಿಯಲ್ಲಿ ವಿನಾಯಕ ದಾಮೋದರ ಸಾವರ್ಕರ್ ನಿಜವಾಗಿಯೂ ದಂತೆಕತೆಯಾದ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಹೌದೇ..? ಸಾವರ್ಕರ್ ತಮ್ಮ ಬದುಕಿನ ಬಹುಪಾಲನ್ನು ಸೆಲ್ಯುಲರ್ ಜೈಲಿನಲ್ಲೇ ಕಳೆದರೇ..? ಸಾವರ್ಕರ್ ಕ್ಷಮಾಯಾಚನೆ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವೇ..? ಮುಸ್ಲಿಂ ಲೀಗ್‌ನ ವಿರುದ್ಧ ಸಾವರ್ಕರ್ ಬಂಡೆಯಂತೆ ನಿಂತಿದ್ದರೇ..? ಸಾವರ್ಕರ್ ಒಬ್ಬ ವಿಚಾರವಾದಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದರೇ..? ಗಾಂಧಿ ಹತ್ಯೆಯ ಪ್ರಕರಣದಲ್ಲಿ ಆರೋಪ ಸಾಬೀತಾಯಿತೇ..? ಸಾವರ್ಕರ್ ಹಿಂದುತ್ವವು ಭಾರತದ ವೈಜ್ಞಾನಿಕ ಆಧಾರದಲ್ಲಿತ್ತೇ..? ಎಂಬಿತ್ಯಾದಿ ಮಿಥ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಇದಕ್ಕಾಗಿ ಆರ್‌ಎಸ್‌ಎಸ್‌ನ ಮುಖವಾಣಿ ಆರ್ಗನೈಸರ್ ಒಳಗೊಂಡಂತೆ ಹಲವು ವರದಿಗಳು, ಅಂದಿನ ಕೃತಿಗಳು, ಗಣ್ಯರ ಮಾತುಗಳು ಒಳಗೊಂಡಂತೆ ಹಲವು ಆಕರಗಳನ್ನು ಟಿಪ್ಪಣಿ ರೂಪದಲ್ಲಿ ಬಳಸಿಕೊಳ್ಳಲಾಗಿದೆ. ಮಿಥ್ಯೆ ಏನು ಹಾಗೂ ಅದರ ವಾಸ್ತವಾಂಶವೇನು ಎಂಬುದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಕೃತಿಯಲ್ಲಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮತರಾಹು

ಮತವು ಆಯಾಧರ್ಮಗಳಲ್ಲಿ ವಾಡಿಕೆಯಗಿರುವ ಧರ್ಮ ಸಂಬಂಧವಾದ ಆಚಾರ, ಸಂಪ್ರದಾಯಗಳು. ಅವುಗಳು ಆಲೋಚನೆ ಸರ್ವಸಮಾನತೆಯ, ಸಕಲ ಮಾನವರ ಶ್ರೇಯೋಭಿವೃದ್ಧಿಯ ಆಶಯವನ್ನು ಹೊಂದಿರಬೇಕು. ಧರ್ಮವೆಂದರೆ ನ್ಯಾಯ, ನೀತಿ, ದಯೆ, ಕರುಣೆ, ಕೃಪೆಯಿಂದ ಕೂಡಿದ್ದು. ಆದರೆ ಮತವು ಅಸಮಾನತೆಯನ್ನು ಬಿತ್ತಿ ಬೆಳೆಯುವ ಅಸ್ಪೃಶ್ಯತೆಯನ್ನು ಆಚರಿಸುವ, ತನ್ನೊಡನೆ ಬದುಕಿ ಬಾಳುವವರನ್ನು ಪ್ರತ್ಯೇಕ ಜೀವಿಗಳಂತೆ ಕಂಡು ವರ್ತಿಸುವ ಕ್ಷುಲ್ಲಕತೆಯನ್ನು ಒಳಗೊಂಡಿದ್ದಾಗ; ಮೌಢ್ಯ ಆಧಾರರಹಿತ ನಂಬಿಕೆಗಳು, ಅಂಧಶ್ರದ್ಧೆಯ ಕರ್ಕಶ ಪಾಪಮಯ ವರ್ತನೆಗಳಿಂದ ಕೂಡಿದ್ದಾಗ ಅಂತಹ ಮತವನ್ನು ಕುವೆಂಪು 'ಮತರಾಹು' ಎಂದು ಕರೆದಿದ್ದಾರೆ. ನವಗ್ರಹಗಳಲ್ಲಿ ರಾಹು ಕೆಡುಕಿನ ಸಂಕೇತ. ಅಂತಹ 'ಮತರಾಹು'ಗಳ ಬಗ್ಗೆ ಎಚ್ಚರದಿಂದಿರಬೇಕೆಂಬ ಚಿಂತನೆಯನ್ನು ತಮ್ಮ ಸಾಹಿತ್ಯದಲ್ಲಿ ನೀಡಿದ್ದಾರೆ. ಅದನ್ನು ಹೀಗೆ ಕಾವ್ಯದಲ್ಲಿ ಪ್ರಕಟಪಡಿಸಿದ್ದಾರೆ. ಮತರಾಹು ಹಿಡಿದವರ ಅಂಧಶ್ರದ್ಧೆಯ ಕರ್ಕಶ ಪಾಪಮಯ ಶಂಖಧ್ವನಿ (ಅಗ್ನಿ ಗರ್ಭಿತ ಮಂದಸ್ಮಿತ : ಕಿಂಕಿಣಿ)

ಇದೀಗ ಲಭ್ಯ

ಹೊನ್ನ ಕಣಜ

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ

ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914

Shop Online www.navakarnataka.com

'ಮಾಧ್ಯಮಪ್ರಜ್ಞೆ'ಯ ವಿಶಿಷ್ಟ ಕಥನಗಳು

ರಘುನಾಥ ಚ.ಹ.

ವಿಮರ್ಶೆ



ಪು: 176
₹195

ಶ್ರೀಗಳ ಅರಣ್ಯಕಾಂಡ
ಲೇ: ಮೌನೇಶ ಬಡಿಗೇರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಸಂ: 90191 90502

ಮೌನೇಶ ಬಡಿಗೇರರ 'ಶ್ರೀಗಳ ಅರಣ್ಯಕಾಂಡ' ಸಂಕಲನದ ಕಥೆಗಳು ಮಾಧ್ಯಮಗಳ ಬಯೋಸ್ಕೋಪ್ ಮೂಲಕ ಈ ಕಾಲದ ತವಕತಲ್ಲಣಗಳನ್ನು ಪರಿಶೀಲಿಸುವ ಪ್ರಯತ್ನದ ವಿಶಿಷ್ಟ ಕಥೆಗಳು. ಈ ಮಾಧ್ಯಮ ವ್ಯಕ್ತಿ ಅಥವಾ ಸಾಂಸ್ಥಿಕ ಸ್ವರೂಪದಲ್ಲಷ್ಟೇ ನಮ್ಮನ್ನು ಎದುರುಗೊಳ್ಳುವುದಿಲ್ಲ; ನಾವು ಉಳಿಸಿಕೊಳ್ಳಬೇಕಾದ, ಆದರೆ ಕಳೆದುಕೊಳ್ಳುತ್ತಿರುವ ಒಂದು ಮೌಲ್ಯದ ರೂಪದಲ್ಲಿ ಮೌನೇಶರ ಕಥೆಗಳಲ್ಲಿನ 'ಮಾಧ್ಯಮ' ನಮಗೆ ಮುಖಾಮುಖಿಯಾಗುತ್ತದೆ.

ಸಂಕಲನದ ಮೊದಲ ಕಥೆ 'ವೇಗದೊಳಗಿನ ಆವೇಗ'ದಿಂದಲೇ ಈ ಮಾಧ್ಯಮಪಯಣ ಆರಂಭವಾಗುತ್ತದೆ. ನಾವೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ವೇಗದ ಬೆನ್ನುಬಿದ್ದು ಬದುಕಿನ ಆರ್ದ್ರತೆಯನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ಕಥೆ ಗಮನಸೆಳೆಯುತ್ತದೆ. ವಾಹನದ ವೇಗದಲ್ಲಿ ಬದುಕಿನ ಉತ್ಕಟ ಕ್ಷಣಗಳನ್ನು ಅನುಭವಿಸುವ ಚಾಲಕ ಕಥೆಯ ಒಂದು ತುದಿಯಲ್ಲಿದ್ದರೆ, ಇನ್ನೊಂದು ಬದಿಯಲ್ಲಿ, ಸುದ್ದಿಸ್ಫೋಟದಲ್ಲಿ ಸುಖ ಕಾಣುವ ವರದಿಗಾರನಿದ್ದಾನೆ. ವೃತ್ತಿಬದುಕಿನ ವೇಗ ವೈಯಕ್ತಿಕವೂ ಆದಾಗ ಖಾಸಗಿ ಬದುಕೂ ನಲುಗಿಹೋಗುತ್ತದೆನ್ನುವುದಕ್ಕೆ ಇಬ್ಬರೂ ಉದಾಹರಣೆಗಳಾಗಿದ್ದಾರೆ. ಸಣ್ಣಪುಟ್ಟ ಸಂಗತಿಗಳಲ್ಲಿ ಬದುಕಿನ ಸೌಂದರ್ಯ ಕಾಣುವ ಚಂದ್ರಿಕಾ ಎನ್ನುವ ಹೆಣ್ಣುಮಗಳು ತನ್ನ ಸುತ್ತಲಿನವರ ವೇಗದಲ್ಲಿ ಕಳೆದುಹೋಗುವ ವಿಷಾದ, ಸಹೃದಯರ ಮನಸ್ಸಿನ ಚಿತ್ರಸಂಪುಟದ ಯಾವುದಾದರೂ ಆಕೃತಿಯನ್ನು ನೆನಪಿಸುವಷ್ಟು ತೀವ್ರವಾಗಿದೆ.

'ಒಂಟಿ ಓಲೆಯ ಮುತ್ತು' ಕಥೆಯಲ್ಲಿ ಕೂಡ ಮಾಧ್ಯಮದ ಕಣ್ಣಿದೆ. ಕಥಾನಾಯಕ, ನಗರಸಾರಿಗೆಯ ಬಸ್ ಕಂಡಕ್ಟರ್ ಮುತ್ತಣ್ಣ ಸ್ನೇಹಜೀವಿ. ಡ್ರೈವರ್ ಫಾರೂಕನಿಗೆ ಕರ್ತವ್ಯದ ಸಮಯದಲ್ಲಿ ಹೃದಯಾಘಾತವಾಗಿ, ಬಸ್ಸಿನಲ್ಲಿದ್ದ ಪ್ರಯಾಣಿಕರು ಹಾಗೂ ಸಹೋದ್ಯೋಗಿಯನ್ನು ರಕ್ಷಿಸುವ ಮುತ್ತಣ್ಣ ಮಾಧ್ಯಮಗಳ ಗಮನಸೆಳೆಯುತ್ತಾನೆ. ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾಗುವ ಸಂದರ್ಭದಲ್ಲಿ ನಡೆಯುವ ಈ ಘಟನೆ ಮಾಧ್ಯಮಗಳಿಗೆ ವಿಶೇಷ ವಿದ್ಯಮಾನವಾಗಿ ಕಾಣಿಸುತ್ತದೆ. ಕ್ಯಾಮೆರಾ ಎದುರು ಕೂರುವ ಮುತ್ತಣ್ಣ, ತನ್ನ ಬದುಕಿನಲ್ಲಿ ಸುಳಿದುಹೋದ ಹುಡುಗಿ ಹಾಗೂ ಅವಳ ನೆನಪಾಗಿ ಉಳಿದ ಒಂಟಿ ಓಲೆಯ ಕಥೆಯನ್ನು ಮಾತಿನ ನಡುವೆ ಹೇಳಬೇಕಾಗುತ್ತದೆ. ಆವರೆಗಿನ, ಮುಸ್ಲಿಂ ವ್ಯಕ್ತಿಯನ್ನು ರಕ್ಷಿಸಿದ ಹಿಂದೂವೀರನೀಗ ಅಮರಪ್ರೇಮಿಯಾಗಿ ಮಾಧ್ಯಮಗಳಿಗೆ ಕಾಣಿಸತೊಡಗುತ್ತಾನೆ. ರಮ್ಯ–ಭಾವುಕ ನೆಲೆಗಟ್ಟಿನ ಬಹು ಸೊಗಸಾದ ಈ ಕಥೆ, ವರ್ತಮಾನದ ವಿರೋಧಾಭಾಸಗಳನ್ನು ನಮಗೆ ನೆನಪಿಸುತ್ತ, ಮಾಧ್ಯಮಗಳ ಕಣ್ಣಿನ ವರ್ತಮಾನದಲ್ಲಿ ಯಾವ ಮುಖಕ್ಕೂ ದೀರ್ಘವಾದ ಆಯುಸ್ಸಿಲ್ಲ ಎನ್ನುವ ಸತ್ಯವನ್ನೂ ಕಾಣಿಸುತ್ತದೆ.

'ಶಾಸ್ತ್ರೀಸಂಗ' ಕಥೆಯಂತೂ ನೇರವಾಗಿ ಮಾಧ್ಯಮಜಗತ್ತಿಗೆ ಸಂಬಂಧಿಸಿದ ಕಥೆ. ಶಾಸ್ತ್ರಿ ಎನ್ನುವ ಹಿರಿಯ ಹಾಗೂ ಜನಪರ ಪತ್ರಕರ್ತನೊಬ್ಬನ ವೈಯಕ್ತಿಕ ಹಾಗೂ ವೃತ್ತಿಜೀವನದಲ್ಲಿನ ದ್ವಂದ್ವಗಳನ್ನು ಚಿತ್ರಿಸುವ ಕಥೆ, ಶಾಸ್ತ್ರಿಯ ದಾರುಣ ಕೊಲೆಯೊಂದಿಗೆ ಕೊನೆಗೊಳ್ಳುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಗೊಳಿಸುವ ರೂಪದಲ್ಲಿ ನಾಡಿನಲ್ಲಿ ನಡೆದ ಎರಡು ಕೊಲೆಗಳನ್ನು ಈ ಕಥೆ ನೆನಪಿಸುತ್ತದೆ.

ಅಂಗವಿಕಲ ಹುಡುಗನೊಬ್ಬ ಕಣ್ಣು ಹೊಡೆದುದಕ್ಕೆ ಕಸಿವಿಸಿಕೊಳ್ಳುವ ಯುವತಿಯೊಬ್ಬಳು ಪೊಲೀಸ್ ಠಾಣೆಯ ಮೆಟ್ಟಿಲೇರುವ ಪ್ರಸಂಗ 'ಕಣ್ಣಿನ ಕಾಯಿಲೆ' ಕಥೆಯಲ್ಲಿದೆ. ಠಾಣೆಯಲ್ಲಿ ನ್ಯಾಯ ಸಿಗದೆಹೋದಾಗ ಆ ಯುವತಿ ಫೇಸ್‌ಬುಕ್ ಲೈವ್‌ನಲ್ಲಿ ತನ್ನ ಸಂಕಟ ಹೇಳಿಕೊಳ್ಳುತ್ತಾಳೆ. ಈ ದೃಶ್ಯ ಮಾಧ್ಯಮಗಳ ಕಣ್ಣಿಗೆ ಬಿದ್ದು, ಎಲ್ಲರೂ ಆ ಯುವತಿಯ ಬೆನ್ನುಹತ್ತುತ್ತಾರೆ. 'ಕಣ್ಣಿನ ಕಾಯಿಲೆ' ಕಥೆ, ವ್ಯವಸ್ಥೆಯಲ್ಲಿನ ಬಹುರೂಪಿ ಟೊಳ್ಳುತನದತ್ತ ಬೆರಳು ಮಾಡುತ್ತದೆ. ದೂರಿನ ಮೂಲಕ ನ್ಯಾಯ ದೊರೆಯುವ ಬದಲು, ಯುವತಿ ಮತ್ತೆ ಮತ್ತೆ ನೋಯುತ್ತಲೇ ಹೋಗುತ್ತಾಳೆ. 'ಹೆಣ್ಣನ್ನು ಕಣ್ಣಿನಲ್ಲೇ ಸುಲಿದು ನೋಡುವ ಸಮಾಜದ ಎದುರು ಬೆತ್ತಲಾದ ಹೆಣ್ಣೇ ಹೆಚ್ಚು ಸುರಕ್ಷಿತ' ಎಂದು ಕಥಾನಾಯಕಿಗೆ ಅನ್ನಿಸುವ ಮಟ್ಟಿಗೆ ಅವಳು ಸಮಾಜದ ಕಣ್ಣಿಗೆ ಮಿಕವಾಗುತ್ತಾಳೆ.

'ಕಣ್ಣಿನ ಕಾಯಿಲೆ' ಶೀರ್ಷಿಕೆಯ ಧ್ವನಿ, ಸಂಕಲನದ ಎಲ್ಲ ಕಥೆಗಳಿಗೂ ಅನ್ವಯಿಸುವಂತಹದ್ದು. ಹೊರಗಣ್ಣಿಗೂ ಒಳಗಣ್ಣಿಗೂ, ಮಾಧ್ಯಮ ಮತ್ತು ಸಮಾಜದ ಕಣ್ಣಿಗೂ ಕಾಯಿಲೆ ತಗುಲಿರುವುದು ಹಾಗೂ ಅದರ ಪರಿಣಾಮಗಳನ್ನು ವಿಶ್ಲೇಷಿಸುವ ಸೃಜನಶೀಲ ಪ್ರಯತ್ನದ ರೂಪದಲ್ಲಿ 'ಶ್ರೀಗಳ ಅರಣ್ಯಕಾಂಡ' ಸಂಕಲನದ ಕಥೆಗಳು ಗಮನಸೆಳೆಯುತ್ತವೆ. 'ಮಾಯಾಕೋಲಾಹಲ' ಪ್ರಕಟಗೊಂಡ ಹತ್ತು ವರ್ಷಗಳ ನಂತರ ಪ್ರಕಟಗೊಂಡಿರುವ ಮೌನೇಶರ ಈ ಕಥಾಸಂಕಲನದ ಆರೂ ಕಥೆಗಳು ಕಾಲಕ್ಕೆ ಕನ್ನಡಿಯಾಗುವುದರ ಜೊತೆಗೆ ನಮ್ಮ ಅಂತರಂಗಕ್ಕೂ ಕನ್ನಡಿಯಾಗುವ ಹಂಬಲದ ಕಾರಣದಿಂದಾಗಿ ಬಹು ಮುಖ್ಯವಾದವು. ಕಥೆಯೊಂದನ್ನು ಕಟ್ಟುವ, ಬೆಳೆಸುವ ಸಾಧ್ಯತೆಗಳ ಕುತೂಹಲಿಗಳು ಮೌನೇಶರ ಕಥೆಗಳನ್ನು ಪಠ್ಯದಂತೆಯೂ ಗಮನಿಸಬಹುದು.

ವೈನೋದಿಕ ನೆಲೆಗಟ್ಟಿನಲ್ಲೂ ಗಂಭೀರ ಸಂಗತಿಗಳನ್ನು ಚರ್ಚಿಸಲಿಕ್ಕೆ ಸಾಧ್ಯ ಎನ್ನುವುದಕ್ಕೂ ಈ ಕಥೆಗಳು ಉದಾಹರಣೆಯಾಗಿವೆ. ಕಥೆಗಾರನ ಆತ್ಮವಿಶ್ವಾಸ ಹಾಗೂ ಕಥನಕೌಶಲದ ಕಾರಣದಿಂದಲೂ ಗಮನಸೆಳೆಯುವ ಕಥೆಗಳಿವು. ತಮ್ಮ ಕಥೆಗಳಲ್ಲಿ ಮೌನೇಶ್ ಎಷ್ಟು ಮುಳುಗಿಹೋಗಿದ್ದಾರೆಂದರೆ, ಕೆಲವೊಮ್ಮೆ ಕಥೆ ಮುಗಿದ ನಂತರವೂ ಅವರು ಯಾವುದೋ ಒಂದು ಎಳೆಯನ್ನು ಜಗ್ಗಲಿಕ್ಕೆ ಪ್ರಯತ್ನಿಸಿದ್ದಾರೆ, ರೂಪಕಗಳನ್ನು ಹಿಂಜಿದ್ದಾರೆ. ಒಳ್ಳೆಯ ಕಥೆಗಳು ಹೀಗೆ ವಾಚ್ಯವಾಗುವುದು, ಭಾಷೆ ತನ್ನ ಧ್ವನಿಶಕ್ತಿಯನ್ನು ಕಳೆದುಕೊಳ್ಳುತ್ತಿರುವ ಆತಂಕ ದಟ್ಟವಾಗಿರುವ ಸಂದರ್ಭದ ತುರ್ತು ಆಗಿರಬಹುದೆ?

ದಾರುಣತೆಯ ಕೋಮಲ ಅಭಿವ್ಯಕ್ತಿ

12ನೇ ಪುಟದಿಂದ...

ಕಾರುಗಳ ನಿಜ ಬಣ್ಣಕ್ಕೆ ಸರಿಹೊಂದುವ ಬಣ್ಣವನ್ನು ಸಿದ್ಧಪಡಿಸುವ ಹಾಗೂ ಅದನ್ನು ಅಚ್ಚುಕಟ್ಟಾಗಿ ಬಳಿಯುವ ಕಲೆ ಪಾರಂಗತನಾಗುವುದರೊಂದಿಗೆ ಬದುಕಿನ ಕಿತ್ತು ಹೋದ ಭಾಗಗಳಿಗೆ ಕಾವ್ಯಕುಂಚದಲ್ಲಿ ಬಣ್ಣ ಬಳಿಯುವ ಕಲೆಯಲ್ಲೂ ಪರಿಣತರಾದರು. ಹೃದಯಸ್ಪರ್ಶಿ ಶಾಯರಿ, ಗಜಲ್, ಭಾವಗೀತೆಗಳನ್ನು ಬರೆದು ಹೆಸರು ಮಾಡಿದ್ದ ಗುಲ್ಜಾರ್ ಅವರನ್ನು ದೇಬು ಸೇನ್ ಬಿಮಲ್‌ರಾಯ್ ಅವರಿಗೆ ಭೇಟಿ ಮಾಡಿಸುತ್ತಾರೆ. ಎಸ್.ಡಿ. ಬರ್ಮನ್ ಸಂಗೀತ ನಿರ್ದೇಶನದಲ್ಲಿ 'ಬಾಂದಿನಿ' ಸಿನಿಮಾಕ್ಕೆ 'ಮೋರಾ ಗೊರಾ ಅಂಗ ಲಯಿ ಲೇ' ಎಂಬ ಗೀತೆ ಬರೆಯುವ ಮೂಲಕ ಆರಂಭವಾದ ಅವರ ಸಿನಿ ಪಯಣ ಸಂಗೀತ ನಿರ್ದೇಶನ, ಚಿತ್ರ ನಿರ್ದೇಶನ, ಚಿತ್ರಕಥೆ ರಚನೆ, ಚಿತ್ರ ನಿರ್ಮಾಣಗಳಿಗೂ ವ್ಯಾಪಿಸಿತು. 'ಹಮ್ ಕೋ ಮನ್ ಕಿ ಶಕ್ತಿ ದೇನಾ ಮನ್ ವಿಜಯ ' ಮೇರಾ ಕುಛ್ ಸಾಮಾನ್; ದಿಲ್ ಢೂಂಡತಾ ಹೈ,' 'ಛಂಯಾ, ಛಂಯಾ,' ಮೊದಲಾದ ಹಾಡುಗಳು ಜನಪದಗೀತೆಗಳ ಹಾಗೆ ಜನರ ನಾಲಿಗೆಯ ಮೇಲಿವೆ. ಆಂಧಿ, ಮಾಸೂಮ್, ಮಾಚಿಸ್, ಹುತುತು, ಪರಿಚಯ್‌ದಂತಹ ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ಪ್ರತಿ ಕ್ಷೇತ್ರದಲ್ಲೂ ಅದ್ಭುತ ಸಾಧನೆ ಮಾಡಿ ಅತ್ಯುನ್ನತ ಪ್ರಶಸ್ತಿಗಳನ್ನು ಪಡೆದದ್ದು ಅವರ ವ್ಯಕ್ತಿತ್ವದ ಗುಣಾತ್ಮಕತೆಗೆ ಸಾಕ್ಷಿ. ಆ ಕಾಲದ ಪ್ರಸಿದ್ಧ ನಟಿ ಮೀನಾಕುಮಾರಿಯ ಸಂಕಟದ ಗಳಿಗೆಯಲ್ಲಿ ಅವರ ಅತ್ಯಾಪ್ತ ಸ್ನೇಹಿತರಾಗಿದ್ದ ಗುಲ್ಜಾರ್, ಅವರ ನಿಧನದ ನಂತರ 1973ರಲ್ಲಿ ರೂಪದರ್ಶಿ ನಟಿ ರಾಖಿಯನ್ನು ಪ್ರೀತಿಸಿ ಮದುವೆಯಾಗುತ್ತಾರೆ. ಮಗಳು ಮೇಘನಾ ಕೂಡ ಚಿತ್ರ ನಿರ್ದೇಶಕಿ, ನಿರ್ಮಾಪಕಿಯಾಗಿದ್ದಾರೆ.

'ತೋಬಾ ತೇಕಸಿಂಗ್‌ನನ್ನು ನೋಡಬೇಕು ವಾಘಾದ ಗಡಿಯಲ್ಲಿ, ಅವನಿನ್ನೂ ನಿಂತೇ ಇದ್ದಾನೆ ಮಂಟೋ ಬಿಟ್ಟು ಹೋದ ಜಾಗದಲ್ಲಿ' ಎನ್ನುವ ಗುಲ್ಜಾರ್, ಸಾದತ್ ಹಸನ್ ಮಂಟೋ ಯಾವುದನ್ನು ಕಥೆಗಳಲ್ಲಿ ತರಲು ಯತ್ನಿಸಿದರೋ ಅದನ್ನು ಕಾವ್ಯದಲ್ಲಿ ಅಭಿವ್ಯಕ್ತಿಸಲು ಹಾತೊರೆದರು. 'ನನ್ನದೆಲ್ಲವನ್ನೂ ಎತ್ತಿಕೊಂಡು ಬಂದೆ ಸರಹದ್ದಿನ ಈ ಬದಿಗೆ, ನನ್ನ ರುಂಡವನ್ನು ಕತ್ತರಿಸಿಟ್ಟರು ಆ ಬದಿಗೆ , ಅವರಿಗೆ ನನ್ನನ್ನಗಲಿ ಇರಲು ಸಾಧ್ಯವಿಲ್ಲ', ಎಂಬಂಥ ದಿಕ್ಕೆಡಿಸಿಬಿಡುವ ಕವಿತೆಗಳನ್ನು ಗುಲ್ಜಾರ್ ಬರೆದಿದ್ದಾರೆ.

'ಅದೇನು ಮಾಡಿತ್ತು ಪಾಪ ಒಂಬತ್ತರ ಹಸುಗೂಸು ಕೆಂಡಗಣ್ಣಿನ ಗುಂಪು ಕೊಚ್ಚಿ ಹಾಕಿತು' ಹೀಗೆ ದೇಶ ವಿಭಜನೆಯ ಕಾಲದ ಹಿಂಸೆಯ ಅಸಂಖ್ಯ ಆಯಾಮಗಳನ್ನು ದರ್ಶಿಸುತ್ತ ಮಾನವೀಯತೆಗಾಗಿ ಮೊರೆ ಇಡುತ್ತದೆ ಅವರ ಕಾವ್ಯ. ಮಾನವ ಸಂಬಂಧಗಳ ದುರಂತದ ನಿರ್ವಚನ ಹಾಗೂ ಅವುಗಳನ್ನು ನೇಯುವ ಕನಸುಗಾರಿಕೆ ಅವರ ಸೃಜನಶೀಲತೆಯ ಕೇಂದ್ರ ಕಾಳಜಿಗಳಾಗಿವೆ. ಗುಲ್ಜಾರ್ ಮಹಿಳಾ ಶೋಷಣೆಯ ಆಯಾಮಗಳನ್ನೂ ಚಿತ್ರಿಸಿದ್ದಾರೆ. 'ಒಬ್ಬಳು ನಿಶ್ಶಕ್ತ ಹೆಣ್ಣುಮಗಳು. ನಾಲ್ವರು ಬಲಿಷ್ಠ ಗಂಡಸರು. ಗೋಡೆಗೆ ಆನಿಸಿ ಅತ್ಯಾಚಾರ ಮಾಡಿಬಿಟ್ಟರು' ಎಂಬಂಥ ತಲ್ಲಣದ ಚಿತ್ರಗಳಿವೆ. ಬದುಕಿನ ಮೂಲ ಚೂಲಗಳನ್ನು ಶೋಧಿಸುವ, ಕಾಲದ ನಿರಂತರತೆಯನ್ನು ನಿರ್ವಚಿಸುವ, ಪ್ರಕೃತಿ ನಾಶದ ಬಗ್ಗೆ ನೋಯುವ, ಮಾನವ ಸಂಬಂಧಗಳ ಆರ್ದ್ರ ನೆಲೆಗಳನ್ನು ಶೋಧಿಸುವ ಬಹುಮುಖಿ ಆಶಯದ ಗುಲ್ಜಾರ್ ಅವರ ಕಾವ್ಯಕ್ಕೆ ಜ್ಞಾನಪೀಠ ಸಂದಿರುವುದು ನಿಜವಾಗಿಯೂ ಪ್ರಶಸ್ತಿಯ ಗೌರವವನ್ನು ಹೆಚ್ಚಿಸಿದೆ.

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಡಾ.ಉಮೇಶ ತಿಮ್ಮಾಪುರ ಅವರ
ದೈವದ ಹೆಣ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ದೊಡ್ಡಿಶೇಖರ ಅವರ
ಬ್ರಾಂಡ್ ಬೀಡಿಗಳು ಮತ್ತು ಯೋಗ ನಿದ್ರೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬ್ಯಾಡ್ಮಿಂಟನ್ ಲೋಕದ ನವತಾರೆಗಳು

ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಟೂರ್ನಿಯ ಆರು ದಶಕಗಳ ಇತಿಹಾಸದಲ್ಲಿ ಭಾರತದ ಮಹಿಳಾ ತಂಡವು ಇದೇ ಮೊದಲ ಬಾರಿಗೆ ಚಿನ್ನದ ಸಾಧನೆ ಮಾಡಿತು. ಈ ಹಿಂದೆ ಪುರುಷರ ತಂಡವು ಎರಡು ಬಾರಿ ಕಂಚು ಗೆದ್ದಿತ್ತು. ಮಹಿಳೆಯರು ಈಗ ಪುರುಷಗಿಂತಲೂ ಹೆಚ್ಚಿನ ಸಾಧನೆ ಮಾಡಿದ್ದಾರೆ. ಜೊತೆಗೆ ಭಾರತದ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಭವಿಷ್ಯದ ತಾರೆಗಳ ಉದಯದ ಭರವಸೆಯೂ ಮೂಡಿದೆ.

ಗಿರೀಶ ದೊಡ್ಡಮನಿ

ಒಲಿಂಪಿಯನ್ ಪಿ.ವಿ. ಸಿಂಧು ಅವರ ಪ್ರಶಸ್ತಿಗಳ ಸಂಗ್ರಹಕ್ಕೆ ಮತ್ತೊಂದು ಮಹತ್ವದ ಪದಕ ಸೇರಿತು.

ಇತ್ತೀಚೆಗೆ ಮಲೇಷ್ಯಾದ ಶಾ ಆಲಂನಲ್ಲಿ ಸಿಂಧು ನಾಯಕತ್ವದ ಮಹಿಳಾ ತಂಡವು ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಜಯಿಸಿದ ಐತಿಹಾಸಿಕ ಚಿನ್ನದ ಪದಕ ಅದು. ಇದರೊಂದಿಗೆ ಮುಂಬರುವ ಊಬರ್ ಕಪ್ (ಬ್ಯಾಡ್ಮಿಂಟನ್ ಕ್ರೀಡೆಯ ವಿಶ್ವಕಪ್ ಎಂದೇ ಜನಪ್ರಿಯ) ಜಯಿಸುವ ವಿಶ್ವಾಸವೂ ಸಿಂಧು ಬಳಗದಲ್ಲಿ ಮೂಡಿದೆ. ಇದಕ್ಕೂ ಮುನ್ನ ನಾಲ್ಕು ತಿಂಗಳ ಕಾಲ ಗಾಯದಿಂದಾಗಿ ಕಣದಿಂದ ದೂರವಿದ್ದ ಸಿಂಧು ಅವರಿಗೆ ಈ ಟೂರ್ನಿಯು ಮರುಜನ್ಮ ನೀಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇದೇ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅವರ ಸಿದ್ಧತೆಗೂ ಈ ಗೆಲುವು 'ಟಾನಿಕ್' ಆಗಿದೆ.

ಈ ಜಯವು ಸಿಂಧು ಅವರಂತಹ ಅನುಭವಿ ಆಟಗಾರ್ತಿಗೆ ಹೊಸ ಉತ್ಸಾಹ ತುಂಬುವುದರ ಜೊತೆಗೆ ಭಾರತದ ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ನವತಾರೆಗಳನ್ನು ನೀಡಿದೆ. ಒಲಿಂಪಿಯನ್ ಸೈನಾ ನೆಹ್ವಾಲ್ ಅವರು ಸದ್ಯ ಹೆಚ್ಚು ಟೂರ್ನಿಗಳಲ್ಲಿ ಆಡುತ್ತಿಲ್ಲ. ಅವರ ನಿವೃತ್ತಿಯ ದಿನಗಳು ಸಮೀಪಿಸಿವೆ. 28 ವರ್ಷದ ಸಿಂಧು ಕೂಡ ಇನ್ನು ಕೆಲವು ವರ್ಷಗಳವರೆಗೆ ಆಡಬಹುದು. ಈ ಇಬ್ಬರೂ ಆಟಗಾರ್ತಿಯರು ದೇಶದ ಬ್ಯಾಡ್ಮಿಂಟನ್ ಕ್ರೀಡೆಗೆ ನೀಡಿರುವ ಕೊಡುಗೆ ಅಮೂಲ್ಯವಾದದ್ದು. ಅವರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಆಟಗಾರ್ತಿಯರು ಈಗ ಸಿದ್ಧವಾಗಿದ್ದಾರೆ.

ಸಿಂಗಲ್ಸ್‌ನಲ್ಲಿ 17 ವರ್ಷದ ಅನ್ಮೋಲ್ ಖರ್ಬ್, ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ, ಗಾಯತ್ರಿ ಗೋಪಿಚಂದ್, ಪ್ರಿಯಾ ಕೊಂಜೆಂಗ್‌ಬಾಮ್, ಶ್ರುತಿ ಮಿಶ್ರಾ, ತನ್ವಿ ಶರ್ಮಾ, ಅಷ್ಮಿತಾ ಚಾಲಿಹಾ ಹಾಗೂ ತನಿಷಾ ಕ್ರಾಸ್ಟೊ ಅವರು ಈ ಚಿನ್ನದ ಗೆಲುವಿನ ಹಿಂದಿನ ರೂವಾರಿಗಳು. ಅದರಲ್ಲೂ ಫೈನಲ್‌ನಲ್ಲಿ ಥಾಯ್ಲೆಂಡ್ ಎದುರು 2–2ರ ಸಮಬಲ ಸಾಧಿಸಿದ್ದ ಸಂದರ್ಭದಲ್ಲಿ ಅನ್ಮೋಲ್ ಖರ್ಬ್ ಅವರು ಸಿಂಗಲ್ಸ್‌ನಲ್ಲಿ ಜಯಿಸದೇ ಹೋಗಿದ್ದರೆ ಚಿನ್ನ ಒಲಿಯುತ್ತಿರಲಿಲ್ಲ. ಪದಕ ಸಾಧನೆ ಒಂದೆಡೆಯಾದರೆ, ಈ ಹುಡುಗಿಯರು ಬೇರೆ ಬೇರೆ ರಾಜ್ಯ, ಭಾಷೆ, ಧರ್ಮ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದು ಒಂದಾಗಿ ಆಡಿದ ರೀತಿ ಅಸಾಧಾರಣ. ಇದು ಭಾರತದ ಬ್ಯಾಡ್ಮಿಂಟನ್ ಪಾಲಿನ ಭರವಸೆಯ ಬೆಳಕು.

ಅನ್ಮೋಲ್ ಖರ್ಬ್

ಸದ್ಯ ಭಾರತದ ಬ್ಯಾಡ್ಮಿಂಟನ್ ಕ್ರೀಡಾ ಕ್ಷೇತ್ರದಲ್ಲಿ ಸಂಚಲನ ಮೂಡಿಸಿರುವ ಹೆಸರು. ಹರಿಯಾಣದ ಫರೀದಾಬಾದ್‌ನ 17ರ ಬಾಲೆ ಅನ್ಮೋಲ್ ಅವರೀಗ ದೇಶದ ಬ್ಯಾಡ್ಮಿಂಟನ್ ಆಟದ ತಾರೆಯಾಗುವ ಭರವಸೆ ಮೂಡಿಸಿದ್ದಾರೆ. ಒಲಿಂಪಿಯನ್ ಪಿ.ವಿ. ಸಿಂಧು ಅವರ ಸ್ಥಾನವನ್ನು ತುಂಬುವ ನಿರೀಕ್ಷೆಯನ್ನೂ ಇವರು ಹುಟ್ಟು ಹಾಕಿದ್ದಾರೆ.

ಅಣ್ಣ ಹಾರ್ದಿಕ್ ಬ್ಯಾಡ್ಮಿಂಟನ್ ಆಡುವುದನ್ನು ನೋಡಿ ಪ್ರೇರಣೆಗೊಂಡ ಅನ್ಮೋಲ್ ಕಣಕ್ಕಿಳಿದದ್ದು ಆಕಸ್ಮಿಕ. ಆದರೆ ಹಾರ್ದಿಕ್ ಅವರು ಓದಿಗಾಗಿ ಬ್ಯಾಡ್ಮಿಂಟನ್ ರೆಕೆಟ್ ಕೈಬಿಟ್ಟರು. ಅನ್ಮೋಲ್ ಹಾಗೆ ಮಾಡಲಿಲ್ಲ. ರೆಕೆಟ್ ಅನ್ನು ಗಟ್ಟಿಯಾಗಿ ಹಿಡಿದುಕೊಂಡರು. ಇದೇ ಮೊದಲ ಬಾರಿಗೆ ಭಾರತ ಏಷ್ಯಾ ಟೀಮ್ ಚಾಂಪಿಯನ್‌ಷಿಪ್ ಚಿನ್ನ ಜಯಿಸಲು ಕಾರಣರಾದರು. ಚಿಕ್ಕ ವಯಸ್ಸಿನಲ್ಲಿಯೇ ಏಷ್ಯಾಮಟ್ಟದ ಸಿಂಗಲ್ಸ್ ಆಟಗಾರ್ತಿಯಾಗಿ ಬೆಳೆದಿದ್ದಾರೆ. ಹೋದ ವರ್ಷವಷ್ಟೇ ಅವರು ರಾಷ್ಟ್ರೀಯ ಚಾಂಪಿಯನ್ ಆಗಿದ್ದರು.

ಕುಸ್ತಿ, ಶೂಟಿಂಗ್ ಕ್ರೀಡೆಗಳಿಗೆ ಹೆಸರಾದ ರಾಜ್ಯದಲ್ಲಿ ಬ್ಯಾಡ್ಮಿಂಟನ್ ಬಗ್ಗೆ ಆಸಕ್ತಿ ತಳೆದ ಅನ್ಮೋಲ್ ಉತ್ತಮ ಕೌಶಲಗಳನ್ನು ರೂಢಿಸಿಕೊಂಡಿದ್ದಾರೆ. ತಂದೆ ಫರೀದಾಬಾದ್‌ನಲ್ಲಿ ವಕೀಲರಾಗಿದ್ದು, ಮಗಳನ್ನು ನೋಯ್ಡಾದ ಸನ್‌ರೈಸರ್ಸ್ ಶಟ್ಲರ್ಸ್ ಅಕಾಡೆಮಿಗೆ ಸೇರಿಸಿದರು. ಅಲ್ಲಿ ಕೋಚ್ ಆಗಿದ್ದ ಕುಸುಮ್ ಸಿಂಗ್ ಅವರ ಅಕಾಡೆಮಿ ಇದು. ಅನ್ಮೋಲ್ ಮತ್ತು ಅವರ ತಾಯಿ ರಾಜಬಾಲಾ ಅವರು ಈಗ ನೋಯ್ಡಾದಲ್ಲಿಯೇ ವಾಸವಾಗಿದ್ದಾರೆ.

ಅನ್ಮೋಲ್ ದೇಹದ ಶಕ್ತಿ ಹೆಚ್ಚಿಸಿಕೊಳ್ಳಲು ಪ್ರತಿದಿನ ಬೆಳಿಗ್ಗೆ 5ಕ್ಕೂ ಮೊದಲೇ ಎದ್ದು ಒಲಿಂಪಿಯನ್ ಬಾಕ್ಸರ್ ಬಳಿ ವ್ಯಾಯಾಮ ಕಲಿಯುತ್ತಿದ್ದಾರೆ. 12ನೇ ವಯಸ್ಸಿನಲ್ಲಿ 17 ವರ್ಷದೊಳಗಿನವರ ಅಖಿಲ ಭಾರತ ರ‍್ಯಾಂಕಿಂಗ್ ಪ್ರಶಸ್ತಿ ಗೆದ್ದ ದಾಖಲೆ ಅವರದ್ದು. 2020ರಲ್ಲಿ 17 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್ ಕೂಡ ಆದರು.

ಪ್ರಿಯಾ ಕೊಂಜೆಂಗ್‌ಬಾಮ್

ಭಾರತ ಬ್ಯಾಡ್ಮಿಂಟನ್ ತಂಡದಲ್ಲಿ ಸ್ಥಾನ ಪಡೆದ ಮಣಿಪುರದ ಮೊಟ್ಟಮೊದಲ ಆಟಗಾರ್ತಿ ಪ್ರಿಯಾ ಕೊಂಜೆಂಗ್‌ಬಾಮ್. ಈ ಹುಡುಗಿ ಜನಿಸಿದ ಮೊಯ್‌ರಾಂಗ್ ಪೇರಂಬಂಬ್ ಲಿಕಾಯ್ ಎಂಬ ಪುಟ್ಟ ಊರು ಈಗ ಜನಪ್ರಿಯಗೊಳ್ಳುತ್ತಿದೆ. ಅದಕ್ಕೆ ಕಾರಣ ಪ್ರಿಯಾ ಅವರ ಸಾಧನೆ. ಕೊಂಜೆಂಗ್‌ಬಾಮ್ ರಾಮೇಶ್ವರ್ ಮತ್ತು ಬಿತೇಶ್ವರಿ ದಂಪತಿಯ ಮಗಳು ಬಾಲ್ಯದಲ್ಲಿಯೇ ಬ್ಯಾಡ್ಮಿಂಟನ್‌ನತ್ತ ಆಕರ್ಷಿತರಾದರು. ಬಾಕ್ಸಿಂಗ್, ವೇಟ್‌ಲಿಫ್ಟಿಂಗ್ ಕ್ರೀಡೆಗಳಲ್ಲಿ ಒಲಿಂಪಿಕ್ ಪದಕ ವಿಜೇತರನ್ನು ದೇಶಕ್ಕೆ ನೀಡಿರುವ ಮಣಿಪುರದಲ್ಲಿ ಬ್ಯಾಡ್ಮಿಂಟನ್ ಕಲಿಕೆಗೆ ಹೆಚ್ಚು ಅವಕಾಶಗಳಿರಲಿಲ್ಲ.

ತಮ್ಮ ಸಹೋದರ ಸಂಬಂಧಿ ಕೆನಡಿಯವರ ಬಳಿ ತಮ್ಮ ಊರಿನ ಮಲ್ಟಿಪರ್ಪಸ್ ಹಾಲ್‌ನಲ್ಲಿದ್ದ ಕೋರ್ಟ್‌ನಲ್ಲಿ ಬ್ಯಾಡ್ಮಿಂಟನ್ ಮೂಲಪಾಠಗಳನ್ನು ಕಲಿತರು. ವಿಷ್ಣುಪುರ್ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆಯ ಪರವಾಗಿ ಕಣಕ್ಕಿಳಿದ ಪ್ರಿಯಾ 12ನೇ ವಯಸ್ಸಿನಲ್ಲಿ ರಾಜ್ಯ ಸಿಂಗಲ್ಸ್ ಚಾಂಪಿಯನ್‌ಷಿಪ್ ಗೆದ್ದರು. ಉತ್ತಮ ಅಥ್ಲೀಟ್ ಆಗಿದ್ದ ಪ್ರಿಯಾ ತಮ್ಮ ಚುರುಕಾದ ಆಟದ ಮೂಲಕ ಗಮನ ಸೆಳೆದರು. 2018ರಲ್ಲಿ ಹೈದರಾಬಾದ್ ಸುಚಿತ್ರ ಬ್ಯಾಡ್ಮಿಂಟನ್ ಅಕಾಡೆಮಿಗೆ ಪ್ರವೇಶ ಪಡೆದ ಅವರು ಹಿಂದಿರುಗಿ ನೋಡಿಲ್ಲ. ರಾಷ್ಟ್ರೀಯ ಸರ್ಕಿಟ್‌ನಲ್ಲಿ ಅವರು ದೆಹಲಿಯ ಖುಷಿ ಗುಪ್ತಾ ಅವರೊಂದಿಗೆ ನಾಲ್ಕು ವರ್ಷ ಆಡಿದರು. 2022ರಲ್ಲಿ ಅಖಿಲ ಭಾರತ ಸೀನಿಯರ್ ರ‍್ಯಾಂಕಿಂಗ್ ಚಾಂಪಿಯನ್‌ಷಿಪ್ ಗೆದ್ದುಕೊಂಡರು. ವಿಶಾಖಪಟ್ಟದಲ್ಲಿ ಸೀನಿಯರ್ ನ್ಯಾಷನಲ್ ಪ್ರಶಸ್ತಿ ಜಯಿಸಿದರು. ನವನೀತ್ ಬೊಕಾ ಜೊತೆಗೂಡಿ ಮಿಶ್ರ ಡಬಲ್ಸ್ ಸೀನಿಯರ್ ರ‍್ಯಾಂಕಿಂಗ್ ಪ್ರಶಸ್ತಿಯನ್ನೂ ಅದೇ ವರ್ಷ ಗೆದ್ದರು. ಹೋದ ವರ್ಷ ಪ್ರಿಯಾ ಅವರು ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದರು. ಅದೇ ವರ್ಷ ಪುಣೆಯಲ್ಲಿ ಕಂಚು ಗೆದ್ದಿದ್ದರು. ಅಲ್ಲಿ ಅವರು ಉತ್ತರ ಪ್ರದೇಶದ ಶ್ರುತಿ ಮಿಶ್ರಾ ಅವರೊಂದಿಗೆ ಆಡಿ ಡಬಲ್ಸ್‌ನಲ್ಲಿ ಪದಕ ಜಯಿಸಿದ್ದರು. ಕಳೆದ ವರ್ಷವೂ ಈ ಜೋಡಿಯು ಹೈದರಾಬಾದ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು. ಯಾನೆಕ್ಸ್ ಸನ್‌ರೈಸ್ ಅಂತರ ಸಾಂಸ್ಥಿಕ ಬ್ಯಾಡ್ಮಿಂಟನ್ ಟೂರ್ನಿಯಲ್ಲಿಯೂ ಚಿನ್ನ ಗಳಿಸಿದ್ದರು.

ಟ್ರೀಸಾ ಜೋಳಿ

ಕೇರಳದ ಪುಳಿಂಗೊಮ್ ಗ್ರಾಮದವರು. ಆ ಊರಿನಲ್ಲಿ ಬ್ಯಾಡ್ಮಿಂಟನ್ ಆಡುವವರು ಇರಲಿಲ್ಲ. ಆದರೂ ಟಿ.ವಿ. ಮೊಬೈಲ್‌ಗಳಲ್ಲಿ ನೋಡಿ ಆಕರ್ಷಿತರಾದವರು ಟ್ರೀಸಾ. ತಂದೆ ಜೋಳಿ ಮ್ಯಾಥ್ಯೂ ಥೈಕಳ ಅವರು ಮಾಜಿ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವಾಲಿಬಾಲ್ ಆಟಗಾರ. ತಾಯಿ ಡೈಸಿ ಜೋಸೆಫ್ ಅವರು ಶಿಕ್ಷಕಿ. ಇದರಿಂದಾಗಿ ಮನೆಯಲ್ಲಿ ಕ್ರೀಡೆ ಮತ್ತು ವಿದ್ಯಾಭ್ಯಾಸ ಎರಡಕ್ಕೂ ಆದ್ಯತೆ ಇತ್ತು. ಓದಿನಲ್ಲಿಯೂ ಜಾಣೆಯಾಗಿದ್ದ ಟ್ರೀಸಾ ತಮ್ಮ ಐದನೇ ವಯಸ್ಸಿನಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯತ್ತ ಒಲವು ಬೆಳೆಸಿಕೊಂಡರು. ಚುರುಕಾದ ಫುಟ್‌ವರ್ಕ್, ದೃಷ್ಟಿ ಮತ್ತು ಕೈಗಳ ಸಂಯೋಜಿತ ಚಾಲನೆಯ ಚುರುಕುತನದಿಂದಾಗಿ ಬಹುಬೇಗನೆ ಆಟದ ಕೌಶಲಗಳನ್ನು ಕಲಿತರು. ಕಣ್ಣೂರಿನಲ್ಲಿ ನಡೆದ 10 ವರ್ಷದೊಳಗಿನವರ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಅವರು ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲೂ ಆಡಿದ್ದರು. ಆದರೆ ಸಿಂಗಲ್ಸ್‌ಗಿಂತಲೂ ಡಬಲ್ಸ್‌ನಲ್ಲಿ ಅವರ ಪ್ರದರ್ಶನ ಉತ್ತಮವಾಗಿತ್ತು. ಆಗಿನಿಂದ ಡಬಲ್ಸ್‌ನಲ್ಲಿಯೇ ಹೆಚ್ಚು ಆಡತೊಡಗಿದರು.

ಅವರ ಪ್ರತಿಭೆಗೆ ತಕ್ಕ ತರಬೇತಿಯ ಅವಶ್ಯಕತೆಯನ್ನು ಮನಗಂಡ ತಂದೆ ಮ್ಯಾಥ್ಯೂ ಅವರು ಹೈದರಾಬಾದಿನ ಪುಲ್ಲೇಲ ಗೋಪಿಚಂದ್ ಅಕಾಡೆಮಿಗೆ ಸೇರಿಸಿದರು. ಅಲ್ಲಿ ಅರುಣ್ ವಿಷ್ಣು ಅವರ ಮಾರ್ಗದರ್ಶನದಲ್ಲಿ ಟ್ರಿಸಾ ಆಟ ಹುರಿಗಟ್ಟಿತು. ಕಳೆದ ಮೂರು ವರ್ಷಗಳಿಂದ ಅಂತರರಾಷ್ಟ್ರೀಯ ಮಟ್ಟದ ಸೂಪರ್ ಸೀರಿಸ್ ಟೂರ್ನಿಗಳಲ್ಲಿ ಟ್ರೀಸಾ ಅವರು ಗೋಪಿಚಂದ್ ಅವರ ಮಗಳು ಗಾಯತ್ರಿ ಅವರೊಂದಿಗೆ ಆಡುತ್ತಿದ್ದಾರೆ. ಈ ಜೋಡಿಯು 2021ರ ಇಂಡಿಯಾ ಇಂಟರ್ ನ್ಯಾಷನಲ್ ಚಾಲೆಂಜ್ ಮತ್ತು 2022ರಲ್ಲಿ ಒಡಿಶಾ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಚಿನ್ನ ಜಯಸಿತ್ತು. ಅದೇ ಟೂರ್ನಿಯಲ್ಲಿ ಟ್ರೀಸಾ ಅವರು ಎಂ.ಆರ್. ಅರ್ಜುನ್ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲಿ ಬೆಳ್ಳಿ ಗಳಿಸಿದ್ದರು. 20 ವರ್ಷದ ಜೋಳಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಗಾಯತ್ರಿಯೊಂದಿಗೆ ತೋರಿದ ಛಲದ ಆಟ ಗಮನ ಸೆಳೆಯಿತು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಶೇಖ್ರಪ್ಪ ಕಥೆಯ — ಪೀಪಿ ಕೊಳಲು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

1

2

ಮರವೊಂದರ ಕೆಳಗೆ ಕೊಳಲನೂದುತ್ತ ಕುಳಿತಿದ್ದ ಗೋಪಾಲ. ತಂಗಾಳಿ ಬೀಸುತ್ತಿತ್ತು. ಆತನ ಜೊತೆಗೆ ಬಂದಿದ್ದ ನಾಯಿಯೂ ಕೊಳಲ ದನಿಗೆ ಮೈಮರೆತು ಹೋಗಿತ್ತು. ನಿಮಿಷಗಳು ಉರುಳಿದಂತೆ ಕೊಳಲಿನಿಂದ ಬರುತಿದ್ದ ಶಬ್ದವೂ ಜೋರಾಗುತ್ತಾ ಹೋಯಿತು. ಏನಾಯಿತು ಎಂದು ನೋಡಿದರೆ ಕೊಳಲು ಸಂತೆಯಲ್ಲಿ ಸಿಗುವ ಪೀಪಿಯಂತೆ ಬೆಳೆದು ದೊಡ್ಡದಾಗಿತ್ತು.

3

4



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ದೃತಿ ವಿ.
ಬೆಂಗಳೂರು

ರಿಶೀಕ್ ಎಸ್.ರೆಡ್ಡಿ
ಶ್ರೀನಿವಾಸಪುರ

ಚಿನ್ಮಯಿ ಎಚ್.ಆರ್.
ತುಮಕೂರು

ಗುರು ಇಂದ್ರಜಿತ್ ಎ.
ಬೆಂಗಳೂರು ಉತ್ತರ

ಪುಣ್ಯಶ್ರೀ
ಮಳವಳ್ಳಿ



ಪೂರ್ವಿಕ ಕೆ.
ಬೆಂಗಳೂರು

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಗದ | ಮರು | ಮಾನಿ

ಹರ | ವಾರಿ | ಗಡಿ

ಅಕ್ಷರ ಪಟ್ಟಿ

ನಿ	ಕಾ	ಗು	ಕ	ಶ	ನೆ
ಗು	ಧಿ	ಗ	ಳು	ಗೆ	ಸ

ಉಚ್ಚಾರ–ವಿನೋದ

ಇಲ್ಲಿ ಕೊಟ್ಟಿರುವ ಕೆಲವು ಇಂಗ್ಲಿಷ್ ಪದಗಳ ಉಚ್ಚಾರವು ಒಂದು ತೆರನಾದರೆ ಅವೇ ಪದಗಳು ಕನ್ನಡದಲ್ಲಿ ಉಚ್ಚಾರ ಹೀಗೂ ಆಗಿ ಸ್ವಾರಸ್ಯವನ್ನು ಉಂಟು ಮಾಡುತ್ತವೆ.

	ಶಬ್ದ	ಇಂಗ್ಲಿಷ್ ಉಚ್ಚಾರ	ಕನ್ನಡ ಉಚ್ಚಾರ
1	BALE	ಬೇಲ್	ಬಾಳೆ(ಬಾಲೆ)
2	GONE	ಗಾನ್	ಗೊನೆ
3	HOLE	ಹೋಲ್	ಹೊಳೆ
4	LATE	ಲೇಟ್	ಲತೆ
5	DOSE	ಡೋಸ್	ದೋಸೆ
6	TALE	ಟೇಲ್	ತಲೆ

ಚೂರು–ಮರಿ ಅಂಕಿ ಅಕ್ಷರ ಆಟ: ಓದು ಖುಷಿಪಡು

3ತಿ/3ಖ/6ತಿ/7ಗೆ/10ತ್ರ/7ತ್ತ

ಜೋಡಿ ಪದ ಆಟ

ಇಲ್ಲಿ ಕೊಟ್ಟಿರುವ ಜೋಡಿ ಪದಗಳಿಗೆ ಅಕ್ಷರ ಪಟ್ಟಿಯಿಂದ ಅಕ್ಷರ ಆಯ್ದು ತುಂಬಿ ಪದ ರಚಿಸಿ

ಅಕ್ಷರ ಪಟ್ಟಿ

ಗ	ಜ	ಯ	ನ
ಡ	ದರ್ಾ	ರ	ಪಿ
ಮಿ	ಚ	ವಾ	ಸೂ
ಲ	ಯೂ	ವಿ	ವಾ
ದ	ಪಾ	ಳ	ಶ್ವ

ಸಂಖ್ಯೆ	ಮೊದಲ ಅಕ್ಷರ		ಕೊನೆಯ ಅಕ್ಷರ
1	ಸ		ತಿ
	ಸ		ತಿ
2	ಸ		ರ
	ಸ		ರ
3	ವ		ನ
	ವ		ನ
4	ನಾ		ಕ
	ನಾ		ಕ
5	ಮ		ರ
	ಮ		ರ
6	ಕ		ಲೆ
	ಕ		ಲೆ
7	ಜ		ನ
	ಜ		ನ
8	ಹ		ಸು
	ಹ		ಸು
9	ಮ		ನ
	ಮ		ನ
10	ನ		ರ
	ನ		ರ

ಗಣಿತದಲ್ಲಿ ಗರ್ದಿ ಗಮ್ಮತ್ತು — ಬಿಡಿ ಅಂಕಿ ಹೇಳು–ಇಡೀ ಸಂಖ್ಯೆ ಕೇಳು

ನಿಮ್ಮ ಮಿತ್ರನಿಗೆ ಮೂರು ಅಂಕಿಗಳುಳ್ಳ ಒಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸಿ. ಆ ಸಂಖ್ಯೆಯ ಅಂಕಿಗಳನ್ನು ಇಳಿಕೆ ಕ್ರಮದಲ್ಲಿ ಬರೆಯುವಂತೆ ಹೇಳಿ. ಈಗ ಆ ಸಂಖ್ಯೆಯ ತಿರುವು ಸಂಖ್ಯೆ (ವಿಲೋಮ ಸಂಖ್ಯೆ)ಯನ್ನು ಅದರ ಕೆಳಗೆ ಬರೆದು ಕಳೆಯುವಂತೆ ಹೇಳಿ. ಈಗ ಬಂದ ಉತ್ತರದ ಕೊನೆ ಅಂಕಿ ಹೇಳಿದರೆ ಸಾಕು ನೀವು ಇಡೀ ಸಂಖ್ಯೆ ಹೇಳಿ ಬಿಡಬಲ್ಲಿರಿ. ಅದು ಹೇಗೆ?

ನಿನ್ನ ಮಿತ್ರ ಕೊನೆಯ ಅಂಕಿ ಹೇಳಿದಾಗ ಆ ಅಂಕಿಯನ್ನು 9 ರಲ್ಲಿ ಕಳೆಯಿರಿ. ಬಂದ ಅಂಕಿ ಉತ್ತರದ ಮೊದಲಿನ ಅಂಕಿಯಾಗಿರುತ್ತದೆ. ಇದರ ಮುಂದೆ ಸ್ಥಿರಾಂಕ 9. ಇದು ಪ್ರತಿ ಬಾರಿಯೂ ಮಧ್ಯದಲ್ಲಿ ಇದ್ದೇ ಇರುತ್ತದೆ. ಈಗ ಉತ್ತರದ ಮೂರು ಅಂಕಿಗಳು ದೊರೆತಂತಾಯಿತು. ಈ ಮೂರು ಅಂಕಿಗಳ ಸಂಖ್ಯೆಯನ್ನು ನಿಮ್ಮ ಮಿತ್ರನಿಗೆ ತಿಳಿಸಿ. ಅವನು ನಿಜಕ್ಕೂ ಆಶ್ಚರ್ಯಗೊಳ್ಳುತ್ತಾನೆ. ಗುಟ್ಟು ರಟ್ಟಾಗುವವರೆಗೂ ಇದು ಜಾದುವಿನಂತೆ ತೋರುತ್ತದೆ.

ಉದಾ :

- ನಿಮ್ಮ ಮಿತ್ರನ ಸಂಖ್ಯೆ	319
ಇಳಿಕೆ ಕ್ರಮದಲ್ಲಿ ಬರೆದಾಗ	931
ತಿರುವು ಸಂಖ್ಯೆ	139
ಕಳೆದಾಗ	792

ಇಲ್ಲಿ ಕೊನೆಯ ಅಂಕಿ 2 ಎಂದು ನಿಮ್ಮ ಮಿತ್ರ ಹೇಳಿದಾಗ ಇಡೀ ಸಂಖ್ಯೆಯ ಮೊದಲ ಅಂಕಿ 7 ಅಲ್ಲವೇ ? 9-2-7 ಹಾಗೆ 9 ಸ್ಥಿರಾಂಕ. ಈಗ ಎಲ್ಲಾ ಸೇರಿ 792 ಎಂದು ಹೇಳಿ ಬಿಟ್ಟರೆ ಆಯ್ತು.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಲೇಖನಿಜ 2.ಹೋಬಳಿಕ 3.ಜಾತಕಲಿ 4.ಗೌತಮಿಳು 5.ತುಂತುರುಬ 6.ಬರಗಳೆ

ಜಾಣಪದ ಆಟ: 1.ಜೋಗುಳ 2.ಹೂರಣ 3.ಕೊಡಗು 4.ಸಲುಗೆ 5.ಗುಳಿಗೆ 6.ಕಾಣಿಕೆ 7.ಕಂಬಳಿ 8.ಬಿಳುಪು 9.ಮಾನಿನಿ 10.ಜನನಿ

ವರ್ಡ್ ಗೇಮ್: 1.TABLE 2.EAR 3.ROAD 4.DESK 5.KEY 6.YELLOW 7.WALL 8.LISTEN 9.NOTE

ಗಾದೆ ನೆನಪಿಸಿಕೊಂಡು ಉತ್ತರಿಸು 1.ಗೂಳಿ 2.ಆನೆ 3.ಅಕ್ಕ 4.ಹುಗ್ಗಿ 5.ಬಡವ

ನಾಲ್ಕನೇ ಟೆಸ್ಟ್: ಮತ್ತೆ ಮಿಂಚಿದ ಜೈಸ್ವಾಲ್ • ಬಶೀರ್‌ಗೆ ನಾಲ್ಕು ವಿಕೆಟ್

ಭಾರತಕ್ಕೆ ಸ್ಪಿನ್ನರ್‌ಗಳ ಕಡಿವಾಣ

ಪ್ರಜಾವಾಣಿ ವಾರ್ತೆ

ರಾಂಚಿ: ಅನುಭವಿಗಳ ಹೋರಾಟದೊಡನೆ ಆರಂಭವಾದ ನಾಲ್ಕನೇ ಕ್ರಿಕೆಟ್ ಟೆಸ್ಟ್‌ನ ಎರಡನೇ ದಿನದ ಆಟ ಕೊನೆಯಲ್ಲಿ ಯುವ ಆಟಗಾರರ ನಡುವೆ ಪೈಪೋಟಿಯಲ್ಲಿ ಅಂತ್ಯಗೊಂಡಿತು. ಇಂಗ್ಲೆಂಡ್ ತಂಡ ದಿನದಾಟದಲ್ಲಿ ಆತಿಥೇಯ ತಂಡದ ವಿರುದ್ಧ ಹಿಡಿತ ಸಾಧಿಸಿತು.

7 ವಿಕೆಟ್‌ಗೆ 302 ರನ್‌ಗಳೊಡನೆ ಶನಿವಾರ ಆಟ ಮುಂದುವರಿಸಿದ ಇಂಗ್ಲೆಂಡ್ ತಂಡ 353 ರನ್‌ಗಳಿಗೆ ಮೊದಲ ಇನಿಂಗ್ಸ್ ಮುಗಿಸಿತು. ಇಂಥ ಪಿಚ್‌ನಲ್ಲಿ ಆತಿಥೇಯರಿಂದ ಪ್ರತಿಹೋರಾಟ ನಿರೀಕ್ಷಿಸಲಾ ಗಿತ್ತು. ಆದರೆ ಭಾರತ ತಂಡ ಆಡಿದ ರೀತಿ ನೋಡಿದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸಮಾಧಾನವನ್ನಂತೂ ಮೂಡಿಸಿರಲಿಕ್ಕಿಲ್ಲ.

ಭಾರತ ಮೊದಲ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 219 ರನ್ ಗಳಿಸಿದ್ದು, ಇಂಗ್ಲೆಂಡ್ ತಂಡಕ್ಕಿಂತ ಇನ್ನೂ 134 ರನ್ ಹಿಂದೆಯಿದೆ.

ಒಂದು ಹಂತದಲ್ಲಿ 177 ರನ್ನಿಗೆ 7 ವಿಕೆಟ್ ಬಿದ್ದಾಗ ಜೊತೆಗೂಡಿದ ಯುವ ಆಟಗಾರರಾದ ಕುಲದೀಪ್ ಯಾದವ್ (ಬ್ಯಾಟಿಂಗ್ 30) ಮತ್ತು ಧ್ರುವ್ ಜುರೇಲ್ (ಬ್ಯಾಟಿಂಗ್ 17) ಮುರಿಯದ ಎಂಟನೇ ವಿಕೆಟ್‌ಗೆ 42 ರನ್ ಸೇರಿಸಿ ತಂಡದ ಕುಸಿತವನ್ನು ತಡೆಗಟ್ಟಿದರು. ಪ್ರವಾಸಿ ತಂಡದ ಯುವ ಸ್ಪಿನ್ನರ್ ಶೋಯೆಬ್ ಬಶೀರ್ ಕೊನೆಯ ಎರಡು ಅವಧಿಗಳಲ್ಲಿ ಮಿಂಚಿದರು.

ಶುಕ್ರವಾರ 106 ರನ್ ಗಳಿಸಿದ್ದ ಜೋ ರೂಟ್ 122 ರನ್‌ಗಳೊಡನೆ ಅಜೇಯರಾಗುಳಿದರು. ಇಂಗ್ಲೆಂಡ್‌ನ ಕೊನೆಯ ಮೂರು ವಿಕೆಟ್‌ಗಳು ರವೀಂದ್ರ ಜಡೇಜಾ ಪಾಲಾದವು. ಅವರು 32.5 ಓವರುಗಳಲ್ಲಿ 67 ರನ್ನಿಗೆ 4 ವಿಕೆಟ್ ಪಡೆದರು.

ಆದರೆ ಬೆಳಿಗ್ಗೆ ಪಡೆದ ಪುಟಿತ ಮತ್ತು ತಿರುವು, ಹಿಂದಿನ ದಿನ ಅವರ ಮತ್ತು ಅಶ್ವಿನ್ ಬೌಲಿಂಗ್‌ನಲ್ಲಿ ವಿರಳವಾಗಿತ್ತು.

ಜೇಮ್ಸ್ ಆ್ಯಂಡರ್ಸನ್ ಅವರು ನಾಯಕ ರೋಹಿತ್ ಶರ್ಮಾ ಅವರ ಮಹತ್ವದ ವಿಕೆಟ್ ಪಡೆದರು. ಆದರೆ ಒಳ್ಳೆಯ ಲಯದಲ್ಲಿರುವ ಯಶಸ್ವಿ ಜೈಸ್ವಾಲ್ (73) ಮತ್ತು ಶುಭಮನ್ ಗಿಲ್ (38) ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಸ್ಪಿನ್ನರ್‌ಗಳು ದಾಳಿಗಿಳಿಯುತ್ತಿದ್ದಂತೆ ಪರಿಸ್ಥಿತಿ ಬದಲಾಯಿತು. 22 ವರ್ಷದ ಜೈಸ್ವಾಲ್ ಆತ್ಮವಿಶ್ವಾಸದಿಂದ ಆಡಿ ಮತ್ತೊಂದು ಅರ್ಧ ಶತಕ ಗಳಿಸಿದ್ದರು. ಆದರೆ ಅವರು ಬಶೀರ್ ಬೌಲಿಂಗ್‌ನಲ್ಲಿ ಕೆಳಮಟ್ಟದಲ್ಲಿ ಬಂದ ಚೆಂಡಿಗೆ ಬೌಲ್ಡ್ ಆದರು (161ಕ್ಕೆ5). ಜೈಸ್ವಾಲ್ 103 ರನ್ ಸರಾಸರಿಯಲ್ಲಿ ಇದುವರೆಗೆ 618 ರನ್ ಕಲೆಹಾಕಿದಂತಾಗಿದೆ.

ಆಫ್ ಬ್ರೇಕ್ ಬೌಲರ್ ಬಶೀರ್ ಆತಿಥೇಯ ತಂಡಕ್ಕೆ ಕಡಿವಾಣ ತೊಡಿಸಿದರು. ಪಿಚ್‌ನಲ್ಲಿ ತಿರುವು ಮತ್ತು ಬೌನ್ಸ್ ಪಡೆಯುತ್ತಿದ್ದ ಈ ಎತ್ತರದ ಬೌಲರ್ ಚೆಂಡಿಗೆ ಸ್ವಲ್ಪ ವೇಗವನ್ನೂ ನೀಡಿ ಭಾರತದ ಆಟಗಾರರನ್ನು ಕಾಡಿ 84 ರನ್ನಿಗೆ 4 ವಿಕೆಟ್ ಪಡೆದರು.

ಅನುಭವಿ ಅಶ್ವಿನ್ ಅವರಿಗೆ ಹೋಲಿಸಿದರೆ ಪಿಚ್‌ನ ಉಪಯೋಗವನ್ನು ಅವರೇ ಹೆಚ್ಚಾಗಿ ಪಡೆದಿದ್ದು. ಕೇವಲ ಏಳು ಪ್ರಥಮ ದರ್ಜೆ ಪಂದ್ಯಗಳನ್ನಾಡಿರುವ 20 ವರ್ಷದ ಬೌಲರ್, ಭಾರತದ ಆಟಗಾರರನ್ನು ಅವರದ್ದೇ ನೆಲದಲ್ಲಿ ಕಟ್ಟಿಹಾಕಿದ ರೀತಿ ಕುತೂಹಲಕ್ಕೆ ಎಡೆಮಾಡಿತು.

ಹೈದರಾಬಾದಿನಲ್ಲಿ ಆತಿಥೇಯ ತಂಡ ಎರಡನೇ ಟೆಸ್ಟ್ ಸೋತಾಗ ಟಾಮ್ ಹಾರ್ಟ್ಲಿ ಕಾಡಿದ್ದರು. ನಂತರದ ಎರಡು ಟೆಸ್ಟ್‌ಗಳಲ್ಲಿ ಭಾರತ ಸ್ಪಿನ್ನರ್‌ಗಳೆದುರು ಸುಧಾರಿತ ಪ್ರದರ್ಶನ ನೀಡಿತ್ತು. ಆದರೆ ಎರಡನೇ ದಿನ ಅಂಥ ಆಟ ಕಾಣಲಿಲ್ಲ.

ಭಾರತದ ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ ವೈಖರಿ. ಎಎಫ್‌ಪಿ ಚಿತ್ರ

ಶೋಯೆಬ್ ಬಶೀರ್. ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

1ನೇ ಇನಿಂಗ್ಸ್:
ಇಂಗ್ಲೆಂಡ್: 353 (104.5 ಓವರುಗಳಲ್ಲಿ)
(ಶುಕ್ರವಾರ: 7 ವಿಕೆಟ್‌ಗೆ 302)
ರೂಟ್ ಔಟಾಗದೇ 122 (274 ಎ, 4x10)
ರಾಬಿನ್ಸನ್ ಸಿ ಜುರೆಲ್ ಬಿ ಜಡೇಜ 58 (96ಎ, 4x9, 6x1)
ಬಷೀರ್ ಸಿ ಪಾಟೀದಾರ್ ಬಿ ಜಡೇಜ 0 (2ಎ)
ಆ್ಯಂಡರ್ಸನ್ ಎಲ್‌ಬಿಡಬ್ಲ್ಯು ಬಿ ಜಡೇಜ 0 (4ಎ)
ಇತರೆ: 19 (ಬೈ 5, ಲೆಗ್‌ಬೈ 9 ನೋಬಾಲ್ 5)
ವಿಕೆಟ್ ಪತನ: 8–347 (ಓಲಿ ರಾಬಿನ್ಸನ್, 102.1), 9–349 (ಶೋಯೆಬ್ ಬಷೀರ್, 102.4), 10–353 (ಜೇಮ್ಸ್ ಆ್ಯಂಡರ್ಸನ್ 104.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 18–3–78–2, ಆಕಾಶ್ ದೀಪ್ 19–0–83–3, ರವೀಂದ್ರ ಜಡೇಜ 32.5–7–67–4, ರವಿಚಂದ್ರನ್ ಅಶ್ವಿನ್ 22–1–83–1, ಕುಲದೀಪ್ ಯಾದವ್ 12–4–22–0, ಯಶಸ್ವಿ ಜೈಸ್ವಾಲ್ 1–0–6–0
ಭಾರತ: 7ಕ್ಕೆ219 (73 ಓವರುಗಳಲ್ಲಿ)
ಜೈಸ್ವಾಲ್ ಬಿ ಬಷೀರ್ 73 (117ಎ, 4x8, 6x1)
ರೋಹಿತ್ ಸಿ ಫೋಕ್ಸ್ ಬಿ ಶರ್ಮಾ 2 (9ಎ)
ಗಿಲ್ ಎಲ್‌ಬಿಡಬ್ಲ್ಯು ಬಿ ಬಷೀರ್ 38 (65ಎ, 4x6)
ರಜತ್ ಎಲ್‌ಬಿಡಬ್ಲ್ಯು ಬಿ ಬಷೀರ್ 17 (42ಎ, 4x4)
ಜಡೇಜ ಸಿ ಪೋಪ್ ಬಿ ಬಷೀರ್ 12 (12ಎ, 6x2)
ಸರ್ಫರಾಜ್ ಸಿ ರೂಟ್ ಬಿ ಹಾರ್ಟ್ಲಿ 14 (53ಎ, 4x1)
ಜುರೇಲ್ ಬ್ಯಾಟಿಂಗ್ 30 (58ಎ, 4x2, 6x1)
ಅಶ್ವಿನ್ ಎಲ್‌ಬಿಡಬ್ಲ್ಯು ಬಿ ಹಾರ್ಟ್ಲಿ 1 (13ಎ)
ಕುಲದೀಪ್ ಬ್ಯಾಟಿಂಗ್ 17 (72ಎ, 4x1)
ಇತರೆ: 15 (ಬೈ 8, ಲೆಗ್‌ಬೈ 4, ನೋಬಾಲ್ 3)
ವಿಕೆಟ್ ಪತನ: 1–4 (ರೋಹಿತ್ ಶರ್ಮಾ, 2.4), 2–86 (ಶುಭಮನ್ ಗಿಲ್, 24.1), 3–112 (ರಜತ್ ಪಾಟೀದಾರ್, 34.3), 4–130 (ರವೀಂದ್ರ ಜಡೇಜ, 36.5), 5–161 (ಯಶಸ್ವಿ ಜೈಸ್ವಾಲ್, 46.4), 6–171 (ಸರ್ಫರಾಜ್ ಖಾನ್, 51.3), 7–177 (ರವಿಚಂದ್ರನ್ ಅಶ್ವಿನ್, 55.2).
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 12–4–36–1; ಓಲಿ ರಾಬಿನ್ಸನ್ 9–0–39–0; ಶೋಯೆಬ್ ಬಷೀರ್ 32–4–84–4; ಟಾಮ್ ಹಾರ್ಟ್ಲಿ 19–5–47–2; ಜೋ ರೂಟ್ 1–0–1–0

ಆರ್‌ಸಿಬಿಗೆ ರೋಚಕ ಗೆಲುವು

ಶೋಭನಾ ಆಶಾಗೆ ಐದು ವಿಕೆಟ್ ಗೊಂಚಲು; ರಿಚಾ, ಮೇಘನಾ ಅರ್ಧಶತಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಸೇರಿದ್ದ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಕ್ರಿಕೆಟ್ ಪ್ರೇಮಿಗಳನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಿರಾಶೆಗೊಳಿಸಲಿಲ್ಲ.

ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸ್ಮೃತಿ ಮಂದಾನ ಬಳಗವು ಯುಪಿ ವಾರಿಯರ್ಸ್ ಎದುರು 2 ರನ್‌ಗಳ ರೋಚಕ ಜಯ ಸಾಧಿಸಿತು. 158 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ಯುಪಿ ತಂಡವನ್ನು ಬೆಂಗಳೂರು ತಂಡದ ಸ್ಪಿನ್ನರ್ ಶೋಭನಾ ಆಶಾ (4–0–22–5) ಕಟ್ಟಿಹಾಕಿದರು.

ಕೊನೆಯ ಎಸೆತದವರೆಗೂ ಪಂದ್ಯವು ಕುತೂಹಲ ಕೆರಳಿಸಿತ್ತು. ಕಟ್ಟಕಡೆಯ ಎಸೆತದಲ್ಲಿ ಐದು ರನ್ ಅಗತ್ಯವಿದ್ದಾಗ ಯುಪಿ ತಂಡದ ದೀಪ್ತಿ ಶರ್ಮಾ ಕ್ರೀಸ್‌ನಲ್ಲಿದ್ದರು. ಆದರೆ ಅವರಿಗೆ ಸೋಫಿ ಮೆಲೆನಿಕ್ಸ್ ಅವರ ಎಸೆತದಲ್ಲಿ ಸಿಕ್ಸರ್ ಹೊಡೆಯಲು ದೀಪ್ತಿಗೆ ಸಾಧ್ಯವಾಗಲಿಲ್ಲ.

ಯುಪಿ ತಂಡದ ವೃಂದಾ ದಿನೇಶ್, ತಹಲಿಯಾ ಮೆಕ್‌ಗ್ರಾ, ಗ್ರೇಸ್ ಹ್ಯಾರಿಸ್, ಶ್ವೇತಾ ಸೆಹ್ರಾವತ್ ಮತ್ತು ಕಿರಣ್ ನವಗಿರೆ ಅವರ ವಿಕೆಟ್‌ಗಳನ್ನು ಶೋಭನಾ ಕಬಳಿಸಿದರು.

ಅದರಲ್ಲೂ ಅವರು ಒಂಬತ್ತನೇ ಓವರ್‌ನಲ್ಲಿ ಎರಡು ವಿಕೆಟ್ ಗಳಿಸಿದ್ದು ಆರ್‌ಸಿಬಿ ಗೆಲುವಿನತ್ತ ಸಾಗಲು ಪ್ರಮುಖ ತಿರುವಾಯಿತು.

ಆದರೂ ಕೊನೆಯ ಎರಡು ಓವರ್‌ಗಳಲ್ಲಿ ಹೆಚ್ಚು ರನ್ ಬಿಟ್ಟುಕೊಡದೇ ಉತ್ತಮ ಬೌಲಿಂಗ್ ಮಾಡಿದ ಸೋಫಿ ಮಾಲಿನೆಕ್ಸ್ ಮತ್ತು ವೆರ್ಹಾಮ್ಸ್ ಅವರೂ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ವಿಕೆಟ್ ಪಡೆದ ಆರ್‌ಸಿಬಿ ತಂಡದ ಆಟಗಾರ್ತಿ ಶೋಭನಾ ಆಶಾ ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಮೇಘನಾ–ರಿಚಾ ಜೊತೆಯಾಟ: ಟಾಸ್ ಗೆದ್ದ ಯುಪಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು.

ಆದರೆ ಸಬಿನೇನಿ ಮೇಘನಾ (53; 44ಎ, 4X7, 6X1) ಮತ್ತು ರಿಚಾ ಘೋಷ್ (62; 37ಎ, 4X12) ಅವರ ಅರ್ಧಶತಕಗಳಿಂದಾಗಿ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 157 ರನ್ ಗಳಿಸಿತು.

54 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಆತಂಕಕ್ಕೆ ಒಳಗಾಗಿದ್ದ ತಂಡಕ್ಕೆ ಮೇಘನಾ ಹಾಗೂ ರಿಚಾ ಆಸರೆಯಾದರು. ದೀಪ್ತಿ ಶರ್ಮಾ ಹಾಕಿದ್ದ ಏಳನೇ ಓವರ್‌ನಲ್ಲಿ ಮೇಘನಾ ಅವರಿಗೆ ಲಭಿಸಿದ್ದ ಜೀವದಾನ ಯುಪಿ ತಂಡಕ್ಕೆ ದುಬಾರಿಯಾಯಿತು.

ಮೇಘನಾ ಮತ್ತು ರಿಚಾ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ಮೇಘನಾ 40 ಎಸೆತಗಳಲ್ಲಿ ಅರ್ಧಶತಕ ಗಳಿಸಿದರೆ, ರಿಚಾ 50ರ ಗಡಿ ಮುಟ್ಟಲು 31 ಎಸೆತ ಆಡಿದರು.

ರಿಚಾ ಅವರು ಸಯಾಮಾ ಹಾಕಿದ 14ನೇ ಓವರ್ ಮತ್ತು ತಹಲಿಯಾ ಹಾಕಿದ 18ನೇ ಓವರ್‌ನಲ್ಲಿ 'ಬೌಂಡರಿ ಹ್ಯಾಟ್ರಿಕ್' ಸಾಧಿಸಿದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 157 (ಸ್ಮೃತಿ ಮಂದಾನ 13, ಎಸ್.ಮೇಘನಾ 53, ರಿಚಾ ಘೋಷ್ 62, ರಾಜೇಶ್ವರಿ ಗಾಯಕವಾಡ 24ಕ್ಕೆ2) ಯುಪಿ ವಾರಿಯರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 155 (ವೃಂದಾ ದಿನೇಶ್ 18, ತಹಲಿಯಾ ಮೆಕ್‌ಗ್ರಾ 22, ಗ್ರೇಸ್ ಹ್ಯಾರಿಸ್ 38, ಶ್ವೇತಾ ಸೆಹ್ರಾವತ್ 31, ಪೂನಂ ಖೆಮ್ನರ್ 14, ದೀಪ್ತಿ ಶರ್ಮಾ ಔಟಾಗದೆ 13, ಶೋಭನಾ ಆಶಾ 22ಕ್ಕೆ5, ಸೋಫಿ ಮಾಲಿನಕ್ಸ್ 36ಕ್ಕೆ1, ಜಾರ್ಜಿಯಾ ವೆರ್ಹಾಮ್ 23ಕ್ಕೆ1)
ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 2 ರನ್ ಜಯ. ಪಂದ್ಯಶ್ರೇಷ್ಠ: ಶೋಭನಾ ಆಶಾ

ಸುಮಿತ್ ನಗಾಲ್‌ಗೆ ವೈಲ್ಡ್‌ಕಾರ್ಡ್

ದುಬೈ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ದುಬೈ ಚಾಂಪಿಯನ್‌ಷಿಪ್ ಎಟಿಪಿ 500 ಟೂರ್ನಿಯ ಮುಖ್ಯ ಡ್ರಾಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಅರ್ಹತಾ ಪಂದ್ಯಗಳು ಶನಿವಾರ ಪ್ರಾರಂಭವಾಗಿದ್ದರೆ, ಮುಖ್ಯ ಡ್ರಾ ಪಂದ್ಯಗಳು ಸೋಮವಾರ ಪ್ರಾರಂಭವಾಗುತ್ತವೆ.

ಆರಂಭಿಕ ಸುತ್ತಿನಲ್ಲಿ ನಗಾಲ್ ಅವರು ವಿಶ್ವ ಕ್ರಮಾಂಕದಲ್ಲಿ 49ನೇ ಸ್ಥಾನದಲ್ಲಿರುವ ಇಟಲಿಯ ಲೊರೆಂಜೊ ಸೊನೆಗೊ ವಿರುದ್ಧ ಸೆಣಸಲಿದ್ದಾರೆ. 26 ವರ್ಷದ ನಗಾಲ್ ಈ ವರ್ಷ ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ಪ್ರೊ ಲೀಗ್ ಹಾಕಿ: ಭಾರತಕ್ಕೆ ನಿರಾಸೆ

ರೂರ್ಕೆಲಾ (ಪಿಟಿಐ): ಭಾರತ ಪುರುಷರ ತಂಡ ಶನಿವಾರ ನಡೆದ ಐಎಚ್‌ಎಫ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಹೋರಾಟ ತೋರಿದರೂ ಪೆನಾಲ್ಟಿ ಶೂಟೌಟ್‌ನಲ್ಲಿ 0–3 ಗೋಲುಗಳಿಂದ ಆಸ್ಟ್ರೇಲಿಯಾ ಎದುರು ಸೋಲನುಭವಿಸಿತು. ಈ ಗೆಲುವಿಗಾಗಿ ಆಸ್ಟ್ರೇಲಿಯಾ ಒಂದು ಬೋನಸ್ ಪಾಯಿಂಟ್ ಸಹ ಸಂಪಾದಿಸಿತು.

ಒಂದು ಹಂತದಲ್ಲಿ ಭಾರತ 2–0 ಮುನ್ನಡೆ ಪಡೆದಿತ್ತು. ಆದರೆ ಅಂತಿಮ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ಸಮ ಮಾಡಿಕೊಂಡಿತು. ಭಾರತ ಪರ ನಾಯಕ ಹರ್ಮನ್‌ಪ್ರೀತ್ ಸಿಂಗ್ (20ನೇ ನಿಮಿಷ), ಅಮಿತ್ ರೋಹಿದಾಸ್ (29ನೇ) ಗೋಲು ಗಳಿಸಿದರು. ಆಸ್ಟ್ರೇಲಿಯಾ ಪರ ಗೋವರ್ಸ್ ಬ್ಲೇಕ್ , ಟಾಮ್ ಚೆಂಡನ್ನು ಗುರಿಮುಟ್ಟಿಸಿದರು.

ಹೈದರಾಬಾದ್ ವಿರುದ್ಧ ಬೆಂಗಳೂರು ಎಫ್‌ಸಿಗೆ ಜಯ

ಬೆಂಗಳೂರು: ಸಬ್‌ಸ್ಟಿಟ್ಯೂಟ್ ಆಟಗಾರ ಶಿವಶಕ್ತಿ ಕೊನೆಗಳಿಗೆ ಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡ ಐಎಸ್‌ಎಲ್ ಪಂದ್ಯದಲ್ಲಿ ಹೈದರಾಬಾದ್ ತಂಡವನ್ನು 2-1 ಗೋಲುಗಳಿಂದ ಸೋಲಿಸಿತು. ಸ್ಪೇನ್‌ನ ಮಿಡ್‌ಫೀಲ್ಡರ್ ಜಾವಿ ಫರ್ನಾಂಡಿಸ್ ಆತಿಥೇಯ ತಂಡಕ್ಕೆ 72ನೇ ನಿಮಿಷ ಮುನ್ನಡೆ ಒದಗಿಸಿದರು. ಆದರೆ ರಾಮ್‌ಲುನ್ಚುಂಗ ಹೈದರಾಬಾದ್ ತಂಡ ಸಮ ಮಾಡಿಕೊಳ್ಳಲು ನೆರವಾದರು.

ಪಂದ್ಯ ಮುಗಿಯಲು ಮೂರು ನಿಮಿಷಗಳಿದ್ದಾಗ ಶಿವಶಕ್ತಿ ನಿರ್ಣಾಯಕ ಗೋಲು ಗಳಿಸಿದರು.

ಈ ಗೆಲುವಿನಿಂದ ಅಮೂಲ್ಯ ಮೂರು ಪಾಯಿಂಟ್ ಪಡೆದ ಬೆಂಗಳೂರು ತಂಡ ಈಗ ಎಂಟನೇ ಸ್ಥಾನಕ್ಕೇರಿತು.

ಬ್ಲೂಸ್ ತಂಡ ತನ್ನ ಮುಂದಿನ ಪಂದ್ಯವನ್ನು ಮಾರ್ಚ್ 2ರಂದು ಕಂಠೀರವ ಕ್ರೀಡಾಂಗಣದಲ್ಲಿ ದಕ್ಷಿಣ ಭಾರತದ ಇನ್ನೊಂದು ಎದುರಾಳಿ ಕೇರಳ ಬ್ಲಾಸ್ಟರ್ಸ್ ವಿರುದ್ಧ ಆಡಲಿದೆ.

ಕರ್ನಾಟಕಕ್ಕೆ ಸಡ್ಡು ಹೊಡೆದ ಕರುಣ್

ಇನಿಂಗ್ಸ್ ಮುನ್ನಡೆಗೆ ಮಯಂಕ್ ಪಡೆಗೆ ಸವಾಲು; ಸಮರ್ಥ್ ಮೇಲೆ ಭರವಸೆ

ಪ್ರಜಾವಾಣಿ ವಾರ್ತೆ

ನಾಗ್ಪುರ: ಈ ಬಾರಿಯ ರಣಜಿ ಋತುವಿನಲ್ಲಿ ವಿದರ್ಭ ತಂಡದಲ್ಲಿ ಆಡುತ್ತಿರುವ ಬೆಂಗಳೂರಿನ ಕರುಣ್ ನಾಯರ್ ಶನಿವಾರ ಕರ್ನಾಟಕಕ್ಕೆ ಕಠಿಣ ಪೈಪೋಟಿಯೊಡ್ಡಿದರು.

ಇಲ್ಲಿ ನಡೆಯುತ್ತಿರುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಹತ್ತು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡ ಕರುಣ್ (90;178ಎ, 4X16, 6X1) ವಿದರ್ಭ ತಂಡವು ಮೊದಲ ಇನಿಂಗ್ಸ್‌ನಲ್ಲಿ 460 ರನ್‌ಗಳ ದೊಡ್ಡ ಮೊತ್ತ ಗಳಿಸಲು ಮಹತ್ವದ ಕಾಣಿಕೆ ನೀಡಿದರು.

ಇದಕ್ಕುತ್ತರವಾಗಿ ಕರ್ನಾಟಕವು ಎರಡನೇ ದಿನದಾಟದ ಕೊನೆಗೆ 24 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 98 ರನ್ ಗಳಿಸಿದೆ. ಆರಂಭಿಕ ಬ್ಯಾಟರ್ ಆರ್. ಸಮರ್ಥ್ (ಬ್ಯಾಟಿಂಗ್ 43) ಹಾಗೂ ನಿಕಿನ್ ಜೋಸ್ (ಬ್ಯಾಟಿಂಗ್ 20) ಕ್ರೀಸ್‌ನಲ್ಲಿದ್ದಾರೆ.

ಸೆಮಿಫೈನಲ್ ಪ್ರವೇಶಿಸಲು ಕಠಿಣ ಹಾದಿ ಸವೆಸಬೇಕಿರುವ ಕರ್ನಾಟಕ ತಂಡವು ಈಗಾಗಲೇ ಮಯಂಕ್ ಅಗರವಾಲ್ ಮತ್ತು ಕೆ.ವಿ. ಅನೀಶ್ (34; 48ಎ, 4X6) ಅವರ ವಿಕೆಟ್ ಕಳೆದುಕೊಂಡಿದೆ. ಮಯಂಕ್ ಸೊನ್ನೆ ಸುತ್ತಿದರು.

ಒಂದೊಮ್ಮೆ ಪಂದ್ಯ ಡ್ರಾ ಆದರೂ ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ತಂಡವು ನಾಲ್ಕರ ಘಟ್ಟ ಪ್ರವೇಶಿಸಲಿದೆ. ಆದ್ದರಿಂದ ಉಭಯ ತಂಡಗಳೂ ಇನಿಂಗ್ಸ್ ಮುನ್ನಡೆಗೆ ತುರುಸಿನ ಪೈಪೋಟಿ ನಡೆಸುವ ನಿರೀಕ್ಷೆ ಇದೆ. ಪಂದ್ಯದಲ್ಲಿ ಇನ್ನೂ ಮೂರು ದಿನಗಳ ಆಟ ಬಾಕಿಯಿದೆ.

ಕರುಣ್ ನಾಯರ್ ಬ್ಯಾಟಿಂಗ್ –ಪ್ರಜಾವಾಣಿ ಸಂಗ್ರಹದಿಂದ

ಮುನ್ನಡೆಗಾಗಿ ಕರ್ನಾಟಕ ತಂಡಕ್ಕೆ ಇನ್ನೂ 362 ರನ್ ಅಗತ್ಯವಿದೆ. ಇಡೀ ಋತುವಿನಲ್ಲಿ ಹೆಚ್ಚು ವೈಫಲ್ಯವನ್ನೇ ಕಂಡಿರುವ ಸಮರ್ಥ್ ಇಲ್ಲಿ 68 ಎಸೆತ ಎದುರಿಸಿದ್ದಾರೆ.

ಐದು ಬೌಂಡರಿ ಕೂಡ ಬಾರಿಸಿದ್ದಾರೆ. ನಿಕಿನ್ 26 ಎಸೆತಗಳನ್ನು ಆಡಿದ್ದಾರೆ. ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳಲು ಇಬ್ಬರಿಗೂ ಇದು ಒಳ್ಳೆಯ ಅವಕಾಶವಾಗಿದೆ.

ಕರುಣ್ ಬ್ಯಾಟಿಂಗ್: ಮೊದಲ ದಿನದಾಟದಲ್ಲಿ ಅಥರ್ವ ತೈಡೆ ಶತಕ ಮತ್ತು ಯಶ್ ರಾಥೋಡ್ ಅವರ(93 ರನ್) ಅವರ ಅಮೋಘ ಬ್ಯಾಟಿಂಗ್‌ನಿಂದ ವಿದರ್ಭ ತಂಡವು 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 261 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಕರುಣ್ ಶನಿವಾರ ಮಿಂಚಿದರು.

ತಮ್ಮ ತವರು ರಾಜ್ಯದ 'ಸ್ನೇಹಿತ'ರನ್ನು ಕಾಡಿದರು. ವಿದ್ವತ್ ಕಾವೇರಪ್ಪ (99ಕ್ಕೆ4) ಸೇರಿದಂತೆ ಮೂವರು ಮಧ್ಯಮವೇಗಿಗಳು ಪರಿಣಾಮಕಾರಿಯಾಗಿದ್ದರು. ಆದರೂ ಅವರ ಎಸೆತಗಳನ್ನು ಕರುಣ್ ಆತ್ಮವಿಶ್ವಾಸದಿಂದ ಎದುರಿಸಿದರು.

ಶತಕದತ್ತ ಹೆಜ್ಜೆ ಇಟ್ಟಿದ ಕರುಣ್ ಅವರ ವಿಕೆಟ್ ಕಬಳಿಸಿದ ವಿದ್ವತ್ ಸಂಭ್ರಮಿಸಿದರು. ಆದರೆ ಕೆಳಕ್ರಮಾಂಕದ ಬ್ಯಾಟರ್‌ಗಳೂ ಒಂದಷ್ಟು ರನ್‌ಗಳ ಕಾಣಿಕೆ ನೀಡಿದ್ದರಿಂದ ಆತಿಥೇಯ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 143.1 ಓವರ್‌ಗಳಲ್ಲಿ 460 (ಕರುಣ್ ನಾಯರ್ 90, ಆದಿತ್ಯ ಸರವಟೆ 26, ಹರ್ಷ ದುಬೆ 20, ಯಶ್ ಠಾಕೂರ್ 31, ಉಮೇಶ್ ಯಾದವ್ ಔಟಾಗದೆ 21, ವಿದ್ವತ್ ಕಾವೇರಪ್ಪ 99ಕ್ಕೆ4, ಹಾರ್ದಿಕ್ ರಾಜ್ 89ಕ್ಕೆ2) ಕರ್ನಾಟಕ: 24 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 98 (ಆರ್. ಸಮರ್ಥ್ ಬ್ಯಾಟಿಂಗ್ 43, ಕೆ.ವಿ. ಅನೀಶ್ 34, ನಿಕಿನ್ ಜೋಸ್ ಬ್ಯಾಟಿಂಗ್ 20, ಆದಿತ್ಯ ಠಾಕ್ರೆ 29ಕ್ಕೆ1, ಯಶ್ ಠಾಕೂರ್ 22ಕ್ಕೆ1)

ತಮಿಳುನಾಡಿಗೆ ಮುನ್ನಡೆ

ಕೊಯಮತ್ತೂರು: ನಾಯಕ ಸಾಯಿ ಕಿಶೋರ್ (60), ಬಾಬಾ ಇಂದ್ರಜಿತ್ (80) ಮತ್ತು ಭೂಪತಿ ಕುಮಾರ್ (65) ಅವರ ಅರ್ಧ ಶತಕಗಳ ನೆರವಿನಿಂದ ತಮಿಳುನಾಡು ತಂ ಡ, ಕೊಯ ಮತ್ತೂರಿನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದ ಎರಡನೇ ದಿನವಾದ ಶನಿವಾರ ಸೌರಾಷ್ಟ್ರ ವಿರುದ್ಧ 117 ರನ್‌ಗಳ ಮುನ್ನಡೆ ಪಡೆದಿದೆ. ಅದನ್ನು ಇನ್ನಷ್ಟು ವಿಸ್ತರಿಸುವ ಅವಕಾಶವನ್ನೂ ಹೊಂದಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಸೌರಾಷ್ಟ್ರ: 183; ತಮಿಳುನಾಡು: 100 ಓವರುಗಳಲ್ಲಿ 6 ವಿಕೆಟ್‌ಗೆ 300 (ಸಾಯಿ ಕಿಶೋರ್ 60, ಬಾಬಾ ಇಂದ್ರಜಿತ್ 80, ಭೂಪತಿ ಕುಮಾರ್ 65; ಪಾರ್ಥ ಭುಟ್ 76ಕ್ಕೆ2).

ಮುಷೀರ್ ದ್ವಿಶತಕ: ಇತ್ತೀಚಿನ ಯುವ ವಿಶ್ವಕಪ್‌ನಲ್ಲಿ ಮಿಂಚಿದ್ದ ಮುಷೀರ್ ಖಾನ್ ಅವರ ಅಜೇಯ ದ್ವಿಶತಕದ (203*, 357ಎ, 4x18) ನೆರವಿನಿಂದ ಮುಂಬೈ ತಂಡ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಶನಿವಾರ 383 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಬರೋಡ ಹೋರಾಟ ನಡೆಸುತ್ತಿದ್ದು ಎರಡನೇ ದಿನದಾಟ ಮುಗಿದಾಗ ಮೊದಲ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 127 ರನ್ ಗಳಿಸಿತ್ತು. ಬರೋಡದ ಎಡಗೈ ಸ್ಪಿನ್ನರ್ ಭಾರ್ಗವ್ ಭಟ್ ಏಳು ವಿಕೆಟ್ ಪಡೆದು ಗಮನ ಸೆಳೆದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಮುಂಬೈ: 383 (ಮುಷೀರ್ ಖಾನ್ ಔಟಾಗದೇ 203, ಹಾರ್ದಿಕ್ ತಮೋರೆ 57; ಭಾರ್ಗವ ಭಟ್ 112ಕ್ಕೆ7, ನಿನಾದ್ ರಾತ್ವ 86ಕ್ಕೆ3); ಬರೋಡ: 35 ಓವರುಗಳಲ್ಲಿ 2 ವಿಕೆಟ್‌ಗೆ 127 (ಜ್ಯೋತ್ಸ್ನಿಲ್ ಸಿಂಗ್ 32, ಶಾಶ್ವತ್ ರಾವತ್ ಔಟಾಗದೇ 69).

ಮಧ್ಯಪ್ರದೇಶಕ್ಕೆ ಮುನ್ನಡೆ: ಇಂದೋರ್‌ನಲ್ಲಿ ನಡೆಯುತ್ತಿರುವ ಮತ್ತೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಆತಿಥೇಯ ಮಧ್ಯಪ್ರದೇಶ, ಎರಡನೇ ದಿನ 62 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು. ಎರಡನೇ ದಿನದಾಟ ಮುಗಿದಾಗ ಮಧ್ಯಪ್ರದೇಶ ವಿಕೆಟ್ ನಷ್ಟವಿಲ್ಲದೇ 21 ರನ್ ಗಳಿಸಿದೆ.

ದಿನದ ಕೊನೆಗೆ ಒಟ್ಟಾರೆ ಮುನ್ನಡೆಯನ್ನು 83 ರನ್ನಗಳಿಗೆ ವಿಸ್ತರಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 81.1 ಓವರುಗಳಲ್ಲಿ 234; ಆಂಧ್ರ: 68.3 ಓವರುಗಳಲ್ಲಿ 172 (ರಿಕಿ ಭುಯಿ 32, ಕರಣ್ ಸಿಂಧೆ 38; ಆವೇಶ್ ಖಾನ್ 33ಕ್ಕೆ2, ಅನು ಭವ್ ಅಗರವಾಲ್ 33ಕ್ಕೆ3, ಕುಮಾರ್ ಕಾರ್ತಿಕೇಯ 41ಕ್ಕೆ3); ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 7 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 21.

ಪುರುಷರ ಹಾಕಿ ಫೈನಲ್‌ಗೆ ಬೆಂಗಳೂರು ನಗರ ವಿವಿ

ಗುವಾಹಟಿ (ಪಿಟಿಐ): ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡ, ನಾಲ್ಕನೇ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಪುರುಷರ ಹಾಕಿ ಫೈನಲ್ ತಲುಪಿದೆ. ಫೈನಲ್‌ನಲ್ಲಿ ಬೆಂಗಳೂರಿನ ತಂಡ ರವೀಂದ್ರನಾಥ ಠಾಗೋರ್ ವಿಶ್ವವಿದ್ಯಾಲಯವನ್ನು ಎದುರಿಸಲಿದೆ.

ಮೌಲಾನಾ ಮೊಹಮ್ಮದ್ ತಯಬುಲ್ಲಾ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಬೆಂಗಳೂರು ವಿಶ್ವವಿದ್ಯಾಳಯ 3–0 ಗೋಲುಗಳಿಂದ ಮನೋನ್ಮಣಿಯನ್ ಸುಂದರ್‌ನಾರ್ ವಿಶ್ವವಿದ್ಯಾಲಯ ಮೇಲೆ ಜಯಗಳಿಸಿತು. ಇನ್ನೊಂದು ಸೆಮಿಫೈನಲ್‌ನಲ್ಲಿ ಠಾಗೋರ್ ವಿಶ್ವವಿದ್ಯಾಲಯ 3–2 ಗೋಲುಗಳಿಂದ ಚಂಡೀಗಢ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು.

ಪ್ಯಾರಾ ಬ್ಯಾಡ್ಮಿಂಟನ್: ಫೈನಲ್‌ಗೆ ಸುಹಾಸ್, ಪ್ರಮೋದ್

ಪಟ್ಟಾಯ (ಥಾಯ್ಲೆಂಡ್) (ಪಿಟಿಐ): ಭಾರತದ ಸುಹಾಸ್ ಯತಿರಾಜ್, ಪ್ರಮೋದ್ ಭಗತ್ ಮತ್ತು ಕೃಷ್ಣ ನಾಗರ್ ಅವರು ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಶನಿವಾರ ಪುರುಷರ ಸಿಂಗಲ್ಸ್ ಫೈನಲ್ ಪ್ರವೇಶಿಸಿದ್ದಾರೆ.

ಪ್ಯಾರಾಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ವಿಶ್ವದ ಮೂರನೇ ಶ್ರೇಯಾಂಕ ಸುಹಾಸ್ ಪುರುಷರ ಸಿಂಗಲ್ಸ್ ಎಸ್‌ಎಲ್ 4 ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಗಣ್ಯ ಆಟಗಾರ ಫ್ರಾನ್ಸ್‌ನ ಲ್ಯೂಕಾಸ್ ಮಜೂರ್ ಅವರನ್ನು 21–16, 21–19 ಅಂತರದಿಂದ ಸೋಲಿಸಿ ತಮ್ಮ ವೃತ್ತಿ ಜೀವನದಲ್ಲಿ ಮೊದಲ ಬಾರಿಗೆ ಫೈನಲ್‌ಗೆ ತಲುಪಿದರು. ಉತ್ತರ ಪ್ರದೇಶ ಕೇಡರ್‌ನ 2007ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ 40 ವರ್ಷದ ಕನ್ನಡಿಗ ಸುಹಾಸ್, ಫೈನಲ್‌ನಲ್ಲಿ ಇಂಡೋನೇಷ್ಯಾದ ಫ್ರೆಡಿ ಸೆಟಿಯಾವಾನ್ ವಿರುದ್ಧ ಸೆಣಸಲಿದ್ದಾರೆ.

ಸುಹಾಸ್

ಪುರುಷರ ಸಿಂಗಲ್ಸ್ ಎಸ್‌ಎಲ್3 ಕ್ಲಾಸ್‌ನಲ್ಲಿ ಪ್ರಮೋದ್ ಭಗತ್ ಅವರು ಭಾರತದ ಮನೋಜ್ ಸರ್ಕಾರ್ ಅವರನ್ನು 23–21, 20–22,21–18 ರಿಂದ ಸೋಲಿಸಿದರು. ಎಸ್‌ಎಚ್ 6 ವಿಭಾಗದಲ್ಲಿ ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ವಿಜೇತ ಕೃಷ್ಣ ನಾಗರ್ ಅವರು ಬ್ರೆಜಿಲ್‌ನ ವಿಟರ್ ತಾವರೆಸ್ ಅವರನ್ನು 21-16, 21-17ರಿಂದ ಸೋಲಿಸಿದ್ದಾರೆ.

ಸಂತೋಷ್ ಟ್ರೋಫಿ : ಕರ್ನಾಟಕ–ಮಿಜೋರಾಂ ಪಂದ್ಯ ಡ್ರಾ

ಯುಪಿಯಾ (ಅರುಣಾಚಲ ಪ್ರದೇಶ): ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಶನಿವಾರ ನಡೆದ ಸಂತೋಷ್ ಟ್ರೋಫಿ ಅಂತಿಮ ಸುತ್ತಿನ 'ಬಿ' ಗುಂಪಿನ ಪಂದ್ಯದಲ್ಲಿ ಮಿಜೋರಾಂ ವಿರುದ್ಧ 2-2 ಗೋಲುಗಳ ಸಮಬಲ ಸಾಧಿಸಿತು.

ಎಂ. ಎಸ್. ಡಾಂಗ್ಲಿಯಾನಾ (13ನೇ ನಿಮಿಷ) ಮತ್ತು ಎಂ.ಸಿ. ಮಾಲ್ಸಾವ್ಸುವಾಲಾ (47ನೇ ನಿಮಿಷ) ಗಳಿಸಿದ ಗೋಲುಗಳ ನೆರವಿನಿಂದ ಮಿಜೋರಾಂ ಮೂರು ಅಂಕಗಳನ್ನು ಗಳಿಸಿತು.

ಆದರೆ ದ್ವಿತೀಯಾರ್ಧದಲ್ಲಿ ಪ್ರಬಿನ್ ಟಿಗ್ಗಾ (67ನೇ ನಿಮಿಷ) ಮತ್ತು ಆರ್. ವಿಶಾಲ್ (69ನೇ ನಿಮಿಷ) ಗಳಿಸಿದ ಗೋಲುಗಳ ನೆರವಿನಿಂದ ಕರ್ನಾಟಕ ಎರಡು ಗೋಲು ಗಳಿಸಿತು.

ಪ್ರೊ ಕಬಡ್ಡಿ: ಅಂತಿಮ ಹಂತದ ಪಂದ್ಯಗಳಿಗೆ ಹೈದರಾಬಾದ್ ಆತಿಥ್ಯ

ಮುತ್ತಿನ ನಗರಿಯಲ್ಲಿ 'ಪ್ಲೇಆಫ್' ಗಮ್ಮತ್ತು

• ವಿಕ್ರಂ ಕಾಂತಿಕೆರೆ

ಹೈದರಾಬಾದ್: ದಶಕದ ಸಂಭ್ರಮದಲ್ಲಿರುವ ಪ್ರೊ ಕಬಡ್ಡಿ ಲೀಗ್ ಅಂತಿಮ ಘಟ್ಟ ತಲುಪಿದ್ದು ಇದೇ 26ರಿಂದ ನಡೆಯಲಿರುವ ಪ್ಲೇ ಆಫ್ ಹಣಾಹಣಿಗಾಗಿ ಕಬಡ್ಡಿಪ್ರಿಯರು ಕಾತರಗೊಂಡಿದ್ದಾರೆ. ತವರಿನ ತಂಡ ತೆಲುಗು ಟೈಟನ್ಸ್ ನಾಕೌಟ್ ಹಂತದಲ್ಲಿ ಇಲ್ಲದಿದ್ದರೂ ಇಲ್ಲಿನ ಕ್ರೀಡಾಪ್ರಿಯರು ಕೊನೆಯ ಐದು ಪಂದ್ಯಗಳನ್ನು ವೀಕ್ಷಿಸಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಗಚ್ಚಿಬೌಳಿಯ ಜಿ.ಎಂ.ಸಿ ಬಾಲಯೋಗಿ ಕ್ರೀಡಾ ಸಂಕೀರ್ಣವು ಎಲಿಮಿನೇಟರ್, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳ ಆತಿಥ್ಯ ವಹಿಸಲಿದೆ. ನಾಲ್ಕನೇ ಆವೃತ್ತಿಯ ನಂತರ ಇದೇ ಮೊದಲ ಸಲ ನಾಕೌಟ್ ಕುತೂಹಲಕ್ಕೆ ನಗರ ಸಾಕ್ಷಿಯಾಗಲಿದೆ.

ಸೆಮಿಫೈನಲ್ ಪ್ರವೇಶಿಸಿರುವ ಜೈಪುರ್ ಪಿಂಕ್ ಪ್ಯಾಂಥರ್ಸ್, ಎಲಿಮಿನೇಟರ್ ಪಂದ್ಯಗಳನ್ನು ಅಡಲಿರುವ ದಬಂಗ್ ಡೆಲ್ಲಿ ಮತ್ತು ಪಟ್ನಾ ಪೈರೇಟ್ಸ್ ಈಗಾಗಲೇ ಕನಿಷ್ಠ ಒಂದು ಬಾರಿಯಾದರೂ ಚಾಂಪಿಯನ್ ಪಟ್ಟ ಅಲಂಕರಿಸಿವೆ.

ನಾಲ್ಕರ ಘಟ್ಟ ತಲುಪಿರುವ ಪುಣೇರಿ ಪಲ್ಟನ್, ಎಲಿಮಿನೇಷನ್ ಪಂದ್ಯಗಳಿಗೆ ಸಜ್ಜಾಗಿರುವ ಗುಜರಾತ್ ಜೈಂಟ್ಸ್ ಮತ್ತು ಹರಿಯಾಣ ಸ್ಟೀಲರ್ಸ್ ಮೊದಲ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿವೆ. ಹೀಗಾಗಿ ಅಂತಿಮ ಘಟ್ಟದ ಹಣಾಹಣಿ ರೋಚಕವಾಗುವ ನಿರೀಕ್ಷೆಯಿದೆ.

ಪ್ರೊ ಕಬಡ್ಡಿ ಲೀಗ್ ಪ್ಲೇ ಆಫ್ ಪಂದ್ಯಗಳ ಹಿನ್ನೆಲೆಯಲ್ಲಿ ಶನಿವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡವರು (ಎಡದಿಂದ): ಆಶು ಮಲಿಕ್ (ದಬಂಗ್ ಡೆಲ್ಲಿ), ಅಸ್ಲಾಂ ಇನಾಮದಾರ್ (ಪುಣೇರಿ ಪಲ್ಟನ್), ಸಚಿನ್ (ಪಟ್ನಾ ಪೈರೇಟ್ಸ್), ಅನುಪಮ್ ಗೋಸ್ವಾಮಿ (ಲೀಗ್ ಕಮಿಷನರ್), ಜೈದೀಪ್ ದಹಿಯ (ಹರಿಯಾಣ ಸ್ಟೀಲರ್ಸ್), ಸುನಿಲ್ ಕುಮಾರ್ (ಜೈಪುರ್ ಪಿಂಕ್ ಪ್ಯಾಂಥರ್ಸ್), ಫಜಲ್ ಅತ್ರಾಚಲಿ (ಗುಜರಾತ್ ಜೈಂಟ್ಸ್)

